ವಿಶ್ವವಾಣಿ
ವಿಶ್ವಾಸವೇ ವಿಶ್ವ

ಎಸ್.ಎಲ್. ಭೈರಪ್ಪನವರ ವಿಶೇಷ ಸಂದರ್ಶನ



ನಾನು ಬದುಕಿರುವವರೆಗೆ ನನ್ನ ಪುಸ್ತಕಗಳ ರಾಯಲ್ಟಿ ಬರುತ್ತೆ, ಅದನ್ನು ಮಕ್ಕಳ ವಿದ್ಯೆಗಾಗಿಯೇ ಖರ್ಚು ಮಾಡಬೇಕು ಅನಿಸಿದೆ. ನನಗೆ ಹಣದ ಮೇಲೆ ಆಸೆ ಇಲ್ಲ. ಇರುವುದನ್ನು ದಾನ ಮಾಡಿ ಹೊರಟುಬಿಡಬೇಕು. ಪಾಪ-ಪುಣ್ಯ ಇಂಥದರಲ್ಲೆಲ್ಲ ನನಗೆ ನಂಬಿಕೆಯಿಲ್ಲ.

ಕನ್ನಡದ ಹಿರಿಯ ಕಾದಂಬರಿಕಾರ, ಸರಸ್ವತಿ ಸಮ್ಮಾನ್, ಪದ್ಮಭೂಷಣ ಪುರಸ್ಕೃತ ಎಸ್.ಎಲ್.ಭೈರಪ್ಪ ಅವರಿಗೆ ಇಂದು ಹುಟ್ಟೂರು ಸಂತೇಶಿವರದಲ್ಲಿ ಗೌರವ ಸನ್ಮಾನ ನಡೆಯಲಿದೆ. ಭೈರಪ್ಪನವರು ಸಂತೇಶಿವರ ಮತ್ತು ಅಗ್ರಹಾರ ಬೆಳಗುಲಿ ಗ್ರಾಮಗಳ ಕೆರೆ ಕಟ್ಟೆಗಳಿಗೆ ಸರಕಾರದ ವತಿಯಿಂದ ಏತ ನೀರಾವರಿ ಯೋಜನೆಯಡಿ ನೀರು ಪೂರೈಕೆಗೆ ಶ್ರಮ ವಹಿಸಿದ್ದಾರೆ. ಯೋಜನೆ ಸಫಲಗೊಂಡು ಸಂತೇಶಿವರ ಮತ್ತು ಅಗ್ರಹಾರ ಬೆಳಗುಲಿ ಗ್ರಾಮಗಳ ಕೆರೆಕಟ್ಟೆಗಳಿಗೆ ನೀರು ಪೂರೈಕೆಯಾಗಿದೆ. ಸುತ್ತಲಿನ 20ಕ್ಕೂ ಹೆಚ್ಚು ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ಏರಿಕೆಯಿಂದಾಗಿ ಸಾವಿರಾರು ಕೊಳವೆ ಬಾವಿಗಳು ಮರುಪೂರಣಗೊಂಡು ರೈತ ಸಮುದಾಯಕ್ಕೆ ಖುಷಿ, ನೆಮ್ಮದಿ ದೊರೆತಿದೆ. ಇದರಿಂದ ಹರ್ಷಗೊಂಡ ಊರಿನ ಜನರು ಭೈರಪ್ಪನವರನ್ನು ಸನ್ಮಾನಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಭೈರಪ್ಪ ಅವರನ್ನು 'ವಿಶ್ವವಾಣಿ' ಸಂದರ್ಶಿಸಿದೆ.

ನನಗಿದ್ದ ಸಂಕಷ್ಟಗಳು ಬೇರೆ ಯಾರಿಗೂ ಆಗದಿರಲಿ: ಎಸ್.ಎಲ್.ಭೈರಪ್ಪ

ಹುಟ್ಟೂರು ಸಂತೇಶಿವರ ಸ್ವರ್ಗಕ್ಕಿಂತ ಮಿಗಿಲು

ಸಂದರ್ಶನ: ಹರೀಶ್ ಕೇರ
ನೆರವು: **ಸಹನಾ ವಿಜಯಕುಮಾರ್**

- **ಭಾನುವಾರ ನಿಮ್ಮ ಹುಟ್ಟೂರಿನವರು ನಿಮಗೊಂದು ಕೃತಜ್ಞತಾ ಸಮರ್ಪಣೆ ಹಾಗೂ ಅಭಿನಂದನಾ ಸಮಾರಂಭ ಇಟ್ಟುಕೊಂಡಿದ್ದಾರೆ. ಹುಟ್ಟೂರಿನ ಕುರಿತ ನಿಮ್ಮ ಗಾಢವಾದ ನೆನಪುಗಳನ್ನು ನಿಮ್ಮ ಆತ್ಮಕತೆ 'ಭಿತ್ತಿ'ಯಲ್ಲೂ ಕಟ್ಟಿಕೊಟ್ಟಿದ್ದೀರಿ. ಹಿಂದಿರುಗಿ ನೋಡಿದರೆ ಏನನಿಸುತ್ತದೆ?**

ಭೈರಪ್ಪ: ಹುಟ್ಟೂರು ಅಂದರೆ ಎಲ್ಲರಿಗೂ ಪ್ರೀತಿಯೇ. ಆದರೆ ನನಗೆ ಸಂತೇಶಿವರದ ಬದುಕು ಸುಖಕರವಾಗೇನೂ ಇರಲಿಲ್ಲ. ಅದು ಸಂಕಟವಾಗಿಯೇ ಇತ್ತು. ಕಾರಣ ಮನೆಯಲ್ಲಿದ್ದ ಬಡತನ. ಎಷ್ಟೋ ದಿವಸ ಒಂದಿಷ್ಟು ಊಟ ಮಾಡುವುದಕ್ಕೆ ರಾಗಿ ಕೂಡ ಇರುತ್ತಿರಲಿಲ್ಲ. ಅದಕ್ಕೆ ಕಾರಣ ನನ್ನ ಅಜ್ಜಿ ಮತ್ತು ತಂದೆ. ಚಿಕ್ಕಂದಿನಲ್ಲಿ ನಾನು ಸಾಹಸಿಯಾಗಿದ್ದೆ. ಮುಖ್ಯವಾಗಿ ಈಜು. ನನ್ನಮ್ಮನಿಗೆ ಅದರ ಬಗ್ಗೆ ಹೆದರಿಕೆ ಇತ್ತು. ಈಜಕೂಡದು ಎನ್ನುತ್ತಿದ್ದರು. ಆದರೆ ನಾನು ಕೇಳುತ್ತಿರಲಿಲ್ಲ. ಆಮೇಲೆ ನಾಟಕಗಳು ಆಗ ಬಹಳ. ಗುಬ್ಬಿ ವೀರಣ್ಣನವರ ಕಂಪನಿಯ ಪ್ರದರ್ಶನಗಳು ಆಗುತ್ತಿದ್ದವು. ನಾಟಕದ ಹಾಡುಗಳು ಬಾಯಿಪಾಠ ಬರುತ್ತಿದ್ದವು. ಮನೆಯಲ್ಲಿ ತಾಯಿಗೆ ಹೇಳದೆ ನಾಟಕ ಕಂಪನಿ ಹಿಂದೆ ಹೊರಟುಬಿಡುತ್ತಿದ್ದೆ. ಒಮ್ಮೆ ಹೀಗೆ ಬೇರೆ ಹಳ್ಳಿಗೆ ಹೋಗಿ ರಾತ್ರಿಯಿಡೀ ಅಲ್ಲಿದ್ದು ಮರುದಿನ ಮಧ್ಯಾಹ್ನ ಮನೆಗೆ ಬಂದೆ. ಅಷ್ಟರಲ್ಲಾಗಲೇ ಮನೆಯಲ್ಲಿ ತಾಯಿಯು ಭಯದಿಂದ ಊರೆಲ್ಲಾ ನನ್ನನ್ನು ಹುಡುಕಿಸಿ, ಕೆರೆಯಲ್ಲೂ ಹುಡುಕಿಸಿದ್ದರು.

- **ನಿಮ್ಮ ಮಾವನ ಜತೆಗೆ ನೀವಿದ್ದ ದಿನಗಳು ಇನ್ನಷ್ಟು ಯಾತನಾದಾಯಕವಾಗಿದ್ದವು?**

ಭೈರಪ್ಪ: ನಮ್ಮ ತಂದೆ ಲಿಂಗಣ್ಣಯ್ಯ ಅಂತ. ನಮ್ಮ ಕುಟುಂಬಕ್ಕೆ ಶಾನುಭೋಗಿಕೆ ಇತ್ತು. ಆದರೆ ನಮ್ಮ ತಂದೆಯ ಬೇಜವಾಬ್ದಾರಿಯಿಂದಾಗಿ ಅದನ್ನೆಲ್ಲಾ ಕಳೆದುಕೊಂಡಿದ್ದರು. ನನ್ನನ್ನು ನನ್ನ ತಾಯಿ ಅವಳ ಅಣ್ಣನ ಹತ್ತಿರ ಕಳಿಸಿದರು. ಮಾವ ಗುಡ್ಡಪ್ಪ ಅಂತ, ಒಂದು ದೇವಸ್ಥಾನದಲ್ಲಿ ಪೂಜೆ, ಶಾಸ್ತ್ರ ಹೇಳೋದು ಎಲ್ಲ ಮಾಡುತ್ತಿದ್ದ. ಒಂದು ಪಲ್ಲ ರಾಗಿ, ಹುರುಳಿಕಾಳು, ಹರಳೆಣ್ಣೆ ಹೊರಿಸಿ ತಾಯಿ ನನ್ನನ್ನು ಅಲ್ಲಿಗೆ ಕಳಿಸಿದರು. ಎರಡು ವರ್ಷ ಇಟ್ಟುಕೊಂಡು ಲೋಯರ್ ಸೆಕೆಂಡರಿ ಓದಿಸು ಅಂತ ಹೇಳಿದರು. ತಾಯಿ ಇರುವಾಗ ಬಹಳ ಪ್ರೀತಿಯಿಂದ ನೋಡಿಕೊಂಡ. ಮರುದಿನ ಮುಂಜಾನೆಯಿಂದಲೇ ಆತನ ಶಿಕ್ಷೆ ಶುರುವಾಯಿತು. ಆತ ನನ್ನ ಜುಟ್ಟು ಬಗ್ಗಿಸಿ ಹೊಡೆಯುತ್ತಿದ್ದ. ಇನ್ನೂ ಕತ್ತಲಿರುವಾಗಲೇ ಎದ್ದು ದನದ ಕೊಟ್ಟಿಗೆ ಕೆಲಸ ಮಾಡುತ್ತಿದ್ದೆ. ಇಷ್ಟೆಲ್ಲ ಮಾಡಿದರೂ ಮಾವನಿಂದ ಹೊಡೆತ ಅಂದ್ರೆ ಹೊಡೆತ. ಸುತ್ತಲಿನ ಮನೆಗಳಲ್ಲಿ ಧಾನ್ಯ ಕದಿಯುತ್ತಿದ್ದ. ನನಗೂ ಕದಿಯಲು ಪ್ರೇರೇಪಿಸುತ್ತಿದ್ದ. ನಾನು ಕದಿಯುತ್ತಿರಲಿಲ್ಲ. ಹೊಡೆಯುತ್ತಿದ್ದ.

- **ಪ್ಲೇಗ್‌ನ ದಾರುಣತೆ ನಿಮ್ಮ ಜೀವನದ ಘಟನೆಗಳಲ್ಲಿ ಹಾಸುಹೊಕ್ಕಾಗಿದೆ...**

ಭೈರಪ್ಪ: ಆಗೆಲ್ಲ ಪ್ಲೇಗ್ ಸಾಕಷ್ಟು ಇತ್ತು. ಒಂದ್ಸಲ ನನ್ನ ಅಕ್ಕ, ಅಣ್ಣ, ನಾನು ಮೂವರಿಗೂ ಪ್ಲೇಗ್ ಬಂತು. ಒಂದೇ ದಿನ ಅಣ್ಣ ಮತ್ತು ಅಕ್ಕ ಇಬ್ಬರೂ ಸತ್ತುಹೋದರು. ನನಗೆ ಜೋರು ಕಾಯಿಲೆ. ನನ್ನಮ್ಮ ನನ್ನನ್ನು ಎತ್ತಿಕೊಂಡು ಹೋಗಿ ರಂಗಮ್ಮ ಎಂಬವರಿದ್ದರು, ಅವರ ಮಡಿಲಿನಲ್ಲಿ ಹಾಕಿ, ಈ ಮಗು ನನ್ನದಲ್ಲ, ನಿನ್ನ ಅದೃಷ್ಟ ಚೆನ್ನಾಗಿದ್ದರೆ ಬದುಕಿಕೊಳ್ಳಲಿ ಎಂದು ಅವರ ಮಡಿಲಿಗೆ ಹಾಕಿಬಿಟ್ಟರು. ನಾನು ಹೇಗೋ ಬದುಕಿದೆ. ಆಮೇಲೆ ನಾನು ಮಾವನ ಜತೆಗಿದ್ದಾಗ, ಪ್ಲೇಗ್‌ನಿಂದ ತಾಯಿ ತೀರಿಹೋಗಿಬಿಟ್ಟರು. ಅಪ್ಪ ಯಾವ ಜವಾಬ್ದಾರಿಯನ್ನೂ ವಹಿಸಿಕೊಳ್ಳುತ್ತಿರಲಿಲ್ಲ. ನಾನೇ ಊರಿಗೆ ಹೋಗಿ ತಾಯಿಯ ಅಂತ್ಯಕ್ರಿಯೆ ಮುಗಿಸಿ ಬಂದೆ. ಅದರ ಮರುದಿನವೂ ಬೆಳಗ್ಗೆ ಬೇಗ ಎದ್ದು ಸಗಣಿ ಬಾಚಲಿಲ್ಲ ಎಂದು ಮಾವ ಹೊಡೆದ. ನನ್ನ ತಮ್ಮ ಪ್ಲೇಗ್‌ನಿಂದ ತೀರಿಕೊಂಡಾಗ ನನಗೆ ಹದಿನಾರು ವರ್ಷ. ಅಂತ್ಯಸಂಸ್ಕಾರಕ್ಕೆ ಯಾರೂ ಬರಲಿಲ್ಲ. ಯಾಕೆಂದರೆ ಕುಟುಂಬದ ಬಡತನ, ದಾರಿದ್ರ್ಯ, ಅಪ್ಪನ ಬೇಜವಾಬ್ದಾರಿತನ, ಮೈತುಂಬ ಮಾಡಿಕೊಂಡ ಸಾಲ. ಆರು ವರ್ಷದ ಮಗುವಿನ ಹೆಣ ಹೆಗಲ ಮೇಲೆ ಹಾಕಿಕೊಂಡು ಹೋಗಿ ನಾನೇ ಸುಟ್ಟುಹಾಕಿದೆ.

→ 4

ಕಾರ್ಯಕ್ರಮ
- **ಎಲ್ಲಿ:** ಸಂತೇಶಿವರ ಗ್ರಾಮ, ಚನ್ನರಾಯಪಟ್ಟಣ ತಾ. ಹಾಸನ
- **ಯಾವಾಗ:** ಮಾರ್ಚ್ 9, ಭಾನುವಾರ
- **ಭಾಗವಹಿಸಲಿರುವವರು:** ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಡಾ.ಸಿ.ಎನ್.ಮಂಜುನಾಥ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕೆ.ಎನ್.ರಾಜಣ್ಣ, ಶ್ರೇಯಸ್ ಎಂ.ಪಟೇಲ್, ಸಿ.ಎನ್.ಬಾಲಕೃಷ್ಣ, ಷಡಕ್ಷರಿ, ಜೆ.ಸಿ.ಮಾಧುಸ್ವಾಮಿ

ಭೈರಪ್ಪನವರ ಸಂದರ್ಶನ
EXCLUSIVE INTERVIEW
VISHWAVANI TV SPECIAL ನೋಡಿ

ಸೊಂಪಾದ ಪುಟಗಳು

60 ವರ್ಷಗಳ ಹಿಂದೆ ಅಲ್ಲಿ ಒಂದು ರೋಬೋಟ್ ಇತ್ತು, ಇಂದು ನಾಲ್ಕೂವರೆ ಲಕ್ಷ!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ದೇವರು: ಗುಂಡಪ್ಪನವರ ವಿಶಿಷ್ಟ ವಿಚಾರಧಾರೆ
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ಬದುಕೆಂದರೆ ಪ್ರತಿಧ್ವನಿ ಇದ್ದಂತೆ. ನೀವು ಏನನ್ನು ಕಳಿಸುತ್ತೀರೋ, ಅದು ನಿಮಗೇ ವಾಪಸ್ ಬರುತ್ತದೆ. ನೀವು ಏನನ್ನು ಬಿತ್ತುತ್ತೀರೋ, ಅದನ್ನೇ ಬೆಳೆಯುತ್ತೀರಿ. ಬೇರೆಯವರಲ್ಲಿ ಏನನ್ನು ಕಾಣುತ್ತೀರೋ, ಅದು ನಿಮ್ಮಲ್ಲಿಯೂ ಇರುವುದನ್ನು ಅನುಭವಿಸುತ್ತೀರಿ.

ವಕ್ರತುಂಡೋಕ್ತಿ

ಕೆಲವರು ಹೇಳುವುದನ್ನು ಒಪ್ಪಿಕೊಳ್ಳಬಾರದು. ಕಾರಣ ಏಕಕಾಲದಲ್ಲಿ ಇಬ್ಬರೂ ತಪ್ಪಿತಸ್ಥರಾಗಬಾರದು.

ಚಾಂಪಿಯನ್ಸ್ ಟ್ರೋಫಿ-2025

ಇಂದು ಭಾರತ-ಕಿವೀಸ್ ಫೈನಲ್ ಪಂದ್ಯ
ವಿವರಪುಟ → 10

ಫನ್‌ತರಂಗ
- ರಘುಪತಿ ಶೃಂಗೇರಿ -

ಬಿಜೆಪಿ ಟೀಕೆಯನ್ನೇ ಬಳಸಿಕೊಳ್ಳಲು ಕಾಂಗ್ರೆಸ್ ನಿರ್ಧಾರ

ಹಲಾಲ್ ಕೈಗೆ ಗುಲಾಲ್

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿರುವ ಬಜೆಟ್ ಅನ್ನು ಟೀಕಿಸುವ ಭರದಲ್ಲಿ ಬಿಜೆಪಿ ನಾಯಕರು ಬಳಸಿರುವ 'ಹಲಾಲ್' ಪದವೇ ಕಾಂಗ್ರೆಸ್‌ಗೆ ಮುಂಬರುವ ದಿನಗಳಲ್ಲಿ ವರವಾಗಿ ಪರಿಣಮಿಸಲಿದೆ ಎಂಬ ಅಭಿಪ್ರಾಯ ರಾಜಕೀಯ ವಲಯದಲ್ಲಿ ವ್ಯಕ್ತವಾಗಿದೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಹತ್ತಿರದಲ್ಲಿದ್ದು, ಬಿಜೆಪಿ ನಾಯಕರ ಹಲಾಲ್ ಟೀಕೆಯನ್ನೇ ಮುಂದಿಟ್ಟುಕೊಂಡು ಬಿಜೆಪಿ ಪಕ್ಷವು ಹಿಂದುಳಿದ ವರ್ಗಗಳ ವಿರೋಧಿ ಎಂದು ಬಿಂಬಿಸಲು ಸದ್ದಿಲ್ಲದೆ ತಯಾರಿ ನಡೆಸಿದೆ. ಬಿಜೆಪಿ ನಾಯಕರ ಟೀಕೆಗಳು ಅಲ್ಪಸಂಖ್ಯಾತರ ಮತಗಳ ಕ್ರೋಢೀಕರಣಕ್ಕೆ ಕಾಂಗ್ರೆಸ್‌ಗೆ ಬುನಾದಿ ಹಾಕಿಕೊಡಲಿದೆ ಎಂದು ವಿಶ್ಲೇಷಿಸಲಾಗಿದೆ.

ಸಿಎಂ ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಿಸಿದ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ನೀಡುವಂತಹ ಬಹುತೇಕ ಸವಲತ್ತುಗಳನ್ನು ಹಿಂದುಳಿದ ವರ್ಗಗಳ ಸಮುದಾಯಕ್ಕೆ ವಿಸ್ತರಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಆದರೆ ಬಿಜೆಪಿ ನಾಯಕರು 2ಬಿ ವರ್ಗದಲ್ಲಿರುವ ಅಲ್ಪಸಂಖ್ಯಾತರನ್ನೇ ಗುರಿಯಾಗಿಸಿಕೊಂಡು ಹಲಾಲ್ ಬಜೆಟ್ ಎಂದು ಟೀಕೆ ಮಾಡುವ ಮೂಲಕ ಜಾತಿ ಆಧಾರಿತ ರಾಜಕೀಯಕ್ಕೆ ಪ್ರಯತ್ನಿಸುತ್ತಿದ್ದಾರೆ. ಸೌಲಭ್ಯಗಳ ಹಂಚಿಕೆಯಲ್ಲಿ ಮುಸ್ಲಿಂ ಸಮುದಾಯವನ್ನು ಮಾತ್ರ ಕೇಂದ್ರೀಕರಿಸಿಲ್ಲ ಎಂಬುದು ಬಜೆಟ್‌ನಲ್ಲಿ ಸ್ಪಷ್ಟವಾಗಿದೆ. ಆದರೂ ಬಿಜೆಪಿ ನಾಯಕರು ಹಿಂದುಳಿದ ವರ್ಗಗಳ ಸೌಲಭ್ಯಗಳ ಬಗ್ಗೆ ಪ್ರಸ್ತಾಪಿಸದೆ ಕೇವಲ ಮುಸ್ಲಿಂ ಸಮುದಾಯಕ್ಕೆ ನೀಡುತ್ತಿರುವ ಸವಲತ್ತುಗಳ ಬಗ್ಗೆಯೇ ಕೇಂದ್ರೀಕರಿಸಿ ಟೀಕೆ ಮಾಡುತ್ತಿದ್ದಾರೆ. ಹಿಂದುಳಿದ ವರ್ಗಗಳ ಪ್ರವರ್ಗ 1, 2ಎ ಮತ್ತು 2ಬಿ ಸಮುದಾಯಗಳಲ್ಲಿ ಬರುವ 182ಕ್ಕೂ ಹೆಚ್ಚು ಜಾತಿ ಹಾಗೂ ಉಪಜಾತಿಗಳಿಗೆ ಇನ್ಮುಂದೆ ಸರಕಾರಿ ಗುತ್ತಿಗೆಯಲ್ಲಿ 2 ಕೋಟಿ ರು. ವರೆಗೂ, ಸರಕು ಮತ್ತು ಸೇವೆಯಲ್ಲಿ 1 ಕೋಟಿ ರು. ವರೆಗೂ ಮೀಸಲಾತಿ ದೊರೆಯುತ್ತಿದೆ. ಇದರಲ್ಲಿ ಮುಸ್ಲಿಂ ಸಮುದಾಯದ ಮೀಸಲಾತಿ ಕೇವಲ ಶೇ.4ರಷ್ಟಿದೆ. ಕೆಐಎಡಿಬಿಯಲ್ಲಿ ಭೂಮಿ ಮೀಸಲು ಹೊರತುಪಡಿಸಿದರೆ ಹಿಂದುಳಿದ ವರ್ಗಗಳಿಗೆ ನೀಡುವ ಎಲ್ಲ ಸೌಲಭ್ಯಗಳನ್ನು ಅಲ್ಪಸಂಖ್ಯಾತರಿಗೆ ವಿಸ್ತರಣೆ ಮಾಡಲಾಗಿದೆ. ಬಿಜೆಪಿ ನಾಯಕರು ಹಿಂದೂ ಸಮುದಾಯದ ಮತಗಳನ್ನು ಒಗ್ಗೂಡಿಸಲು '2ಬಿ'ಗೆ ನೀಡಲಾಗಿರುವ ಸವಲತ್ತುಗಳನ್ನು ಪ್ರಶ್ನೆ ಮಾಡಲು ಆರಂಭಿಸಿದೆ. ಇದೇ ವಿಷಯವನ್ನು ಇಟ್ಟುಕೊಂಡು ಜನರ ಮುಂದೆ ಹೋಗುತ್ತೇವೆ ಎಂದು ಕಾಂಗ್ರೆಸ್ ನಾಯಕರು ತಿಳಿಸಿದ್ದಾರೆ.

ಬಿಜೆಪಿಯ ಟೀಕೆಗಳು ಹೆಚ್ಚಾಗುತ್ತಿದ್ದಂತೆ ಕಾಂಗ್ರೆಸ್ ನಾಯಕರು ದಾಖಲೆಗಳ ಸಮೇತ ಜನರ ಮುಂದೆ ಬಂದು ಬಿಜೆಪಿ ಹಿಂದುಳಿದ ವರ್ಗಗಳ ವಿರೋಧಿ ಎಂದು ಬಿಂಬಿಸುವ ಪ್ರಯತ್ನ ಮಾಡಲಿದೆ. ಇದು ಮುಂಬರುವ ಜಿಲ್ಲಾ, ತಾಲೂಕು ಹಾಗೂ ಬಿಬಿಎಂಪಿ ಚುನಾವಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎನ್ನಲಾಗಿದೆ.

ಹಲಾಲ್ ಎಂದರೆ ಏನು?

ಹಲಾಲ್ ಎಂದರೆ ನ್ಯಾಯಸಮ್ಮತವಾದದ್ದು ಹಾಗೂ ಕಾನೂನಾತ್ಮಕವಾಗಿ ನಡೆದುಕೊಳ್ಳುವುದು ಎಂದರ್ಥ. ನಮಕ್ ಹಲಾಲ್ ಎಂದರೆ ನಿಯತ್ತಾಗಿರುವವನು. ನಮಕ್ ಹರಾಮ್ ಎಂದರೆ ಉಂಡ ಮನೆಗೆ ಎರಡು ಬಗೆಯುವವನು. ಬಿಜೆಪಿಯವರು ಕಾಂಗ್ರೆಸ್‌ಗೆ ತಿರುಗೇಟು ನೀಡಲು ಹೋಗಿ ತಪ್ಪು ಮಾಡಿದ್ದು, ಪಕ್ಷದಲ್ಲಿರುವ ಹಿರಿಯರಾದರೂ ಈ ಕುರಿತು ಅವರಿಗೆ ತಿಳಿ ಹೇಳಬೇಕಿದೆ. ಇಲ್ಲವಾದರೆ ಮತ್ತಷ್ಟು ತಪ್ಪುಗಳಿಂದ ಪಕ್ಷಕ್ಕೆ ಹಿನ್ನಡೆ ಯಾಗಬಹುದು. ಬಿಜೆಪಿ ನಾಯಕರು ಹಲಾಲ್ ಬಜೆಟ್ ಎಂದು ಟೀಕಿಸುತ್ತಿರುವುದು ಸರಿಯಲ್ಲ. ಬಜೆಟ್‌ನಲ್ಲಿ ಕುಂದುಕೊರತೆ ಇದ್ದರೆ ಅದನ್ನು ಚರ್ಚಿಸಿದರೆ ಒಳಿತು ಎಂಬ ಮಾತು ಸಾರ್ವಜನಿಕರಲ್ಲಿ ಕೇಳಿ ಬಂದಿದೆ.

ಬಿಜೆಪಿಯವರು ಈ ಬಜೆಟ್ ಅನ್ನು ಹಲಾಲ್ ಬಜೆಟ್ ಎಂದು ಹೇಳಲಿ. ಪಾಪ ಅವರಾದರೂ ಏನು ಮಾಡುತ್ತಾರೆ. ಈ ರೀತಿ ಹೇಳುವುದು ಬಿಟ್ಟರೆ ಇನ್ನೇನು ಮಾಡಲು ಸಾಧ್ಯ?
- ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಶನಿವಾರ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಆರು ಸಂಸ್ಥೆ ಹಾಗೂ 20 ಮಹಿಳಾ ಸಾಧಕರು ಸೇರಿ ಒಟ್ಟು 26 ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

ರನ್ಯಾ ರಾವ್ ವಿರುದ್ಧ ಸಿಬಿಐ ಎಫ್‌ಐಆರ್

ಬೆಂಗಳೂರು: ಚಿನ್ನ ಕಳ್ಳ ಸಾಗಾಣಿಕೆ ಪ್ರಕರಣದಲ್ಲಿ ಈಗಾಗಲೇ ಡಿಆರ್‌ಐ ವಶದಲ್ಲಿರುವ ನಟಿ ರನ್ಯಾ ರಾವ್‌ಗೆ ಮತ್ತೊಂದು ಸಂಕಷ್ಟ ಎದುರಾಗಿದೆ. ಈ ಪ್ರಕರಣದಲ್ಲಿ ಕೇಂದ್ರೀಯ ತನಿಖಾ ದಳ (ಸಿಬಿಐ) ಪ್ರವೇಶ ಮಾಡಿದ್ದು, ರನ್ಯಾ ರಾವ್ ವಿರುದ್ಧ ಪ್ರತ್ಯೇಕ ಎಫ್‌ಐಆರ್ ದಾಖಲಿಸಿದೆ. ಚಿನ್ನಕಳ್ಳ ಸಾಗಾಣಿಕೆ ಪ್ರಕರಣಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಸಿಬಿಐ ತನಿಖೆ ನಡೆಸಲು ಮುಂದಾಗಿದೆ. ದೆಹಲಿ, ಮುಂಬೈ, ಬೆಂಗಳೂರಿನಲ್ಲೂ ಸಿಬಿಐ ತನಿಖೆ ಪ್ರಾರಂಭಿಸಿದೆ. ಇದುವರೆಗೂ ಎಷ್ಟು ಬಾರಿ ಅಕ್ರಮವಾಗಿ ಚಿನ್ನ ಸಾಗಿಸಿದ್ದಾರೆ? ಯಾರಿಗೆ ಕೊಟ್ಟಿದ್ದಾರೆ? ಯಾರ್‍ಯಾರ ಕೈವಾಡವಿದೆ? ಎಂಬ ಬಗ್ಗೆ ಅಧಿಕಾರಿಗಳು ತೀವ್ರ ವಿಚಾರಣೆ ಕೈಗೊಂಡಿದ್ದಾರೆ.

ಒಂದಾಗಿ ಕೆಲಸ ಮಾಡುವಂತೆ ಸಿಎಂ-ಡಿಸಿಎಂಗೆ ಖರ್ಗೆ ತಾಕೀತು

ಎರಡು ಹಾದಿಯಲ್ಲಿ ಮುನ್ನಡೆದರೆ ಸಂಕಷ್ಟ

ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಒಂದಾಗಿ ರಾಜ್ಯದ ಅಭಿವೃದ್ಧಿ ಕೆಲಸ ಮಾಡಿ. ಅಭಿವೃದ್ಧಿ ಬಿಟ್ಟು ಹೋದರೆ ಜನ ಮೆಚ್ಚುವುದಿಲ್ಲ. ಪ್ರಮುಖವಾಗಿ ಭಿನ್ನ-ಭಿನ್ನ ಹಾದಿಯಲ್ಲಿ ಹೋದರೆ ಏನೂ ಮಾಡಲಿಕ್ಕಾಗದು.
-ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷ

ಕಲಬುರಗಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಒಂದಾಗಿ ಒಳ್ಳೆಯ ಕೆಲಸ ಮಾಡಿ. ಒಂದಾಗದೆ ಎರಡು ಹಾದಿಯಲ್ಲಿ ಮುನ್ನಡೆದರೆ ಎಲ್ಲರಿಗೂ ಕಷ್ಟ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತೊಮ್ಮೆ ತಾಕೀತು ಮಾಡಿದರು.

ಜೇವರ್ಗಿ ತಾಲೂಕಿನ ಕಟ್ಟಿ ಸಂಗಾವಿ ಬಳಿ ಕಲ್ಯಾಣ ಕರ್ನಾಟಕ ಪ್ರದೇಶದ 38 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 1,000 ಕೋಟಿ ರು. ವೆಚ್ಚದಲ್ಲಿ 1,166 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಲ್ಯಾಣ ಪಥ ಯೋಜನೆಯ ಚಾಲನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. → 4

ಕಾಲುವೆಗೆ ತಳ್ಳಲ್ಪಟ್ಟ ಮೂವರ ಪೈಕಿ ಒಬ್ಬ ಸಾವು, ಶನಿವಾರ ಶವ ಪತ್ತೆ

ಇಸ್ರೇಲ್ ಮಹಿಳೆ, ರೆಸಾರ್ಟ್ ಒಡತಿ ಮೇಲೆ ಸಾಮೂಹಿಕ ಅತ್ಯಾಚಾರ

ಪ್ರವಾಸಿಗರ ಮೇಲೆ ಹಲ್ಲೆ ಪ್ರಕರಣಕ್ಕೆ ಟ್ವಿಸ್ಟ್

ಗಂಗಾವತಿ: ಸಮೀಪದ ಸಾಣಾಪುರ ಕೆರೆ ಬಳಿ ಜಂಗ್ಲಿಗೆ ತೆರಳುವ ಮಾರ್ಗದಲ್ಲಿ ಗುರುವಾರ (ಮಾ.6) ರಾತ್ರಿ ಇಬ್ಬರು ವಿದೇಶಿಗರು, ರೆಸಾರ್ಟ್ ಒಡತಿ ಸೇರಿ ಐವರ ಮೇಲೆ ಹಲ್ಲೆ ಮಾಡಿದ್ದ ಪ್ರಕರಣ ಭಾರಿ ಟ್ವಿಸ್ಟ್ ಪಡೆದುಕೊಂಡಿದೆ.

ದುಷ್ಕರ್ಮಿಗಳು 29 ವರ್ಷದ ರೆಸಾರ್ಟ್ ಮಾಲಕಿ ಮತ್ತು 27 ವರ್ಷದ ಇಸ್ರೇಲ್ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿರುವುದು ಬೆಳಕಿಗೆ ಬಂದಿದೆ. ಮತ್ತೊಂದೆಡೆ ಘಟನೆ ನಂತರ ಕಾಣೆಯಾಗಿದ್ದ ಒಡಿಶಾ ಮೂಲಕ ವ್ಯಕ್ತಿ ಬಿಬಾಶ್ (26) ತುಂಗಭದ್ರಾ ಎಡದಡೆ ಕಾಲುವೆಯಲ್ಲಿ ಶವವಾಗಿ ಪತ್ತೆಯಾಗಿದ್ದಾನೆ.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು, ಗಂಗಾವತಿಯ ಸಾಯಿ ನಗರದ ನಿವಾಸಿಗಳಾದ ಮಲ್ಲೇಶ ಅಲಿ ಯಾಸ್ ಹಂದಿ ಮಲ್ಲ(22), ಚೇತನಸಾಯಿ ಶಿಳ್ಳೇಕ್ಯಾತರ್ (21) ಎಂಬುವರನ್ನು ಬಂಧಿಸಿದ್ದಾರೆ. ಕೃತ್ಯದಲ್ಲಿ ಭಾಗಿಯಾಗಿರುವ ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದು, ಆತನ ಪತ್ತೆಗೆ ಬಲೆ ಬೀಸಿದ್ದಾರೆ. → 4

ಕಾಲುವೆಯಲ್ಲಿ ಶವವಾಗಿ ಪತ್ತೆಯಾದ ಒಡಿಶಾದ ಮೂಲದ ಬಿಬಾಶ್.

ಆರೋಪಿಗಳ ಪತ್ತೆಗೆ ಆರು ತಂಡಗಳನ್ನು ರಚಿಸಲಾಗಿದ್ದು, ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಇಬ್ಬರ ಮೇಲೆ ಅತ್ಯಾಚಾರ ಎಸಗಲಾಗಿದೆ ಎಂದು ಸಂತ್ರಸ್ತೆ ದೂರು ನೀಡಿದ್ದಾರೆ. ಮಹಿಳೆಯರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ವರದಿ ಬಂದ ಬಳಿಕ ಮುಂದಿನ ಕ್ರಮ ವಹಿಸಲಾಗುತ್ತದೆ.
- ಡಾ.ರಾಮ್ ಎಲ್. ಅರಸಿದ್ದಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಮರುಕಳಿಸದಂತೆ ಎಚ್ಚರ

ಗಂಗಾವತಿ ತಾಲೂಕಿನ ಸಾಣಾಪುರದಲ್ಲಿ ಇಸ್ರೇಲ್ ಮಹಿಳೆ ಹಾಗೂ ಹೋಮ್ ಸ್ಟೇ ಒಡತಿ ಮೇಲೆ ನಡೆದ ಹಲ್ಲೆ ಹಾಗೂ ಅತ್ಯಾಚಾರ ಘಟನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರವಾಗಿ ಖಂಡಿಸಿದ್ದಾರೆ. ಘಟನೆ ವರದಿಯಾದ ಕೂಡಲೇ ಸಂಬಂಧಪಟ್ಟ ಪೊಲೀಸರಿಂದ ಮಾಹಿತಿ ಪಡೆದು, ಕಟ್ಟುನಿಟ್ಟಿನ ತನಿಖೆ ಕೈಗೊಂಡು ಅಪರಾಧಿಗಳನ್ನು ಶೀಘ್ರ ಪತ್ತೆಹಚ್ಚುವಂತೆ ಸೂಚಿಸಿದ್ದೆ. ಪ್ರಕರಣದ ಸಂಬಂಧ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿ, ತನಿಖೆ ಮುಂದುವರಿಸಿದ್ದಾರೆ. ರಾಜ್ಯಕ್ಕೆ ಬರುವ ಪ್ರವಾಸಿಗರು ಸೇರಿದಂತೆ ಪ್ರತಿಯೊಬ್ಬರಿಗೂ ರಕ್ಷಣೆ ನೀಡಲು ನಮ್ಮ ಸರಕಾರ ಬದ್ಧವಾಗಿದೆ. ಇಂತಹ ಘಟನೆಗಳು ಮರುಕಳಿಸದಂತೆ ಎಲ್ಲ ಅಗತ್ಯ ಕ್ರಮ ವಹಿಸಲಾಗುವುದು ಎಂದು ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕೋಮಾದಲ್ಲಿದ್ದಾನೆ ಎಂದು ಹೇಳಲಾದ ವ್ಯಕ್ತಿಯಿಂದ ಆಸ್ಪತ್ರೆ ಹೊರಗೆ ಪ್ರತಿಭಟನೆ

ಖಾಸಗಿ ಆಸ್ಪತ್ರೆ ಬಿಲ್ ನೋಡಿ ಐಸಿಯುನಿಂದ ಓಡಿಬಂದ

ಭೋಪಾಲ್: ಖಾಸಗಿ ಆಸ್ಪತ್ರೆಯ ಬಿಲ್ ನೋಡಿ, ಕೋಮಾದಲ್ಲಿರುವ ವ್ಯಕ್ತಿಯೊಬ್ಬರು ಐಸಿಯುನಿಂದ ಆಮ್ಲಜನಕ ಮಾಸ್ಕ್ ಸಮೇತ ಆಸ್ಪತ್ರೆಯಿಂದ ಹೊರಗೆ ಬಂದು ಪ್ರತಿಭಟನೆ ನಡೆಸಿರುವ ಘಟನೆ ಮಧ್ಯಪ್ರದೇಶದ ರತ್ಲಂನಲ್ಲಿ ನಡೆದಿದೆ. ಈ ಕುರಿತು ವಿಡಿಯೊವನ್ನು ಎಕ್ಸ್ ಖಾತೆಯಲ್ಲಿ ಹಂಚಿಕೊಳ್ಳಲಾಗಿದ್ದು, ಭಾರೀ ವೈರಲ್ ಆಗಿದೆ.

ಐಸಿಯುನಿಂದ ಬಂದ ವ್ಯಕ್ತಿ ಹೇಳಿದ್ದೇನು?: ದೀನದಯಾಳ್ ನಗರದ ನಿವಾಸಿಯಾಗಿರುವ ನಾನು (ಬಂಟಿ) ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದೆ. ಈ ವೇಳೆ ನನ್ನ ತಪಾಸಣೆ ಮಾಡಿದ ವೈದ್ಯರು ಐಸಿಯುಗೆ ದಾಖಲು ಮಾಡಿದ್ದರು. ನಂತರ ನನ್ನ ಬೆನ್ನು ಮೂಳೆ ಮುರಿದು ಹೋದ ಪರಿಣಾಮ ನಾನು ಕೋಮಾಗೆ ಜಾರಿದ್ದೇನೆ ಎಂದು ವೈದ್ಯರು ನನ್ನ ಕುಟುಂಬಕ್ಕೆ ಹೇಳಿದ್ದಾರೆ. ಅಲ್ಲದೆ, ತಕ್ಷಣ ದುಬಾರಿ ಚಿಕಿತ್ಸೆಯ ಅಗತ್ಯವಿದೆ, ಆದಷ್ಟು ಬೇಗ ಹಣ ಹೊಂದಿಸಿ ಎಂದು ಹೇಳಿದ್ದಾರೆ. ನಮ್ಮ ಕುಟುಂಬದವರು 1ಲಕ್ಷ ರು. ಹೊಂದಿಸಿ ಆಸ್ಪತ್ರೆಗೆ ಕಟ್ಟಿದ್ದಾರೆ. ನಾನು ಕೋಮಾಗೆ ಹೋಗಿರಲಿಲ್ಲ. ಸಣ್ಣ ಪುಟ್ಟ ಗಾಯಗಳಾಗಿದ್ದವು. ಇದನ್ನು ನೆಪ ಮಾಡಿಕೊಂಡು ನಮ್ಮ ಬಳಿ ಹಣ ಸುಲಿಗೆ ಮಾಡಲು ಆಸ್ಪತ್ರೆಗಳು ಇಂತಹ ಕೆಟ್ಟ ಕೆಲಸ ಮಾಡುತ್ತಿವೆ. ಈ ವಿಷಯ ಗೊತ್ತಾಗಿಯೇ ನಾನು ಐಸಿಯುನಿಂದ ತಪ್ಪಿಸಿಕೊಂಡು ಬಂದೆ. ಆಸ್ಪತ್ರೆಯ ಆವರಣದಲ್ಲಿ ಜನರನ್ನು ಒಟ್ಟುಗೂಡಿಸಿ ಆಸ್ಪತ್ರೆಗಳು ಹೇಗೆಲ್ಲಾ ಜನರಿಗೆ ಮೋಸ ಮಾಡುತ್ತವೆ ಎಂಬುದನ್ನು ತಿಳಿಸುವುದು ನನ್ನ ಉದ್ದೇಶವಾಗಿತ್ತು ಎಂದು ಬಂಟಿ ವಿಡಿಯೊದಲ್ಲಿ ಹೇಳಿದ್ದಾರೆ.

ಆಮ್ಲಜನಕ ಸಮೇತ ಆಸ್ಪತ್ರೆ ಹೊರಗೆ ಬಂದು ಪ್ರತಿಭಟಿಸುತ್ತಿರುವ ಬಂಟಿ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ 15 ಮಂದಿ ಆಯ್ಕೆ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯ 2023ನೇ ಸಾಲಿನ 'ವಾರ್ಷಿಕ ಗೌರವ ಪ್ರಶಸ್ತಿ' ಮತ್ತು 'ಸಾಹಿತ್ಯಶ್ರೀ ಪ್ರಶಸ್ತಿ'ಗಳು ಪ್ರಕಟಗೊಂಡಿವೆ. ಡಾ.ಸಿ. ವೀರಣ್ಣ, ಡಾ.ಶ್ರೀರಾಮ ಇಟ್ಟಣ್ಣವರ, ಜಾಣಗೆರೆ ವೆಂಕಟರಾಮಯ್ಯ, ಎ.ಎಂ.ಮದರಿ, ಡಾ. ಸಬಿಹಾ ಭೂಮಿಗೌಡ ಅವರು ವಾರ್ಷಿಕ ಗೌರವ ಪ್ರಶಸ್ತಿಗೆ ಆಯ್ಕೆಗೊಂಡಿದ್ದಾರೆ. ಸಾಹಿತ್ಯ ಶ್ರೀ ಪ್ರಶಸ್ತಿಗೆ ಡಾ.ಎಂ.ಎಸ್. ಶೇಖರ್, ಜಿ.ಎನ್.ಮೋಹನ್, ಡಾ.ಟಿ. ಎಸ್.ವಿವೇಕಾನಂದ, ಡಾ.ಜಯಶ್ರೀ ಕಂಬಾರ, ಪ್ರೊ.ನಿಜಲಿಂಗಪ್ಪ ಯಮನಪ್ಪ ಮಟ್ಟಿಹಾಳ, ಡಾ.ಬಾಲಗುರುಮೂರ್ತಿ, ಪ್ರೊ.ಶಿವಗಂಗಾ ರುಮ್ಮಾ, ಡಾ.ರೀಟಾ ರೀನಿ, ಡಾ.ಕಲೀಮ್ ಉಲ್ಲಾ, ಡಾ.ವೆಂಕಟಗಿರಿ ದಳವಾಯಿ ಅವರು ಆಯ್ಕೆಯಾಗಿದ್ದಾರೆ. ಮಾ.24ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಕಾಡೆಮಿಯ ಪ್ರಕಟಣೆಯಲ್ಲಿ ತಿಳಿಸಿದೆ.

ಗಣಿ ಇಲಾಖೆ ಅಧಿಕಾರಿಗಳಿಗೆ ಜನಪ್ರನಿಧಿಗಳಿಂದಲೇ ಅಡ್ಡಿ

ಅಕ್ರಮ ಮರಳುಗಾರಿಕೆ ತಡೆಗೆ ನೂರೆಂಟು ವಿಘ್ನ

ಬೆಂಗಳೂರು: ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ತಡೆಗೆ ಸರಕಾರ ಹಲವು ಕ್ರಮಗಳನ್ನು ಕೈಗೊಂಡಿದ್ದರೂ ಬಹುತೇಕ ಜಿಲ್ಲೆಗಳಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ. ಕಳೆದ ಎರಡು ವರ್ಷಗಳಲ್ಲಿ 6,034 ಸ್ಥಳಗಳಲ್ಲಿ ಅಧಿಕಾರಿಗಳು ದಾಳಿ ನಡೆಸಿ, 2,268 ಪ್ರಕರಣಗಳ ದಾಖಲಿಸಿದ್ದು, 16.50 ಕೋಟಿ ರು. ದಂಡ ವಸೂಲಿ ಮಾಡಿದ್ದಾರೆ. ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಅಕ್ರಮ ಗಣಿಗಾರಿಕೆಗೆ ಪರಿಗಣಿಸಿದರೆ ಇನ್ನೂ ಇದರ ಎರಡು ಪಟ್ಟು ದಾಳಿ ಮಾಡಬೇಕಿದೆ. ಆದರೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ, ಅಕ್ರಮ ಗಣಿಗಾರಿಕೆ ಮಟ್ಟ ಹಾಕುವುದಕ್ಕೆ ನೂರೆಂಟು ವಿಘ್ನಗಳು ಎದುರಾಗುತ್ತಿವೆ.

ಪ್ರತಿ ವರ್ಷ ಅಕ್ರಮ ಮರಳು ಗಣಿಗಾರಿಕೆ, ಸಾಗಣೆ, ದಾಸ್ತಾನುಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಮರಳು ಸಮಿತಿಯ ಸದಸ್ಯ ಇಲಾಖೆಗಳಿಂದ ಸಾವಿರಾರು ಪ್ರಕರಣಗಳು ದಾಖಲಿಸಿ, ತಪ್ಪಿತಸ್ಥರಿಂದ ಒಂದಷ್ಟು ದಂಡ ವಸೂಲಿ ಮಾಡಲಾಗುತ್ತದೆ. → 4



ಅಕ್ರಮ ಮರಳು ಪ್ರಕರಣಗಳ ವಿವರ

ವರ್ಷ	ದಾಳಿ	ಪ್ರಕರಣಗಳು	ದಂಡ
2023-24	4,076	1,106	11
2024-25	1,958	1,162	5.50

ಸಮಾಚಾರ ಸಣ್ಣದಲ್ಲ

ಸಾರ್ವಜನಿಕರಿಂದ ಅಹವಾಲು ಸ್ವೀಕಾರ

ಮಂಡ್ಯ: ಮಂಡ್ಯ ಲೋಕಾಯುಕ್ತ ವಿಭಾಗದ ಅಧಿಕಾರಿಗಳು ಮಾರ್ಚ್ 12ರಂದು ಮಳವಳ್ಳಿ ತಾಲೂಕಿನಲ್ಲಿ ಸಾರ್ವಜನಿಕರ ಕುಂದು ಕೊರತೆ ಸಭೆ ನಡೆಸುತ್ತಿದ್ದು, ಮಳವಳ್ಳಿ ತಾಲೂಕು ಕಚೇರಿ ಆವರಣದಲ್ಲಿ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30 ರವರೆಗೆ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ದೂರು ಮತ್ತು ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ. ಸಭೆಯಲ್ಲಿ ಡಿವೈಎಸ್‌ಪಿ ಸುನಿಲ್ ಕುಮಾರ್, ಎಚ್.ಟಿ.ಮೋಹನ್ ರೆಡ್ಡಿ, ಆರ್.ಎಂ.ಜಯರಸ್ತು ಮತ್ತು ಕರ್ನಾಟಕ ಲೋಕಾಯುಕ್ತ, ಪೊಲೀಸ್ ಇನ್ಸ್‌ಪೆಕ್ಟರ್ ಬ್ಯಾಟರಾಯಗೌಡ.ಬಿ.ಪಿ ಪಾಲ್ಗೊಳ್ಳಲಿದ್ದಾರೆ. ಸರಕಾರಿ ಹಾಗೂ ಅರೆಸರಕಾರಿ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು, ನೌಕರರುಗಳು ಸರಕಾರಿ ಕೆಲಸ ಮಾಡಿಕೊಡಲು ಅನಗತ್ಯ ವಿಳಂಭ ಮಾಡಿದ ಬಗ್ಗೆಯು ದೂರು ಸಲ್ಲಿಸಬಹುದಾಗಿದ್ದು, ಮಳವಳ್ಳಿ ತಾಲೂಕಿನ ಸಾರ್ವಜನಿಕರು ಖುದ್ದಾಗಿ ಅಧಿಕಾರಿಗಳನ್ನು ಭೇಟಿ ಮಾಡಿ ತಮ್ಮ ದೂರುಗಳನ್ನು ಸಲ್ಲಿಸಬಹುದು ಎಂದು ಕರ್ನಾಟಕ ಲೋಕಯುಕ್ತ, ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಗರೀಕ ಸೇವೆಗಾಗಿ ಅರ್ಜಿ ಆಹ್ವಾನ

ಮಂಡ್ಯ: ಸೇವಾ ಸಿಂಧು ಯೋಜನೆ ಅಡಿಯಲ್ಲಿ ರೂಪಿಸಲಾದ ಗ್ರಾಮ ಒನ್ ಯೊಜನೆಯ ಅಡಿಯಲ್ಲಿ ನಾಗರೀಕ ಸೇವೆಗಳನ್ನು ಪಡೆಯಲು ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು ಶ್ರೀರಂಗಪಟ್ಟಣ ತಾಲೂಕು, ಕೆ.ಶೆಟ್ಟಿಹಳ್ಳಿ, ಪಂಚಾಯಿತಿಯಲ್ಲಿ ಖಾಲಿ ಇರುವ ಗ್ರಾಮ ಪಂಚಾಯಿತಿಗೆ ಆನ್‌ಲೈನ್ ಮೂಲಕ ಅರ್ಜಿಯನ್ನು ಅಹ್ವಾನಿಲಾಗಿದ್ದು ಮಾರ್ಚ್ 15ರೊಳಗೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಸರಕಾರದ ಸೇವೆಗಳನ್ನು ಮನೆಬಾಗಿಲಿಗೆ ತಲುಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಆಸಕ್ತಿಯುಳ್ಳ ಅಭ್ಯರ್ಥಿಗಳು https://kal-mys.gramaone.karnataka.gov.in/index.php/applicant-registration-initial-stepÈíQನ ಮೂಲಕ ಆನ್‌ಲೈನ್ ಮುಖಾಂತರ ಮಾರ್ಚ್ 15 ರೊಳಗೆ ಅರ್ಜಿಯನ್ನು ಸಲ್ಲಿಸುವುದಾಗಿ ಅಪರ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಜೆಟ್ ವಿರೋಧಿಸಿ ಬಿಜೆಪಿ ಪ್ರತಿಭಟನೆ

ರಾಮನಗರ: ಮುಖ್ಯಮಂತ್ರಿ ಸಿದ್ದರಾಮಯ್ಯ ಅಲ್ಪಸಂಖ್ಯಾತರ ಪರವಾಗಿ ಬಜೆಟ್ ಮಂಡಿಸಿದ್ದಾರೆ ಎಂದು ಆರೋಪಿಸಿ ಬಿಜೆಪಿ ಜಿಲ್ಲಾ ಘಟಕ ಪ್ರತಿಭಟನೆ ನಡೆಸಿತು. ನಗರದ ಐಜೂರು ಸರ್ಕಲ್‌ನಲ್ಲಿ ಟ್ರಾಕ್ಟರ್ ಏರಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಕಾರ್ಯಕರ್ತರು, ಕಾಂಗ್ರೆಸ್ ಸರಕಾರದ ವಿರುದ್ದ ಆಕ್ರೋಶ ವ್ಯಕ್ತಪಡಿಸಿದರು. ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಅಧ್ಯಕ್ಷ ಎಂ.ಎನ್.ಆನಂದಸ್ವಾಮಿ, ಕಾಂಗ್ರೆಸ್ ಸರ್ಕಾರ ಬಹುಸಂಖ್ಯಾತರು, ದಲಿತರು, ಹಿಂದುಳಿದವರನ್ನು ಮರೆತು, ಚುನಾವಣೆಯಲ್ಲಿ ಅವರ ಪರವಾಗಿ ನಿಂತ ಅಲ್ಪಸಂಖ್ಯಾತರಿಗೆ ಅನುಕೂಲಕರವಾದ ಬಜೆಟ್ ಮಂಡನೆ ಮಾಡಿದ್ದಾರೆ, ಅವರ ಬಾಯಿಗೆ ತುಪ್ಪ ಸುರಿದಿದ್ದಾರೆ, ಸರ್ಕಾರ ಒಂದು ಸಮುದಾಯದ ಪರವಾಗಿ ನಿಂತಿದೆ ಎಂದು ಹರಿಹಾಯ್ದರು. ಬಜೆಟ್‌ನಲ್ಲಿ ಜಿಲ್ಲೆಗೆ ಯಾವುದೇ ಅನುದಾನ ನೀಡಿಲ್ಲ, ಸರಕಾರದಲ್ಲಿ ಹಣವಿಲ್ಲ, ರಾಜ್ಯದ ಜನರನ್ನು ಸಾಲಗಾರರನ್ನಾಗಿ ಮಾಡಿದೆ, ವಿಪರೀತ ಸಾಲ ಪಡೆದು, ಗ್ಯಾರಂಟಿ ಹಣಕ್ಕೆ ಜನಸಾಮಾನ್ಯರ ಮೇಲೆ ಹೊರೆ ಹಾಕುತ್ತಿದೆ, ಬಜೆಟ್ ರೈತರ ವಿರೋಧಿಯಾಗಿದೆ ಎಂದರು. ಸಂದರ್ಭದಲ್ಲಿ ಕರವೇ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಚನ್ನಪಟ್ಟಣ ಗ್ರಾಮಾಂತರ ಮಂಡಲ ಕಾರ್ಯದರ್ಶಿ ಕಿಶನ್, ಜಯಕುಮಾರ್, ದೇವರಹಳ್ಳಿ ಸಿದ್ದರಾಜು ಸೇರಿದಂತೆ ಹಲವರು ಇದ್ದರು.

ಹೆದ್ದಾರಿಗಳಲ್ಲಿ ಸುರಕ್ಷತಾ ಕ್ರಮ ಕೈಗೊಳ್ಳಿ

ಚಾಮರಾಜನಗರ: ಜಿಲ್ಲಾ ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಲಾಗಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರಯಾಣಿಕರಿಗೆ ಅನುಕೂಲವಾಗುವಂತೆ ರಸ್ತೆ ಸಂಚಾರ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ಲೋಕಸಭಾ ಸದಸ್ಯ ಸುನಿಲ್ ಬೋಸ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ನಗರದ ಜಿಲ್ಲಾ ಪಂಚಾಯತ್ ನೂತನ ಕೆ.ಡಿ.ಪಿ ಸಭಾಂಗಣದಲ್ಲಿಂದು ನಡೆದ ಜಿಲ್ಲಾ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಸಾರ್ವಜನಿಕ ಸಂಚಾರಕ್ಕಾಗಿ ಜಿಲ್ಲೆಯಲ್ಲಿ ಇತ್ತೀಚೆಗೆ ಅಭಿವೃದ್ಧಿಪಡಿಸಲಾಗಿರುವ ರಸ್ತೆಗಳಲ್ಲಿ ಸಂಚಾರಿ ಸುರಕ್ಷತಾ ಕ್ರಮಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡಬೇಕು. ಅಪಘಾತ ಸಂಭವಿಸುವ ಸ್ಥಳಗಳನ್ನು ಗುರುತಿಸಿ ಸೂಚನಾ ಫಲಕಗಳನ್ನು ಅಳವಡಿಸಬೇಕು. ರಸ್ತೆಗಳ ಗುಣಮಟ್ಟ ಕಾಪಾಡಬೇಕು. ಅಗತ್ಯವಿರುವೆಡೆ ವೃತ್ತಗಳನ್ನು ನಿರ್ಮಿಸಬೇಕು. ಈ ಸಂಬಂಧ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಜನರಿಗೆ ಅನುಕೂಲ ಕಲ್ಪಿಸಬೇಕು ಎಂದು ಸೂಚಿಸಿದರು.
ಇದೇ ಸಂದರ್ಭದಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಮನೆ ಮಂಜೂರಾಗಿರುವ ಹಕ್ಕು ಪತ್ರಗಳನ್ನು ಫಲಾನುಭವಿಗಳಿಗೆ ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ವಿತರಿಸಿದರು.

{ ಎಂ.ಬಿ.ಪಾಟೀಲ } ಸಚಿವ

ಮುಖ್ಯಮಂತ್ರಿ ಸಿದ್ದರಾಮಯ್ಯನವರು 16ನೇ ಬಾರಿಗೆ ಮಂಡಿಸಿರುವ ಬಜೆಟ್ ಸಾಮಾಜಿಕ ಕಳಕಳಿ ಹೊಂದಿರುವ ಕಲ್ಯಾಣ ಕಾರ್ಯಕ್ರಮಗಳು ಮತ್ತು ಆರ್ಥಿಕ ಬೆಳವಣಿಗೆಗೆ ಇಂಬು ನೀಡುವ ಕೈಗಾರಿಕಾ ಬೆಳವಣಿಗೆ ಎರಡಕ್ಕೂ ಸಮಾನ ಪ್ರಾತಿನಿಧ್ಯ ನೀಡಿರುವ ಸಮಗ್ರ ದೃಷ್ಟಿಕೋನದ ಬಜೆಟ್ ಆಗಿದೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಬಿಜೆಪಿ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಮಂಜುಳಾ

ಮಹಿಳೆಯರ ಸಾಧನೆ ಗುರುತಿಸಿ

ಕೇಂದ್ರ ಸರಕಾರದ ಆರ್ಥಿಕ ನೆರವು ಯೋಜನೆಯ ಫಲಾನುಭವಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಮೈಸೂರು: ಮಹಿಳೆಯರಿಗೆ ಆರ್ಥಿಕ ಸಬಲೀಕರಣ ಅರಿವು ಮೂಡಿಸುವುದರೊಂದಿಗೆ ಅವರ ಸಾಧನೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಪಕ್ಷದ ಮಹತ್ವದ ಕಾರ್ಯ ಎಂದು ಬಿಜೆಪಿ ಮಹಿಳಾ ಮೋರ್ಚಾದ ರಾಜ್ಯಾಧ್ಯಕ್ಷೆ ಮಂಜುಳಾ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ನಗರ ಮಹಿಳಾ ಮೋರ್ಚಾದ ವತಿಯಿಂದ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವುದು ಸಂತಸ ವಿಷಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕೇಂದ್ರ ಸರಕಾರದ ಪ್ರಮುಖ ಯೋಜನೆಗಳಾದ ಮುದ್ರಾ, ಲಕ್ಷ್ಮಿಪತಿ ದೀದಿ, ಜನ್ ಧನ್, ಸ್ಟಾರ್ಟ್ ಇಂಡಿಯಾ, ಸ್ಟಾಂಡ್ ಅಫ್ ಇಂಡಿಯಾ, ಪ್ರಧಾನ ಮಂತ್ರಿ ಉದ್ಯೋಗ ಸೃಷ್ಠಿ, ಪಿಎಮ್‌ಇಜಿಪಿ ಸ್ವನಿಧಿ ಯೋಜನೆ, ಸ್ವಸಹಾಯ ಸಂಘಗಳ ಆರ್ಥಿಕ ನೆರವು ಯೋಜನೆಯ ಫಲಾನುಭವಿಗಳನ್ನು ಸನ್ಮಾನಿಸಿ ಅವರ ಯಶಸ್ವಿನ ಪಯಣದ ವಾಸ್ತವತೆಯನ್ನು ಹಂಚಿಕೊಳ್ಳಲು ಅವಕಾಶ ನೀಡಲಾಯಿತು. ಇದರಿಂದ ಇತರೆ ಮಹಿಳೆಯರು ಪ್ರಭಾವಿತರಾಗುತ್ತಾರೆ ಎಂಬುದು ಇದರ ಉದ್ದೇಶವಾಗಿತ್ತು. ಅಂಗಾಂಗ ದಾನದ ಮಹತ್ವ ಕುರಿತು ಡಾ.ಪೂರ್ಣಿಮ ಮಧುಸೂದನ್ ಪ್ರಮುಖ ವಿಚಾರಗಳನ್ನು ಪ್ರಸ್ತಾಪಿಸಿ ಅದರ ಮಹತ್ವವನ್ನು ತಿಳಿಸಿಕೊಟ್ಟರು. ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜು ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಶಾಸಕ ಶ್ರೀವತ್ಸ, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ನಾಗೇಂದ್ರ, ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಂ.ರಘು, ಕೇಬಲ್ ಮಹೇಶ್, ಮಹಿಳಾ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಶಾಂತಮ್ಮ, ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ಮಾಜಿ ಮಹಾಪೌರರಾದ ರತ್ನ ಲಕ್ಷ್ಮಣ್, ರೂಪ, ನಗರಪಾಲಿಕೆ ಸದಸ್ಯರಾದ ಪ್ರಮೀಳಾ, ಭರತ್, ಶಾರದಮ್ಮ ಇತರರು ಇದ್ದರು.

> **ಬಿಜೆಪಿ ಪಕ್ಷ ಕೂಡ ಮಹಿಳೆಯರ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡುತ್ತಿದೆ. ಇದರ ಜತೆಗೆ ಮಹಿಳೆಯರಿಗೆ ಹಲವು ವಿಚಾರಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದ್ದು, ಇದರಲ್ಲಿ ಅಧುನಿಕ ಆರೋಗ್ಯ ಸೇವೆಯಲ್ಲಿ ಅಂಗಾಂಗ ದಾನ ಬಹುಮುಖ್ಯವಾಗಿದೆ.**
> ಮಂಜುಳಾ, ಬಿಜೆಪಿ ಮಹಿಳಾ ಮೋರ್ಚಾದ ರಾಜ್ಯಾಧ್ಯಕ್ಷೆ

- ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವುದು ಸಂತಸ ತಂದಿದೆ.
- ಸರಕಾರದ ಯೋಜನೆ ಸದುಪಯೋಗ ಪಡಿಸಿಕೊಳ್ಳುತ್ತಿರುವ ಮಹಿಳೆಯರಿಗೆ ಸನ್ಮಾನ.
- ಯಶಸ್ವಿನ ಪಯಣದ ವಾಸ್ತವತೆಯನ್ನು ಹಂಚಿಕೊಳ್ಳಲು ಅವಕಾಶ ನೀಡಿಕೆ.
- ಅಂಗಾಂಗ ದಾನದ ಮಹತ್ವದ ವಿಚಾರ ಪ್ರಸ್ತಾಪ

ಬಜೆಟ್ ಪುಸ್ತಕದ ಗಾತ್ರ ಮಾತ್ರ ದಪ್ಪ: ಎಚ್.ವಿಶ್ವನಾಥ್

ಕಟ್ ಆ್ಯಂಡ್ ಪೇಸ್ಟ್ ಬಜೆಟ್

ಮೈಸೂರು: ಈ ಬಾರಿಯ ರಾಜ್ಯ ಬಜೆಟ್ ಪುಸ್ತಕದ ಗಾತ್ರ ಮಾತ್ರ ದಪ್ಪವಾಗಿದೆ. ಕೇಂದ್ರದ ಕೆಲವು ಯೋಜನೆಗಳನ್ನು ರಾಜ್ಯ ಬಜೆಟ್ ನಲ್ಲಿ ಸೇರಿಸಲಾಗಿದ್ದು, ಇದೊಂದು ಕಟ್ ಆ್ಯಂಡ್ ಪೇಸ್ಟ್ ಬಜೆಟ್ ಆಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಟೀಕಿಸಿದ್ದಾರೆ.



ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ರಾಜ್ಯ ಬಜೆಟ್ ಪುಸ್ತಕ 178 ಪುಟಗಳಿಂದ ಕೂಡಿದ್ದು, ಸಿಎಂ ಸಿದ್ದರಾಮಯ್ಯ 3 ಗಂಟೆ 15 ನಿಮಿಷ ಬಜೆಟ್ ಮಂಡನೆ ಮಾಡಿದರು. ರಾಹುಕಾಲ ಆರಂಭಕ್ಕೆ ಕೆಲವೇ ನಿಮಿಷವಿದ್ದಾಗ ಬಜೆಟ್ ಮಂಡನೆ ಆರಂಭಿಸಿದ ಸಿದ್ದರಾಮಯ್ಯ ಹೇಳುವುದು ಒಂದು, ಮಾಡುವುದು ಒಂದು ಎಂಬಂತಾಗಿದೆ.

ಬಜೆಟ್ ಪುಸ್ತಕದ ಗಾತ್ರ ಮಾತ್ರ ದಪ್ಪವಾಗಿದ್ದು, ಕೇಂದ್ರದ ಕೆಲ ಯೋಜನೆಗಳನ್ನು ಸಹ ರಾಜ್ಯ ಬಜೆಟ್‌ನಲ್ಲಿ ಸೇರಿಸಲಾಗಿದೆ. ಸಿಎಂ ಸಿದ್ದರಾಮಯ್ಯ ತವರು ಮೈಸೂರು ಜಿಲ್ಲೆಗೆ ಹೇಳಿಕೊಳ್ಳುವ ಕೊಡುಗೆ ಕೊಟ್ಟಿಲ್ಲ, ಈ ಹಿಂದಿನ ಬಜೆಟ್‌ನಲ್ಲಿ ಹೇಳಿದ್ದನ್ನೇ ಈಗಲೂ ಹೇಳಿದ್ದೀರಿ ಎಂದು ಕಿಡಿಕಾರಿದರು.

ಸಿದ್ದರಾಮಯ್ಯರ ಕೊನೆಯ ಬಜೆಟ್: ಈ ಬಾರಿಯ ಬಜೆಟ್ ಸಿದ್ದರಾಮಯ್ಯ ಅವರ ಕೊನೆಯ ಬಜೆಟ್ ಎಂದು ಅವರ ಆಪ್ತರೇ ಹೇಳುತ್ತಿದ್ದಾರೆ. ಆದರೆ ಕೊನೆಯ ಬಜೆಟ್‌ಗೆ ಮೇಳ ಹೊಡೆದು ಹೋಗುವುದು ಸರಿಯೇ? ತಲಾ 30 ತಿಂಗಳಿಗೆ ಅಧಿಕಾರ ಹಂಚಿಕೆ ಸಂಬಂಧ ಮಾತುಕತೆ ಆಗಿದೆ. ಕಾಂಗ್ರೆಸ್ ಕಟ್ಟಿದ್ದು ಡಿ.ಕೆ. ಶಿವಕುಮಾರ್, ಅವರು ಕಟ್ಟಿದ್ದ ಮನೆಗೆ ಬಂದು ಸೇರಿಕೊಂಡ ಸಿದ್ದರಾಮಯ್ಯ, ಅವರನ್ನು ಕಾಂಗ್ರೆಸ್‌ಗೆ ಕರೆತಂದವರನ್ನು ನೆನೆಸಿಕೊಳ್ಳುವುದಿಲ್ಲ. ಅಧಿಕಾರ ಯಾರ ಅಪ್ಪನ ಮನೆ ಆಸ್ತಿಯಲ್ಲ. ಹೈಕಮಾಂಡ್ ಹೇಳಿದರೆ ಸಿದ್ದರಾಮಯ್ಯ ಅಧಿಕಾರವನ್ನು ಬಿಟ್ಟುಕೊಡಲೇಬೇಕು ಎಂದು ವಿಶ್ವನಾಥ್ ವಾಗ್ದಾಳಿ ನಡೆಸಿದರು.

ಅಲ್ಪಸಂಖ್ಯಾತರ ಓಲೈಕೆ: ಸರ್ವಜನಾಂಗದ ಶಾಂತಿಯ ತೋಟದಂತಿದ್ದ ಕರ್ನಾಟಕವನ್ನು ಬಜೆಟ್ ಮೂಲಕ ವಿಂಗಡಿಸಲಾಗಿದ್ದು, ಬಜೆಟ್‌ನಲ್ಲಿ ಅಲ್ಪಸಂಖ್ಯಾತರನ್ನು ಓಲೈಸಲಾಗಿದೆ ಎಂಬ ಕೂಗು ಎದ್ದಿದೆ. ಕುರಿಗಾಹಿಗಳಿಗೆ ಬಜೆಟ್‌ನಲ್ಲಿ ಯಾವುದೇ ಯೋಜನೆ ಪ್ರಕಟಿಸಿಲ್ಲ. ಇಂದು ಕೇವಲ ಕುರುಬರು ಮಾತ್ರ ಕುರಿ ಸಾಕುತ್ತಿಲ್ಲ, ಬ್ರಾಹ್ಮಣರು ಸೇರಿದಂತೆ ಎಲ್ಲ ಜಾತಿಯವರು ಕುರಿ ಸಾಕುತ್ತಾರೆ. ಕುರುಬರಿಗೂ ಮೋಸ ಮಾಡಿರುವ ಸಿದ್ದರಾಮಯ್ಯ, ಕುರುಬ ಸಮುದಾಯದ ಆದಾಯ ಹೆಚ್ಚಳ ಮಾಡುವಲ್ಲಿ ವಿಫಲರಾಗಿದ್ದಾರೆ. ಸಿದ್ದರಾಮಯ್ಯ ಸಮಾಜದ ಸ್ವಾಸ್ಥ್ಯ ಕದಡುತ್ತಿದ್ದಾರೆ, ಪ್ರತ್ಯೇಕತಾ ವಾದಕ್ಕೆ ನಾಂದಿ ಹಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

> **ಸಿದ್ದರಾಮಯ್ಯ ಬಜೆಟ್ ಮಂಡನೆ ಮಾಡಲು ಮೊದಲು ಅವಕಾಶ ನೀಡಿದ್ದು ಎಚ್.ಡಿ. ದೇವೇಗೌಡರು. ಆದರೆ ಬಜೆಟ್ ಓದುವಾಗ ಅವರನ್ನು ನೆನೆಸಿಕೊಳ್ಳಬೇಕಿತ್ತು. ಸಿದ್ದರಾಮಯ್ಯನಿಗೆ ಕೃತಜ್ಞತೆ ಇಲ್ಲದ ಕಾರಣ ಅವರನ್ನು ನೆನೆಸಿಕೊಳ್ಳಲಿಲ್ಲ.**
> ಎಚ್.ವಿಶ್ವನಾಥ್, ಎಂಎಲ್‌ಸಿ

ವಿವಿಗಳ ವಿಲೀನದ ಅರ್ಥ ಮುಚ್ಚುವುದೇ: ಯದುವೀರ್

ಮಡಿಕೇರಿ: ಕೊಡಗು ವಿಶ್ವವಿದ್ಯಾನಿಲಯವನ್ನು ಜಿಲ್ಲೆಯಲ್ಲೇ ಉಳಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮಾ.6ರಿಂದ ಆರಂಭಿಸಿದ್ದ ಅಹೋರಾತ್ರಿ ಧರಣಿ ಸತ್ಯಾಗ್ರಹವನ್ನು ಬಿಜೆಪಿ ಮುಕ್ತಾಯಗೊಳಿಸಿದೆ.

ನಗರದ ಹಳೆಯ ಖಾಸಗಿ ಬಸ್ ನಿಲ್ದಾಣದ ಬಳಿ ನಡೆದ ಎರಡನೇ ದಿನದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಮೈಸೂರು- ಕೊಡಗು ಕ್ಷೇತ್ರದ ಸಂಸದ ಯದುವೀರ್ ಒಡೆಯರ್, ಹಣಕಾಸಿನ ವೈಫಲ್ಯಗಳ ಹಿನ್ನೆಲೆಯಲ್ಲಿ ಕೊಡಗು ವಿವಿಯನ್ನು ಒಳಗೊಂಡಂತೆ 9 ವಿವಿಗಳಿಗೆ ಅಗತ್ಯ ನೆರವನ್ನು ನೀಡದ ರಾಜ್ಯ ಸರಕಾರ ವಿವಿಗಳ ವಿಲೀನದ ಕುರಿತು ಮಾತನಾಡುತ್ತಿದೆ. ಈ ವಿಲೀನ ಎಂಬುವುದು ಅಂತಿಮವಾಗಿ ವಿವಿಗಳನ್ನು ಮುಚ್ಚುವುದೇ ಆಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಯಾವ ಭೂಮಿ ನಿಮಗೆ ಆಶ್ರಯವನ್ನು ನೀಡಿದೆಯೋ ಅಂತಹ ನೆಲದ ರಕ್ಷಣೆ ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಬೇಕು. ಈ ಹಿಂದೆ ಕೊಡಗಿನ ಜಮ್ಮಾಬಾಣೆ ಸಮಸ್ಯೆ ಸಂದರ್ಭ, ರಾಜ್ಯದಲ್ಲಿ ಬಿಜೆಪಿ ಸರಕಾರವಿದ್ದಾಗಲು ಶಾಸಕರಾಗಿದ್ದ ಅಪ್ಪಚ್ಚು ರಂಜನ್ ಹಾಗೂ ವಿಧಾನಸಭಾಧ್ಯಕ್ಷರಾಗಿದ್ದ ಕೆ.ಜಿ.ಬೋಪಯ್ಯ ಅವರು ಸದನದಲ್ಲೆ ಕೊಡಗಿನ ಅನ್ಯಾಯ ಸರಿಪಡಿಸುವಂತೆ ಆಗ್ರಹಿಸಿ ಪ್ರತಿಭಟಿಸಿದ್ದರು. ಇದೀಗ ಇರುವ ಜಿಲ್ಲೆಯ ಇಬ್ಬರು ಶಾಸಕರು ಕೊಡಗಿನ ಪರವಾಗಿದ್ದಾರೆಯೇ ಅಥವಾ ಸರಕಾರದ ಪರವಾಗಿದ್ದಾರೆಯೇ ಎನ್ನುವುದನ್ನು ಸ್ಪಷ್ಟಪಡಿಸುವಂತೆ ಒತ್ತಾಯಿಸಿದರು.

ಜಿಲ್ಲಾ ಬಿಜೆಪಿ ಪ್ರಮುಖ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ಮಾತನಾಡಿ, ಕಾಂಗ್ರೆಸ್ ಸರಕಾರ ಕೊಡಗಿನ ಅಭಿವೃದ್ಧಿಗೆ ಏನು ಮಾಡಿದೆ ಎನ್ನುವ ಬಗ್ಗೆ ಶ್ವೇತಪತ್ರ ಹೊರಡಿಸಲಿ ಎಂದು ಸವಾಲೆಸೆದರು.

ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಆರಂಭಿಸಿದ್ದ ಅಹೋರಾತ್ರಿ ಧರಣಿ ಸತ್ಯಾಗ್ರಹವನ್ನು ಬಿಜೆಪಿ ಮುಕ್ತಾಯಗೊಳಿಸಿತು.

> **ಹಿಂದಿನ ಬಿಜೆಪಿ ಸರಕಾರ ಜಾರಿಗೆ ತಂದಿದ್ದ ಹಲವು ಜನಪರ ಕಾರ್ಯಕ್ರಮಗಳನ್ನು ಈಗಿನ ಸರಕಾರ ರದ್ದುಗೊಳಿಸುತ್ತಾ ಬರುತ್ತಿದೆ. ಇದೀಗ ಕೊಡಗು ವಿವಿಯನ್ನು ವಿಲೀನದ ಹೆಸರಿನಲ್ಲಿ ಮುಚ್ಚುವ ಮೂಲಕ ಜಿಲ್ಲೆಯ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕಲ್ಲು ಹಾಕುವ ಕೆಲಸ ಮಾಡುತ್ತಿದೆ. ಕೊಡಗು ವಿವಿಯನ್ನು ರದ್ದುಗೊಳಿಸಿದರೆ ನ್ಯಾಯಾಲಯದ ಮೆಟ್ಟಿಲೇರಲು ಅವಕಾಶವಿದೆ.**
> ಕೆ.ಜಿ.ಬೋಪಯ್ಯ, ವಿಧಾನಸಭೆಯ ಮಾಜಿ ಅಧ್ಯಕ್ಷ

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅವರಿಗೆ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಅವರು ಮನವಿಪತ್ರ ಸಲ್ಲಿಸುವುದರೊಂದಿಗೆ ಅಹೋರಾತ್ರಿ ಪ್ರತಿಭಟನೆ ಮುಕ್ತಾಯವಾಯಿತು.

ಮಾಜಿ ಉಪ ಮುಖ್ಯಮಂತ್ರಿ ಅಶ್ವತ್ಥ್ ನಾರಾಯಣ ಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್, ಮಾಜಿ ಎಂಎಲ್‌ಸಿ ಸುನಿಲ್ ಸುಬ್ರಮಣಿ ಮತ್ತಿತರ ಪ್ರಮುಖರು ಹಾಗೂ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಮಪಾಲು, ಸಮಬಾಳಿನ ಬಜೆಟ್: ಲಕ್ಷ್ಮಣ್ ಶ್ಲಾಘನೆ

ಮೈಸೂರು: ಸಿಎಂ ಸಿದ್ದರಾಮಯ್ಯ ಅವರು ಈ ಬಾರಿ ಮಂಡಿಸಿರುವ ಬಜೆಟ್ ಸಾಮಾಜಿಕ ನ್ಯಾಯಯುಳ್ಳ ಬಜೆಟ್ ಆಗಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಶ್ಲಾಘಿಸಿದರು.

ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಬಜೆಟ್ ಗಾತ್ರ 4,09,549 ಕೋಟಿ. ಈ ಹಿಂದಿನ ಬಜೆಟ್ ಗಾತ್ರ 3,71,383 ಕೋಟಿ. ಅಂದರೆ ಒಂದು ವರ್ಷಕ್ಕೆ 38,166 ಕೋಟಿ ಹೆಚ್ಚಾಗಿದೆ. ಬಜೆಟ್ ಗಾತ್ರ ಹೆಚ್ಚಾಗಿದೆ ಎಂದರೆ ರಾಜ್ಯದ ಬೆಳವಣಿಗೆಯು ಶೇ.10.3 ರಷ್ಟು ಹೆಚ್ಚಾಗಿದೆ ಎಂದು ತಿಳಿಸಿದರು.

ಈ ಬಾರಿಯ ಬಜೆಟ್‌ನಲ್ಲಿ 2,92,477 ಕೋಟಿಯಷ್ಟು ಹಣ ವಿವಿಧ ತೆರಿಗೆಗಳ ಮೂಲಕ ರಾಜ್ಯ ಸರಕಾರಕ್ಕೆ ಸಂಗ್ರಹವಾಗುವ ನಿರೀಕ್ಷೆಯಲ್ಲಿದ್ದೇವೆ. 1,16,000 ಕೋಟಿಯಷ್ಟು ಸಾಲ ಮಾಡಬೇಕಿದೆ. ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಛಲವಾದಿ ನಾರಾಯಣ ಸ್ವಾಮಿ, ಸಿ.ಟಿ.ರವಿ ಅವರೆದ್ದಲ್ಲ ಸ್ಯಾಡಿಸ್ಟ್ ಮೈಂಡ್‌ಸೆಟ್ ಇಟ್ಟುಕೊಂಡು ಟೀಕೆ ಮಾಡುವ ಪ್ರವೃತ್ತಿಯುಳ್ಳ ವ್ಯಕ್ತಿಗಳು ಎಂದು ಹೇಳಿದರು.

ನಮ್ಮಿಂದ ತಪ್ಪಿದ್ದರೆ ಅವರು ದಾಖಲೆಗಳ ಸಮೇತ ಬಂದರೆ ನಾವು ತಪ್ಪನ್ನು ತಿದ್ದುಕೊಳ್ಳುವ ಕೆಲಸ ಮಾಡುತ್ತೇವೆ. ಅದನ್ನು ಬಿಟ್ಟು ಹೆಚ್.ಡಿ.ಕುಮಾರಸ್ವಾಮಿ, ಪ್ರಹ್ಲಾದ್ ಜೋಶಿ ಸೇರಿದಂತೆ ಇತರ ಬಿಜೆಪಿ ನಾಯಕರು ಸಾಲ ಮಾಡಿದ್ದೆ ಸಾಧನೆ ಅನ್ನುವ ರೀತಿಯ ಮೂಲಕ ಜನರಿಗೆ ತಪ್ಪು ಸಂದೇಶವನ್ನು ರವಾನಿಸುತ್ತಿದ್ದಾರೆ. 2013ರಲ್ಲಿ ಸಿಎಂ ಆಗಿ ಸಿದ್ದರಾಮಯ್ಯ ಅವರು ಪ್ರಮಾಣವಚನ ಸ್ವೀಕರಿಸಿದ ಸಂದರ್ಭದಲ್ಲಿ ರಾಜ್ಯದ ಸಾಲ 1.7ಲಕ್ಷ ಕೋಟಿ. 2018ರಲ್ಲಿ ಸಿಎಂ ಸಿದ್ದರಾಮಯ್ಯ ಅವರು ತಮ್ಮ ಸ್ಥಾನವನ್ನು ಬಿಡುವ ಸಂದರ್ಭದಲ್ಲಿ 2.85 ಲಕ್ಷ ಕೋಟಿ ಸಾಲವಿತ್ತು ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಚ್.ರಾಜೀವ್, ನಗರಾಧ್ಯಕ್ಷ ಆರ್. ಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ. ರಾಮು, ನಗರ ಪ್ರಧಾನ ಕಾರ್ಯದರ್ಶಿ ಎಂ. ಶಿವಣ್ಣ, ಮಾಧ್ಯಮ ವಕ್ತಾರ ಕೆ. ಮಹೇಶ್ ಇದ್ದರು.

ಬಜೆಟ್: ಬಿಜೆಪಿ ಖಂಡನೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡನೆ ಮಾಡಿದ ರಾಜ್ಯ ಬಜೆಟ್ ಖಂಡಿಸಿ ನಗರದ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ರಾಮಸ್ವಾಮಿ ವೃತ್ತದಿಂದ ಜಿಲ್ಲಾ ಪಂಚಾಯತಿ ಕಚೇರಿವರೆಗೂ ಎತ್ತಿನಗಾಡಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು, ರಾಜ್ಯ ಸರಕಾರ ಹಾಗೂ ರಾಜ್ಯ ಬಜೆಟ್ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಶಾಸಕ ಟಿ.ಎಸ್. ಶ್ರೀವತ್ಸ, ರಾಜ್ಯ ಬಜೆಟ್‌ನಲ್ಲಿ ಮುಸ್ಲಿಮರನ್ನು ಓಲೈಕೆ ಮಾಡಲಾಗಿದ್ದು, ಇದು ಮುಸ್ಲಿಮರನ್ನು ತುಷ್ಟೀಕರಣಗೊಳಿಸುವ ಬಜೆಟ್ ಆಗಿದೆ. ಮೈಸೂರು ಜಿಲ್ಲೆಗೆ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ನೀಡಿಲ್ಲ, ಅಭಿವೃದ್ಧಿಗೆ ಯಾವುದೇ ಮಹತ್ವದ ಯೋಜನೆಗಳನ್ನು ಘೋಷಣೆ ಮಾಡಿಲ್ಲ. ಜನರ ನಿರೀಕ್ಷೆಗಳನ್ನು ಹುಸಿಯಾಗಿಸಿರುವ ಈ ಬಾರಿಯ ರಾಜ್ಯ ಬಜೆಟ್ ಸಂಪೂರ್ಣ ಜನವಿರೋಧಿಯಾಗಿದೆ ಎಂದು ಟೀಕಿಸಿದರು.

ರಾಜ್ಯ ಬಿಜೆಪಿ ವಕ್ತಾರ ಎಂ.ಜಿ. ಮಹೇಶ್ ಮಾತನಾಡಿದರು. ಪ್ರತಿಭಟನೆಯಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್. ನಾಗೇಂದ್ರ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡನೆ ಮಾಡಿದ ರಾಜ್ಯ ಬಜೆಟ್ ಖಂಡಿಸಿ ಮೈಸೂರು ನಗರದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಎಲ್ಲ ವರ್ಗ ಪರಿಗಣಿಸಿರುವ ಅತ್ಯುತ್ತಮ ಬಜೆಟ್

ಮದ್ದೂರು: ರಾಜ್ಯದಲ್ಲಿ ಅಧಿಕಾರದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರಕಾರ ಜನಪರ ಕಾರ್ಯಕ್ರಮಗಳ ಮೂಲಕ ಎಲ್ಲಾ ವರ್ಗದವರಿಗೂ ನ್ಯಾಯ ಸಮ್ಮತ ಆಡಳಿತ ನೀಡುತ್ತಿದ್ದು ಇದನ್ನು ಸಹಿಸದ ವಿರೋಧ ಪಕ್ಷದ ನಾಯಕರುಗಳು ಇಲ್ಲ ಸಲ್ಲದ ಹೇಳಿಕೆಗಳಿಗೆ ಮುಂದಾಗುತ್ತಿರುವುದಾಗಿ ಶಾಸಕ ಕೆ.ಎಂ.ಉದಯ ಟೀಕಿಸಿದರು.

ಮದ್ದೂರು ತಾಲೂಕು ಆತಗೂರು ಹೋಬಳಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಹಲಾಲ್ ಮತ್ತು ಪಾಕಿಸ್ತಾನಿ ಬಜೆಟ್ ಎಂಬ ವಿರೋಧ ಪಕ್ಷದ ನಾಯಕರ ಟೀಕೆಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಶಾಸಕ ಕೆ.ಎಂ.ಉದಯ ನಾಚಿಕೆ, ಮಾನ, ಮರ್ಯಾದೆ ಬಿಟ್ಟು ವರ್ತಿಸುವ ಇವರುಗಳು ನೆರೆಯ ಪಾಕಿಸ್ತಾನದ ಹೆಸರೇಳುವ ಅಗತ್ಯವೇನೆಂದು ರಾಜ್ಯ ಸೇರಿದಂತೆ ದೇಶದಲ್ಲಿ ಮುಸ್ಲಿಂ ಜನರು ವಾಸಿಸುತ್ತಿಲ್ಲವೇ ಎಂದು ಪ್ರಶ್ನಿಸಿದರು.

ಎಲ್ಲಾ ವರ್ಗದ ಜನರ ಸಹಬಾಳ್ವೆಯಿಂದ ಪ್ರತಿಯೊಬ್ಬರ ಬದುಕು ಸಾಗುತ್ತಿದ್ದು ಒಬ್ಬರಿಗೆ ಮತ್ತೊಬ್ಬರು ಬೆಂಬಲಿಸಿದಾಗ ಮಾತ್ರ ಎಲ್ಲಾ ಜಾತಿ ಧರ್ಮದವರು ಬದುಕು ಕಟ್ಟಿಕೊಳ್ಳಲು ಸಾಧ್ಯವಿದ್ದು ಇದನ್ನರಿಯದ ಬಿ.ಜೆ.ಪಿ ಸೇರಿದಂತೆ ವಿರೋಧ ಪಕ್ಷದ ಸದಸ್ಯರು ಜಾತಿ ವಿಷಯದಲ್ಲಿ ರಾಜಕೀಯ ಮಾಡುತ್ತಿದ್ದಾರೆಂದು ಟೀಕಿಸಿದರು.

ಶುಕ್ರವಾರ ಮಂಡನೆಯಾದ ರಾಜ್ಯ ಬಜೆಟ್‌ನಲ್ಲಿ ಮದ್ದೂರು ಪಟ್ಟಣದ ರಸ್ತೆ ಅಗಲೀಕರಣಕ್ಕೆ ಘೋಷಣೆ ಮಾಡಿದ ಸರಕಾರ

ಮತ್ತು ಮುಖ್ಯಮಂತ್ರಿಗಳಿಗೆ ಕ್ಷೇತ್ರದ ಜನತೆ ಹಾಗು ವಯಕ್ತಿಕವಾಗಿ ಅಭಿನಂದನೆ ಸಲ್ಲಿಸುವುದಾಗಿ ಮುಂದಿನ ನಾಲ್ಕು ತಿಂಗಳೊಳಗೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಈಗಾಗಲೇ ಸಲ್ಲಿಕೆಯಾಗಿರುವ ಪ್ರಸ್ತಾವನೆ ಅನ್ವಯ ಸ್ಥಳೀಯ ವರ್ತಕರ ಸಭೆ ಆಯೋಜಿಸಿ ಮಾಹಿತಿ ನೀಡಿ ಯೋಜನೆ ಅನುಷ್ಠಾನಗೊಳಿಸುವ ಕುರಿತು ಮಾಹಿತಿ ನೀಡಿದರು.

ಕಳೆದ 25 ವರ್ಷಗಳ ಅವಧಿಯಲ್ಲೇ ಆಗಬೇಕಿದ್ದ ಪೇಟೆ ಬೀದಿ ವಿಸ್ತರಣಾ ಕಾಮಗಾರಿಗೆ ಕಾಲ ಕೂಡಿ ಬಂದಿದ್ದು ಅಗತ್ಯ ಅನುದಾನದೊಡನೆ ಸ್ಥಳೀಯರ ಸಹಕಾರದೊಟ್ಟಿಗೆ ವರ್ಷಾಂತ್ಯದೊಳಗೆ ತೆರವು ಕಾರ್ಯಾಚರಣೆ ಮತ್ತು ಕಾಮಗಾರಿ ಆರಂಭಿಸುವ ವಿಶ್ವಾಸ ವ್ಯಕ್ತಪಡಿಸಿದರು.

ಮದ್ದೂರು ತಾಲೂಕಿನ ಹರಕನಹಳ್ಳಿ ಗ್ರಾಮದಲ್ಲಿ 50 ಲಕ್ಷ ರು. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಎಂ. ಉದಯ ಗುದ್ದಲಿ ಪೂಜೆ ನೆರವೇರಿಸಿದರು.

ಕೋಳಿ ಜ್ವರದ ಬಗ್ಗೆ ಆತಂಕ ಬೇಡ

ಮಂಡ್ಯ: ರಾಜ್ಯದ ಕೆಲವು ಭಾಗಗಳಲ್ಲಿ ಹಕ್ಕಿಜ್ವರ ವರದಿಯಾಗಿದ್ದು, ಮಂಡ್ಯ ಜಿಲ್ಲೆಯಲ್ಲಿ ಯಾವುದೇ ಪ್ರಕರಣ ವರದಿಯಾಗಿರುವುದಿಲ್ಲ. ಕೋಳಿ ಸಾಗಣೆದಾರರು ಹಕ್ಕಿ ಜ್ವರ ಹರಡದಂತೆ ಪಶುಸಂಗೋಪನಾ ಇಲಾಖೆ ಅವರು ಹೊರಡಿಸಿರುವ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಕೋಳಿ ಜ್ವರ ನಿಯಂತ್ರಣ ಸಂಬಂಧ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕೋಳಿ ಶೀತ ಜ್ವರ ತಗುಲಿದ ಪಕ್ಷಿಯ ಶ್ವಾಸೇಂದ್ರಿಯ, ಕಣ್ಣಿನ ಕೊಡ್ವರೆ ಮತ್ತು ಹಿಕ್ಕೆಗಳಿಂದ ವೈರಸ್ ನ್ನು ಹೊರಹಾಕುತ್ತದೆ. ಇದರಿಂದ ಒಂದು ಪಕ್ಷಿಯಿಂದ ಇನ್ನೊಂದು ಪಕ್ಷಿಗೆ ರೋಗ ಹರಡುತ್ತದೆ ಎಂದರು.

ಮಂಡ್ಯ ಜಿಲ್ಲೆಯಲ್ಲಿ ಹಾಲಿ ಕಾರ್ಯನಿರ್ವಹಣೆಯಲ್ಲಿರುವ 23 ಮೊಟ್ಟೆ ಕೋಳಿ ಫಾರಂಗಳಲ್ಲಿ- 526500, ಮನೆಯಲ್ಲಿ ಸಾಕುವ ಕೋಳಿಗಳು-599333 ಕೋಳಿಗಳು ಇರುತ್ತದೆ. ಇವುಗಳ ಬಗ್ಗೆ ಆಯಾ ತಾಲೂಕಿನಲ್ಲಿ ನಿಗಾ ವಹಿಸಲು ತಂಡ ರಚಿಸಿ ಎಂದರು.

ಕೆರೆ ಕಟ್ಟೆ ಪಕ್ಷಿಧಾಮದ ಬಳಿ ವಾಸಿಸುವ ಪಕ್ಷಿಗಳಲ್ಲಿ ರೋಗದ ಲಕ್ಷಣ ಅಥವಾ ಕೋಳಿ ಜ್ವರ ಕಂಡು ಬಂದಲ್ಲಿ ತಕ್ಷಣ ಕ್ರಮವಹಿಸಲು ತಂಡಗಳನ್ನು ರಚಿಸಿ ಎಂದರು. ಸಭೆಯಲ್ಲಿ ಅಪರ ಪೊಲೀಸ್ ವರಿಷ್ಠಾಧಿಕಾರಿ ಗಂಗಾಧರಸ್ವಾಮಿ, ಜಿಲ್ಲಾ ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಕೆ.ಮೋಹನ್, ಪಶುವೈದ್ಯಾಧಿಕಾರಿ ಡಾ ಸುರೇಶ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಸಿದ್ದರಾಮಯ್ಯರಿಂದ 19ನೇ ಬಜೆಟ್ ಮಂಡನೆ

ಮೈಸೂರು: 2026ನೇ ಸಾಲಿನ ಆಯ ವ್ಯಯವೂ ಸೇರಿದಂತೆ ಸಿದ್ದರಾಮಯ್ಯ ಅವರೇ 19 ಬಜೆಟ್ ಮಂಡಿಸುವುದು ನಿಶ್ಚಿತ. ಇದರಲ್ಲಿ ಯಾವ ಅನುಮಾನ ಇಲ್ಲ ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಂದಿನ ವರ್ಷ ಅಲ್ಲದೆ ಮುಂದಿನ ಮೂರು ಬಜೆಟ್‌ಗಳನ್ನು ಮಂಡಿಸಿ ದಾಖಲೆ ನಿರ್ಮಿಸಲಿದ್ದಾರೆ. ಸಿಎಂ ಸ್ಥಾನದಿಂದ ಅವರನ್ನು ಬದಲಾವಣೆ ಮಾಡುವ ಪ್ರಶ್ನೆಯೇ ಇಲ್ಲ ಎಂದರು.

ಹೈಕಮಾಂಡ್ ಮತ್ತು ಶಾಸಕರು ಸಿದ್ದರಾಮಯ್ಯ ಪರವಿದ್ದರೆ. ನಿರಂತರವಾಗಿ ಮುಂದುವರಿಯಲಿದ್ದಾರೆ. ಊಹಾಪೋಹಗಳಿಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ ಎಂದು ಹೇಳಿದರು.

ಸಿಎಂ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಇಡಿ ಸಮನ್ಸ್‌ಗೆ ಹೈಕೋರ್ಟ್‌ನಿಂದ ರಿಲೀಫ್ ದೊರೆತಿರುವ ಬಗ್ಗೆ ಪ್ರತಿಕ್ರಿಯಿಸಿ, ಇದರಿಂದ ನಮಗೆ ಸಂತಸವಾಗಿದೆ. ನಮ್ಮ ತಾಯಿ ಮಾನಸಿಕವಾಗಿ ನೊಂದಿದ್ದರು. ಹೈಕೋರ್ಟ್ ತೀರ್ಪಿನಿಂದ ಸಮಾಧಾನವಾಗಿದೆ. ಯಾವ ತಪ್ಪು ಮಾಡದಿದ್ದರೂ ಸುಮ್ಮನೇ ಗೂಬೆ ಕೂರಿಸಿದ್ದರು. ನಮ್ಮ ತಂದೆಯನ್ನು ಪ್ರಕರಣದಲ್ಲಿ ಸಿಲುಕಿಸಿ ಆರೋಪಿ ಸ್ಥಾನದಲ್ಲಿ ನಿಲ್ಲಿಸಿದ್ದರು. ಈಕಾರಣಕ್ಕಾಗಿ ನಾವು 14 ನಿವೇಶನಗಳನ್ನು ವಾಪಸ್ ಕೊಟ್ಟಿದ್ದೆವು. ನ್ಯಾಯಯುತವಾಗಿ ನಮಗೆ ಆ ಸೈಟುಗಳು ಬರಬೇಕಿದೆ. ತನಿಖಾ ಪ್ರಕ್ರಿಯೆ ಮುಗಿದ ಮೇಲೆ ಕೋರ್ಟ್ ಮೂಲಕವೇ ಅವುಗಳನ್ನು ವಾಪಸ್ ಪಡೆಯುವ ಬಗ್ಗೆ ನಮ್ಮ ತಾಯಿ ನಿರ್ಧಾರ ಮಾಡುತ್ತಾರೆ. ಅಂದಿನ ಸಂದರ್ಭದಲ್ಲಿ ನಮಗೆ ವಾಪಸ್ ಕೊಡಬೇಕಾದ ವಾತಾವರಣ ನಿರ್ಮಾಣ ಮಾಡಿದ್ದರು. ವಿನಾಕಾರಣ ಟೀಕೆಗಳನ್ನು ನಾವು ನಿಲ್ಲಿಸಬೇಕಿತ್ತು. ಹೀಗಾಗಿ, ನಾವು ಸೈಟುಗಳನ್ನು ವಾಪಸ್ ಕೊಟ್ಟಿದ್ದೆವು. ಕಾನೂನಿನಲ್ಲಿ ನಮ್ಮದು ತಪ್ಪಿಲ್ಲ ಎಂದು ಬರುತ್ತಿದೆ. ಅದ್ದರಿಂದ ಸೈಟ್ ವಾಪಸ್ ಪಡೆಯುವ ಬಗ್ಗೆ ನಮ್ಮ ತಾಯಿ ತೀರ್ಮಾನ ಮಾಡುತ್ತಾರೆ ಎಂದರು.

ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸಿಎಂ ಬಗ್ಗೆ ವೈಯಕ್ತಿಕ ಟೀಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಎಲ್ಲರಿಗೂ ಮುಪ್ಪು ಬರುತ್ತದೆ, ವಯಸ್ಸಾಗುತ್ತದೆ. ಕಾಯಿಲೆ ಬರುವುದು, ಸಾವು ಬರುವುದು ಸಹಜ. ಆಗ ಅದನ್ನೇ ಇಂತಹ ಕಾರಣಕ್ಕೆ ಬಂದು ಎಂದು ಟೀಕೆ ಮಾಡಿದರೆ ಅದರಲ್ಲಿ ಸಭ್ಯತೆ ಇರುವುದಿಲ್ಲ ಎಂದು ತಿರುಗೇಟು ನೀಡಿದರು.



> **ಬಜೆಟ್ ಬಗ್ಗೆ ಬಿಜೆಪಿ ನಾಯಕರು ಟೀಕಿಸುವುದರಲ್ಲಿ ಅರ್ಥವಿಲ್ಲ. ಬಿಜೆಪಿ ನಾಯಕರಿಗೆ ಹೇಳಲು ಏನು ಸಿಗದೆ ಟೀಕೆ ಮಾಡುತ್ತಿದ್ದಾರೆ. ಅಲ್ಪಸಂಖ್ಯಾತರನ್ನು ಓಲೈಕೆ ಮಾಡುತ್ತಿಲ್ಲ. ಅಲ್ಪಸಂಖ್ಯಾತರು ಅಂದರೆ ಬರೀ ಮುಸ್ಲಿಮರು ಮಾತ್ರವಲ್ಲ. ಅದಕ್ಕೆ ಬೇರೆ ಬೇರೆಯವರು ಬರುತ್ತಾರೆ. ಸಿದ್ದರಾಮಯ್ಯನವರು ಅತ್ಯುತ್ತಮವಾದ ಬಜೆಟ್ ಮಂಡಿಸಿದ್ದಾರೆ.**
> ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನ ಪರಿಷತ್ ಸದಸ್ಯ

ಕೆ ಆರ್ ನಗರ ವ್ಯಾಪ್ತಿಯ ಸಪ್ತಗ್ರಾಮಗಳ ಆದಿ ದೇವತೆ ತಾಯಿ ಹುಣಸಮ್ಮನವರ ರಥೋತ್ಸವ ಧರ್ಮದರ್ಶಿ ಎಂಎಲ್ ಲೋಕೇಶ್ ಪ್ರಧಾನ ಅರ್ಚಕ ಎಂಎಲ್ ಕುಮಾರ್ ಸ್ವಾಮಿ ನೇತೃತ್ವದಲ್ಲಿ 9 ಗ್ರಾಮಗಳ ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ಶುಭ ಲಗ್ನದಲ್ಲಿ ರಥೋತ್ಸವ ಯಶಸ್ವಿಯಾಗಿ ನಡೆಯಿತು.

ಸಮಾಚಾರ ಸಣ್ಣದಲ್ಲ

ಶ್ರೀ ರಾಘವೇಂದ್ರ ಸ್ವಾಮಿ ವರ್ಧಂತಿಗೆ ಪೂಜೆ

ತುಮಕೂರು: ಇಡೀ ಜಿಲ್ಲೆಯಲ್ಲಿ ಅತೀ ಪುರಾತನವಾದ ಸು.500 ವರ್ಷ ಇತಿಹಾಸವುಳ್ಳ ಶ್ರೀ ವಿಜಯೀಂದ್ರತೀರ್ಥ ಪ್ರತಿಷ್ಠಾಪಿತ ಮುಖ್ಯಪ್ರಾಣ ದೇವರು ಇರುವ ನಗರದ ಚಿಕ್ಕಪೇಟೆಯ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ (ದೊಡ್ಡರಾಯರ ಮಠ) ರಾಘವೇಂದ್ರ ಸ್ವಾಮಿ 430 ನೇ ವರ್ಷದ ವರ್ಧಂತಿ ಮಹೋತ್ಸವ ಹಮ್ಮಿಕೊಳ್ಳಲಾಗಿತ್ತು. ವರ್ಧಂತಿ ಅಂಗವಾಗಿ ರಾಘವೇಂದ್ರ ಸ್ವಾಮಿಗೆ ವಿಶೇಷ ಫಲ, ಪಂಚಾಮೃತ ಅಭಿಷೇಕ, ಕನಕಾಭಿಷೇಕ, ಶ್ರೀ ರಾಘವೇಂದ್ರ ಸ್ತೋತ್ರ ಪಾರಾಯಣ, ರಥೋತ್ಸವ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ ಹಾಗೂ ಸಹಸ್ರಾರು ಭಕ್ತರಿಗೆ ಪ್ರಸಾದ ವಿನಿಯೋಗ ಏರ್ಪಡಿಸಲಾಗಿತ್ತು.

ಪೊಲೀಸ್ ರನ್ ಮ್ಯಾರಥಾನ್ ಇಂದು

ಹಾಸನ: ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಡ್ರಗ್ಸ್ ಫ್ರೀ ಕರ್ನಾಟಕ, ಫಿಟ್‌ನೆಸ್ ಫಾರ್‌ಆಲ್ ಎಂಬ ಶೀರ್ಷಿಕೆಯಡಿಯಲ್ಲಿ ಮಾ.9 ರಂದು ಬೆಳಿಗ್ಗೆ 8 ಗಂಟೆಗೆ ನಗರದ ಡೇರಿ ಸರ್ಕಲ್‌ನ ಸರಕಾರಿ ಎಂಜಿನಿಯರಿಂಗ್ ಕಾಲೇಜು ಆವರಣದಿಂದ 5 ಕಿ.ಮೀ/10 ಕಿ.ಮೀ ಪೊಲೀಸ್ ರನ್(ಮ್ಯಾರಥಾನ್) ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಇಚ್ಛೆಯುಳ್ಳ ಸಾರ್ವಜನಿಕರು, ಶಾಲಾ-ಕಾಲೇಜುಗಳ ವಿದ್ಯಾರ್ಥಿ/ ವಿದ್ಯಾರ್ಥಿನಿಯರು, ಜಿಲ್ಲೆಯ ಎಲ್ಲಾ ಸರಕಾರಿ ನೌಕರರು, ಜಿಲ್ಲೆಯ ಸರ್ಕಾರೇತರ ಸಂಘ ಸಂಸ್ಥೆಯವರು ಹಾಗೂ ಜಿಲ್ಲೆಯ ಎಲ್ಲಾ ಉಪ-ವಿಭಾಗಗಳ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರು ಭಾಗವಹಿಸಲಿದ್ದಾರೆ. ಪೊಲೀಸ್ ರನ್‌ನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಭಾನುವಾರ ಬೆಳಗ್ಗೆ 6 ಗಂಟೆಗೆ ನಗರದ ಡೈರಿ ಸರ್ಕಲ್‌ನ ಸರಕಾರಿ ಎಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಹೆಸರನ್ನು ನೊಂದಾಯಿಸಿಕೊಳ್ಳತಕ್ಕದ್ದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಎಂ.ಎಸ್.ತಿಳಿಸಿದ್ದಾರೆ. ವಾಹನ ಸಂಚಾರ ನಿಷೇಧ: ಕರ್ನಾಟಕ ಪೊಲೀಸ್ ರನ್ ಇಂಜಿನಿಯರ್ ಕಾಲೇಜಿನಿಂದ ಶುರುವಾಗಿ ಸಾಲಗಾಮೆ ರಸ್ತೆಯ ಸುಬೇದಾರ್ ನಾಗೇಶ್ ಸರ್ಕಲ್‌ಗೆ ಬಂದು ಅಲ್ಲಿಂದ ಮತ್ತೆ ಡೇರಿ ಸರ್ಕಲ್ ತಲುಪಲಿದೆ. ಮ್ಯಾರಾಥಾನ್‌ಗೆ ಯಾವುದೇ ಅಡಚಣೆ ಆಗದಂತೆ ಬೆಳಗ್ಗೆ 6 ರಿಂದ 11 ಗಂಟೆವರೆಗೆ ಈ ಮಾರ್ಗದ ಸಂಚಾರವನ್ನು ಜಿಲ್ಲಾಧಿಕಾರಿ ಸಿ. ಸತ್ಯಭಾಮ ನಿಷೇಧಿಸಿದ್ದಾರೆ.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಲೋಕಾರ್ಪಣೆ ಇಂದು

ಹಾಸನ: ನಗರದ ಕೃಷ್ಣನಗರದಲ್ಲಿ ನೂತನವಾಗಿ ನಿರ್ಮಾಣವಾಗಿರುವ ರಾಷ್ಟ್ರೋತ್ಥಾನ ಶಾಲಾ ಕಟ್ಟಡ ನಾಳೆ ಬೆಳಗ್ಗೆ 11 ಗಂಟೆಗೆ ಲೋಕಾರ್ಪಣೆ ಗೊಳ್ಳಲಿದೆ. ಸಿದ್ದಗಂಗಾ ಮಠದ ಪರಮಪೂಜ್ಯ ಶ್ರೀ ಸಿದ್ದಲಿಂಗ ಮಹಾಸ್ವಾಮಿಜಿ, ಆದಿಚುಂಚನಗಿರಿ ಹಾಸನ ಮಹಾಸಂಸ್ಥಾನ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಸಾನಿಧ್ಯವಹಿಸುವರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರ ಕಾರ್ಯವಾಹ ಮುಕುಂದ ಸಿ.ಆರ್. ದಿಕ್ಸೂಚಿ ಭಾಷಣ ಮಾಡುವರು. ಉತ್ತಮ ಗುಣಮಟ್ಟದ ಶಿಕ್ಷಣದ ಜತೆಗೆ, ಮಕ್ಕಳಿಗೆ ನಮ್ಮ ಪರಂಪರೆ, ಸಂಸ್ಕಾರ ಹಾಗೂ ಸಂಸ್ಕೃತಿಯನ್ನು ಕಲಿಸುತ್ತಿರುವ ರಾಷ್ಟ್ರೋತ್ಥಾನ ಪರಿಷತ್ ರಾಜ್ಯದಲ್ಲಿ 16 ಸಿಬಿಎಸ್‌ಸಿ ಶಾಲೆ ಹೊಂದಿದೆ. 17ನೇ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಹಾಸನದಲ್ಲಿ ಆರಂಭವಾಗುತ್ತಿದೆ. ಸರ್ವರೂ ಆಗಮಿ ಸುವಂತೆ ರಾಷ್ಟ್ರೋತ್ಥಾನ ಪರಿಷತ್ ಬೆಂಗಳೂರು ಪ್ರಧಾನ ಕಾರ್ಯದರ್ಶಿ, ಸಂಚಾಲನಾ ಸಮಿತಿ ಕೋರಿದೆ.

ಕೆ.ಎಚ್ ಮುನಿಯಪ್ಪ ಹುಟ್ಟುಹಬ್ಬ ಆಚರಣೆ

ಚಿಕ್ಕಬಳ್ಳಾಪುರ : ಸರಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ಹಣ್ಣುಹಂಪಲು ನೀಡುವ ಮೂಲಕ ವಿಶಿಷ್ಟವಾಗಿ ಕೇಂದ್ರದ ಮಾಜಿ ಸಚಿವ ಹಾಗೂ ರಾಜ್ಯ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರ ಇಲಾಖೆ ಸಚಿವ ಡಾ ಕೆ.ಎಚ್ ಮುನಿಯಪ್ಪ ಅವರ ಹುಟ್ಟುಹಬ್ಬವನ್ನು ಕಾಂಗ್ರೆಸ್ ಮುಖಂಡ ಪತ್ರೇನಹಳ್ಳಿ ಕೃಷ್ಣ ಆಚರಿಸಿದರು. ನಗರದ ಹಳೇ ಆಸ್ಪತ್ರೆ ಆವರಣದಲ್ಲಿರುವ ಸರಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಕಾಂಗ್ರೆಸ್ ಮುಖಂಡರು ಕಾರ್ಯಕರ್ತರು ಕೆ.ಎಚ್.ಮುನಿಯಪ್ಪ ಅವರ 77ನೇ ವರ್ಷದ ಹುಟ್ಟುಹಬ್ಬವನ್ನು ಅಭಿಮಾನಿಗಳ ಸಮ್ಮುಖದಲ್ಲಿ ಸಾರ್ಥಕವಾಗಿ ಆಚರಿಸಿದರು. ಈ ವೇಳೆ ಮಾತನಾಡಿದ ಕಾಂಗ್ರೆಸ್ ಉಪಾಧ್ಯಕ್ಷ ಪತ್ರೇನಹಳ್ಳಿ ಕೃಷ್ಣ ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಸೋಲಿಲ್ಲದ ಸರದಾರರಾಗಿ 7 ಬಾರಿ ಗೆದ್ದು ಕೇಂದ್ರದಲ್ಲಿ 2ಬಾರಿ ಮಂತ್ರಿಗಳಾಗಿದ್ದ ರಾಜಕೀಯ ಮುತ್ಸದ್ದಿ, ಸಿ.ಎಂ ಆಗುವ ಅರ್ಹತೆಯುಳ್ಳ ಕೆ.ಎಚ್.ಮುನಿಯಪ್ಪ ಶೋಷಿತ ಸಮುದಾಯಗಳ ದನಿಯಾಗಿದ್ದಾರೆ.ಇವರ ಹುಟ್ಟುಹಬ್ಬವನ್ನು ಕಾಂಗ್ರೆಸ್ ಪಕ್ಷದ ಮುಖಂಡರು ಸಮ್ಮುಖದಲ್ಲಿ ರೋಗಿಗಳಿಗೆ ಹಣ್ಣುಹಂಪಲು ನೀಡುವ ಮೂಲಕ ಆಚರಿಸಿದ್ದು ಸಂತೋಷ ತಂದಿದೆ ಎಂದರು. ಈ ಸಂದರ್ಭದಲ್ಲಿ ಮಾಜಿ ಶಾಸಕಿ ಅನಸೂಯಮ್ಮ,ಮುಖಂಡರಾದ ಕಿಸಾನ್ ಕೃಷ್ಣಪ್ಪ, ನಾರಾಯಣಸ್ವಾಮಿ, ಲಕ್ಷ್ಮಣ್, ಜಗದೀಶ್, ನಾಗಭೂಷಣ್, ಸಾವಿತ್ರಮ್ಮ, ಮಂಗಳ ಪ್ರಕಾಶ್,ಅಣ್ಣಮ್ಮ,ನಾರಾಯಣಮ್ಮ, ಜಿ.ಉಮೇಶ್ ಇತರರಿದ್ದರು.

{ಬಿ.ವೈ.ವಿಜಯೇಂದ್ರ} ಬಿಜೆಪಿ ರಾಜ್ಯಾಧ್ಯಕ್ಷ

ಸಿದ್ದರಾಮಯ್ಯನರಿಗೆ ಅಲ್ಪಸಂಖ್ಯಾತರ ಬಗೆಗಿನ ಪ್ರೀತಿ, ಕಾಳಜಿ ಎಲ್ಲರಿಗೂ ಗೊತ್ತಿದೆ. ಆದರೆ, ಹಣಕಾಸಿನ ಸಚಿವರಾಗಿ ಅವರು ಈ ಮಟ್ಟಕ್ಕೆ ಇಳಿಯುವರೆಂದು ನಾವ್ಯಾರೂ ನಿರೀಕ್ಷೆ ಮಾಡಿರಲಿಲ್ಲ. ಮುಸ್ಲಿಂ ವಿದ್ಯಾರ್ಥಿಗಳಿಗೆ ಹೊರದೇಶಕ್ಕೆ ಹೋಗಲು ಕೊಡುವ ಮೊತ್ತವನ್ನು 20 ಲಕ್ಷದಿಂದ 30 ಲಕ್ಷಕ್ಕೆ ಏರಿಸಿದ್ದಾರೆ. ಯಾಕೆ ಹಿಂದೂಗ ಳಲ್ಲಿ ಯಾರಿಗೂ ಕೊಡಬೇ ಕೆಂದು ಅನಿಸಲಿಲ್ಲವೇ ಸಿದ್ದರಾಮಯ್ಯನವರೇ?

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಸ.ರಘುನಾಥ್ ಕೋಲಾರ ಅಭಿಮತ

ಕಾರ್ಪೊರೇಟ್ ಮಣಿಸುವ ಶಕ್ತಿ ಕೃಷಿಕ ಮಹಿಳೆಯರಿಗಿದೆ

ಚಿಕ್ಕಬಳ್ಳಾಪುರ: ರಾಷ್ಟ್ರದಲ್ಲಿ ಕಾರ್ಪೊರೇಟ್ ಶಕ್ತಿಗಳು ಅಭಿವೃದ್ಧಿಯ ಹೆಸರಿನಲ್ಲಿ ರೈತರಿಂದ ಫಲವತ್ತಾದ ಭೂಕಬಳಿಕೆಗೆ ತೊಡಗಿರುವುದನ್ನು ತಡೆಯುವ ಶಕ್ತಿ ಈದೇಶದ ರೈತಮಹಿಳೆಯರು, ದುಡಿಯುವ ಮಹಿಳೆಯರು ಕಾರ್ಮಿಕ ಮಹಿಳೆಯರಿಂದ ಮಾತ್ರ ಸಾಧ್ಯ ಎಂಬುದನ್ನು ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆ ಎಐಕೆಎಂಕೆಎಸ್ ಅನುಬಂಧದ ರಾಜ್ಯ ಗೌರವಾಧ್ಯಕ್ಷ ಸ.ರಘುನಾಥ್ ಕೋಲಾರ ಅಭಿಪ್ರಾಯಪಟ್ಟರು.

ನಗರದ ಪತ್ರಕರ್ತರ ಭವನದಲ್ಲಿ ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆ ಎಐಕೆಎಂಕೆಎಸ್ ಅನುಬಂಧದ ಜಿಲ್ಲಾ ಘಟಕ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಮಹಾಭಾರತದಲ್ಲಿ ಕೌರವನ ಅಂಹಕಾರವನ್ನು ಮಣಿಸಿದ ದ್ರೌಪದಿ ಈ ದೇಶದ ಸಮಸ್ತ ಮಹಿಳೆಯರ ಛಲದ ಪ್ರತೀಕವಾಗಬೇಕಿದೆ. ಎಂತಹ ಸಂಕಷ್ಟದ ಸಮಯವೇ ಇರಲಿ,ಅಡೆತಡೆಗಳೇ ಬರಲಿ ಅವನ್ನು ದಿಟ್ಟವಾಗಿ ಎದುರಿಸುವ ಮನೋಸ್ಥಿತಿಯನ್ನು ಬೆಳೆಸಿ ಕೊಳ್ಳಬೇಕಿದೆ.ಮಹಿಳೆಯರ ಬಗ್ಗೆ ಪುರುಷರು ಎಷ್ಟೇ ಉದಾರವಾದಿ ಮಾತುಗಳನ್ನು ಆಡಿದರೂ ಕೂಡ ಆಂತರ್ಯದಲ್ಲಿ ದುರಹಂಕಾರಿ ವರ್ತನೆ ಇದ್ದೇ ಇರುತ್ತದೆ.ಹೀಗಾಗಿ ಪುರುಷ ಸಮಾಜದ ಶೋಷಣೆ ಯನ್ನು ಮೆಟ್ಟಿ ಸಮಾಜದ ಮುಖ್ಯವಾಹಿನಿಗೆ ಬರಬೇ ಕಾದರೆ ಮಹಿಳೆಯರು ಯಾವುದಕ್ಕೂ ಅಂಜದೆ ದಿಟ್ಟತನದಲ್ಲಿ ಕಾಯದಲ್ಲಿ ತೊಡಗಬೇಕಿದೆ ಎಂದರು.

ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆ ಎಐಕೆಎಂಕೆಎಸ್ ಅನುಬಂಧ ರಾಜ್ಯಾಧ್ಯಕ್ಷ ಆರ್.ಮಾಧವರೆಡ್ಡಿ, ರೈತಮಹಿಳೆ ನೇತ್ರಾವತಿ ಮಾತನಾಡಿದರು. ಇದೇ ವೇಳೆ ರೈತ ಮಹಿಳೆ ಭಾಗ್ಯರೇಖ ಮಾತನಾ ಡಿದರು. ಇದೇ ವೇಳೆ ಸ. ರಘುನಾಥ್ ಸಂಪಾದಕತ್ವದಲ್ಲಿ ಸುಂದರವಾಗಿ ಬರುತ್ತಿರುವ ರೈತರ ಸಮಸ್ಯೆಗಳ ಕಣ್ಣಾದ ಆರಂಭ ತ್ರೈಮಾಸಿಕವನ್ನು ಬಿಡುಗಡೆ ಮಾಡಲಾಯಿತು.

ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆ(ಎಐಕೆಎಂಕೆಎಸ್ ಅನುಬಂಧ)ರಾಜ್ಯಾಧ್ಯಕ್ಷ ಆರ್.ಮಾಧವರೆಡ್ಡಿ,ರಾಜ್ಯ ಗೌರವಾಧ್ಯಕ್ಷ ಸ. ರಘುನಾಥ್, ಬಳ್ಳಾರಿ ಜಿಲ್ಲಾ ಉಪಾಧ್ಯಕ್ಷ ಓಂಕಾರಗೌಡ, ಸದಸ್ಯ ಶೇಖರ್, ಶಿವಕುಮಾರ್ ತುಮಕೂರು ಜಿಲ್ಲಾಧ್ಯಕ್ಷ, ಚಿಕ್ಕಬಳ್ಳಾಪುರ ಜಿಲ್ಲಾಧ್ಯಕ್ಷ ಯಣ್ಣೂರು ಬಸವರಾಜ್, ಮಹಿಳಾ ಮುಖಂಡರಾದ ಭಾಗ್ಯರೇಖ, ನೇತ್ರಾವತಿ, ಮಂಜುಳ ಮುನಿರತ್ನಮ್ಮ, ನರಸಿಂಹಮೂರ್ತಿ, ಎಂ.ಎನ್ .ಬೈರಪ್ಪ, ಗುಡಿಹಳ್ಳಿ ಜಿ.ವಿ.ವೆಂಕಟಸ್ವಾಮಿ, ಮುನಿಕೃಷ್ಣಪ್ಪ ಗೌಡನಹಳ್ಳಿ, ಬೈರಾರೆಡ್ಡಿ ಗೌಡನಹಳ್ಳಿ ಮತ್ತಿತರರು ಇದ್ದರು.

ರೈತರ ಒಡನಾಡಿ ಆರಂಭ ತ್ರೈಮಾಸಿಕವನ್ನು ಇದೇ ವೇಳೆ ಬಿಡುಗಡೆ ಮಾಡಲಾಯಿತು.

> **ಗ್ರಾಮೀಣ ಪ್ರದೇಶದಲ್ಲಿ ರೈತಸಂಕುಲ ಸ್ವಾವಲಂಭಿಯಾಗಿ ಬದಕಬೇಕಾದರೆ ಮಹಿಳೆಯರು ಕೂಡ ರೈತಸಂಘದ ಜತೆಗೆ ಕೈಗೂಡಿಸಬೇಕು.**
> **-ಯಣ್ಣೂರು ಬಸವರಾಜ್**, ಜಿಲ್ಲಾಧ್ಯಕ್ಷ

ರೈತನ ಕೆಲಸ ಪ್ರಕೃತಿ ಮಾತೆಯ ಕಾಯಕ

ಜಚನಿ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಡಾ. ಶಿವಲೀಲಾ ಮಾತನಾಡಿ ರೈತಸಂಘದ ಆಶ್ರಯದಲ್ಲಿ ವಿಶ್ವ ಮಹಿಳಾ ದಿನಾಚರಣೆ ಆಚರಣೆ ಮಾಡುತ್ತಿರುವುದು ನಿಜಕ್ಕೂ ಸಂತೋಷ ತಂದಿದೆ.ಏಕೆಂದರೆ ಮಹಿಳೆ ಮತ್ತು ಪುರುಷ ಶಾರೀರಿಕವಾಗಿ ಭಿನ್ನತೆ ಹೊಂದಿದ್ದರೂ ಇಬ್ಬರ ನಡುವೆ ಸುಳಿವ ಆತ್ಮ ಒಂದೇ ಆಗಿದೆ ಎಂಬ ಸತ್ಯ ಸಮಾಜ ಅರ್ಥಮಾಡಿಕೊಳ್ಳಬೇಕಿದೆ. ಕೃಷಿಯ ಕ್ಷೇತ್ರ ಉಳಿಯಲು ಮಹಿಳೆಯರೇ ಕಾರಣ.ರೈತನ ಕೆಲಸ ಪ್ರಕೃತಿ ಮಾತೆಯ ಕಾಯಕ. ಪ್ರಕೃತಿಯ ಸೇವೆ ಮಾಡುತ್ತಿರುವ ಈ ಸಂಕುಲ ಯಾವುದಕ್ಕೂ ಅಂಜಬಾರದು.

ಶಾಲಾ ಆವರಣದಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣಕ್ಕೆ ಒತ್ತಾಯ

ಚಿಕ್ಕಬಳ್ಳಾಪುರ: ಚಿಂತಾಮಣಿ ನಗರದ ಸರಕಾರಿ ಶಾಲೆಯ ಆವರಣದಲ್ಲಿ ನಿರ್ಮಾಣ ಮಾಡಿರುವ ಅಂಬೇಡ್ಕರ್ ಪ್ರತಿಮೆಗೆ ಜಿಲ್ಲಾಡಳಿತ ತಾಲೂಕು ಆಡಳಿತ ತೋರಿರುವ ದಲಿತ ವಿರೋಧಿ ಧೋರಣೆಯನ್ನು ಖಂಡಿಸಿ ಪ್ರೊ. ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಸಿದರು.

ನಗರದ ಜಿಲ್ಲಾಡಳಿತ ಭವನದ ಎದುರು ನಡೆಸಿದ ಬೃಹತ್ ಪ್ರತಿಭಟನೆಯನ್ನು ಉದ್ದೇಶಿಸಿ ರಾಜ್ಯ ಸಂಘಟನಾ ಸಂಚಾಲಕ ಯಣ್ಣೂರು ಶ್ರೀನಿವಾಸ್ ಮಾತನಾಡಿದ ಅವರು ವಿಶ್ವಮಾನವ ಅಂಬೇಡ್ಕರ್ ಅವರಿಗೆ ಅಪಮಾನ ಮಾಡುತ್ತಿರುವ ಧೋರಣೆಯನ್ನು ನಮ್ಮ ಸಂಘಟನೆ ಬಲವಾಗಿ ಖಂಡಿಸುತ್ತದೆ ಎಂದರು.

ಚಿಂತಾಮಣಿ ನಗರದ ಸರಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂಬೇಡ್ಕರ್ ಪುತ್ಥಳಿಯನ್ನು ಸ್ಥಳೀಯ ವ್ಯಕ್ತಿ ನವೀನ್ ಕೃಷ್ಣ ಎಂಬುವರ ಕುಮ್ಮಕ್ಕಿನಿಂದ ಆನೇಕಲ್ ಕೃಷ್ಣಪ್ಪ ಎಂಬುವರ ರಾತ್ರೋರಾತ್ರಿ ಸ್ಥಾಪಿಸಿ ಅಶಾಂತಿಗೆ ಕಾರಣವಾಗಿರುವ ಈ ಇಬ್ಬರು ಕಿಡಿಗೇಡಿಗಳನ್ನು ಬಂಧಿಸಿ ಗಡಿಪಾರು ಮಾಡಬೇಕು ಎಂದು ಜಿಲ್ಲಾಧಿಕಾರಿಗಳನ್ನು ಆಗ್ರಹಿಸಿದರು. ಪುತ್ಥಳಿ ಇಡಲು ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪಡೆದಿದ್ದಾರೆ. ಅದರಂತೆ ಲಿಯೋಕ್ಲಬ್ ಅಲ್ಲಿ ಪುತ್ಥಳಿ ಇಡಲು ಮುಂದಾದಾಗ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅನುಮತಿ ನಿರಾಕರಿಸಿ ದೌರ್ಜನ್ಯ ಮಾಡಿರುತ್ತಾರೆ.ಇದನ್ನು ಖಂಡಿಸಿ ನಾವು ಕಾನೂನು ಹೋರಾಟ ಮಾಡಿರುವ ಹೊತ್ತಿನಲ್ಲಿ ಯಾರೋ ಅನಾಮಧೇಯರು ರಾತ್ರೋರಾತ್ರಿ ಅಲ್ಲಿ ಅಂಬೇಡ್ಕರ್ ಪುತ್ಥಳಿ ತಂದು ಪ್ರತಿಷ್ಠಾಪಿಸಿ ಹೋಗಿದ್ದಾರೆ.

ಇದನ್ನು ಯಾರೇ ಸ್ಥಾಪನೆ ಮಾಡಿರಲಿ, ಅಂಬೇಡ್ಕರ್ ನಮ್ಮ ರಾಷ್ಟ್ರೀಯ ನಾಯಕರು. ಅವರಿಗೆ ಅವಮಾನ ಮಾಡುವ ಕ್ರಮ ಸರಿಯಲ್ಲ. ಇಲ್ಲಿ ಸ್ಥಾಪಿಸಿರುವ ಪ್ರತಿಮೆಯನ್ನು ಅಧಿಕೃತಗೊಳಿಸಬೇಕು.ಅದಕ್ಕೆ ಹೊದಿಸಿರುವ ಕೊಳಕು ಬಟ್ಟೆಯನ್ನು ಕಿತ್ತು ಗೌರವ ನೀಡಬೇಕು ಎಂದು ಆಗ್ರಹಿಸಿ ಇಂದು ಪ್ರತಿಭಟನೆ ನಡೆಸಲಾಗುತ್ತಿದೆ ಎನ್ನುವ ಮೂಲಕ ರಾಜ್ಯಾಧ್ಯಕ್ಷರ ಹೇಳಿಕೆಗೆ ಭಿನ್ನವಾದ ವಿಚಾರವನ್ನು ಮಂಡಿಸಿದ್ದಾರೆ.

ಪ್ರತಿಭಟನೆಯಲ್ಲಿ ಜಿಲ್ಲಾ ಉಸ್ತುವಾರಿ ಸೂಲಕುಂಟೆ ರಮೇಶ್, ಜಿಲ್ಲಾ ಸಂಘಟನಾ ಸಂಚಾಲಕ ತಿಪ್ಪೇನಹಳ್ಳಿ ನಾರಾಯಣ್, ಜಿಲ್ಲಾ ಸಂಚಾಲಕ ಕಡ್ಡಿಲ್ ವೆಂಕಟರೋಣಪ್ಪ, ಎಂ.ಜಿ . ಕಿರಣ್ ಕುಮಾರ್, ನಂಜುಂಡಪ್ಪ, ಗೊರಮಡುಗು ನಾರಾಯಣಸ್ವಾಮಿ, ಚಲಪತಿ, ರಘು ಮತ್ತುತರರು ಇದ್ದರು.

ಸರಕಾರಿ ಶಾಲೆಯಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪನೆಗೆ ಆಗ್ರಹಿಸಿ ಬೃಹತ್ ಪ್ರತಿಭಟನೆಯಲ್ಲಿ ಸಂಸದ ಡಾ.ಕೆ.ಸುಧಾಕರ್ ಮಾತನಾಡಿದರು.

ಪುತ್ಥಳಿ ಅನಾವರಣಕ್ಕೆ ಸಚಿವ ಸುಧಾಕರ್ ಅಡ್ಡಿ

ಸಂಸದ ಡಾ.ಕೆ.ಸುಧಾಕರ್ ಮಾತನಾಡಿ ಡಾ. ಅಂಬೇಡ್ಕರ್ ಪ್ರತಿಮೆ ವಿಚಾರದಲ್ಲಿ ಜಿಲ್ಲಾಡಳಿತ ನಡೆದುಕೊಳ್ಳುತ್ತಿರುವ ವಿಚಾರ ಖಂಡನೀಯ.ಇದು ದುರದ್ದೇಶದಿಂದ ಕೂಡಿದೆ.ಅಂಬೇಡ್ಕರ್ ಪ್ರತಿಮೆಯನ್ನು ಅನಾವರಣ ಮಾಡಲು ಅಲ್ಲಿನ ಸಮಿತಿ ಒಪ್ಪಿಕೊಂಡ ಮೇಲೆ ಅಲ್ಲಿಯೇ ಅದು ಆಗಬೇಕಿತ್ತು.ಕೃಷ್ಣಾರೆಡ್ಡಿ ಶಾಸಕರಿದ್ದಾಗ ಆಗಿನ ಬಿಇಒ ಅನುಮತಿ ಕೊಟ್ಟಿದ್ದಾರೆ. ಈಗಿನ ಸರಕಾರದಲ್ಲಿ ಡಾ.ಎಂ.ಸಿ.ಸುಧಾಕರ್ ಶಾಸಕರು ಮಂತ್ರಿಗಳು ಆದ ಮೇಲೆ ಅವರ ಸ್ವಂತ ಟ್ರಸ್ಟ್‌ಗೆ 35 ಕುಂಟೆ ಭೂಮಿ ಮಾಡಿಸಿ ಕೊಂಡು ಶಾಲೆ ನಡೆಸುತ್ತಿದ್ದಾರೆ.ಬಹುಶಃ ಅವರ ಉದ್ದೇಶ ನನಗೆ ಬೇರೆಯವರು ಹೇಳಿದಂತೆ ಈ ಸರಕಾರಿ ಶಾಲೆಯ ಜಮೀನನ್ನು ಕೂಡ ಅವರ ಖಾಸಗಿ ಟ್ರಸ್ಟ್ ಗೆ ವರ್ಗಾಯಿಸಿಕೊಳ್ಳುವ ಭಾಗವಾಗಿ ಪುತ್ಥಳಿ ಅನಾವರಣಕ್ಕೆ ತಡೆಯೊಡ್ಡುತ್ತಿರುವುದರ ದುರುದ್ದೇಶ ಇದೇ ಎಂದರು.

ಸವಾಲುಗಳನ್ನು ಸಮರ್ಥವಾಗಿ ಎದುರಿಸಿ

ತುಮಕೂರು: ಜಿಲ್ಲೆಯ ಮಹಿಳೆಯರು, ಮಕ್ಕಳ ಅಪೌಷ್ಟಿಕತೆ ಪ್ರಮಾಣ ಕಡಿಮೆ ಮಾಡುವಲ್ಲಿ ಆರೋಗ್ಯ ಕಾರ್ಯಕರ್ತೆಯರು, ಅಧಿಕಾರಿಗಳ ಕಾರ್ಯ ಶ್ಲಾಘನೀಯ, ಪೋಷಣ್ ಅಭಿಯಾನದಲ್ಲಿ ಜಿಲ್ಲೆಯು ರಾಜ್ಯದಲ್ಲಿ ಮೊದಲ ಸ್ಥಾನ ಪಡೆದಿರುವುದರಲ್ಲಿ ನಿಮ್ಮಗಳ ಕೊಡುಗೆ ಇದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸೇವೆ ಮಾಡಿ ಜನರ ಆರೋಗ್ಯ ಕಾಪಾಡಲು ಸಹಕರಿಸಬೇಕು ಎಂದು ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಆರೋಗ್ಯ ಇಲಾಖೆ ಸಿಬ್ಬಂದಿಗೆ ಹೇಳಿದರು.

ಜಿಲ್ಲಾ ಆಸ್ಪತ್ರೆಯಿಂದ ಆಸ್ಪತ್ರೆ ಸಭಾಂಗಣದಲ್ಲಿ ನಡೆದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿಗಳು, ಜನರ ಆರೋಗ್ಯ ರಕ್ಷಣೆಯ ಮಹತ್ವದ ಸೇವೆಯಲ್ಲಿರುವ ಆರೋಗ್ಯ ಇಲಾಖೆ ಕಾರ್ಯಕರ್ತೆಯರು, ಸಿಬ್ಬಂದಿ ಕಾರ್ಯ ಒತ್ತಡದ ನಡುವೆ ತಮ್ಮ ಆರೋಗ್ಯದ ಕಡೆಗೂ ಗಮನ ಹರಿಸಬೇಕು ಎಂದು ಹೇಳಿದರು.

ಮಹಿಳೆಯರಿಗೆ ಸಾಕಷ್ಟು ಸವಾಲುಗಳಿರುತ್ತವೆ. ಕುಟುಂಬ ನಿರ್ವಹಣೆ ಜೆಗೆ ವೃತ್ತಿಯ ಕೆಲಸದ ಒತ್ತಡವೂ ಇರುತ್ತದೆ. ಎರಡೂ ಕಡೆ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕು. ಅಂತಹ ಸಾಮರ್ಥ್ಯ ಮಹಿಳೆಯರಿಗೆ ಇದೆ. ಆ ನಿಟ್ಟಿನಲ್ಲಿ ಯಶಸ್ವಿಯಾಗಬೇಕು. ಮಹಿಳಾ ದಿನಾಚರಣೆಯ ಮಹತ್ವ ತಿಳಿದು ಅದರ ಆಶಯಗಳನ್ನು ಎಲ್ಲರೂ ಅನುಸರಿಸಿಕೊಂಡು ಹೋಗಬೇಕು ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಅವರು ಉದ್ಘಾಟಿಸಿದರು.

ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಅಸ್ಗರ್ ಬೇಗ್ ಮಾತನಾಡಿ, ಮಹಿಳಾ ದಿನ ಆಚರಣೆಯ ಆಶಯ ತಿಳಿಸಿ, ಮಹಿಳೆಗೆ ಆದಿಶಕ್ತಿಯ ಶಕ್ತಿ ಇರುತ್ತದೆ. ಆಕೆ ಯಾವುದನ್ನಾದರೂ ಸಮರ್ಥವಾಗಿ ಸಾಧಿಸುವ ಶಕ್ತಿ ಇರುತ್ತದೆ. ಕುಟುಂಬ, ಸಮಾಜದಲ್ಲೂ ಮಹಿಳೆಯರ ಪ್ರಮುಖ ಪಾತ್ರ ವಹಿಸುವ ಮಹಿಳೆಯ ಹೊಣೆಗಾರಿಕೆಯೂ ಹೆಚ್ಚಿರುತ್ತದೆ ಎಂದರು.

ಜಿಲ್ಲಾ ಸರ್ವೆಲೆನ್ಸ್ ಅಧಿಕಾರಿ ಡಾ.ರಾಮೇಗೌಡ, ತಜ್ಞ ವೈದ್ಯರಾದ ಡಾ.ಈಶ್ವರಯ್ಯ, ಡಾ.ಪ್ರಭಾ, ಗಾಯತ್ರಿ ಭಾಗವಹಿಸಿದ್ದರು.

ಮಹಿಳೆಯರ ಗೌರವಿಸುವುದು ಎಲ್ಲರ ಕರ್ತವ್ಯ

ಕೋಲಾರ: ಮಹಿಳಾ ದಿನಾಚರಣೆಯಂದು ದೇಶಕ್ಕೆ ಕೊಡುಗೆ ನೀಡಿದ ಮತ್ತು ಸಮಾಜಕ್ಕೆ ಮಾದರಿಯಾದ ಮಹಿಳೆಯರ ಸಾಧನೆಯನ್ನು ನೆನೆದು ಗೌರವಿಸಬೇಕೆಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಜಿ.ಎ.ಮಂಜುನಾಥ ಹೇಳಿದರು. ನಗರದ ನ್ಯಾಯಾಲಯ ಆವರಣದಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ವಕೀಲರ ಸಂಘದಿಂದ ನಡೆದ ರಾಷ್ಟೀಯ ಲೋಕ್ ಅದಾಲತ್ ಹಾಗೂ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ದೇಶಕ್ಕೆ ಕೊಡುಗೆ ನೀಡಿದ ಮಹಿಳೆಯರ ಸಾಧನೆಯನ್ನು ಸಾರುವ ಪತ್ಯಕ್ರಮವನ್ನು ಅಳವಡಿಸಿಸಲಾಗಿದ್ದು ಕರ್ನಾಟಕದಲ್ಲಿ ವೀರ ವನಿತೆ ಓಬವ್ವ, ಕಿತ್ತೂರು ರಾಣಿ ಚೆನ್ನಮ್ಮ, ವಚನ ಸಾಹಿತ್ಯ ಕ್ಷೇತ್ರಕ್ಕೆ ಅದ್ಭುತ ಕೊಡುಗೆ ನೀಡಿದ ಅಕ್ಕಮಹಾದೇವಿ ಹೀಗೆ ಹಲವರ ಕುರಿತಂತೆ ಪಾಠಗಳಿದ್ದು ಇವರೆಲ್ಲಾ ನಮಗೆ ಸ್ಫೂರ್ತಿ ಆಗಿದ್ದಾರೆಂದರು. ಮಾನವ ನೆಮ್ಮದಿಗಾಗಿ ಬದುಕಲು ಹಣ ಮಾಡಬೇಕು. ಹಣದಿಂದಲೇ ಸಂಬಂಧ ಎಂಬಂತೆ ಮನಸ್ಸು ಹಾಳು ಮಾಡಿಕೊಳ್ಳಬಾರದು. ಸಹಬಾಳ್ವೆಯಿಂದ ಬದುಕುವುದನ್ನು ರೂಢಿಸಿಕೊಳ್ಳಬೇಕು. ಸಮಾನತೆ ಹಾದಿಯಲ್ಲಿ ನಡೆಯುವ ಮೂಲಕ ಜೀವನ ಸಾರ್ಥಕ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಬಿ.ಎಸ್.ಜಯಶ್ರೀ ಮಾತನಾಡಿ, ಮಹಿಳೆ ನಾಲ್ಕು ಗೋಡೆಗೆ ಮಾತ್ರ ಸೀಮಿತವಾಗಿರದೆ ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಇನ್ನಿತರ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮದೇ ಛಾಪನ್ನು ಮೂಡಿಸಿದ್ದಾರೆ. ಅವರ ಸಾಧನೆಯನ್ನು ಗುರುತಿಸಿ ಗೌರವಿಸಲು ಹಾಗೂ ಇತರರಿಗೆ ಮಾದರಿಯಾಗಲು ಈ ಮಹಿಳಾ ದಿನಾಚರಣೆ ಸಹಕಾರಿಯಾಗಿದೆ ಎಂದು ನುಡಿದರು.

ನ್ಯಾಯಾಧೀಶರಾದ ನಿರ್ಮಲಾದೇವಿ, ಪಿ.ಕೆ.ದಿವ್ಯ, ಕೆ.ಬಿ.ಪ್ರಸಾದ್, ಸುನೀಲ ಎಸ್ ಹೊಸಮನಿ, ಎಸ್.ಶಕುಂತಲಾ, ಆರ್.ನಟೇಶ್, ರೆಹಾನ ಸುಲ್ತಾನ, ಎಂ.ವಿ.ಲಕ್ಷ್ಮಿ, ಶ್ರೀನಿವಾಸ ಪಾಟೀಲ್, ಚೇತನ ಆರಿಕಟ್ಟಿ, ಪಿ.ಮದನ್, ಜಿ.ಹರ್ಷ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ.ಮುನೇಗೌಡ, ಉಪಾಧ್ಯಕ್ಷ ರವೀಂದ್ರ, ಕಾರ್ಯದರ್ಶಿ ಎನ್.ಬೈರಾರೆಡ್ಡಿ ಇದ್ದರು.

ಕೋಲಾರದ ನ್ಯಾಯಾಲಯದಲ್ಲಿ ನಡೆದ ಮಹಿಳಾ ದಿನಾಚರಣೆಯಲ್ಲಿ ಜಿಲ್ಲಾ ಸತ್ರ ನ್ಯಾಯಾಧೀಶ ಜಿ.ಎ.ಮಂಜುನಾಥ ಮಾತನಾಡಿದರು.

ಎಲ್ಲರನ್ನೂ ಸಮಾನರಾಗಿ ಕಾಣುವುದು ಆಧುನಿಕ ಚಿಂತನೆ

ಹಾಸನ: ಆಧುನಿಕ ಚಿಂತನೆ, ತೊಡುವ ಉಡುಗೆಗೆ ಮಾತ್ರ ಸಂಬಂಧಿಸಿದ್ದಲ್ಲ, ಆಧುನಿಕ ಚಿಂತನೆ ಎಂದರೆ ಎಲ್ಲರನ್ನೂ ಸಮಾನರಾಗಿ ಕಾಣುವುದು ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ತಿಳಿಸಿದರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಆಧುನಿಕ ಚಿಂತನೆ ನಮ್ಮ ಆಲೋಚನೆಗಳಿಗೆ ಸಂಬಂಧಿಸಿದ್ದು. ಸಮಾಜದಲ್ಲಿ ಮಹಿಳೆಯರು ಏನು ಮಾಡಬೇಕು, ಏನನ್ನು ಮಾಡಬಾರದು ಎಂಬ ಕುರಿತು ಅಲಿಖಿತ ನಿಯಮಗಳಿವೆ ಎಂದರು.

ಪ್ರತಿ ಯಶಸ್ವಿ ಪುರುಷನ ಹಿಂದೆ ಬೆನ್ನೆಲುಬಾಗಿ ಮಹಿಳೆ ಇದ್ದಾಳೆ ಎಂಬ ಮಾತನ್ನು, ಪ್ರತಿ ಯಶಸ್ವಿ ಮಹಿಳೆ ಹಿಂದೆ ಬೆನ್ನೆಲುಬಾಗಿ ಪುರುಷ ನಿದ್ದಾನೆ ಎಂದು ಮಾರ್ಪಡಿಸುವ ಅಗತ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಮಹಿಳೆಯರು ಪುರುಷರಿಗೆ ಸರಿಸಮಾನರಾಗಿ ಎಲ್ಲ ಕ್ಷೇತ್ರಗಳಲ್ಲೂ ಕೆಲಸ ಮಾಡುತ್ತಿದ್ದಾರೆ. ಪುರುಷರಿಗೆ ಸ್ಪರ್ಧೆ ಒಡ್ಡುತ್ತಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಹೆಣ್ಣು ಮಕ್ಕಳೊಂದಿಗೆ ಹೇಗೆ ನಡೆದುಕೊಳ್ಳ ಬೇಕು ಎಂಬ ಕುರಿತು ಗಂಡು ಮಕ್ಕಳಿಗೆ ಅರಿವು ಮೂಡಿಸುವ ಕೆಲಸ ಆಗಬೇಕಿದೆ. ಸಮಾಜದಲ್ಲಿ ಹೇಗಿರ ಬೇಕು ಎಂದು ಕುರಿತು ಹೆಣ್ಣು ಮಕ್ಕಳಿಗೆ ತಿಳಿ ಹೇಳುವಷ್ಟು ಗಂಡು ಮಕ್ಕಳಿಗೆ ಹೇಳುತ್ತಿಲ್ಲ ಎಂದರು.

ಆಲೂರು ತಾಲೂಕು ಆರೋಗ್ಯಾಧಿಕಾರಿ ಡಾ.ನಿಸಾರ್ ಫಾತಿಮಾ, ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ನಿರ್ದೇಶಕ ಡಾ.ಎಸ್.ಪ್ರದೀಪ್, ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಕಾರ್ಯದರ್ಶಿ ಸಿ.ಆರ್. ಜಗದೀಶ್, ಖಜಾಂಚಿ ಪಾರ್ಶ್ವನಾಥ್, ಡೀನ್‌ಗಳಾದ ಡಾ.ಕೆ.ಆರ್.ದುಶ್ಯಂತ್ ಕುಮಾರ್ ಮತ್ತು ಡಾ.ನಂದಿತಾ ಬಿ.ಆರ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ಸ್ ವಿಭಾಗದ ಮುಖ್ಯಸ್ಥ ಡಾ.ಪಿ.ಸಿ.ಶ್ರೀಕಾಂತ್, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥೆ ಡಾ.ಚಂದ್ರಿಕಾ ಜೆ, ಕಾಲೇಜು ಸಿಬ್ಬಂದಿ, ಇದ್ದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿಯಿಂದ 72 ಕೆರೆಗಳ ಅಭಿವೃದ್ಧಿ

ತುಮಕೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಜಿಲ್ಲೆಯಲ್ಲಿ ಈವರೆವಿಗೂ 72 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಸತೀಶ್ ಸುವರ್ಣ ತಿಳಿಸಿದರು.

ತಾಲೂಕಿನ ಪಿ.ಗೊಲ್ಲಹಳ್ಳಿ, ಕುರಿಕೆಂಪನಹಳ್ಳಿ ಕೆರೆಯನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಪುನರುಜ್ಜೀವನಗೊಳಿಸಿ ಗ್ರಾಮಸ್ಥರಿಗೆ ಹಸ್ತಾಂತರಿಸಿ ಮಾತನಾಡಿದರು.

ಈವರೆಗೂ ರಾಜ್ಯದಲ್ಲಿ 816 ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ವೀರೇಂದ್ರಹೆಗ್ಗಡೆ ಅವರ ದೂರದೃಷ್ಟಿತ್ವದಂತೆ ಊರಿಗೊಂದು ಕೆರೆಯನ್ನು ಅಭಿವೃದ್ಧಿಪಡಿಸಿ ರೈತರ ಜೀವನಕ್ಕೆ ಹೊಸ ಚೈತನ್ಯ ನೀಡುವುದರ ಜತೆಗೆ ಪ್ರಾಣಿಪಕ್ಷಿಗಳಿಗೆ ನೀರಿನ ವ್ಯವಸ್ಥೆ ಮಾಡಿ ಕೆರೆಯ ದಂಡೆಯ ಮೇಲೆ ನೂರಾರು ಗಿಡಮರಗಳನ್ನು ಬೆಳೆಸುತ್ತಿದ್ದೇವೆ ಎಂದರು.

ವಿಶ್ವವಾಣಿ ದಿನಪತ್ರಿಕೆಯ ಜಿಲ್ಲಾ ವರದಿಗಾರ ರಂಗನಾಥ ಕೆ.ಹೊನ್ನಮರಡಿ ಮಾತನಾಡಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಧರ್ಮಸ್ಥಳ ಸಂಘ ಸಾಮಾಜಿಕ ಕಾರ್ಯ ನಿರ್ವಹಿಸುತ್ತಿದೆ. ಜನಸಾಮಾನ್ಯರಿಗೆ ಅಷ್ಟು ಸುಲಭವಾಗಿ ಬ್ಯಾಂಕ್ ಗಳಲ್ಲಿ ಸಾಲ ಸಿಗುವುದಿಲ್ಲ. ಆದರೆ ಧರ್ಮಸ್ಥಳ ಸಂಘದಲ್ಲಿ ಮಹಿಳೆಯರು ಕೇವಲ ಆಧಾರ್ ಕಾರ್ಡನ್ನು ನೀಡಿ 1 ಲಕ್ಷದಿಂದ 5 ಲಕ್ಷದವರೆಗೆ ಸಾಲ ಪಡೆದು ಆರ್ಥಿಕ ಸ್ವಾವಲಂಬಿಯಾಗಿ ಜೀವನ ನಿರ್ವಹಿಸುತ್ತಿದ್ದಾರೆ. ಮನೆ ಇಲ್ಲದ ನಿರಾಶ್ರಿತರಿಗೆ ವಾತ್ಸಲ್ಯ ಯೋಜನೆಯಡಿ ಮನೆ, ಮಾಸಾಶನ, ಶುದ್ಧ ಕುಡಿಯುವ ನೀರು, ಆರೋಗ್ಯ ವಿಮೆ ಸೇರಿದಂತೆ ಅನೇಕ ಜನಪರ ಕಾರ್ಯ ಮಾಡುವ ಮೂಲಕ ಧರ್ಮಸ್ಥಳ ಸಂಘ ಮಾದರಿಯಾಗಿದೆ ಎಂದು ತಿಳಿಸಿದರು,

ಗ್ರಾಮಪಂಚಾಯತಿ ಅಧ್ಯಕ್ಷ ಓಂಕಾರಸ್ವಾಮಿ ಮಾತನಾಡಿ, ಕೆರೆ ಅಭಿವೃದ್ಧಿಯಾದರೆ ವರ್ಷಕ್ಕೆ 3 ಬೆಳೆಗಳನ್ನು ರೈತ ಬೆಳೆಯುತ್ತಾನೆ. ದೇಶದ ಜಿಡಿಪಿಯು ಸಹ ಅಭಿವೃದ್ಧಿ ಆಗುತ್ತದೆ,ಪ್ರತಿಯೊಬ್ಬರೂ ಕೆರೆಯ ಅಂಗಳದಲ್ಲಿ ಅವರ ಹೆಸರಿನಲ್ಲಿ 2 ಗಿಡಗಳನ್ನು ನೆಟ್ಟು ಬೆಳೆಸಿ ಎಂದು ಕರೆ ನೀಡಿದರು.

ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಹನುಮಂತರಾಯಪ್ಪ ಮಾತನಾಡಿದರು. ಕಾರ್ಯಕ್ರಮದಲ್ಲಿ ಪಿಡಿಒ ಗಂಗಾಧರ್, ಯೋಜನಾಧಿಕಾರಿ ಪಿ.ಬಿ.ಸಂದೇಶ್, ಕೃಷಿ ಮೇಲ್ವಿಚಾರಕ ರಾಘವೇಂದ್ರ, ಡಾ. ತುಳಸಿಪ್ರಸನ್ನ, ರಂಗಸ್ವಾಮಯ್ಯ, ಕರಿಯಣ್ಣ, ಶಿವರಾಜು, ಶಶಿಧರ್, ರಂಗಪ್ಪ, ಸೋಮಣ್ಣ ಉಪಸ್ಥಿತರಿದ್ದರು.



ತುಮಕೂರು ತಾಲೂಕಿನ ಪಿ.ಗೊಲ್ಲಹಳ್ಳಿ, ಕುರಿಕೆಂಪನಹಳ್ಳಿ ಕೆರೆಯನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಪುನರುಜ್ಜೀವನಗೊಳಿಸಿ ಗ್ರಾಮಸ್ಥರಿಗೆ ಹಸ್ತಾಂತರಿಸಲಾಯಿತು.

> **ಧರ್ಮಸ್ಥಳ ಸಂಘ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ. ನಾಡಿನ ಪ್ರತಿ ಹೆಣ್ಣುಮಕ್ಕಳು ಸಂಘದಿಂದ ಬ್ಯಾಂಕ್ ಗಳ ಮೂಲಕ ಸಾಲ ಪಡೆದು ಆರ್ಥಿಕ ಸ್ವಾವಲಂಬಿಗಳಾಗಿ ಜೀವನ ಸಾಗಿಸುತ್ತಿದ್ದಾರೆ. ನಮ್ಮ ಊರಿನ ಕೆರೆಯನ್ನು ಕೇವಲ 1 ತಿಂಗಳಲ್ಲಿ ಅಭಿವೃದ್ಧಿಗೊಳಿಸಿದ್ದಾರೆ.ಅವರಿಗೆ ಊರಿನ ಗ್ರಾಮಸ್ಥರ ಪರವಾಗಿ ಧನ್ಯವಾದಗಳು.**
> **-ಶಿವಕುಮಾರ್**, ಜನಜಾಗೃತಿವೇದಿಕೆಯ ಸದಸ್ಯ

ನೀರಸ ಬಜೆಟ್: ಮುಸ್ಲಿಂ ಓಲೈಕೆ

ಕೋಲಾರ: ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿರುವ ಆಯವ್ಯಯ ತುಂಬಾ ನೀರಸವಾಗಿದ್ದು ಅಲ್ಪಸಂಖ್ಯಾತರ ಓಲೈಕೆ ಬಜೆಟ್ ಆಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಓಂಶಕ್ತಿ ಚಲಪತಿ ಹೇಳೀದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರಕಾರ ಸಾರ್ವಜನಿಕ-ಖಾಸಗಿ ಸಹಭಾಗಿತ್ವಕ್ಕೆ ಹೆಚ್ಚು ಒತ್ತು ನೀಡಿದ್ದು, ಕೋಲಾರ ಮೆಡಿಕಲ್ ಕಾಲೇಜು, ಕೆಜಿಎಫ್ ರೈತರ ಆಧುನಿಕ ಮಾರುಕಟ್ಟೆ, ಶಿವಾರಪಟ್ಟಣದ ಬಳಿ ಮಾಲಿನ್ಯ ನಿಯಂತ್ರಣ ಇಂಡಸ್ಟ್ರಿಯಲ್ ಪಾರ್ಕ್ ನಿರ್ಮಿಸಲು ಮುಂದಾಗಿರುವುದರಿಂದ ಜಿಲ್ಲೆಯ ಬಡ ಜನರಿಗೆ ಏನೇನೂ ಅನುಕೂಲವಿಲ್ಲದಂತಾಘಿದೆ ಎಂದರು. ಎತ್ತಿನಹೊಳೆ ಯೋಜನೆಯಡಿ ಕುಡಿಯುವ ನೀರನ್ನು ಕೋಲಾರಕ್ಕೆ ಯಾವಾಗ ತರುತ್ತೇವೆಂದು ಹೇಳಿಲ್ಲ. ಕೋಲಾರ, ಮಾಲೂರು ತಾಲೂಕುಗಳಲ್ಲಿ ಹೊರ ವರ್ತುಲ ರಸ್ತೆಗಳ ಘೋಷಣೆಯಿಲ್ಲ, ಕೋಲಾರ ಎಪಿಎಂಸಿ ಮಾರುಕಟ್ಟೆಗೆ ಜಾಗ ನೀಡುವ ಬಗ್ಗೆ ಪ್ರಸ್ತಾಪಿಸಿಲ್ಲ, ಟೊಮ್ಯಾಟೋ, ಮಾವು ಸಂಸ್ಕರಣಾ ಘಟಕಗಳ ಬಗ್ಗೆ ಚಕಾರವಿಲ್ಲದಂತಾಗಿದ್ದು ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಮಹಿಳಾ ವಸತಿ ನಿಲಯ ನಿರ್ಮಾಣ ಸ್ವಾಗತಾರ್ಹವಾದರೂ ಎಷ್ಟು ವರ್ಷದಲ್ಲಿ ಪೂರ್ಣಗೊಳಿಸಲಾಗುತ್ತದೆ ಎಂಬ ಬಗ್ಗೆ ಸ್ಪಷ್ಟತೆ ಕೊಟ್ಟಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವ್ಹೀಲಿಂಗ್ ಪುಂಡರ ಅಟ್ಟಹಾಸ: ವ್ಯಕ್ತಿ ಸಾವು

ತುಮಕೂರು: **ವ್ಹೀಲಿಂಗ್** ಪುಂಡರ ಅಟ್ಟಹಾಸಕ್ಕೆ ಓರ್ವ ವ್ಯಕ್ತಿ ಬಲಿಯಾಗಿರುವ ಘಟನೆ ನಡೆದಿದೆ. ನಗರದ ಟೂಡಾ ಕಚೇರಿ ಬಳಿ ಘಟನೆ ನಡೆದಿದ್ದು, ಹೇಮಾದ್ರಿ ವಿದ್ಯಾಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ವಿ.ಟಿ.ತಿಪ್ಪೇಸ್ವಾಮಿ ಸಾವನ್ನಪ್ಪಿದ್ದಾರೆ. ಶನಿವಾರ ಬೆಳಗ್ಗೆ ಮನೆಗೆ ಹಾಲು ತರಲು ಬಂದಿದ್ದ ತಿಪ್ಪೇಸ್ವಾಮಿ ಅವರಿಗೆ ವೀಲ್ಹಿಂಗ್ ಮಾಡಿಕೊಂಡು ಬಂದ ಪುಂಡರ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯಾದ ಪರಿಣಾಮ ಗಂಭೀರ ಗಾಯಗೊಂಡ ತಿಪ್ಪೇಸ್ವಾಮಿ ಅವರ ತಲೆ ಮತ್ತು ಕಾಲಿಗೆ ಗಂಭೀರ ಗಾಯವಾಗಿತ್ತು.ಕೂಡಲೇ ಸ್ಥಳೀಯರು ಜಿಲ್ಲಾಸ್ಪತ್ರೆಗೆ ಕರೆದೊಯ್ದಿದ್ದಾರೆ. ಚಿಕಿತ್ಸೆ ಫಲಕಾರಿಯಾಗದೇ ಆಸ್ಪತ್ರೆಯಲ್ಲಿ ತಿಪ್ಪೇಸ್ವಾಮಿ ಸಾವನ್ನಪ್ಪಿದ್ದಾರೆ.ಘಟನೆ ಸಂಬಂಧ ತುಮಕೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತುಮಕೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ವೀಲ್ಹಿಂಗ್ ಪುಂಡರ ಹಾವಳಿ ಮುಂದುವರಿದೆ. ಪುಂಡರನ್ನು ಮಟ್ಟಹಾಕುವಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ವಿಫಲವಾಗಿದೆ. ಜಿಲ್ಲೆಯಲ್ಲಿ ದಿನೇ ದಿನೇ ಅಕ್ರಮ, ಕಾನೂನು ಬಾಹಿರ ಚಟುವಟಿಕೆಗಳು ಹೆಚ್ಚುತ್ತಿದ್ದರೂ ಪೊಲೀಸ್ ಇಲಾಖೆ ಗಾಢ ನಿದ್ರೆಗೆ ಜಾರಿದೆ. ವೀಲ್ಹಿಂಗ್ ಪುಂಡರನ್ನು ಮಟ್ಟಹಾಕದಿದ್ದರೆ ಇನ್ನಷ್ಟು ಜೀವಗಳು ಬಲಿಯಾಗುವುದರಲ್ಲಿ ಅನುಮಾನವಿಲ್ಲ.

ಬಂಡವಾಳಶಾಹಿ ಪರವಾದ ಬಜೆಟ್

ಕೋಲಾರ: ಸಿದ್ದರಾಮಯ್ಯನವರ ಬಜೆಟ್ ಬಂಡವಾಳಶಾಹಿಗಳ ಪರವಾಗಿದ್ದು ಜನತೆಗೆ ಪ್ರಯೋಜನ ಇಲ್ಲದಂತಾಗಿದೆ ಎಂದು ದಳಪತಿ ಸಿಎಂಆರ್ ಶ್ರೀನಾಥ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಹಲವು ವರ್ಷಗಳ ಬೇಡಿಕೆ ಯಾದ ಕೃಷಿ ಉತ್ಪನ್ನ ಮಾರುಕಟ್ಟೆ ಸ್ಥಳಾಂ ತರ ಹಾಗೂ ಸಂಸ್ಕರಣಾ ಘಟಕಗಳ ಸ್ಥಾಪನೆ ಶಾಶ್ವತ ಬೇಡಿಕೆಯಾಗಿ ಉಳಿದು ಕೊಂಡಿದೆ ಎಂದು ಅಸಮಾಧಾನ ವ್ಯಕ್ತಪ ಡಿಸಿದರು. ಕೆಸಿ ವ್ಯಾಲಿ 3ನೇ ಹಂತದ ಶುದ್ಧೀಕರಣ ಯೋಜನೆಗೆ ಬಜೆಟ್‌ನಲ್ಲಿ ಹಣ ನಿಗದಿ ಮಾಡದೇ ಕಲುಶಿತ ಮತ್ತು ರಾಸಾಯನಿಕಯುಕ್ತ ನೀರನ್ನು ಕೃಷಿ ಮತ್ತು ಜಾನುವಾರುಗಳಿಗೆ ಬಳಕೆ ಮಾಡುವಂತೆ ಮಾಡಿ ಇಡೀ ಜಿಲ್ಲೆಯನ್ನು ರೋಗಗ್ರಸ್ಥ ಮಾಡುವ ತೀರ್ಮಾನ ಸರಿಯಿಲ್ಲ. ಬಹುರಾಷ್ಟ್ರೀಯ ಕಂಪನಿಗಳ ಹಾಗೂ ಬಂಡವಾಳ ಶಾಹಿಗಳಿಗೆ ಅನುಕೂಲ ಮಾಡಲೆಂದೇ ವೈದ್ಯಕೀಯ ಕಾಲೇಜು ಹಾಗೂ ಕೆಜಿಎಫ್ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ಖಾಸಗಿ ಸಹಭಾ ಗಿತ್ವದಲ್ಲಿ ಮಾಡಲು ಹೊರಟಿದೆ. ಕೋಲಾರ ಕೃಷಿ ಉತ್ಪನ್ನ ಮಾರು ಕಟ್ಟೆ, ವರ್ತುಲ ರಸ್ತೆ ಹಾಗೂ ಸಂಸ್ಕರಣಾ ಘಟಕಗಳಿಗೆ ಸಹಭಾಗಿತ್ವ ದಲ್ಲಿ ಹಣ ಮಾಡಲು ರಾಜ್ಯ ಸರಕಾರಕ್ಕೆ ಸಾಧ್ಯವಿಲ್ಲದಂತಾಗಿದೆ. ಹೈನುಗಾರಿಕೆ ಉತ್ತೇಜನೆ ಯೋಜನೆ ಹಾಗೂ ಪಶು ವೈದ್ಯಕೀಯ ಕಾಲೇಜು ಬೇಡಿಕೆ ಈಡೇರಿಲ್ಲ ಎಂದು ಸಿಎಂಆರ್ ಶ್ರೀನಾಥ್ ದೂರಿದರು.

ಈಜಲು ಹೋಗಿ ಮೂವರ ಸಾವು

ಚಿಂತಾಮಣಿ: ಕೃಷಿ ಹೊಂಡದಲ್ಲಿ ಈಜಾಡಲು ಹೋಗಿ ಮೂರು ಯುವಕರು ಸಾವನ್ನಪ್ಪಿರುವ ಘಟನೆ ಮುಂತಕದಿರೇನಹಳ್ಳಿ ಗ್ರಾಮದ ಬಳಿಯ ಕೃಷಿ ಹೊಂಡದಲ್ಲಿ ನಡೆದಿದೆ. ಕೃಷಿ ಹೊಂಡದಲ್ಲಿ ಈಜಾಡಲು ಹೋಗಿ ಸಾವನ್ನಪ್ಪಿರುವ ಯುವಕರು ಚಿಂತಾಮಣಿ ತಾಲೂಕು ಕಸಬಾ ಹೊಬಳಿ ಮುಂತಕದಿರೇನಹಳ್ಳಿ ಗ್ರಾಮದ 28 ವರ್ಷದ ಶ್ರೀಕಾಂತ್, 24 ವರ್ಷದ ರಮೇಶ್, 32 ವರ್ಷದ ಲೋಕೇಶ್ ರವರಾಗಿದ್ದಾರೆ. ಶುಕ್ರವಾರ ಮದ್ಯಾಹ್ನ ತಮ್ಮ ಗ್ರಾಮದ ಬಳಿಯ ಅಬ್ಬ ಗುಂಡುಪ್ರಸಾದ್‌ರವರಿಗೆ ಸೇರಿದ ಕೃಷಿಹೊಂಡಹೊಂದರಲ್ಲಿ ಈಜಾಡಲು ಹೋಗಿದ್ದ ವೇಳೆ ಘಟನೆ ನಡೆದಿದೆ ಎಂದು ತಿಳಿದು ಬಂದಿದೆ. ಇನ್ನೂ ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಚಿಂತಾಮಣಿ ಗ್ರಾಮಾಂತರ ಠಾಣೆಯ ಸಿಐ ಶಿವರಾಜ್, ಪಿಎಸ್‌ಐ ಮಮತ ಮತ್ತು ಪೊಲೀಸ್ ಸಿಬ್ಬಂದಿ ಹಾಗೂ ಅಗ್ನಿ ಶಾಮಕದಳದ ಸಿಬ್ಬಂದಿಯಾದ ಲೋಕೆಶ್, ಶಿವಾರೆಡ್ಡಿ, ಶಿವಶಂಕರ್, ಚೆನ್ನಪ್ಪ, ವಿಷ್ಣು, ವಿವೇಕ್ ಮತ್ತಿತರರು ಬೇಟಿ ನೀಡಿ ಕೃಷಿ ಹೊಂಡದಲ್ಲಿ ಬಿದಿದ್ದ ಯುವಕರ ಶವಗಳನ್ನು ಹೊರ ತೆಗೆಯವಲ್ಲಿ ಯಶಸ್ವಿಯಾಗಿದ್ದು, ಸ್ಥಳದಲ್ಲಿ ಮೃತ ಯುವಕರ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಇನ್ನೂ ಕೃಷಿ ಹೊಂಡದಲ್ಲಿ ವಿದ್ಯುತ್ ಶಾಕ್ ಆಗಿ ಯುವಕರು ಮೃತಪಟ್ಟಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸುತ್ತಿದ್ದು, ಪೋಲಿಸರ ತನಿಖೆ ನಡೆಸುತ್ತಿದ್ದಾರೆ.

ಸಮಾಚಾರ ಸಣ್ಣದಲ್ಲ

ಅಂಜನಾದ್ರಿ ಹುಂಡಿಗೆ 28 ಲಕ್ಷ ರು. ಕಾಣಿಕೆ

ಕೊಪ್ಪಳ: ಅಂಜನಾದ್ರಿಯಲ್ಲಿ ಹುಂಡಿ ಎಣಿಕೆ ಕಾರ್ಯ ನಡೆದಿದ್ದು, ವಿದೇಶಿ ಮಹಿಳೆ ಎಣಿಕೆ ಕಾರ್ಯದಲ್ಲಿ ಭಾಗವಹಿಸಿ ಎಲ್ಲರ ಗಮನ ಸೆಳೆದಿದ್ದಾರೆ. ಜಿಲ್ಲೆಯ ಗಂಗಾವತಿ ತಾಲೂಕಿನ ಹನುಮಳ್ಳಿಯ ಅಂಜನಾದ್ರಿ ಬೆಟ್ಟದಲ್ಲಿ ಶನಿವಾರ ಹುಂಡಿ ಎಣಿಕೆ ಕಾರ್ಯ ನಡೆಯಿತು. ಇದೇ ವೇಳೆ ಪ್ರವಾಸಕ್ಕೆಂದು ಅಂಜನಾದ್ರಿಗೆ ಬಂದಿದ್ದ ವಿದೇಶಿ ಮಹಿಳೆ ಹುಂಡಿ ಎಣಿಕೆ ಕಾರ್ಯದಲ್ಲಿ ತೊಡಗಿ ಕೊಂಡಿದ್ದು, ಇತ್ತೀಚಿನ ದಿನಗಳಲ್ಲಿ ಅಂಜನಾದ್ರಿಗೆ ಬರುವ ಭಕ್ತರ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದೆ. ಜ.1ರಿಂದ ಮಾ.07ರವರೆಗಿನ ಅವಧಿಯಲ್ಲಿ ಸಂಗ್ರಹಗೊಂಡ ಕಾಣಿಕೆಯ ಎಣಿಕೆ ಕಾರ್ಯ ಶನಿವಾರ ನಡೆದಿದ್ದು, ಒಟ್ಟು 28 ಲಕ್ಷ ರು. ಕಾಣಿಕೆ ಸಂಗ್ರಹವಾಗಿದೆ. ದೇವಸ್ಥಾನ ಆಡಳಿತಾಧಿಕಾರಿ ಪ್ರಕಾಶ್ ರಾವ್ ಅವರ ನೇತೃತ್ವದಲ್ಲಿ ಹಾಗೂ ಪೊಲೀಸ್ ಬಂದೋಬಸ್ತ್, ಸಿಸಿಟಿವಿ ಕ್ಯಾಮೆರಾ ಕಣ್ಗಾವಲಿನಲ್ಲಿ ಹುಂಡಿ ಎಣಿಕೆ ಕಾರ್ಯ ನಡೆಯಿತು.

ಹಾಲಿನ ದರ ಶೀಘ್ರ ಹೆಚ್ಚಳ

ಬೆಂಗಳೂರು: ಬಸ್, ಮೆಟ್ರೋ ದರ ಹೆಚ್ಚಳದ ಬಳಿಕ

ಇದೀಗ ಜನರಿಗೆ ನಂದಿನಿ ಹಾಲೂ ದುಬಾರಿಯಾಗಲಿದ್ದು, ರಾಜ್ಯದಲ್ಲಿ ಮತ್ತೆ ನಂದಿನಿ ಹಾಲಿನ ದರವು ಏರಿಕೆಯಾಗಲಿದೆ ಎಂದು ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ್ ಮಾಹಿತಿ ನೀಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಹಾಲಿನ ದರ ಶೀಘ್ರವೇ ಏರಿಕೆ ಮಾಡಲಾಗುವುದು. ಹೆಚ್ಚುವರಿ ಹಾಲಿನ ದರವನ್ನು ರೈತರಿಗೆ ನೀಡಲಾಗುವುದು. ಅಧಿವೇಶನದ ಬಳಿಕ ಹಾಲಿನ ದರವನ್ನು ಹೆಚ್ಚಿಸಲಾಗುತ್ತಿದ್ದು, ಎಷ್ಟು ಮೊತ್ತವನ್ನು ಹೆಚ್ಚಿಸಬೇಕು ಎಂಬುದರ ಕುರಿತು ನಿರ್ಧಾರ ಅಂತಿಮವಾಗಿಲ್ಲ. ಹಾಲಿನ ದರ ಲೀ.ಗೆ 10 ರೂ ಹೆಚ್ಚಳಕ್ಕೆ ರೈತರು ಬೇಡಿಕೆ ಇಟ್ಟಿದ್ದಾರೆ. ಹಾಲಿನ ದರ ಲೀ.ಗೆ 10 ರು ಹೆಚ್ಚಳಕ್ಕೆ ರೈತರು ಬೇಡಿಕೆ ಇಟ್ಟಿದ್ದಾರೆ. ದರ ಏರಿಕೆ ಸರಕಾರದ ತೀರ್ಮಾನದ ಹಂತದಲ್ಲಿದೆ. ಈ ಬೆನ್ನಲ್ಲೇ ನಂದಿನಿ ಹಾಲಿನ ದರ ಏರಿಕೆಯಾಗಲಿದೆ ಎಂದರು.

ಪ್ರಿಯಕರನ ಜತೆ ಪತ್ನಿ ಪರಾರಿ: ಪತಿ ಆತ್ಮಹತ್ಯೆ

ಹಾಸನ: ಪ್ರಿಯಕರನ ಜತೆ ಪತ್ನಿ ಪರಾರಿಯಾದ

ಹಿನ್ನೆಲೆಯಲ್ಲಿ ಮನನೊಂದ ಪತಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಹೊಳೆನರಸೀಪುರ ತಾಲೂಕಿನ ಮಾಕವಳ್ಳಿಯಲ್ಲಿ ಬಳಿ ನಡೆದಿದೆ. ಅರಕಲಗೂಡು ತಾಲೂಕಿನ ಹೊನ್ನವಳ್ಳಿಯ ರವಿ (38) ಆತ್ಮಹತ್ಯೆಗೆ ಮಾಡಿಕೊಂಡ ಪತಿ. ರವಿಯ ಪತ್ನಿ ಕೆಲ ದಿನಗಳ ಹಿಂದೆ ಗಂಡನನ್ನು ಬಿಟ್ಟು ಮಗುವಿನೊಂದಿಗೆ ಹೊನ್ನವಳ್ಳಿಯವನೇ ಆದ ಪ್ರದೀಪ್ ಜೊತೆ ಪರಾರಿಯಾಗಿದ್ದಳು. ಇದರಿಂದ ನೊಂದ ರವಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಸರಿಯಾಗಿ ಸ್ಪಂದಿಸದ ಕಾರಣ ಎಸ್ಪಿಗೂ ದೂರು ನೀಡಿದ್ದರು. ಆದರೂ ಪೊಲೀಸರು ಕ್ರಮ ಕೈಗೊಂಡಿಲ್ಲ ಎಂದು ಬೇಸರಗೊಂಡ ರವಿ ಶನಿವಾರ ಮಾಕವಳ್ಳಿ ಬಳಿ ಹೇಮಾವತಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪೊಲೀಸರು ಹಾಗೂ ಅಗ್ನಿಶಾಮಕ ದಳದಿಂದ ರವಿಯ ಮೃತದೇಹಕ್ಕಾಗಿ ಶೋಧನೆ ನಡೆದಿದೆ. ಹೊಳೆನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿರಾಮ
ಪ್ರತಿ ಭಾನುವಾರ

ಹುಟ್ಟೂರಿನಲ್ಲಿ ಇಂದು ಭೈರಪ್ಪಗೆ ಗೌರವ, ಸನ್ಮಾನ

ಬೆಂಗಳೂರು: ಕನ್ನಡದ ಹಿರಿಯ ಕಾದಂಬರಿಕಾರ, ಸರಸ್ವತಿ ಸಮ್ಮಾನ್, ಪದ್ಮಭೂಷಣ ಪುರಸ್ಕೃತ ಎಸ್.ಎಲ್. ಭೈರಪ್ಪ ಅವರಿಗೆ ಇಂದು ಹುಟ್ಟೂರು ಸಂತೇಶಿವರದಲ್ಲಿ ಗೌರವ ಸನ್ಮಾನ ನಡೆಯಲಿದೆ.

ಹುಟ್ಟೂರಿನ ಕೆರೆಯನ್ನು ಹೂಳುಮುಕ್ತಗೊಳಿಸಿದ ಹಾಗೂ ಏತ ನೀರಾವರಿ ನೀರನ್ನು ತರಿಸಿದ ಹಿನ್ನೆಲೆಯಲ್ಲಿ ನಮ್ಮ ಭೈರಪ್ಪ ನಮ್ಮ ಹೆಮ್ಮೆ ಹೆಸರಿನಲ್ಲಿ ಸನ್ಮಾನ ಹಾಗೂ ಗೌರವ ಸಮರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಎಸ್.ಎಲ್. ಭೈರಪ್ಪನವರು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಸಂತೇಶಿವರ ಮತ್ತು ಅಗ್ರಹಾರ ಬೆಳಗುಲಿ ಗ್ರಾಮಗಳ ಕೆರೆ ಕಟ್ಟೆಗಳಿಗೆ ಸರಕಾರದ ವತಿಯಿಂದ ಏತ ನೀರಾವರಿ ಯೋಜನೆಯಡಿ ನೀರು ಪೂರೈಕೆಗೆ ಶ್ರಮ ವಹಿಸಿದ್ದರು. ಇದಕ್ಕಾಗಿ ಹತ್ತಾರು ವರ್ಷಗಳಿಂದ ಅವರು ಪ್ರಯತ್ನಿಸಿದ್ದರು. ಮುಖ್ಯಮಂತ್ರಿಗಳಾಗಿದ್ದ ಬಿಎಸ್ ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರನ್ನು ಕಂಡು ಮನವಿ ಸಲ್ಲಿಸಿದ್ದರು. ಇದೀಗ ಅವರ ಪ್ರಯತ್ನದ ಫಲವಾಗಿ ಯೋಜನೆ ಸಫಲಗೊಂಡು ಸಂತೇಶಿವರ ಮತ್ತು ಅಗ್ರಹಾರ ಬೆಳಗುಲಿ ಗ್ರಾಮಗಳ ಕೆರೆಕಟ್ಟೆಗಳಿಗೆ ನೀರು ಪೂರೈಕೆ ಯಾಗಿದೆ. ಸುತ್ತಲ 20ಕ್ಕೂ ಹೆಚ್ಚು ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ಏರಿಕೆಯಿಂದಾಗಿ ಸಾವಿರಾರು ಕೊಳವೆ ಬಾವಿಗಳು ಮರುಪೂರಣಗೊಂಡು ರೈತ ಸಮುದಾಯಕ್ಕೆ ಖುಷಿ ನೆಮ್ಮದಿ ದೊರೆತಿದೆ. ಇದರಿಂದ ಹರ್ಷಗೊಂಡ ಊರಿನ ಜನ ಭೈರಪ್ಪನವರನ್ನು ಸನ್ಮಾನಿಸುತ್ತಿದ್ದಾರೆ.

ನಾನಾ ಗಣ್ಯರು ಭಾಗಿ

ಚನ್ನರಾಯಪಟ್ಟಣ ತಾಲೂಕಿನ ಸಂತೇಶಿವರ ಗ್ರಾಮದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಸಂಸದರಾದ ಡಾ.ಸಿಎನ್ ಮಂಜುನಾಥ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೇಯಸ್ ಎಂ. ಪಟೇಲ್, ಶಾಸಕರಾದ ಕೆಎನ್ ರಾಜಣ್ಣ, ಸಿಎನ್ ಬಾಲಕೃಷ್ಣ, ಷಡಕ್ಷರಿ, ಜೆ.ಸಿ ಮಾಧುಸ್ವಾಮಿ ಮುಂತಾದವರು ಭಾಗವಹಿಸಲಿದ್ದಾರೆ. ಇದಕ್ಕೂ ಮುನ್ನ ಭೈರಪ್ಪನವರ ಮೆರವಣಿಗೆ, ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು, ಭೈರಪ್ಪನವರ ಕೃತಿಗಳ ಪ್ರದರ್ಶನ ಹಾಗೂ ಮಾರಾಟ ನಡೆಯಲಿದೆ.

ಹುಟ್ಟೂರು ಸಂತೇಶಿವರ ಸ್ವರ್ಗಕ್ಕಿಂತ ಮಿಗಿಲು

← ಮೊದಲಪುಟದಿಂದ

- **ತತ್ವಶಾಸ್ತ್ರ ಹಾಗೂ ಕಾದಂಬರಿ ಸೃಷ್ಟಿ ಎರಡೂ ನಿಮ್ಮಲ್ಲಿ ಹಾಸುಹೊಕ್ಕಾಗಿವೆ. ಅದು ಹೇಗೆ?**

ಭೈರಪ್ಪ: ನನಗೆ ಮೊದಲಿನಿಂದಲೂ ಬದುಕಿನಲ್ಲಿ ಸಾವುಗಳು, ಪ್ಲೇಗು ಇದನ್ನೆಲ್ಲ ನೋಡಿ ನೋಡಿ ಇದೆಲ್ಲ ಯಾಕೆ ಹೀಗೆ ಎಂಬ ಪ್ರಶ್ನೆ ಮೂಡುತ್ತಿತ್ತು. ಮನುಷ್ಯರು ಯಾಕೆ ಸಾಯ್ತಾರೆ ಎಂಬ ಪ್ರಶ್ನೆ ಮೂಡಿತ್ತು. ಯಾಮುನಾಚಾರ್ಯರು ಅಂತ ಫಿಲಾಸಫಿ ಪ್ರೊಫೆಸರ್ ಇದ್ದರು. ಅವರ ಬಳಿ ಹೋಗಿ ಕೇಳಿದೆ. ಆಗ ನಾನಿನ್ನೂ ಮಿಡಲ್ ಸ್ಕೂಲ್ ಹುಡುಗ. ಅವರು 'ಕಠೋಪನಿಷತ್ತಿನಲ್ಲಿ ಇದಕ್ಕೆ ಉತ್ತರವಿದೆ, ಓದು' ಅಂತ ಹೇಳಿದರು. ಓದಿದೆ. ನಚಿಕೇತನ ಕಥೆ ಚೆನ್ನಾಗಿತ್ತು. ಆದರೆ ಅರ್ಥವಾಗಲಿಲ್ಲ. ಮತ್ತೆ ಅವರ ಬಳಿಗೆ ಹೋದೆ. 'ಫಿಸಾಸಫಿಯನ್ನು ಕ್ರಮಬದ್ಧವಾಗಿ ಓದಿದರೆ ಮಾತ್ರ ಲಾಭ, ಹೈಸ್ಕೂಲ್ ಮುಗಿದ ಮೇಲೆ ಓದು' ಎಂದರು. ಆಗ ಮಹಾರಾಜ ಕಾಲೇಜಿನಲ್ಲಿ ಮೂರು ವರ್ಷ ಫಿಲಾಸಫಿ ಆನರ್ಸ್ ಇತ್ತು, ಓದಿದೆ. ಎಂಎಯಲ್ಲಿ ಫಸ್ಟ್ ಕ್ಲಾಸ್ ಬಂದೆ. ಹುಬ್ಬಳ್ಳಿಯಲ್ಲಿ ಕೆಲಸಕ್ಕೆ ಸೇರಿಕೊಂಡ ಬಳಿಕ ಅಲ್ಲಿದ್ದ ಡೈರಿ ಎಲ್ಲಾ ನೋಡಿದೆ. ನಮ್ಮೂರಲ್ಲೂ ಹೈನುಗಾರಿಕೆಯ ಅನುಭವ ಇತ್ತಲ್ಲ, ಅದರ ಮೇಲೆ 'ತಬ್ಬಲಿಯು ನೀನಾದೆ ಮಗನೆ' ಬರೆದೆ. ಅದಕ್ಕೂ ಮೊದಲೇ 'ಗತಜನ್ಮ' ಅಂತ ಒಂದೆರಡು ಕತೆಗಳನ್ನು ಬರೆದಿದ್ದೆ. ಅಲ್ಲೇ ನನ್ನ ಸತ್ಯ ಮತ್ತು ಸೌಂದರ್ಯ ಪಿಎಚ್‌ಡಿ ಥೀಸಿಸ್ ಕೂಡ ಬರೆದೆ. ಅದಕ್ಕೆ ಎರಡೂವರೆ ವರ್ಷ ಕಳೆದೆ. ಅದನ್ನೇ ಇನ್ನಷ್ಟು ಮುಂದುವರಿಸಿ ರಾಧಾಕೃಷ್ಣನ್ ಹಾಗೆ ಫಿಸಾಲಫಿ ಪ್ರೊಫೆಸರ್ ಆಗಬೇಕು ಎಂದು ಹಿರಿಯರು ಪ್ರೋತ್ಸಾಹಿಸಿದರು. ಆದರೆ ಅಷ್ಟರಲ್ಲಿ ನಾನು ಹುಬ್ಬಳ್ಳಿಯ ಪ್ರಕಾಶಕ ಗೋವಿಂದರಾಯರಿಗೆ ಕೊಟ್ಟಿದ್ದ 'ವಂಶವೃಕ್ಷ' ಕಾದಂಬರಿಯನ್ನು ತಿದ್ದಿಕೊಡಿ ಎಂದು ಅವರು ಬೆನ್ನು ಬಿದ್ದಿದ್ದರು. ಅಷ್ಟರಲ್ಲಾಗಲೇ ನನ್ನ ಭೀಮಕಾಯ ಮತ್ತು ತಬ್ಬಲಿಯು ನೀನಾದೆ ಮಗನೆ ಕಾದಂಬರಿಗಳು ಹೆಸರು ತಂದುಕೊಟ್ಟಿದ್ದವು. ಮುಂದಿನ ಕಾದಂಬರಿಗೆ ಜನ ಕಾಯುತ್ತಿದ್ದರು. ವಂಶವೃಕ್ಷ ತಿದ್ದಿ ಬರೆಯುವಾಗ, ನನ್ನ ದಾರಿ ಸಾಹಿತ್ಯವೇ ಹೊರತು ತತ್ವಶಾಸ್ತ್ರವಲ್ಲ ಎಂದು ನನಗೆ ಮನದಟ್ಟಾಯಿತು.

ಕ್ರಿಯೇಟಿವಿಟಿ ನನಗೆ ತಾಯಿಯಿಂದ ಬಂದದ್ದು. ತಾಯಿ ರಾಗಿ ಬೀಸುವಾಗ ಕುಮಾರವ್ಯಾಸ ಭಾರತದ ಕತೆಗಳನ್ನು ಹೇಳುತ್ತಿದ್ದರು. ನೀನು ಇದನ್ನೆಲ್ಲ ಬರೀಬೇಕು ಕಣೋ ಎನ್ನುತ್ತಿದ್ದರು. ಹಾಗೆ ಕೇಳಿಸಿಕೊಂಡ ಮಹಾಭಾರತದ ಭೀಮ, ದ್ರೌಪದಿ, ಕೃಷ್ಣ ಮುಂತಾದ ಪಾತ್ರಗಳಿಂದಲೇ ಪ್ರಭಾವಿತನಾಗಿ ಪರ್ವ ಬರೆದೆ. ಅದು ಲಕ್ಷಾಂತರ ಪ್ರತಿಗಳು ಖರ್ಚಾದವು. ಈಗಿನ ಪ್ರಧಾನಿ ನರೇಂದ್ರ ಮೋದಿಯವರು ಅದನ್ನು ರಷ್ಯನ್‌ಗೆ ಅನುವಾದ ಮಾಡಿಸಿದರು. ಆ ಬಳಿಕ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡಿದೆ, ನೂರಾರು ಕಛೇರಿ ಕೇಳಿದೆ, ಅದರ ಬಗ್ಗೆ ಓದಿದೆ. ಅದರಿಂದ ಮಂದ್ರ ಬರೆದೆ. ಅದು ಚೀನೀ ಭಾಷೆಗೆ ಅನುವಾದವಾಗಿದೆ. ರಾಮಾಯಣದ ಬಗ್ಗೆ ಏನೂ ಬರೆದೇ ಇಲ್ಲವಲ್ಲಾ ಅನಿಸುತ್ತಿತ್ತು. ರಾಮನ ಬಗ್ಗೆ ತುಂಬಾ ಬರೆದಿದ್ದಾರೆ. ಆದರೆ ಸೀತೆಯ ದೃಷ್ಟಿಯಿಂದ ರಾಮಾಯಣವನ್ನು ಬರೆದರೆ



ಹೇಗಿರುತ್ತದೆ ಎಂದು ಯೋಚಿಸಿದೆ. ಉತ್ತರಕಾಂಡ ಮೂಡಿದ್ದು ಹಾಗೆ.

- **ಹುಟ್ಟಿ ಬೆಳೆದ ಊರಿನಲ್ಲಿ ಕೃತಜ್ಞತಾ ಸಮರ್ಪಣೆ ನಡೆಯುವ ಹೊತ್ತಿನಲ್ಲಿ ನಿಮ್ಮಲ್ಲಿ ಹುಟ್ಟಿಕೊಳ್ಳುತ್ತಿರುವ ಭಾವನೆಗಳೇನು?**

ಭೈರಪ್ಪ: ರಾಮಾಯಣದಲ್ಲಿ ಒಂದು ಪ್ರಸಂಗವಿದೆ. ರಾವಣನನ್ನು ಕೊಂದ ಬಳಿಕ, ಲಂಕೆ ಚೆನ್ನಾಗಿದೆ, ಇಲ್ಲೇ ಇರೋಣ ಎಂದು ಲಕ್ಷ್ಮಣ ಹೇಳುವಾಗ ರಾಮ ಹೇಳುತ್ತಾನೆ- ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ- ನನ್ನ ಜನ್ಮಭೂಮಿ ಅಯೋಧ್ಯೆಯೇ ನನಗೆ ಸ್ವರ್ಗಕ್ಕಿಂತ ಮಿಗಿಲು ಅಂತ. ಇಂಥ ಜನ್ಮಭೂಮಿಗಾಗಿ ಯಾವ ರೀತಿ ಸಹಾಯ ಮಾಡಬೇಕು ಅಂತ ಯೋಚನೆ ಮಾಡಿದೆ. ಅಲ್ಲೊಂದು ಶಾಲೆಯಿದೆ. ಅಲ್ಲಿ ಕಲಿಯುತ್ತಿರುವವರು ಸುತ್ತಮುತ್ತಲಿನ ಹಳ್ಳಿಯ ಮಕ್ಕಳು. ಸಂತೇಶಿವರದ ಲೈಬ್ರರಿಗೆ ಪುಸ್ತಕಗಳನ್ನು ಕೊಟ್ಟು ಶಾಲೆಯ ಮಕ್ಕಳಿಗೆ ಓದಿಸಲು ಮುಂದಾದೆವು. ಅದಕ್ಕಿಂತ ಮುಖ್ಯವಾದ್ದು ಅಲ್ಲಿನ ಕೆರೆಯ ಹೂಳು ತೆಗೆಸಿ ಏತ ನೀರಾವರಿ ನೀರು ಬರುವಂತೆ ಶ್ರಮವಹಿಸಿದೆವು. ನಲುವತ್ತು ವರ್ಷಗಳಿಂದ ಅದರ ಹೂಳು ತೆಗೆದೇ ಇರಲಿಲ್ಲ. ಅದಕ್ಕೆ ತುಂಬಾ ಪ್ರಯತ್ನ ಮಾಡಬೇಕಾಯಿತು. ಹಲವಾರು ವರ್ಷ ರಾಜಕಾರಣಿಗಳ ಹಿಂದೆ ಬೀಳಬೇಕಾಯಿತು. ಈ ಪ್ರಯತ್ನದಲ್ಲಿ ಪತ್ರಕರ್ತ ವಿಶ್ವೇಶ್ವರ ಭಟ್ ನನಗೆ ತುಂಬಾ ಸಹಾಯ ಮಾಡಿದರು. ಮೊದಲು ಆಗ ಮುಖ್ಯಮಂತ್ರಿ ಆಗಿದ್ದ ಯಡಿಯೂರಪ್ಪವರಲ್ಲಿಗೆ ನನ್ನನ್ನು ಕರೆದೊಯ್ದು, ಊರಿನ ಕೆರೆ ತುಂಬಿಸುವ ಕುರಿತು ಮಾತನಾಡಿದರು. ಅವರು ಆ ಕಾರ್ಯಕ್ಕೆ ಸರಕಾರದ ವತಿಯಿಂದ ಚಾಲನೆ ನೀಡಿದರು. ಆದರೆ ಅಷ್ಟರಲ್ಲಿ ಕರೊನಾ ಕಾಯಿಲೆಯ ಪರಿಣಾಮ ಅದು ನಿಂತುಹೋಯಿತು. ನಂತರ ಬಸವರಾಜ ಬೊಮ್ಮಾಯಿ ಅವರು ಬಂದರು. ಅವರ ಬಳಿಗೂ ಭಟ್ಟರು ನನ್ನನ್ನು ಕರೆದೊಯ್ದರು. ಅವರು ನನ್ನ ಕಾದಂಬರಿಗಳನ್ನು ಓದಿದ್ದಾರೆ. ನನ್ನನ್ನು ನೋಡಿ ಬೊಮ್ಮಾಯಿಯವರು ಆತ್ಮೀಯತೆಯಿಂದ ಮಾತನಾಡಿಸಿದರು. ಅವರ ಅವಧಿಯಲ್ಲಿ ಕೆರೆ ಹೂಳು ತೆಗೆಸಿ ನೀರು ತರಿಸುವ ಕಾರ್ಯ ಪೂರ್ತಿ ಮಾಡಲಾಯಿತು. ಅವರಲ್ಲದೇ ಇನ್ನೂ ಎಷ್ಟೋ ಮಂದಿ ಇದರಲ್ಲಿ ಸಹಾಯ ಮಾಡಿದ್ದಾರೆ.

- **ಮುಂದಿನ ಯೋಜನೆಗಳೇನು?**

ಭೈರಪ್ಪ: ಊರಿನಲ್ಲಿ ನಡೆಯುವ ಕಾರ್ಯಕ್ರಮ ಚೆನ್ನಾಗಿ ಆಗಲಿ ಎಂಬುದು ನನ್ನ ಆಸೆ. ನನ್ನಲ್ಲಿ ಊರಿಗಾಗಿ ಇನ್ನೂ ಏನೇನೋ ಯೋಚನೆಗಳಿವೆ. ನಾನು ಬಹಳ ಕಷ್ಟಪಟ್ಟು, ಅನ್ನ ಬಟ್ಟೆ ಇಲ್ಲದೆ ಹೇಗೋ ಮೇಲೆ ಬಂದವನು. ಈಗ ಆ ಥರದ ಅನುಭವಗಳು ಬೇರೆ ಯಾರಿಗೂ ಆಗದಿರಲಿ ಅಂತ ಇದೆ. ಅಂಥವರಿಗೆ ಸಹಾಯ ಮಾಡಬೇಕು ಎಂದಿದೆ. ಪಿಯುಸಿಯಲ್ಲಿ ಒಳ್ಳೇ ಅಂಕ ಬಂದ ಬಡ ಮಕ್ಕಳಿಗೆ ಎಂಜಿನಿಯರಿಂಗ್ ಓದಲು ದುಡ್ಡಿಲ್ಲದಿದ್ದರೆ ಅಂಥವರಿಗೆ ನೆರವಾಗಬೇಕು. ಎಲ್ಲ ಜಾತಿಯಲ್ಲೂ ಅಂಥವರಿದ್ದಾರೆ. ಅಂಥವರನ್ನು ಹುಡುಕಿ ಪ್ರತಿವರ್ಷವೂ ಸ್ಕಾಲರ್‌ಶಿಪ್ ಕೊಡಬೇಕಿದೆ. ಇದಕ್ಕಾಗಿ ಒಂದು ಟ್ರಸ್ಟ್ ಮಾಡಿಕೊಂಡು,



ಅದಕ್ಕೆ ನಾನೇ ಅಧ್ಯಕ್ಷನಾಗಿ ಮುನ್ನಡೆಸಬೇಕು ಎಂಬ ಆಸೆಯಿದೆ. ನಾನು ಬದುಕಿರುವವರೆಗೆ ನನ್ನ ಪುಸ್ತಕಗಳ ರಾಯಲ್ಟಿ ಬರುತ್ತೆ, ಅದನ್ನು ಮಕ್ಕಳ ವಿದ್ಯೆಗಾಗಿಯೇ ಖರ್ಚು ಮಾಡಬೇಕು ಅನಿಸಿದೆ. ನನಗೆ ಹಣದ ಮೇಲೆ ಆಸೆ ಇಲ್ಲ. ಇರುವುದನ್ನು ದಾನ ಮಾಡಿ ಹೊರಟು ಬಿಡಬೇಕು. ಪಾಪ-ಪುಣ್ಯ ಇಂಥದರಲ್ಲೆಲ್ಲ ನನಗೆ ನಂಬಿಕೆಯಿಲ್ಲ.

ಅಕ್ರಮ ಮರಳುಗಾರಿಕೆ ತಡೆಗೆ ನೂರೆಂಟು ವಿಘ್ನ

← ಮೊದಲಪುಟದಿಂದ

ಆದರೆ, ಅಕ್ರಮವಾಗಿ ಗಣಿಗಾರಿಕೆ ಚಟುವಟಿಕೆಯಲ್ಲಿ ತೊಡಗಿರುವ ವ್ಯಕ್ತಿಗಳಿಗೆ ರಾಜಕಾರಣಿಗಳು ಬೆಂಬಲ ನೀಡುತ್ತಿರುವುದರಿಂದ ಪರಿಣಾಮಕಾರಿಯಾಗಿ ಕ್ರಮಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಕೆಲವು ಶಾಸಕರು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಅಕ್ರಮ ಗಣಿಗಾರಿಕೆ ತಡೆಯದಂತೆ ಅಡ್ಡಗಾಲು ಹಾಕುತ್ತಿರುವ ಕುರಿತೂ ಗಂಭೀರ ಆರೋಪಗಳು ಕೇಳಿಬಂದಿವೆ. ಅಕ್ರಮ ಮರಳು ಅಡ್ಡೆ ಮೇಲೆ ದಾಳಿ ಮಾಡದಂತೆ ಅವಾಚ್ಯ ಶಬ್ದಗಳಿಂದ ನಿಂದಿಸುವುದು, ವಾಹನಗಳನ್ನು ಜಪ್ತಿ ಮಾಡದಂತೆ ಪ್ರಭಾವ ಬೀರುವುದು, ಇಷ್ಟಬಂದ ಅಧಿಕಾರಿಗಳನ್ನು ನೇಮಿಸಿಕೊಳ್ಳುವುದು, ಅಕ್ರಮ ಗಣಿಗಾರಿಕೆ ವಿರುದ್ಧ ಕ್ರಮ ಕೈಗೊಳ್ಳುವವರನ್ನು ಎತ್ತಂಗಡಿ ಮಾಡಿಸುವುದು ಮತ್ತು ಜೀವ ಬೆದರಿಕೆ ಹಾಕುವುದು ಸಾಮಾನ್ಯವಾಗಿದೆ ಎಂಬ ಆರೋಪಗಳು ಕೇಳಿಬಂದಿವೆ. ಪ್ರತಿ ವರ್ಷ ಸರಕಾರವು ಇಲಾಖೆಗೆ ಹೊಸ ರಾಜಸ್ವ ಗುರಿ ನಿಗದಿಪಡಿಸುತ್ತಿದೆ. ಈ ಆದಾಯ ಗುರಿ ತಲುಪುವಂತೆ ಸರಕಾರದಿಂದ ಅಧಿಕಾರಿಗಳ ಮೇಲೆ ಒತ್ತಡ ಹಾಕಲಾಗುತ್ತಿದೆ. ಆದರೆ ಪ್ರಬಲವಾಗಿ ಬೇರೂರಿಸುವ ಅಕ್ರಮ ಗಣಿಗಾರಿಕೆಯಿಂದ ನೂರಾರು ಕೋಟಿ ರು. ಆದಾಯ ನಷ್ಟವಾಗುತ್ತಿದೆ. ಈ ಬಗ್ಗೆ ಸರಕಾರಕ್ಕೆ ಗೊತ್ತಿದ್ದರೂ ಇಲಾಖೆಗೆ ಹೆಚ್ಚಿನ ಅಧಿಕಾರ ನೀಡಲು ಹಿಂದೇಟು ಹಾಕುತ್ತಿದೆ ಎಂಬುದು ಕೆಲವು ಅಧಿಕಾರಿಗಳ ಆರೋಪವಾಗಿದೆ.

ಹೇಗೆಲ್ಲಾ ಅಕ್ರಮ ನಡೆಯುತ್ತದೆ?: ಗಣಿಗಾರಿಕೆಗೆ ಅನುಮತಿ ಪಡೆಯುವ ಕಲ್ಲು ಗಣಿ ಗುತ್ತಿಗೆದಾರರು, ಸರಕಾರಿ ಜಮೀನು, ಗೋಮಾಳ ಹಾಗೂ ಪಟ್ಟಾ ಜಮೀನು ಒತ್ತುವರಿ ಮಾಡಿಕೊಂಡು ಅಕ್ರಮವಾಗಿ ಗಣಿಗಾರಿಕೆಯಲ್ಲಿ ತೊಡಗುತ್ತಾರೆ. ವರ್ಷದಲ್ಲಿ ಇಂತಿಷ್ಟು ಪ್ರಮಾಣದಲ್ಲಿ ಕಲ್ಲು, ಅದಿರು, ಮರಳು ಸೇರಿ ಮುಖ್ಯ ಖನಿಜ ಮತ್ತು ಉಪ ಖನಿಜಗಳನ್ನು ತೆಗೆಯಬೇಕೆಂಬ ನಿಯಮವನ್ನು ಉಲ್ಲಂಘಿಸಿ ಗಣಿಗಾರಿಕೆ ನಡೆಸುತ್ತಿದ್ದಾರೆ. ಸರಕಾರಕ್ಕೆ ರಾಯಲ್ಟಿ ಪಾವತಿಸದೆ ಲಕ್ಷಾಂತರ ರು. ವಂಚಿಸುತ್ತಿದ್ದಾರೆ. ಬೆಂಗಳೂರು ನಗರ, ಬೆಂ.ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ದಾವಣಗೆರೆ, ಕಲಬುರಗಿ, ಯಾದಗಿರಿ, ಬಾಗಲಕೋಟೆ, ಉಡುಪಿ, ಕಾರವಾರ, ಹಾಸನ, ಕೊಪ್ಪಳ, ಶಿವಮೊಗ್ಗ, ದಕ್ಷಿಣ ಕನ್ನಡ, ಬಳ್ಳಾರಿ, ಹಾವೇರಿ, ಗದಗ, ಧಾರವಾಡ, ವಿಜಯಪುರ ಸೇರಿ ರಾಜ್ಯದ ಇತರೆ ಜಿಲ್ಲೆಗಳಲ್ಲೂ ಅತಿ ಹೆಚ್ಚು ಅಕ್ರಮ ಮರಳು, ಕಲ್ಲು ಗಣಿಗಾರಿಕೆ ನಡೆಯುತ್ತಿವೆ.

ಅಧಿಕಾರಿಗಳು ಎದುರಿಸುವ ಸವಾಲುಗಳು

- ಕಾನೂನು ಪ್ರಕಾರ ಗಣಿಗಾರಿಕೆಗೆ ಕೆಲ ಜನಪ್ರತಿನಿಧಿಗಳ ಅಡ್ಡಿ
- ಕೆಲವೊಮ್ಮೆ ಸಹಕಾರ ನೀಡದ ಪೊಲೀಸ್ ಅಧಿಕಾರಿಗಳು
- ಜಪ್ತಿ ಮಾಡುವ ವಾಹನಗಳನ್ನು ಪೊಲೀಸ್ ಠಾಣೆಯಲ್ಲಿ ನಿಲ್ಲಿಸಲು ಹರಸಾಹಸ
- ಅಧಿಕಾರಿಗಳ ಮೇಲೆ ಅನಗತ್ಯ ಕೇಸ್ ದಾಖಲು
- ಕೆಲವೊಮ್ಮೆ ಪ್ರಭಾವ ಬಳಸಿ ಸಸ್ಪೆಂಡ್ ಮಾಡಿಸುವುದು
- ಸಂಘಟನೆ ಹೆಸರಿನಲ್ಲಿ ಅನಗತ್ಯ ಕಿರುಕುಳ
- ಸರಕಾರಕ್ಕೆ ಸುಳ್ಳು ದೂರು ಕೊಡಿಸುವುದು
- ಲಾರಿ ನಿಲ್ಲಿಸುವ ವೇಳೆ ಸಿಬ್ಬಂದಿ ಮೇಲೆ ಹತ್ತಿಸಲು ಯತ್ನ
- ಮೈನಿಂಗ್ ಪ್ರದೇಶಗಳಲ್ಲಿ ನೆಟ್‌ವರ್ಕ್ ಸಮಸ್ಯೆ
- ದಂಡ ಹಾಕದಂತೆ ಜೀವ ಬೆದರಿಕೆ

ಏನೇನು ಸುಧಾರಣೆ ಆಗಬೇಕಿದೆ?

- ಇಲಾಖೆ ಅಧೀನದಲ್ಲಿ ಪ್ರತಿ ಜಿಲ್ಲೆಗೆ ಕನಿಷ್ಠ 4-5 ಪೊಲೀಸ್ ಸಿಬ್ಬಂದಿ ನೇಮಕ
- ಪರಿಣಾಮಕಾರಿಯಾಗಿ ಕಣ್ಗಾವಲು ತಂಡ ನಿಯೋಜನೆ
- ರಾಜಸ್ವ ಸಂಗ್ರಹಣೆ ತಕ್ಕಂತೆ ಸಿಬ್ಬಂದಿ ನೇಮಕ
- ದಾಳಿಗೆ ತೆರಳುವ ಇಲಾಖಾ ವಾಹನಗಳಿಗೆ ಸೈರನ್ ಅಳವಡಿಕೆ
- ಕಂದಾಯ, ಅರಣ್ಯ ಇಲಾಖೆ ಮಾದರಿಯಂತೆ ಇಲಾಖೆಯಲ್ಲಿ ಪ್ರತ್ಯೇಕ ಕೋರ್ಟ್
- ಅಧಿಕಾರಿಗಳಿಗೆ ಜಪ್ತಿ ಅಧಿಕಾರ ಹೆಚ್ಚಿಸುವುದು
- ಟಾಸ್ಕ್‌ಫೋರ್ಸ್ ಬದಲು ಹೆಚ್ಚಿನ ಸಿಬ್ಬಂದಿ ನೀಡುವಿಕೆ
- ವಾಕಿಟಾಕಿ, ವೈಜ್ಞಾನಿಕ ಉಪಕರಣಗಳ ನೀಡುವಿಕೆ
- ಜಡ್ಡುಗಟ್ಟಿದ ವ್ಯವಸ್ಥೆ ಸರಿಪಡಿಸುವಿಕೆ
- ಕಾನೂನುಬದ್ಧ ಕ್ರಮಕ್ಕೆ ಪರಿಸರಸ್ನೇಹಿ ವ್ಯವಸ್ಥೆ

ಎರಡು ಹಾದಿಯಲ್ಲಿ ಮುನ್ನಡೆದರೆ ಕಷ್ಟ

← ಮೊದಲಪುಟದಿಂದ

ಕಾಂಗ್ರೆಸ್‌ನಲ್ಲಿ ಸತತ ಒಳ್ಳೆಯ ಕೆಲಸ ಮಾಡಿದವರಿಗೆ ಪ್ರೋತ್ಸಾಹ ಸಿಕ್ಕೇ ಸಿಗುತ್ತದೆ. ಒಳ್ಳೆಯ ಕೆಲಸ ಮಾಡಿದ್ದಕ್ಕೆ ಪ್ರೋತ್ಸಾಹ ನೀಡುತ್ತಿದ್ದೇವೆ. ಸಿಎಂ ಸಿದ್ದರಾಮಯ್ಯ ಒಳ್ಳೆಯ ಬಜೆಟ್ ಮಂಡಿಸಿದ್ದಾರೆ. ದೇಶದಲ್ಲೇ ಹಣಕಾಸು ಸಚಿವರಾಗಿ 16 ಬಾರಿ ಬಜೆಟ್ ಮಂಡಿಸಿದವರು ಯಾರಾದರೂ ಇದ್ದಾರೆಂದರೆ ಅದು ಸಿದ್ದರಾಮಯ್ಯ ಮಾತ್ರ. ಅದೇ ರೀತಿ ಡಿಸಿಎಂ ಆಗಿ ಡಿ.ಕೆ.ಶಿವಕುಮಾರ್ ಸಹ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ಅವರು ವ್ಯಕ್ತಪಡಿಸಿದರು.

ಹನ್ನೊಂದು ವರ್ಷದಲ್ಲಿ ಹನ್ನೊಂದು ಸುಳ್ಳು: ಪ್ರಧಾನಿ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ಖರ್ಗೆ, ಹನ್ನೊಂದು ವರ್ಷದಲ್ಲಿ ಪ್ರಧಾನಿ ನರೇಂದ್ರ ಮೋದಿ ಹನ್ನೊಂದು ದೊಡ್ಡ ಸುಳ್ಳುಗಳನ್ನು ಹೇಳಿದ್ದಾರೆಂದು ಟೀಕಿಸಿದರು. ವಿದೇಶದಲ್ಲಿ ಹಣ ಇಟ್ಟಿದ್ದನ್ನು ದೇಶಕ್ಕೆ ತಂದು 15 ಲಕ್ಷ ರು. ಹಾಕುತ್ತೇನೆಂದು, ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇನೆಂದು, ತೈಲ ಇಳಿಕೆ ಮಾಡುತ್ತೇನೆಂದು ಹೇಳಿ ದರ ಇಳಿಕೆ ಮಾಡದೆ ಇರುವುದು, 2022ರಲ್ಲೇ ಗಂಗಾ ನದಿ ಪೂರ್ಣ ಸ್ವಚ್ಛಗೊಳಿಸುವುದಾಗಿ, ಮೇಕ್ ಇನ್ ಇಂಡಿಯಾ ಮೂಲಕ 10 ಕೋಟಿ ಜನರಿಗೆ ಉದ್ಯೋಗ ಕಲ್ಪಿಸದಿರುವುದು, 2022ರಲ್ಲೇ ಎಲ್ಲ ಭಾರತೀಯರಿಗೆ ಪಕ್ಕಾ ಮನೆ ಕಲ್ಪಿಸಲಾಗುವುದು ಎಂದು ಹೇಳಿ ಮಾತಿಗೆ ತಪ್ಪಿರುವುದು, ರೈತರ ಆದಾಯ ದ್ವಿಗುಣಗೊಳಿಸದೆ ಇರುವುದು, ನೋಟ್ ಬ್ಯಾನ್‌ನಿಂದ ಯಾವುದೇ ಸುಧಾರಣೆಯಾಗದಿರುವುದು, ಗುಜರಾತ್‌ನ ಅಹಮದಾಬಾದ್ ಹಾಗೂ ಮಹಾರಾಷ್ಟ್ರದ ಮುಂಬೈ ನಡುವೆ 2000ಕ್ಕೆ ಬುಲೈಟ್ ಟ್ರೇನ್ ಶುರುವಾಗುವುದು ಎಂದು ಹೇಳಿರುವುದು, ಪಿಎಂ ಕಿಸಾನ್‌ದಿಂದ ಸುಧಾರಣೆ ಕಾಣದಿರುವುದು, ಬ್ಯಾಂಕ್‌ನಿಂದ ಸಾಲ ಪಡೆದು ಹೊರಗಡೆ ಓಡಿ ಹೋದವರನ್ನು ಹಿಡಿದುಕೊಂಡು ತಂದು ಜೈಲಿಗೆ ಹಾಕುತ್ತೇನೆ ಎಂದು ಪಿಎಂ ಹೇಳಿದ್ದರು. ಹೀಗೆ ಸುಳ್ಳುಗಳನ್ನು ದೇಶದ ಜನತೆಗೆ ಮೋದಿ ಹೇಳಿದ್ದಾರೆಂದು ಖರ್ಗೆ ಟೀಕಿಸಿದರು.

ಪ್ರವಾಸಿಗರ ಮೇಲೆ ಹಲ್ಲೆ ಪ್ರಕರಣಕ್ಕೆ ಟ್ವಿಸ್ಟ್

← ಮೊದಲಪುಟದಿಂದ

ಏನಿದು ಘಟನೆ?: ಗಂಗಾವತಿ ತಾಲೂಕಿನ ಸಾಣಾಪೂರ ಗ್ರಾಮದ ಸಮೀಪದ ತುಂಗಭದ್ರಾ ಎಡದಂಡೆ ಕಾಲುವೆ ಬಳಿ ಅಮೆರಿಕ ಪ್ರಜೆ ಡ್ಯಾನಿಯಲ್, ಇಸ್ರೇಲ್‌ನ ಮಹಿಳಾ ಪ್ರವಾಸಿ, ಮಹಾರಾಷ್ಟ್ರದ ನಾಸಿಕ್‌ನ ಪಂಕಜ್ ಪಟೇಲ್ ಹಾಗೂ ಒಡಿಶಾದ ಬಿಬಾಶ್ ಎಂಬುವರನ್ನು ರೆಸಾರ್ಟ್ ಒಡತಿ ಗುರುವಾರ ರಾತ್ರಿ ವಾಯುವಿಹಾರಕ್ಕೆ ಕರೆದುಕೊಂಡು ಹೋಗಿದ್ದರು. ರಾತ್ರಿ ಸುಮರು 11.30ರ ವೇಳೆಗೆ ಪ್ರವಾಸಿಗರು ಗಿಟಾರ್ ನುಡಿಸಿಕೊಂಡು ಕಾಲುವೆ ಮೇಲೆ ಕುಳಿತಿದ್ದಾಗ, ಬೈಕ್‌ನಲ್ಲಿ ಬಂದಿದ್ದ ಮೂವರು ಯುವಕರು ಪ್ರವಾಸಿಗರಿಂದ ಹಣದ ಬ್ಯಾಗ್ ಮತ್ತು ಮೊಬೈಲ್ ಕಿತ್ತುಕೊಂಡಿದ್ದಾರೆ. ನಂತರ ರೆಸಾರ್ಟ್ ಮಾಲಕಿ ಮತ್ತು ಇಸ್ರೇಲ್ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ್ದಾರೆ. ಅತ್ಯಾಚಾರ ತಡೆಯಲು ಬಂದಿದ್ದ ಅಮೆರಿಕದ ಡ್ಯಾನಿಯಲ್, ಮಹಾರಾಷ್ಟ್ರ ಮೂಲದ ಪಂಕಜ್ ಪಟೇಲ್ ಹಾಗೂ ಒರಿಸ್ಸಾ ಮೂಲದ ಬಿಬಾಶ್‌ನನ್ನು ಕಾಲುವೆಗೆ ತಳ್ಳಿದ್ದಾರೆ. ಕಾಲುವೆಯಿಂದ ಮೇಲೆ ಬರಲು ಯತ್ನಿಸಿದ ಬಿಬಾಶ್ ಮೇಲೆ ಆರೋಪಿಗಳು ಕಲ್ಲು ಎತ್ತಿಹಾಕಿದ್ದು, ಈಜು ಗೊತ್ತಿದ್ದರೂ ಮೇಲೆ ಬರಲು ಸಾಧ್ಯವಾಗದೇ ಶನಿವಾರ ಶವವಾಗಿ ಪತ್ತೆ ಆಗಿದ್ದಾನೆ. ಅಮೆರಿಕದ ಡ್ಯಾನಿಯಲ್, ಪಂಕಜ್ ಅವರನ್ನು ರಕ್ಷಣೆ ಮಾಡಿದ್ದಲ್ಲದೆ ತಾನೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ನಿಡಗುಂದಿ, ಜಿ:ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com
ಸಂ:ಕೃಭಾಜನಿನಿ/ಆಆವಿ/ಡಿ.ಬಿ/ಟೆಂಡರ್/2024–25/3794 ದಿನಾಂಕ:06.03.2025

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ – 2 ನೇ ಕರೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ **"Operation of Maintenance of (AME) of Herkal LIS(North & South) headwork for the year 2024-25 (Material Man Power)." (KBJNL/2024-25/HL/WORK_INDENT1185/CALL-2)" Rs. 84.69 Lakhs** ಶೇಕಡಾವಾರು ದ್ವಿ–ಲಕೋಟೆಗಳಲ್ಲಿ ಕೆ.ಟಿ.ಪಿ.ಟಿ. ನಿಯಮಗಳನ್ವಯ, ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್ಡಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.
1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವೀಕರಿಸುವ ಕೊನೆಯ **ದಿನಾಂಕ:07.03.2025 ರಿಂದ 15.03.2025 ಸಾಯಂಕಾಲ 5.00 ಘಂಟೆಯವರೆಗೆ.**
2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:17.03.2025 ಮುಂಜಾನೆ 11.00 ಘಂಟೆಗೆ.**
3) ಆರ್ಥಿಕ ಬಿಡ್ ತೆರೆಯುವ **ದಿನಾಂಕ:20.03.2025 ಮುಂಜಾನೆ 11.00 ಘಂಟೆಗೆ.**
ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. https://kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/760/ಕೆಎಸ್‌ಎಂಸಿಎ/2024–25

ಸುಮಾರು 10 ದಿನಗಳ ಬಳಿಕ ಉಡುಪಿಯಲ್ಲಿ ಪತ್ತೆ

ನಾಪತ್ತೆಯಾಗಿದ್ದ ವಿದ್ಯಾರ್ಥಿ ಪತ್ತೆ

ಬಂಟ್ವಾಳ: ನಿಗೂಢ ರೀತಿಯಲ್ಲಿ ನಾಪತ್ತೆಯಾದ ಫರಂಗಿಪೇಟೆಯ

ಕಿದೆಬೆಟ್ಟು ವಿದ್ಯಾರ್ಥಿ ದಿಗಂತ್ ಸುಮಾರು 10 ದಿನದ ಬಳಿಕ ಶನಿವಾರ ಉಡುಪಿಯಲ್ಲಿ ಪತ್ತೆಯಾಗಿದ್ದಾನೆ ಎಂದು ತಿಳಿದು ಬಂದಿದೆ. ಪೊಲೀಸರು ಆತನನ್ನು ಬಂಟ್ವಾಳಕ್ಕೆ ಕರೆ ತರುತ್ತಿದ್ದಾರೆ ಎನ್ನಲಾಗಿದೆ. ರಾಜ್ಯ ಸರಕಾರ ಹಾಗೂ ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿ, 40ಕ್ಕೂ ಅಧಿಕ ಪೊಲೀಸರ ತಂಡ ಹುಡುಕಾಟ ನಡೆಸಿದ್ದರು. ಡಿಎಆರ್ ತಂಡದ 30 ಪೊಲೀಸರು, ರೈಲ್ವೆ ಪೊಲೀಸ್, ಅಗ್ನಿಶಾಮಕ ದಳ, ಎಫ್‌ಎಸ್‌ಎಲ್, ಡಾಗ್ ಸ್ಕ್ವಾಡ್, ಡ್ರೋನ್ ಕ್ಯಾಮೆರಾಗಳನ್ನು ಬಳಿಸಿ ಹುಡುಕಾಟ ನಡೆಸಿದ್ದರು. ಈತ ಮಂಗಳೂರಿನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದ. ಫೆ.25ರ ಮಂಗಳವಾರ ಸಂಜೆ ದೇವಸ್ಥಾನಕ್ಕೆ ಹೋಗುವುದಾಗಿ ಮನೆಯಲ್ಲಿ ತಿಳಿಸಿದ್ದು, ಆದರೆ ದೇವಸ್ಥಾನಕ್ಕೆ ಹೋಗದೆ, ಮನೆಗೂ ಮರಳದೆ ನಾಪತ್ತೆಯಾಗಿದ್ದನು. ಆತನ ಚಪ್ಪಲಿಗಳು ಹಾಗೂ ಮೊಬೈಲ್ ಫೋನ್ ಮನೆಯ ಸಮೀಪದ ರೈಲ್ವೇ ಹಳಿಯಲ್ಲಿ ಪತ್ತೆಯಾಗಿತ್ತು.

ದಿಗಂತ್ ಸಿಕ್ಕಿದ್ದು ಹೇಗೆ?

ಕಳೆದ 12 ದಿನಗಳಿಂದ ನಾಪತ್ತೆಯಾಗಿದ್ದ ದಿಗಂತ್, ಶನಿವಾರ ತಾಯಿಗೆ ಕರೆ ಮಾಡಿ ತಾನು ಉಡುಪಿಯಲ್ಲಿರುವ ವಿಚಾರ ತಿಳಿಸಿದ್ದಾನೆ. ಉಡುಪಿಯ ಡಿಮಾರ್ಟ್‌ನಲ್ಲಿದ್ದೇನೆಂದು ಫೋನ್ ಕಾಲ್ ಮಾಡಿ ತಿಳಿಸಿದ್ದಾನೆ. ಉಡುಪಿಯ ಡಿಮಾರ್ಟ್ ಸಿಬ್ಬಂದಿಯ ಮೊಬೈಲ್ ನಿಂದ ತಾಯಿಯ ಮೊಬೈಲ್ ಗೆ ದಿಗಂತ್ ಕರೆ ಮಾಡಿದ್ದ. ನನಗೇನು ತೊಂದರೆಯಾಗಿಲ್ಲ ಎಂದು ಹೇಳಿದ್ದ. ನನ್ನನ್ನು ಹೊತ್ತುಕೊಂಡು ಹೋಗಿದ್ದಾರೆ, ನಾನೇನು ನಾಪತ್ತೆಯಾಗುವ ಹುಡುಗ ಅಲ್ಲ. ಎಲ್ಲವನ್ನೂ ನಾನು ಬಂದು ಹೇಳುತ್ತೇನೆ ಎಂದು ದಿಗಂತ್ ತಂದೆ ತಾಯಿ ಬಳಿ ಹೇಳಿದ್ದಾನೆ.

ಸಾರಿಗೆ ಸಿಬ್ಬಂದಿ ಆತ್ಮಹತ್ಯೆ

ಬೆಳಗಾವಿ: ಕೆಲಸದ ಸಮಯ ಬದಲಿಸದಿದ್ದುದ್ದಕ್ಕೆ ಬೇಸತ್ತ ಕೆಎಸ್

ಆರ್‌ಟಿಸಿ ಸಿಬ್ಬಂದಿಯೊಬ್ಬರು ಬೆಳಗಾವಿಯ ಡಿಪೋ 1 ರಲ್ಲಿ ಅಳ್ನಾವರ ಬಸ್‌ನಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಶುಕ್ರವಾರ ತಡರಾತ್ರಿ ನಡೆದಿದೆ. ಕೇಶವ ಕಮಡೊಳ್ಳಿ (57) ಆತ್ಮಹತ್ಯೆ ಮಾಡಿಕೊಂಡ ಮೆಕ್ಯಾನಿಕ್. ಬೆಳಗಾವಿಯ ಹಳೇ ಗಾಂಧಿನಗರದ ಕೇಶವ, ಬಸ್ ಸ್ವಚ್ಛತಾ ವಿಭಾಗದಲ್ಲಿ ಪಂಕ್ಚರ್ ತೆಗೆಯುವ ಕೆಲಸ ಮಾಡುತ್ತಿದ್ದ. ಬೆನ್ನು ನೋವಿದ್ದರೂ ಪಂಕ್ಚರ್ ತೆಗೆಯುವ ಕಾರ್ಯಕ್ಕೆ ನಿಯೋಜಿಸಿದ್ದರಿಂದ ಡಿಪೋ ಮ್ಯಾನೇಜರ್ ಲಿಂಗರಾಜ ಲಾಠಿ, ಸಹಾಯಕ ಕಾರ್ಯ ಅಧೀಕ್ಷಕ ಅನಿಲ್ ಬಾಂದೇಕರ್‌ಗೆ ಕೇಶವ ಕುಟುಂಬದವರು ಮನವಿ ಮಾಡಿದ್ದರು. ಇಷ್ಟಾದರೂ ಕೆಲಸ ಬದಲಿಸದ ಕಾರಣ ಒತ್ತಡ ತಡೆದುಕೊಳ್ಳಲಾಗದೆ ಕೇಶವ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವ ಮಾತು ಕೇಳಿಬಂದಿದೆ. ಅಧಿಕಾರಿಗಳ ವಿರುದ್ಧ ಮೃತ ಕೇಶವ ಕುಟುಂಬಸ್ಥರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸ್ಥಳಕ್ಕೆ ಮಾರ್ಕೆಟ್ ಠಾಣೆ ಪೊಲೀಸರ ಭೇಟಿ ಪರಿಶೀಲಿಸಿದ್ದು, ತನಿಖೆ ಕೈಗೊಂಡಿದ್ದಾರೆ.

2 ಲಸಿಕೆ ಹಾಕಿಸಿಕೊಂಡಿದ್ದ ಮಗು ಸಾವು

ಶಿರಾ: ತಾಲೂಕಿನ ಮಾಗೋಡು ಗ್ರಾಮದಲ್ಲಿ ರೋಟ್ - 2 ಲಸಿಕೆ ಹಾಕಿಸಿಕೊಂಡಿದ್ದ ಮಗು ಮೃತಪಟ್ಟಿದ್ದು ಮಗು ಸಾವಿಗೆ ಲಸಿಕೆಯೇ ಕಾರಣ ಎಂದು ಪೋಷಕರು ಆರೋಪಿಸಿ ದೂರು ದಾಖಲಿಸಿದ್ದಾರೆ.

ಗ್ರಾಮದ ಕೀರ್ತನ ಹಾಗೂ ಲಕ್ಷ್ಮೀಕಾಂತ್ ದಂಪತಿಗಳ ಐದು ತಿಂಗಳ ಮಗುವಿಗೆ ಅದೇ ಗ್ರಾಮದ ಎಎನ್‌ಎಂ ಮುದ್ದಮ್ಮ ಎಂಬುವವರು ಮಾ.6 ರಂದು ಬೆಳಗ್ಗೆ 11.30ರ ಸುಮಾರಿಗೆ ರೋಟ್ - 2 ಲಸಿಕೆ ಹಾಕಿದ್ದರು. ಲಸಿಕೆಯ ಬಳಿಕ ಮಲಗಿದ ಮಗು ಸಂಜೆ 3.30ರ ಹೊತ್ತಿಗೆ ಬೇಧಿಯಿಂದ ಅಸ್ವಸ್ಥಗೊಂಡಿದೆ.

ಕೂಡಲೇ ಪೋಷಕರು ಮಗುವನ್ನು ಶಿರಾ ಸರಕಾರಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಈ ವೇಳೆ ವೈದ್ಯರು ತುಮಕೂರು ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಸೂಚಿಸಿದ್ದಾರೆ. ಬಳಿಕ ಅಲ್ಲಿಂದ ಶ್ರೀದೇವಿ ಆಸ್ಪತ್ರೆಗೆ ಕೊಂಡೊಯ್ಯಲಾಗಿದ್ದು ಮಗುವನ್ನು ಪರಿಶೀಲಿಸಿದ ವೈದ್ಯರು ಮಗು ಮೃತಪಟ್ಟು ಒಂದು ಗಂಟೆಯಾಗಿದೆ ಎಂದು ತಿಳಿಸಿದ್ದಾರೆ. ಮಗು ಮೃತಪಡಲು ಲಸಿಕೆಯೇ ಕಾರಣ ಎಂದು ಪೋಷಕರು ಆಕ್ರೋಶ ಹೊರಹಾಕಿದ್ದು, ಈ ಸಂಬಂಧ ಶಿರಾ ನಗರ ಪೊಲೀಸ್ ಠಾಣೆ ದೂರು ದಾಖಲಿಸಿದ್ದಾರೆ.

ಅಪಹರಣ: ಯುವಕನ ಮನೆ ಮೇಲೆ ದಾಳಿ

ಬೆಳಗಾವಿ: ನರ್ಸಿಂಗ್ ಓದುತ್ತಿದ್ದ ಯುವತಿ ಕಿಡ್ನ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅನ್ಯ ಕೋಮಿನ

ಯುವಕನ ಮೇಲೆ ಕಲ್ಲು ತೂರಿ ಅಟ್ಟಹಾಸ ಮೆರೆದ ಘಟನೆ ಬೆಳಗಾವಿ ತಾಲೂಕಿನ ಸಂತಿ ಬಸ್ತವಾಡ ಗ್ರಾಮದಲ್ಲಿ ನಡೆದಿದೆ. ಇದೇ ಗ್ರಾಮದ ರಾಧಿಕಾ ಮುಚ್ಚಂಡಿ ಎಂಬ ಯುವತಿ ನಾಪತ್ತೆಯಾಗಿದ್ದಳು. ಸದ್ರುದ್ದಿನ್ ಬೇಪಾರಿ ಎಂಬಾತ ಕಿಡ್ನ್ಯಾಪ್ ಮಾಡಿದ್ದಾನೆಂದು ಆತನ ಮೇಲೆ ದಾಳಿ ನಡೆಸಿದ್ದಾರೆ. ಸದ್ರುದ್ದಿನ್ ಮನೆ ಮೇಲೆ ಕಲ್ಲು ತೂರಿ ಯುವತಿ ಕುಟುಂಬಸ್ಥರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹತ್ತಕ್ಕೂ ಅಧಿಕ ಯುವಕರ ಗ್ಯಾಂಗ್ ನಿಂದ ಕಲ್ಲು ತೂರಿ ಮನೆಯ ಬಾಗಿಲು, ಕಿಟಕಿ ಒಡೆದು ಒಳನುಗ್ಗಿ ಗಲಾಟೆ ಮಾಡಿದ್ದಾರೆ. ಮನೆಯಲ್ಲಿದ್ದ ಪಾತ್ರೆ, ಸಾಮಗ್ರಿಗಳನ್ನು ಒಡೆದು ಯುವಕನ ಮನೆ ಬಾಗಿಲು, ಕಿಟಕಿ, ಹಿತ್ತಲಿನ ಬಾಗಿಲು, ಪಾತ್ರೆ ಹಾನಿ ಮಾಡಿದ ಯುವತಿ ಕುಟುಂಬಸ್ಥರು. ಗಲಾಟೆ ಮಾಡಿ ಊರು ಬಿಟ್ಟು ಪರಾರಿಯಾದ ಯುವತಿ ಸಂಬಂಧಿಕರು. ಫೆ.19ರಂದು ರೇಲ್ವೆ ನಿಲ್ದಾಣದಿಂದ ಕಿಡ್ನ್ಯಾಪ್ ಆಗಿದ್ದ ಯುವತಿ. ಯುವಕ ಸದ್ರುದ್ದಿನ್ ಬೇಪಾರಿ ಮತ್ತು ಕುಟುಂಬಸ್ಥರಿಂದ ಯುವತಿ ಕಿಡ್ನ್ಯಾಪ್ ಆರೋಪ ಮಾಡಿದ್ದಾರೆ.

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ರಾಜ್ಯದ ಕಾಂಗ್ರೆಸ್ ಸರಕಾರಕ್ಕೆ ನಾಚಿಕೆಯಾಗಬೇಕು. ಹಂಪಿಯಲ್ಲಿ ಇಬ್ಬರು ಮಹಿಳೆಯರ ಮೇಲೆ ಅತ್ಯಾಚಾರ ನಡೆದಿದೆ.ಅವರ ಪುರುಷ ಸ್ನೇಹಿತರ ಮೇಲೆ ಹಲ್ಲೆ ನಡೆದಿದ್ದು, ಒಬ್ಬರು ಮೃತಪಟ್ಟಿದ್ದಾರೆ. ಕಾನೂನು ಮತ್ತು ಸುವ್ಯವಸ್ಥೆ ಎಲ್ಲಿದೆ..? ವಿಜಯನಗರ ಜಿಲ್ಲೆಯ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಅವರೇ ವಕ್ಫ್ ಹಗರಣದ ಮೂಲಕ ರೈತರ ಭೂಮಿ ಲಪಟಾಯಿಸುವುದನ್ನು ಬಿಟ್ಟು ಈಗಲಾದರೂ ಎಚ್ಚೆತ್ತುಕೊಳ್ಳಿ.

ಭಾರತೀಯ, ಬೆಂಗಳೂರು

ಅಂತಾರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಮರ್ಯಾದೆ ಹಾಳಾಗಿದೆ. ಕಾಂಗ್ರೆಸ್ ಸರಕಾರದಲ್ಲಿ ಕಾನೂನು-ಸುವ್ಯವಸ್ಥೆ ಕುಸಿದಿದೆ. ಮಹಿಳೆಯರು, ಮಕ್ಕಳು, ಪ್ರಾಣಿಗಳು ಈಗ ಪ್ರವಾಸಿಗರೂ ಸುರಕ್ಷಿತರಲ್ಲ ಎಂಬುದು ಸಾಬೀತಾಗಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ



- **ಸ್ಥಳ : ಬೆಂಗಳೂರು**

ಸಮಸ್ಯೆಯೇನು..?

- ಬೆಂಗಳೂರು ಹೊರವಲಯದ ಬೆಳ್ಳಂದೂರು ಪೆಟ್ರೋಲ್ ಬಸ್ ನಿಲ್ದಾಣದ ರಸ್ತೆಗಳು ಹಾಳಾಗಿರುವುದು.
- **ಪರಿಹಾರ:** ಬೆಂಗಳೂರು ಹೊರವಲಯದ ಬೆಳ್ಳಂದೂರು ಪೆಟ್ರೋಲ್ ಬಸ್ ನಿಲ್ದಾಣದ ರಸ್ತೆಗಳಿಗೆ ಹೊಸದಾಗಿ ಡಾಂಬರು ಹಾಕಲಾಗುತ್ತಿದ್ದು, ಸಾರ್ವಜನಿಕರಿಗೆ, ವಾಹನ ಸವಾರರಿಗೆ ಅನುಕೂಲ ಮಾಡಿಕೊಡಲಾಗಿದೆ.

ಸಮಾಚಾರ ಸಣ್ಣದಲ್ಲ

ಅಪ್ರಾಪ್ತ ಪ್ರೇಮಿಗಳು ನೇಣಿಗೆ ಶರಣು

ಕಲಬುರಗಿ: ಪ್ರೇಮಿಗಳಿಬ್ಬರು ಒಂದೇ ಹಗ್ಗಕ್ಕೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಹೃದಯವಿದ್ರಾವಕ ಘಟನೆ ಯಡ್ರಾಮಿ ತಾಲೂಕಿನ ಮಳ್ಳಿ ಗ್ರಾಮದಲ್ಲಿ ನಡೆದಿದೆ. ಮಾಳಪ್ಪಾ (16) ಮತ್ತು ನಸೀಮಾ (16) ನೇಣಿಗೆ ಶರಣಾದ ಪ್ರೇಮಿಗಳು. ಮಳ್ಳಿಯಲ್ಲಿ ಎಸ್ ಎಸ್ಎಲ್‌ಸಿ ವಿದ್ಯಾಭ್ಯಾಸ ಮಾಡುತ್ತಿದ್ದ ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು. ಇದಕ್ಕೆ ಇಬ್ಬರ ಮನೆಯಲ್ಲಿ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಪೊಲೀಸ್ ಮೂಲಗಳು ತಿಳಿಸಿವೆ. ಯಡ್ರಾಮಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಲ್ಲರಿಗೂ ಪೂರಕವಾದ ಬಜೆಟ್: ಎಂಬಿಪಿ

ವಿಜಯಪುರ: 2025-26ನೇ ಸಾಲಿನ ಬಜೆಟ್‌ನಲ್ಲಿ ಎಲ್ಲ ಸಮುದಾಯಗಳಿಗೆ ಪೂರಕವಾದ ಬಜೆಟ್ ನೀಡಿ ದ್ದೇವೆ. ಹಿಂದುಳಿದವರು, ದಲಿತರಿಗೆ ಕೊಟ್ಟಿದ್ದೇವೆ. ಮುಸ್ಲಿಂ

ಬಜೆಟ್ ಎನ್ನುವವರ ಕಣ್ಣು ಹಳದಿ ಯಾಗಿದೆ ಎಂದು ಸಚಿವ ಎಂ.ಬಿ ಪಾಟೀಲ್ ಕಿಡಿಕಾರಿದ್ದಾರೆ. ಸುದ್ದಿಗಾರ ರೊಂದಿಗೆ ಮಾತನಾಡಿ, ನಿಮಗೆ ಮುಸ್ಲಿ ಮರಿಗೆ ನೀಡಿದ್ದು ಮಾತ್ರ ಏಕೆ ಕಾಣು ತ್ತದೆ? ಬಿಜೆಪಿ ಯವರು ನಾಲ್ಕು ವರ್ಷ ಏನು ಮಾಡಿದ್ದಾರೆ ಎನ್ನು ವುದು ಎಲ್ಲರಿಗೂ ಗೊತ್ತಿದೆ. ಪ್ರಿಯಾಂಕ್ ಖರ್ಗೆ ಸರಿ ಯಾಗಿ ಹೇಳಿದ್ದಾರೆ ಎಂದು ತರಾಟೆಗೆ ತೆಗೆದು ಕೊಂಡರು. ಹಲಾಲ್ ಬಜೆಟ್ ಎಂಬ ಯತ್ನಾಳ್ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಅವರೇ ಹಲಾಲ್ ತಿನ್ನುತ್ತಿರುತ್ತಾರೆ ಎಂದು ತಿರುಗೇಟು ನೀಡಿದರು

ಮುಂದಿನ ಬಜೆಟ್ ಸಿಎಂ ಮಂಡನೆ

ಹಾವೇರಿ: ಸಿಎಂ ಸಿದ್ದರಾಮಯ್ಯ ಅವರು ಹುದ್ದೆಯಲ್ಲಿ ಮುಂದುವರಿಯುತ್ತಾರೆ ಮತ್ತು ಮುಂದಿನ ವರ್ಷವೂ ಬಜೆಟ್ ಮಂಡಿಸುತ್ತಾರೆ ಎಂದು

ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ ಅವರ ಆಪ್ತ ರಾಜಣ್ಣ ಸಿದ್ದರಾಮಯ್ಯ ಅವರು ಮುಂದಿನ ಬಜೆಟ್ (2026-27) ಮತ್ತು ಅದರ ನಂತರದ ಬಜೆಟ್ (2027-28) ಮಂಡಿಸುತ್ತಾರೆ. ಅದರಲ್ಲಿ ಯಾವುದೇ ಸಂದೇಹವಿಲ್ಲ. ಯಾವುದೇ ಬದಲಾವಣೆಗಳಿದ್ದರೆ, ಅವು ಹೈಕಮಾಂಡ್ ನಿರ್ಧಾರದ ಮೇರೆಗೆ ನಡೆಯುತ್ತವೆ ಎಂದರು. ಸಿದ್ದರಾಮಯ್ಯ ಸಿಎಂ ಆಗಿ ಮುಂದುವರಿಯ ಬೇಕೆಂದು ನಾವೆಲ್ಲರೂ ಭರವಸೆ ವ್ಯಕ್ತಪಡಿಸಿದ್ದೇವೆ, ಆದರೆ ಅಂತಿಮವಾಗಿ ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಹೇಳಿದ್ದಾರೆ. ರಾಜಣ್ಣ ನಿರಂತರವಾಗಿ ಸಿಎಂ ಸಿದ್ದರಾಮಯ್ಯ ಪರ ಬ್ಯಾಟ್ ಬೀಸುತ್ತಲೇ ಬಂದಿದ್ದಾರೆ. ಅವರ ಬಹಿರಂಗ ಹೇಳಿಕೆಗಳಿಗೆ ಪಕ್ಷದ ನಾಯಕತ್ವ ಎಚ್ಚರಿಕೆಯನ್ನೂ ನೀಡಿತ್ತು.

ಕಲಬುರಗಿಯಲ್ಲಿ ಕಲ್ಯಾಣ ಪಥ ಯೋಜನೆಗೆ ಚಾಲನೆ | ಸರಕಾರಕ್ಕೆ ರಾಜಕೀಯ ಶಕ್ತಿ ನೀಡಿದ್ದು ಕಲ್ಯಾಣ ಕರ್ನಾಟಕ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಒತ್ತು ಕೊಡಿ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಕಲ್ಯಾಣ ಕರ್ನಾಟಕ ಪ್ರದೇಶದ 38 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 1,000 ಕೋಟಿ ರು. ವೆಚ್ಚದಲ್ಲಿ 1,166 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಲ್ಯಾಣ ಪಥ ಯೋಜನೆಯ ಚಾಲನಾ ಕಾರ್ಯಕ್ರಮವನ್ನು ಎಐಸಿಸಿ ಅಧ್ಯಕ್ಷ ಡಾ.ಮಲ್ಲಿಕಾರ್ಜುನ ಖರ್ಗೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಶರಣಪ್ರಕಾಶ್ ಪಾಟೀಲ್, ಪ್ರಿಯಾಂಕ್ ಖರ್ಗೆ, ಶರಣಬಸಪ್ಪ ದರ್ಶನಪುರ ಉದ್ಘಾಟಿಸಿದರು.

ರಾಜ್ಯ ಸರಕಾರಕ್ಕೆ ರಾಜಕೀಯ ಶಕ್ತಿ ನೀಡಿದ ನೆಲ ಕಲ್ಯಾಣ ಕರ್ನಾಟಕ. ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಪ್ರದೇಶವಾಗಿರುವ ಇಲ್ಲಿ ಅಪೌಷ್ಟಿಕತೆ ಹೆಚ್ಚು. ಹೀಗಾಗಿ ಹೆಚ್ಚಿನ ಪ್ರೊಟೀನ್ (ಅಭಿವೃದ್ಧಿ ಕೆಲಸಕ್ಕೆ ಒತ್ತು) ನೀಡುವ ಕೆಲಸವನ್ನು ಸರಕಾರ ಮಾಡಬೇಕು ಎಂದು ಎಐಸಿಸಿ ಅಧ್ಯಕ್ಷ ಡಾ.ಮಲ್ಲಿಕಾರ್ಜುನ ಖರ್ಗೆ ಕರೆ ನೀಡಿದ್ದಾರೆ.

ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಆಶ್ರಯದಲ್ಲಿ ಜೇವರ್ಗಿ ತಾಲೂಕಿನ ಕಟ್ಟಿಸಂಗಾವಿಯಲ್ಲಿ ಶನಿವಾರ ಕಲ್ಯಾಣ ಕರ್ನಾಟಕ ಪ್ರದೇಶದ 38 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 1,000 ಕೋಟಿ ರು. ವೆಚ್ಚದಲ್ಲಿ 1,166 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಲ್ಯಾಣ ಪಥ ಯೋಜನೆಯ ಚಾಲನಾ ಕಾರ್ಯಕ್ರಮ ಉದ್ಘಾಟಿಸಿ ಖರ್ಗೆ ಮಾತನಾಡಿದರು.

ಕಲ್ಯಾಣದಿಂದ ಅಭಿವೃದ್ಧಿ ಆರಂಭಿಸಿ: ಹಳೇ ಮೈಸೂರು, ಬೆಂಗಳೂರು ಪ್ರದೇಶಕ್ಕೆ ಹೋಲಿಸಿದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶ ಹಿಂದುಳಿದಿದ್ದು, ಅದಕ್ಕೆ ಇಲ್ಲಿನ ನಾಯಕರ ಇಚ್ಛಾಶಕ್ತಿ ಕೊರತೆಯೂ ಕಾರಣ. ಸರಕಾರ ಯಾವುದೇ ಯೋಜನೆಯನು ಕಲ್ಯಾಣದಿಂದ ಆರಂಭಿಸಿದಲ್ಲಿ ಅದು ಕೊಳ್ಳೆಗಾಲ ವರೆಗೂ ತಲುಪಲಿದೆ. ಇದರಿಂದ ಸರಕಾರಕ್ಕೂ ಮತ್ತು ಜನತೆಗೂ ಒಳಿತಾಗಲಿದೆ. ಮೈಸೂರಿನಿಂದ ಆರಂಭಿಸಿದರೆ ಅದು ಬೆಂಗಳೂರಿಗೆ ಬಂದು ನಿಲ್ಲುತ್ತದೆ ಎಂದು ಮಾರ್ಮಿಕವಾಗಿ ನುಡಿದರು.

ಹಿಂದೆ ಯು.ಪಿ.ಎ. ಸರಕಾರದ ಅವಧಿಯಲ್ಲಿ 371(ಜೆ) ಕಾಯ್ದೆ ಜಾರಿಗೆ ತಂದ ಪರಿಣಾಮ ಎಲ್ಲ ಅಭಿವೃದ್ಧಿ ಕೆಲಸಗಳು ಸಾಗುತ್ತಿವೆ. ಪ್ರದೇಶದ ಅಭಿವೃದ್ಧಿಗೆ ಶಿಕ್ಷಣ ಅತ್ಯಗತ್ಯ.ಹೀಗಾಗಿ ಶಿಕ್ಷಣ, ಆರೋಗ್ಯಕ್ಕೆ ಹೆಚ್ಚಿನ ಒತ್ತು ಕೊಡಿ ಎಂದು ರಾಜ್ಯ ಸರಕಾರಕ್ಕೆ ಸಲಹೆ ನೀಡಿದರು.

ಗ್ಯಾರಂಟಿಗಳಿಂದ ಮಹಿಳೆಯರಿಗೆ ಶಕ್ತಿ: ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮಾತನಾಡಿ, ರಾಜ್ಯ ಸರಕಾರ ಜಾರಿಗೊಳಿಸಿರುವ ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ ಹಾಗೂ ಯುವನಿಧಿ ಯೋಜನೆಗಳಿಂದ ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬಿದೆ. ಡಾ.ಮಲ್ಲಿಕಾರ್ಜುನ ಖರ್ಗೆ ಅವರ ಪರಿಶ್ರಮದಿಂದ ಈ ಭಾಗಕ್ಕೆ 371(ಜೆ) ಕಾಯ್ದೆ ಜಾರಿಯಾಗಿದ್ದರಿಂದ ಜಯದೇವ ಆಸ್ಪತ್ರೆ, ಕಿದ್ವಾಯಿ ಆಸ್ಪತ್ರೆ, ಸಿ.ಯು.ಕೆ. ಸ್ಥಾಪನೆ, ಇ.ಎಸ್.ಐ.ಸಿ ಹೀಗೆ ಅನೇಕ ಮೂಲಸೌಕರ್ಯಗಳು ಪ್ರದೇಶದ ಅಭಿವೃದ್ಧಿಗೆ ಹೊಸ ಭಾಷೆ ಬರೆದಿವೆ. ಜತೆಗೆ ಜನರ ಆರ್ಥಿಕ ಸ್ವಾತಂತ್ರಕ್ಕೂ ಕಾರಣವಾಗಿದೆ. ಯುದ್ಧ ಮಾಡಿ ಗೆಲ್ಲುವವನು ವೀರನಲ್ಲ, ಜನರ ಪ್ರೀತಿ ಗೆಲ್ಲಿಸುವವನೇ ನಿಜವಾದ ವೀರ. ಖರ್ಗೆ ಕಲ್ಯಾಣ ಕರ್ನಾಟಕ ಜನರ ಪ್ರೀತಿ, ವಿಶ್ವಾಸಗಳಿಸಿರುವ ಜನನಾಯಕ ಎಂದು ಬಣ್ಣಿಸಿದರು. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಚಿವರಾದ ಪ್ರಿಯಾಂಕ್ ಖರ್ಗೆ, ಡಾ. ಶರಣಪ್ರಕಾಶ ಪಾಟೀಲ, ಶರಣಬಸಪ್ಪ ದರ್ಶನಾಪುರ ಮತ್ತು ರಹೀಮ್ ಖಾನ್, ರಾಜ್ಯ ನೀತಿ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ, ಸಂಸದರಾದ ರಾಧಾಕೃಷ್ಣ ದೊಡ್ಡಮನಿ, ಸಾಗರ ಈಶ್ವರ ಖಂಡ್ರೆ, ಶಾಸಕರಾದ ಎಂ.ವೈ.ಪಾಟೀಲ, ಶರಣು ಸಲಗರ, ಚೆನ್ನಾರೆಡ್ಡಿ ಪಾಟೀಲ ತುನ್ನೂರ್, ಅಲ್ಲಮಪ್ರಭು ಪಾಟೀಲ, ರಾಜಾ ವೇಣುಗೋಪಾಲ ನಾಯಕ, ಅಶೋಕ ಮನಗೂಳಿ ಮೊದಲಾದ ಗಣ್ಯರು ಇದ್ದರು.

> ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ 5,000 ಕೋಟಿ ರು.ನೀಡುವುದಾಗಿ ಚುನಾವಣೆಗೆ ಮೊದಲು ನೀಡಿದ ಭರವಸೆಯಂತೆ 2024-25ರಲ್ಲಿ ಮತ್ತು ಶುಕ್ರವಾರ ಮಂಡಿಸಿದ ಆಯವ್ಯಯದಲ್ಲಿ ಒಟ್ಟು 5,000 ಕೋಟಿ ರು. ಅನುದಾನ ಕೊಟ್ಟಿದ್ದೇವೆ.
> -**ಡಿ.ಕೆ ಶಿವಕುಮಾರ್,** ಉಪಮುಖ್ಯಮಂತ್ರಿ

> ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಕಳೆದ 21 ತಿಂಗಳ ಅವಧಿಯಲ್ಲಿ ಕೆ.ಕೆ. ಆರ್.ಡಿ.ಬಿ. ಗೆ 13,000 ಕೋಟಿ ರು.ಅನುದಾನ ದೊರೆತಿದೆ. ವಿವಿಧ ಇಲಾಖೆಗಳ ಮೂಲಕ ಪ್ರದೇಶದಲ್ಲಿ 20,000 ಕೋಟಿ ರು. ಖರ್ಚು ಮಾಡಿದೆ. ಪ್ರದೇಶದ ಅಭಿವೃದ್ಧಿಗೆ ಸರಕಾರ ಬದ್ಧವಾಗಿದೆ.
> -**ಡಾ.ಅಜಯ್ ಧರ್ಮಸಿಂಗ್,** ಕೆಕೆಆರ್‌ಡಿಬಿ ಅಧ್ಯಕ್ಷ

ಕಲ್ಯಾಣಪಥ ಯೋಜನೆ ಎಂದರೇನು?

ಸರಕಾರದ ಮಹತ್ವಕಾಂಕ್ಷಿ ಯೋಜನೆಯಾಗಿರುವ ಕಲ್ಯಾಣ ಪಥ ಯೋಜನೆಯು ಕಲ್ಯಾಣ ಕರ್ನಾಟಕ ಭಾಗದ 38 ವಿಧಾನಸಭಾ ಕ್ಷೇತ್ರಗಳ ಗ್ರಾಮೀಣ ಪ್ರದೇಶದ ರಸ್ತೆ ನಿರ್ಮಾಣ ಮಾಡುವ ಯೋಜನೆಯಾಗಿದ್ದು, ಕಳೆದ ಬಜೆಟ್ ನಲ್ಲಿ ಘೋಷಣೆ ಮಾಡಿದಂತೆ, ಇದೀಗ ಕಲಬುರಗಿಯಲ್ಲಿ ''ಕಲ್ಯಾಣ ಪಥ'' ಯೋಜನೆಗೆ ಚಾಲನೆ ದೊರಕಿದ್ದು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕೆಕೆಆರ್‌ಡಿಬಿ ಸಹಯೋಗದೊಂದಿಗೆ 1166 ಕೀಮಿ ಉದ್ದದ ರಸ್ತೆ ಯೋಜನೆ ಶಂಕುಸ್ಥಾಪನೆ ನೆರವೇರಿಸಲಾಗಿದೆ. ಇದಕ್ಕೆ ಕೆಕೆಆರ್‌ಡಿಬಿ 1000 ಕೋಟಿ ರು.ಅನುದಾನ ನೀಡಲಿದ್ದು, ಈಗಾಗಲೇ, ಮೊದಲ ಹಂತದಲ್ಲಿ 298.50 ಕೋಟಿ ರು.ಗಳ ಅನುದಾನ ಬಿಡುಗಡೆ ಮಾಡಿದೆ.

ಪ್ರಧಾನಿ ಮೋದಿಯಿಂದ ದೇಶದ ಜನರಿಗೆ ಮೋಸ

ಪ್ರಧಾನಿ ಮೋದಿ ಅವರು ಕಳೆದ 11 ವರ್ಷದಲ್ಲಿ ದೇಶದ ಜನರಿಗೆ 11 ಬಹುದೊಡ್ಡ ಸುಳ್ಳುಗಳನ್ನು ಹೇಳಿ ಮೋಸ ಮಾಡಿದ್ದಾರೆ. ಆದರೂ, ಯುವಕರು ಮೋದಿಯನ್ನು ಏಕೆ ಬೆಂಬಲಿಸುತ್ತಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ನಾನು ಹನ್ನೊಂದು ಚುನಾವಣೆ ಗೆದ್ದಿದ್ದೇನೆ. ಆದರೆ, ಯಾವತ್ತೂ ಸುಳ್ಳು ಹೇಳಿಲ್ಲ . ಪ್ರಧಾನಿ ಮೋದಿ ದೇಶದ ಜನರಿಗೆ ಹನ್ನೊಂದು ಸುಳ್ಳುಗಳನ್ನು ಹೇಳಿದ್ದಾರೆ. ಅಷ್ಟೊಂದು ಸುಳ್ಳು ಹೇಳಿದರು, ಯುವಜನತೆ ಏಕೆ ಮೋದಿಯನ್ನು ಬೆಂಬಲಿಸುತ್ತಾರೆ ನನಗೆ ತಿಳಿದಿಲ್ಲ. ಜಾತಿ ಪ್ರೀತಿಯೋ, ಧರ್ಮದ ಅಭಿಮಾನವೋ, ಎನ್ನುವುದು ನನಗೆ ಅರ್ಥವಾಗುತ್ತಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಕಟುವಾಗಿ ಟೀಕಿಸಿದರು.

ನೀರಿನ ಸೆಳೆತಕ್ಕೆ ಸಿಲುಕಿ ಮೂವರ ಸಾವು

ಗದಗ: ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ದೇವಸ್ಥಾನಕ್ಕೆ ಭೇಟಿನೀಡಿ ನಂತರ ತುಂಗಭದ್ರಾ ನದಿಗೆ ಈಜಲು ಇಳಿದ ಮೂವರು ಸ್ನೇಹಿತರು ನೀರಿನ ಸೆಳೆತಕ್ಕೆ ಸಿಲುಕಿ ಸಾವನ್ನಪ್ಪಿದ ದಾರುಣ ಘಟನೆ ಗದಗ ಜಿಲ್ಲೆಯಲ್ಲಿ ನಡೆದಿದೆ.

ಮುಂಡರಗಿ ತಾಲೂಕಿನ ಕೊರಲಹಳ್ಳಿಯಲ್ಲಿ ಈ ಘಟನೆ ನಡೆದಿದೆ. ಮೃತರನ್ನು ಶಿರಹಟ್ಟಿಯ ಶರಣಪ್ಪ ಬಡಿಗೇರ(34), ಮಹೇಶ್(36) ಮತ್ತು ಗುರುನಾಥ್(38) ಎಂದು ಗುರುತಿಸಲಾಗಿದೆ. ನಾಲ್ವರು ಸ್ನೇಹಿತರೊಂದಿಗೆ ಶರಣಪ್ಪ ದೇವಸ್ಥಾನಕ್ಕೆ ಬಂದು ಆಂಜನೇಯನ ದರ್ಶನ ಮಾಡಿ,ನದಿಗೆ ಈಜಲು ಹೋಗಿದ್ದರು. ಈಜಲು ಬಾರದಿದ್ದರೂ ನದಿಗೆ ಇಳಿದ ಶರಣಪ್ಪನ ಸ್ನೇಹಿತ ಮಹೇಶ್, ನೀರಿನ ಸೆಳೆತಕ್ಕೆ

ಸಿಲುಕಿದ್ದ. ಆತನನ್ನು ರಕ್ಷಿಸಲು ಶರಣಪ್ಪ ಹಾಗೂ ಗುರುನಾಥ್ ಮುಂದಾದಾಗ, ನೀರಿನ ಸೆಳೆತ ಹೆಚ್ಚಾಗಿದ್ದರಿಂದ ಮೂವರೂ ನೀರು ಪಾಲಾಗಿದ್ದಾರೆ. ಸ್ಥಳಕ್ಕೆ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ದೌಡಾಯಿಸಿ, ನದಿಯಲ್ಲಿ ಮುಳುಗಿರುವವರಿಗಾಗಿ ಶೋಧ ನಡೆಸಿದ್ದಾರೆ. ವಿಜಯನಗರ ಜಿಲ್ಲೆ ಹೂವಿನಹಡಗಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಧ್ಯಕ್ಷರ ಬದಲಾವಣೆ ಸಾಧ್ಯವಿಲ್ಲ

ಚಿಕ್ಕಮಗಳೂರು: ಬಿಜೆಪಿ ರಾಜ್ಯಾಧ್ಯಕ್ಷರ ಸ್ಥಾನದಿಂದ ವಿಜಯೇಂದ್ರ ಅವರನ್ನು ಬದಲಾಯಿಸುವುದು ಯತ್ನಾಳ್ ಹಣೆಯಲ್ಲಿ ಬರೆದಿಲ್ಲ ಎಂದು ಮಾಜಿ ಸಚಿವ ಎಂ.ಪಿ ರೇಣುಕಾಚಾರ್ಯ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಯತ್ನಾಳ್ ಹೆಸರು ಹೇಳುವುದನ್ನು ನಾನು ಬಯಸುವುದಿಲ್ಲ. ಅವರು ಸವಕಲು ನಾಣ್ಯ, ಸಮುದಾಯಕ್ಕೂ ಬೇಡವಾದ ವ್ಯಕ್ತಿ ಎಂದು ವ್ಯಂಗ್ಯವಾಡಿದರು. ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷರಾಗಿ ಮುಂದುವರಿಯುವುದು ಸೂರ್ಯ-ಚಂದ್ರ ಇರುವಷ್ಟೇ ಸತ್ಯ. ಅವರ ನೇತೃತ್ವದಲ್ಲಿ ಮುಂದಿನ ಚುನಾವಣೆ ಎದುರಿಸುತ್ತೇವೆ. ರಾಜ್ಯಾಧ್ಯಕ್ಷರ ಬದಲಾವಣೆ ಮಾಡ್ತೀವಿ ಎನ್ನುತ್ತಿರುವವರ ಹಣೆಯಲ್ಲೂ ಅದು ಬರೆದಿಲ್ಲ. ತಾಕತ್ತಿದ್ದರೆ ರಾಜ್ಯಾಧ್ಯಕ್ಷ ಬದಲಾವಣೆ ಮಾಡಲಿ ಎಂದು ರೇಣುಕಾಚಾರ್ಯ ಸವಾಲು ಹಾಕಿದರು. ಬಿಜೆಪಿ ಹೈಕಮಾಂಡ್ ವಿಜಯೇಂದ್ರ ಪರವಾಗಿದೆ. ಎಲ್ಲ ಸಮುದಾಯದವರು ಅವರ ಜತೆಗಿದ್ದಾರೆ. ಯತ್ನಾಳ್ ಪರ ಯಾರಿದ್ದಾರೆ? ಸೊರಬದಲ್ಲಿ ಐದಾರು ಜನ ಇದ್ದಾರೆ. ವಿಜಯೇಂದ್ರ ಅವರು ಸಮರ್ಥ ರಾಜ್ಯಾಧ್ಯಕ್ಷ ಎಂದು ಅವರು ತಿರುಗೇಟು ಕೊಟ್ಟರು.

ಪ್ರಜ್ವಲ್ ರೇವಣ್ಣ ಇನ್ನೊಂದು ತಿಂಗಳಲ್ಲಿ ಹೊರಗೆ ಬರ್ತಾರೆ

ಹಾಸನ: ಪ್ರಜ್ವಲ್ ರೇವಣ್ಣ ಇನ್ನೊಂದು ತಿಂಗಳಲ್ಲಿ ಹೊರಗೆ ಬರ್ತಾರೆ, ಯಾರು

ತಲೆಕೆಡಿಸಿಕೊಳ್ಳೇಡಿ ಎಂದು ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಹೇಳಿದ್ದಾರೆ. ಹೊಳೆನರಸೀಪುರದ ಚಾಕೇನಹಳ್ಳಿಕಟ್ಟೆ ಗ್ರಾಮದಲ್ಲಿ ದನು ಸ್ಮರಣಾರ್ಥ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿ, ಈ ವೇಳೆ ಪ್ರಜ್ವಲ್ ರೇವಣ್ಣ ಈ ಗ್ರಾಮಕ್ಕೆ ಕೊಡುಗೆ ಕೊಟ್ಟಿದ್ದಾರೆ. ಅವರು ಶೀಘ್ರದಲ್ಲೇ ಬಿಡುಗಡೆಯಾಗುತ್ತಾರೆ. ನಾವು, ನೀವು ಎಲ್ಲರೂ ಒಟ್ಟಿಗೆ ಸ್ವಾಗತ ಮಾಡೋಣ. ಇವತ್ತಿಗೆ ಪ್ರಪಂಚ ಮುಗಿದು ಹೋಗಿಲ್ಲ. ಮುಂದಕ್ಕೂ ರಾಜಕೀಯ ಏನು ಅನ್ನೋದು ನನಗೂ ಗೊತ್ತಿದೆ ಎಂದಿದ್ದಾರೆ.

ಯುವಕರು ಎಲ್ಲರೂ ಒಂದಾಗಿ ಒಗ್ಗಟ್ಟಾಗಿ ಒಂದು ಕಡೆ ಇರಬೇಕು. ಇನ್ನೊಂದು ನಾಲ್ಕೈದು ತಿಂಗಳಲ್ಲಿ ಸರಕಾರ ಬದಲಾಗುತ್ತದೆ.

ಹಲಾಲ್ ಬಜೆಟ್ ಹೇಳಿಕೆಗೆಯಿಂದ ಅಂತರ ಕಾಯ್ದುಕೊಂಡ ಮಾಜಿ ಸಚಿವ

ಎಲ್ಲ ಸಮುದಾಯಗಳನ್ನು ಸಮಾನವಾಗಿ ನೋಡಿ

ಬಳ್ಳಾರಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ರಾಜ್ಯ ಬಜೆಟ್ ಗೆ ಬಿಜೆಪಿ ಹಲಾಲ್ ಬಜೆಟ್, ಅಲ್ಪಸಂಖ್ಯಾತರ ಬಜೆಟ್ ಎಂದು ಖಂಡಿಸಿದೆ. ಆದರೆ ಮಾಜಿ ಸಚಿವ

ಶ್ರೀರಾಮುಲು ಅವರು ಬಿಜೆಪಿಯ ಹಲಾಲ್ ಬಜೆಟ್, ಹೇಳಿಕೆಯಿಂದ ಅಂತರ ಕಾಯ್ದುಕೊಂಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಎಲ್ಲ ಸಮುದಾಯವನ್ನು ಸಮಾನವಾಗಿ ಕಾಣಬೇಕು ನೋಡಬೇಕು. ಆ ಜಾತಿ, ಈ ಧರ್ಮ ಎಂದು ನಾನು ನೋಡಲ್ಲ. ಅವರು ಕೆಟ್ಟವರು, ಇವರು ಕೆಟ್ಟವರು ಎನ್ನುತ್ತಾರೆ, ಅದು ನನಗೆ ಬೇಕಿಲ್ಲ. ಈ ರಾಜ್ಯದಲ್ಲಿ ಎಲ್ಲರೂ ಒಂದೇ. ಯಾರು ಏನೇ ಹೇಳಿದರೂ ಅದು ಅವರ ಅಭಿಪ್ರಾಯ. ಅವರಿಗೆ ಏನೋ ಮೀಸಲಿಡಲಾಗಿದೆ ಎಂದು ನಾನು ಹೇಳಲ್ಲ, ನಮಗೆ ಏನೂ ಕೊಟ್ಟಿಲ್ಲ ಎಂದು ಮಾತ್ರ ಹೇಳುತ್ತೇನೆ ಎಂದು ತಮ್ಮ ನಿಲುವು ತಿಳಿಸಿದರು.

ಶಾ ಭೇಟಿಯಾಗಿಲ್ಲ

ಶುಕ್ರವಾರ ಬೆಂಗಳೂರಿಗೆ ಆಗಮಿಸಿದ್ದ ಕೇಂದ್ರ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿಲ್ಲ. ಅನಿವಾರ್ಯ ಕಾರಣದಿಂದ ಭೇಟಿ ಅವಕಾಶ ಸಿಗಲಿಲ್ಲ. ನಾನಷ್ಟೇ ಅಲ್ಲ ರಾಜ್ಯದ ಬಹುತೇಕ ಬಿಜೆಪಿ ನಾಯಕರು ಅಮಿತ್ ಶಾ ಭೇಟಿಗೆ ಪ್ರಯತ್ನಿಸಿದ್ದರು. ಯಾರಿಗೂ ಅವಕಾಶ ಸಿಕ್ಕಿಲ್ಲ. ಸದ್ಯ ಹೈಕಮಾಂಡ್ ಜತೆಗೆ ನಿರಂತರವಾಗಿ ಸಂಪರ್ಕದಲ್ಲಿದ್ದೇನೆ. ಅಗತ್ಯಬಿದ್ದರೆ ನಾನು ದೆಹಲಿಯಲ್ಲಿ ವರಿಷ್ಠರನ್ನು ಭೇಟಿ ಮಾಡುವೆ ಎಂದು ಶ್ರೀರಾಮುಲು ಸ್ಪಷ್ಟಪಡಿಸಿದರು.

ವೈಯಕ್ತಿಕ ಲಾಭ ಬದಿಗೊತ್ತಿ: ಸಿ.ಟಿ.ರವಿ

ಬಿಜೆಪಿಯಿಂದ ಖಡಕ್ ಹೋರಾಟ ನಡೆದಿಲ್ಲ

ಬೆಳಗಾವಿ: ವಿರೋಧ ಪಕ್ಷವಾಗಿ ಬಿಜೆಪಿ ಹೋರಾಟ ನಡೆಸುತ್ತಿದೆ, ಆದರೆ ಪರಿಣಾಮಕಾರಿ ಹೋರಾಟ ನಡೆಯುತ್ತಿಲ್ಲ. ಹೀಗಾಗಿ ವೈಯಕ್ತಿಕ ಲಾಭ ಬದಿಗಿಟ್ಟು ಪ್ರಾಮಾಣಿಕ ಹೋರಾಟ ಮಾಡಬೇಕಾಗಿದೆ ಎಂದು ಮಾಜಿ ಸಚಿವ ಸಿ.ಟಿ ರವಿ ಅಭಿಪ್ರಾಯಪಟ್ಟರು.

ಶನಿವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ವ್ಯಕ್ತಿಗಿಂತ ಪಕ್ಷ ಮುಖ್ಯ ಎನ್ನುವುದು ಬಿಜೆಪಿ ಸಿದ್ಧಾಂತ. ನಾವೆಲ್ಲರೂ ಸಂಘಟಿತರಾಗಿ ಮುಸ್ಲಿಂ ಓಲೈಕೆಯಲ್ಲಿ ತೊಡಗಿ ರುವ ಕಾಂಗ್ರೆಸ್ ಸರಕಾರದ ವಿರುದ್ಧ ಹೋರಾಟ ನಡೆಸಬೇಕಾದ ಅನಿವಾರ್ಯ ಇದೆ ಎಂದರು.

ಸವದತ್ತಿಗೆ ಸಿ.ಟಿ.ರವಿ ಭೇಟಿ: ಕಳೆದ ವಿಧಾನಸಭೆ ಚಳಿಗಾಲದ ಅಧಿವೇಶನ ಸಂದರ್ಭದಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕುರಿತು ಅಶ್ಲೀಲ ಪದಬಳಸಿದ ಆರೋಪಕ್ಕೆ ಒಳಗಾದ ನಂತರ ಸಿ.ಟಿ ರವಿ ಶುಕ್ರವಾರ ಬೆಳಗಾವಿಗೆ ಮೊದಲ ಬಾರಿಗೆ ಭೇಟಿ ನೀಡಿದ್ದರು. ಪತ್ನಿ ಪಲ್ಲವಿ ಜತೆ ಸವದತ್ತಿಯ ಯಲ್ಲಮ್ಮ ದೇವಸ್ಥಾನಕ್ಕೆ ತೆರಳಿದ ಅವರು ದೇವಿಯ ಆಶೀರ್ವಾದ ಪಡೆದರು. ಬೆಳಗಾವಿಯಲ್ಲೇ ವಾಸ್ತವ್ಯ ಹೂಡಿದ್ದ ರವಿ ಶನಿವಾರ ಬೆಳಗ್ಗೆ ದಕ್ಷಿಣ ಕಾಶಿ ಎಂದೇ ಖ್ಯಾತಿ ಹೊಂದಿರುವ ಐತಿಹಾಸಿಕ ಕಪಿಲೇಶ್ವರ ಮಂದಿರಕ್ಕೆ ಭೇಟಿ ನೀಡಿ ಶಿವಲಿಂಗಕ್ಕೆ ರುದ್ರಾಭಿಷೇಕ ಕೈಂಕರ್ಯ ನಡೆಸಿದರು.

ನ್ಯಾಯಾಲಯದಲ್ಲಿ ತೀರ್ಮಾನ: ಬೆಳಗಾವಿ ಭೇಟಿ ವೇಳೆ ಸಿ.ಟಿ ರವಿ ಈ ಹಿಂದಿನ ಅಶ್ಲೀಲ ಪದಬಳಕೆ ಸೇರಿದಂತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕುರಿತು ಪ್ರತಿಕ್ರಿಯೆ ನೀಡಲಿಲ್ಲ. ದೇವಸ್ಥಾನಗಳ ದರ್ಶನ ಸೇರಿದಂತೆ ಕಾರ್ಯಕರ್ತರ ಭೇಟಿಗೆ ತಮ್ಮ ಸಮಯ ಮೀಸಲಿಡುವ ಮೂಲಕ ಅಚ್ಚರಿ ಮೂಡಿಸಿದರು. ಇನ್ನೂ ಪ್ರಕರಣ ನ್ಯಾಯಾಲ ಯದಲ್ಲಿ ಇದ್ದು, ಅಲ್ಲಿಯೇ ತೀರ್ಮಾನ ಆಗಲಿದೆ ಎಂದಷ್ಟೇ ಹೇಳಿದರು.

ಐವರಿಗೆ ವಾರ್ಷಿಕ ಗೌರವ | 10 ಮಂದಿ ಸಾಹಿತ್ಯ ಪ್ರಶಸ್ತಿಗೆ ಭಾಜನ

ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು 2023ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ ಮತ್ತು ಸಾಹಿತ್ಯಶ್ರೀ ಪ್ರಶಸ್ತಿ ಪ್ರಕಟಿಸಿದ್ದು, ಐವರು ವಾರ್ಷಿಕ ಗೌರವ ಪ್ರಶಸ್ತಿ, 10 ಮಂದಿ ಸಾಹಿತ್ಯಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ತಿಳಿಸಿದೆ.

ಕನ್ನಡ ಸಾಹಿತ್ಯ ಅಕಾಡೆಮಿ ವತಿಯಿಂದ ಅಮೂಲ್ಯ ಸೇವೆಯನ್ನು ಪರಿಗಣಿಸಿ ಐವರು ಸಾಹಿತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ 2023ನೇ ವರ್ಷದ ಗೌರವ ಪ್ರಶಸ್ತಿ ನೀಡಲು ನಿರ್ಧರಿಸಿದ್ದು, ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅಧ್ಯಕ್ಷತೆಯಲ್ಲಿ ಮಾ.7 ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

2022ನೇ ವರ್ಷದ ಪುಸ್ತಕ ಬಹುಮಾನ ವಿಜೇತರು: ರಾಮು ಮೈಸೂರು-ವಿಷ್ಣು ಕ್ರಾಂತಿ ಮತ್ತು ಇತರ ಪದ್ಯಗಳು, ರೇವಣ್ಣ ಸಿದ್ದಪ್ಪ ಜಿ. ಆರ್.-ಬಾಳನೌಕೆಗೆ ಬೆಳಕಿನ ದೀಪ, ಸುಮಂಗಲಾ ಎಸ್. ಮಮ್ಮಿಗಟ್ಟಿ-ಬಯಲ ಬೆರಗು, ದಯಾನಂದ-ಬುದ್ಧನ ಕಿವಿ, ಬಿದರಹಳ್ಳಿ ನರಸಿಂಹ ಮೂರ್ತಿ-ಮಾಯಾದಂಡ, ಶ್ರೀಹರ್ಷ ಸಾಲಿಮಠ-ಡಾರ್ಕ್ ಹೂಮರ್, ಚಿಂತಾಮಣಿ ಕೊಡ್ಲೆಕೆರೆ-ಗಿಂಡಿಯಲ್ಲಿ ಗಂಗೆ, ಪಿ.ರಾಮಯ್ಯ-ನಾನು ಹಿಂದೂ ರಾಮಯ್ಯ ಅರವತ್ತು ವರ್ಷಗಳ ಅನುಭವ ಕಥನ, ಡಾ.ಚನ್ನಪ್ಪ ಕಟ್ಟಿ-ಕುಯಿಲು, ಸಂತೆಬೆನ್ನೂರು ಫೈಜ್ನಟ್ರಾಜ್-ಮಗಳಿಗೆ ಹೇಳಿದ ಕಥೆಗಳು, ಡಾ.ಸುಕನ್ಯಾ ಸೊನಗಹಳ್ಳಿ-ಬೆಳೆ ರೋಗಗಳು, ಕೀಟಗಳು ಮತ್ತು ಅವುಗಳ ನಿರ್ವಹಣೆ, ಎಚ್.ಎನ್.ನಾಗಮೋಹನ ದಾಸ್-ಸಂವಿಧಾನ ಮತ್ತು ವಚನಗಳು, ಡಾ. ಶೈಲಜಾ ಇಂ.ಹಿರೇಮಠ-ನಿರೂಪಣೆಯಾಚೆಗೆ, ಅನಿಲ ಸಿ.ಹೊಸಮನಿ-ಡಾ. ಅಂಬೇಡ್ಕರ್ ಸಹವಾಸದಲ್ಲಿ, ರಾಜಾರಾಂ ತಲ್ಲೂರು- ಕರಿಡಬ್ಬಿ, ಪಿ.ವಿ.ನಂಜರಾಜ ಅರಸ್-ಟೀಪೂ ಮಾನ್ಯತೆ ಸಿಗದ ಸುಲ್ತಾನ್ ಅಂದು-ಇಂದು, ಮಲ್ಲಿಕಾರ್ಜುನ ಶೆಲ್ಲಿಕೇರಿ-ದೀಡೆಕರೆ ಜಮೀನು, ಪೈಯನೂರು ಕುನ್ನಿ ರಾಮನ್ ಮತ್ತು ಮೋಹನ ಕುಂಟರ್-ಚಾರು ವಸಂತ

2023ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ ಪುರಸ್ಕೃತರು

1. ಡಾ. ಸಿ. ವೀರಣ್ಣ-ಬೆಂಗಳೂರು
2. ಡಾ. ಶ್ರೀರಾಮ ಇಟ್ಟಣ್ಣವರ - ಬಾಗಲಕೋಟೆ
3. ಜಾಣಗೆರೆ ವೆಂಕಟರಾಮಯ್ಯ - ತುಮಕೂರು
4. ಎ.ಎಂ.ಮದರಿ-ಕೊಪ್ಪಳ
5. ಡಾ. ಸಬಿಹಾ ಭೂಮಿಗೌಡ - ಮಂಗಳೂರು

ಜಿ.ಎಸ್.ಮೋಹನ್

ನಾಗಮೋಹನ ದಾಸ್

ಜಾಣಗೆರೆ ವೆಂಕಟರಾಮಯ್ಯ

ಡಾ. ಸಿ. ವೀರಣ್ಣ

ಸಬಿಹಾ ಭೂಮಿಗೌಡ

ಶ್ರೀರಾಮ ಇಟ್ಟಣ್ಣವರ

10 ಮಂದಿಗೆ ಸಾಹಿತ್ಯಶ್ರೀ ಪ್ರಶಸ್ತಿ

1. ಡಾ. ಎಂ.ಎಸ್.ಶೇಖರ್ - ಮೈಸೂರು
2. ಜಿ.ಎಸ್.ಮೋಹನ್-ಬೆಂಗಳೂರು
3 ಡಾ.ಟಿ.ಎಸ್ ವಿವೇಕಾನಂದ- ತುಮಕೂರು
4. ಡಾ. ಜಯಶ್ರೀ ಕಂಬಾರ - ಬೆಳಗಾವಿ
5. ಪ್ರೊ. ನಿಜಲಿಂಗಪ್ಪ ಯಮನಪ್ಪ ಮಟ್ಟಿಹಾಳ - ಧಾರವಾಡ
6. ಡಾ. ಬಾಲಗುರುಮೂರ್ತಿ - ಕೋಲಾರ
7. ಪ್ರೊ ಶಿವಗಂಗಾ ರುಮ್ಮಾ - ಕಲಬುರಗಿ
8. ಡಾ.ರೀಟಾ ರೀನಿ - ಬೆಂಗಳೂರು
9. ಡಾ.ಕಲೀಮ್ ಉಲ್ಲಾ - ಶಿವಮೊಗ್ಗ
10. ಡಾ.ವೆಂಕಟಗಿರಿ ದಳವಾಯಿ ಬಳ್ಳಾರಿ

ಮೈಸೂರಿನಲ್ಲಿ 2 ಕೃತಿಗಳ ಲೋಕಾರ್ಪಣೆಯಲ್ಲಿ ವಿಶ್ವೇಶ್ವರ ಭಟ್ ಪ್ರಶಂಸೆ | 30 ಸಾವಿರ ಇಂಗ್ಲಿಷ್ ವೈದ್ಯಕೀಯ ಪದಗಳ ಅನುವಾದಕ್ಕೆ ಮೆಚ್ಚುಗೆ

ಸಾಹಿತ್ಯ ಕ್ಷೇತ್ರಕ್ಕೆ ಡಾ.ಯೋಗಣ್ಣ ಕೊಡುಗೆ ಅನನ್ಯ

ಮೈಸೂರು: ಒಂದು ಪತ್ರಿಕೆಗೆ ಸ್ಥಿರತೆ ಹಾಗೂ ವಿಶ್ವಾಸಾರ್ಹತೆ ತರುವ ಲೇಖಕರು ಡಾ.ಎಸ್.ಪಿ. ಯೋಗಣ್ಣ ಎಂದು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅಭಿಪ್ರಾಯಪಟ್ಟರು.

ನಗರದ ಸುಯೋಗ್ ಆಸ್ಪತ್ರೆ ಸಭಾಂಗಣದಲ್ಲಿ ಶನಿವಾರ ಡಾ.ಎಸ್ .ಪಿ.ಯೋಗಣ್ಣ ಅವರ ಲೈಂಗಿಕ ಸುಖದ ಸುತ್ತ ಮುತ್ತ, ಸ್ವಾಸ್ಥ್ಯ ಸಂಪದ ಕೃತಿಗಳ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಡಾ. ಯೋಗಣ್ಣ ವಿಶ್ವವಾಣಿಯಲ್ಲಿ 2 ವರ್ಷಗಳ ಕಾಲ ಅಂಕಣ ಬರೆದಿದ್ದಾರೆ. ಈ ಮೂಲಕ ನಮ್ಮ ಪತ್ರಿಕೆಗೆ ಸ್ಥಿರತೆ ಹಾಗೂ ವಿಶ್ವಾಸಾರ್ಹತೆ ತಂದುಕೊಟ್ಟಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸೆಕ್ಸ್ ಬಗ್ಗೆ ಲೇಖನ ಬರೆಯುವುದು ತುಂಬಾ ಕಷ್ಟ. ನಾವೆಲ್ಲರೂ ಅದರ ಬಗ್ಗೆ ಮಾತನಾಡಲು ಹಿಂಜರಿಯು ತ್ತೇವೆ. ಆದರೆ ಯೋಗಣ್ಣ ಅವರು ಈ ವಿಚಾರದ ಕುರಿತು ಸುದೀರ್ಘ ಹಾಗೂ ಮುಕ್ತ ವಿಚಾರಗಳನ್ನು ಈ ಪುಸ್ತಕದ ಮೂಲಕ ಹೊರತಂದಿದ್ದಾರೆ ಎಂದು ಭಟ್ ಅಭಿಪ್ರಾಯಪಟ್ಟರು.

ವಿಶ್ವವಾಣಿ ಪ್ರೋತ್ಸಾಹ ಸ್ಮರಣೀಯ: ಕೃತಿಯ ಕರ್ತೃ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಸಾಮಾಜದ ಎಲ್ಲ ಮುಖಗಳ ಬಗ್ಗೆ ಅಂಕಣ ಬರೆಯುವ ಅವಕಾಶವನ್ನು ವಿಶ್ವವಾಣಿ ಪತ್ರಿಕೆ ನನಗೆ ನೀಡಿತ್ತು. ಎರಡು ವರ್ಷಗಳ ಕಾಲ ಸುದೀರ್ಘ ಅಂಕಣಗಳನ್ನು ಪತ್ರಿಕೆಯಲ್ಲಿ ಬರೆಯಲು ವೇದಿಕೆ ಕಲ್ಪಿಸಿದವರು ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರು ಮತ್ತು ನಂಜನಗೂಡು ಮೋಹನ್. ವೈದ್ಯಕೀಯ ಕ್ಷೇತ್ರಕ್ಕೆ ಮಾತ್ರವಲ್ಲದೇ ಯಾವುದೇ ಕ್ಷೇತ್ರಕ್ಕೆ ಸಂಬಂಧಪಟ್ಟ ಲೇಖನ ಕಳಿಸಿದರೂ, ಒಂದು ಅಕ್ಷರವನ್ನೂ ತೆಗೆಯದೆ ಹಾಗೆಯೇ ಮುದ್ರಿಸುತ್ತಿದ್ದರು. ಈ ಮೂಲಕ ಲೇಖಕರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದವರು ವಿಶ್ವೇಶ್ವರ ಭಟ್ಟರು ಎಂದು ಕೃತಜ್ಞತೆ ಸಲ್ಲಿಸಿದರು.

ಪಾಟೀಲ ಪುಟ್ಟಪ್ಪನವರು ಪ್ರಾರಂಭಿಸಿದ ವಿಶ್ವವಾಣಿ ಪತ್ರಿಕೆಯನ್ನು ಖರೀದಿಸಿ ಈಗಾಗಲೇ ಇರುವ ಇತರ ಪ್ರಮುಖ ಪತ್ರಿಕೆಗಳ ಮಟ್ಟಕ್ಕೆ ತಂದಿದ್ದೀರಿ. ಈ ಮೂಲಕ ಪಾಟೀಲ ಪುಟ್ಟಪ್ಪ ಆತ್ಮಕ್ಕೆ ಸಂತೋಷ ತಂದಿದ್ದೀರಿ ಎಂದು ಡಾ.ಯೋಗಣ್ಣ ಪ್ರಶಂಸಿಸಿದರು.

ಡಾ.ಯೋಗಣ್ಣ ಸೇವೆ ಅನುಪಮ: ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, ಆರೋಗ್ಯ ಕ್ಷೇತ್ರದಲ್ಲಿ ಡಾ. ಎಸ್.ಪಿ. ಯೋಗಣ್ಣ ಅವರ ಸೇವೆ ಶ್ಲಾಘನೀಯ. ವೈದ್ಯಕೀಯ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ವಿಶೇಷವಾಗಿ ತಮ್ಮ ಅನುಭವಗಳನ್ನು ಬರಹದ ರೂಪದಲ್ಲಿ ಸಮಾಜಕ್ಕೆ ಹಾಗೂ ಸಾಹಿತ್ಯಲೋಕಕ್ಕೆ ಕೊಡುಗೆ ನೀಡುತ್ತಿದ್ದಾರೆ ಎಂದರು. ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಲೈಂಗಿಕ ಅಪರಾಧಗಳು ನಡೆಯುತ್ತಿರುವುದು ಜನರಲ್ಲಿರುವ ಅಂಧಶ್ರದ್ಧೆ, ಮೂಢನಂಬಿಕೆ, ತಪ್ಪು ತಿಳಿವಳಿಕೆ, ಸಹನೆ ಇಲ್ಲದ ಸ್ಥಿತಿಗಳೇ ಕಾರಣ. ಹೆಚ್ಚು ಓದುವ ಹವ್ಯಾಸ ರೂಢಿಸಿಕೊಂಡವರು ವಿಕಾರಿಗಳಾಗಲು ಸಾಧ್ಯವಿಲ್ಲ. ಸಕಾರಿಗಳು, ಸಹಕಾರಿ ಹಾಗೂ ಸಮಾಜಮುಖಿಯಾಗುತ್ತಾರೆ. ವ್ಯಕ್ತಿ ಹಾಗೂ ವ್ಯಕ್ತಿತ್ವ ಸಮತೋಲದಲ್ಲಿ ಇರಬೇಕಾದರೆ ಓದುವ ಹವ್ಯಾಸವನ್ನು ಹೆಚ್ಚು ಬೆಳೆಸಿಕೊಳ್ಳಬೇಕು ಎಂದು ಸ್ವಾಮೀಜಿ ಅಭಿಪ್ರಾಯಪಟ್ಟರು.

ವೃತ್ತಿ-ಪ್ರವೃತ್ತಿ ಎರಡರಲ್ಲೂ ಯಶಸ್ವಿ: ಹಿರಿಯ ಪತ್ರಕರ್ತ ಎಂ.ಎನ್ ಮೋಹನ್ ಕುಮಾರ್ ಮಾತನಾಡಿ, ಪತ್ರಿಕೆಗಳಿಗೆ ಲೇಖನ ಬರೆಯುವವರ ಸಂಖ್ಯೆ ತೀರಾ ಕಡಿಮೆ ಇದ್ದಂತ ಕಾಲಘಟದಲ್ಲಿ ಹಾ.ಮಾ ನಾಯಕರು, ಸಿ.ಪಿ.ಕೆ ಜೊತೆಗೆ ಡಾ.ಎಸ್.ಪಿ. ಯೋಗಣ್ಣ ಕೂಡ ತಮ್ಮ ಬರವಣಿಗೆ ಮೂಲಕ ಓದುಗರಿಗೆ ಹತ್ತಿರವಾಗಿದ್ದರು.

ವೈದ್ಯಕೀಯ ವೃತ್ತಿ ಜತೆಗೆ ಬರವಣಿಗೆಯನ್ನು ತಮ್ಮ ಪ್ರವೃತ್ತಿಯಾಗಿಸಿಕೊಂಡಿರುವ ಯೋಗಣ್ಣ, ಸಾಹಿತ್ಯ ಲೋಕಕ್ಕೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ಸುದೀರ್ಘವಾಗಿ ವಿಶ್ವವಾಣಿ ಪತ್ರಿಕೆಯಲ್ಲಿ ಅಂಕಣಗಳನ್ನು ಬರೆದು ಇದೀಗ ಅವೆಲ್ಲವನ್ನೂ ಪುಸ್ತಕರೂಪದಲ್ಲಿ ಹೊರತರುವ ಮೂಲಕ ವೃತ್ತಿ-ಪ್ರವೃತ್ತಿ ಎರಡರಲ್ಲೂ ಯಶಸ್ಸನ್ನು ಕಂಡಿದ್ದಾರೆ ಎಂದು ಅಭಿಪ್ರಾಯ ಪಟ್ಟರು.

ಪ್ರೊ ಚಂದ್ರಶೇಖರ್ ಕೃತಿಗಳ ಪರಿಚಯ ಮಾಡಿಕೊಟ್ಟರು. ಕಾರ್ಯಕ್ರಮದಲ್ಲಿ ಸುಧಾ ಯೋಗಣ್ಣ ಹಾಗೂ ಡಾ.ಯೋಗಣ್ಣ ಅವರ ಕುಟುಂಬದ ಸದಸ್ಯರು, ಮಿತ್ರರು ಹಾಗೂ ಸುಯೋಗ್ ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಡಾ. ಯೋಗಣ್ಣ ಅವರ ಎರಡು ಕೃತಿಗಳನ್ನು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಶನಿವಾರ ಬಿಡುಗಡೆ ಮಾಡಿದರು. ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಡಾ.ನಿಶ್ಚಲಾನಂದನಾಥ ಸ್ವಾಮೀಜಿ , ಹಿರಿಯ ಪತ್ರಕರ್ತ ಎಂ.ಎನ್ ಮೋಹನ್ ಕುಮಾರ್, ಪ್ರೊ ಚಂದ್ರಶೇಖರ್, ಸುಧಾ ಯೋಗಣ್ಣ ಹಾಗೂ ಇತರರು ಇದ್ದರು.

> ಪ್ರತಿವರ್ಷ 6 ರಿಂದ 8 ಸಾವಿರ ಕನ್ನಡ ಕೃತಿಗಳು ಲೋಕಾರ್ಪಣೆಯಾಗುತ್ತವೆ. ಆದರೆ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಬರೆಯುವ ಲೇಖಕರ ಸಂಖ್ಯೆ ಬಹಳ ಕಡಿಮೆ. ಅದರಲ್ಲೂ ವೈದ್ಯಕೀಯ ಭಾಷೆ ಕಷ್ಟಕರ. ಡಾ. ಯೋಗಣ್ಣ ಅವರು ವೈದ್ಯಕೀಯ ನಿಘಂಟನ್ನು ಹೊರತರುತ್ತಿದ್ದಾರೆ. 30 ಸಾವಿರ ಇಂಗ್ಲಿಷ್ ವೈದ್ಯಕೀಯ ಪದಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಇದು ವೈದ್ಯಕೀಯ ಕ್ಷೇತ್ರದಲ್ಲಿ ದೊಡ್ಡ ಸಾಧನೆಯೇ ಸರಿ.
> -**ವಿಶ್ವೇಶ್ವರ ಭಟ್,** ವಿಶ್ವವಾಣಿ ಪ್ರಧಾನ ಸಂಪಾದಕ

ಓದಲೇಬೇಕಾದ ಕೃತಿ

ಓಶೋ ಅವರ ಸಂಭೋಗದಿಂದ ಸಮಾಧಿಯೆಡೆಗೆ ಎಂಬ ಪುಸ್ತಕ ಯಾವ ರೀತಿ ವೈದ್ಯಕೀಯ ಹಾಗೂ ವೈಜ್ಞಾನಿಕ ಅನುಭವ ನೀಡಿತ್ತೋ ಅದೇ ರೀತಿ ಯೋಗಣ್ಣ ಅವರ ಈ ಕೃತಿ ಅನುಭವ ನೀಡಿತು. ಮಕ್ಕಳಿಂದ ವೃದ್ಧರವರೆಗೆ ಓದಲೇಬೇಕಾದ ಕೃತಿಯನ್ನು ಯೋಗಣ್ಣ ನೀಡಿದ್ದಾರೆ ಎಂದು ವಿಶ್ವೇಶ್ವರ ಭಟ್ ಶ್ಲಾಘಿಸಿದರು. ವೈದ್ಯಕೀಯ ಹಾಗೂ ವೈದ್ಯ ಸಾಹಿತ್ಯದ ಸೇವೆ ಎರಡನ್ನೂ ಡಾ. ಯೋಗಣ್ಣ ಒಟ್ಟಿಗೆ ಮಾಡಿಕೊಂಡು ಬರುತ್ತಿದ್ದಾರೆ. ಆಸ್ಪತ್ರೆ ಕಟ್ಟುವುದರ ಜತೆಗೆ ವೈದ್ಯಕೀಯ ಸಾಹಿತ್ಯ ಕಟ್ಟಿ ಬೆಳೆಸುವುದು ತಮ್ಮ ಕರ್ತವ್ಯ ಮತ್ತು ಜವಾಬ್ದಾರಿ ಎಂದರಿತು ಈ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದಾರೆ. ಇಲ್ಲಿವರೆಗೆ 61 ಪುಸ್ತಕವನ್ನು ತಮ್ಮದೇ ಪ್ರಕಾಶನದಲ್ಲಿ ಪ್ರಕಟಿಸಿದ್ದಾರೆ. ವೈದ್ಯಕೀಯ ಕ್ಷೇತ್ರ ಹಾಗೂ ವೈದ್ಯಕೀಯ ಸಾಹಿತ್ಯ ಬೆಳೆಸಿಕೊಂಡು ಬರುತ್ತಿದ್ದಾರೆ. ಅವರ ಈ ಯೋಗದಾನ ತುಂಬಾ ದೊಡ್ಡದು ಎಂದು ಬಣ್ಣಿಸಿದರು.

60 ವರ್ಷಗಳ ಹಿಂದೆ ಅಲ್ಲಿ ಒಂದು ರೋಬೋಟ್ ಇತ್ತು, ಇಂದು ನಾಲ್ಕೂವರೆ ಲಕ್ಷ!

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಅದು 1967ರ ಮಧ್ಯಭಾಗ. ಜಪಾನ್ ಅಮೆರಿಕದಿಂದ ಮೊದಲ ಬಾರಿಗೆ ಒಂದು ರೋಬೋಟ್ ಅನ್ನು ತರಿಸಿ ಕೊಂಡಿತು. ಅಲ್ಲಿ ತನಕ ರೋಬೋಟ್ ತಂತ್ರಜ್ಞಾನದ ಬಗ್ಗೆ ಜಪಾನಿಯರಿಗೆ ಗೊತ್ತಿರಲಿಲ್ಲ. ರೋಬೋಟ್ ತಂತ್ರಜ್ಞಾನ ಅವರ ಯೋಚನೆಗೆ ಕಿಚ್ಚು ಹೊತ್ತಿಸಿತ್ತು.

ಅದಾಗಿ ಹನ್ನೆರಡು ವರ್ಷಗಳ ಬಳಿಕ...

ಅಮೆರಿಕ ಹೊಂದಿದ್ದ ರೋಬೋಟುಗಳಿಗಿಂತ ಹದಿನೈದು ಪಟ್ಟು ಹೆಚ್ಚು, ಕೈಗಾರಿಕಾ ಉದ್ದೇಶಗಳಿಗೆ ಬಳಸುವ ರೋಬೋಟುಗಳನ್ನು ಜಪಾನ್ ಹೊಂದಿತ್ತು. ಯಾವ ದೇಶ ತನಗೆ ರೋಬೋಟುಗಳ ಬಗ್ಗೆ ಪಾಠ ಹೇಳಿತ್ತೋ, ಅದೇ ದೇಶಕ್ಕೆ ಜಪಾನ್ ಹನ್ನೆರಡು ವರ್ಷಗಳಲ್ಲಿ ರೋಬೋಟ್ ತಂತ್ರಜ್ಞಾನದ ಬಗ್ಗೆ ಮರುಪಾಠ ಮಾಡಿತ್ತು.

1987ರಲ್ಲಿ ಫುಜಿತ್ಸು ಕಂಪನಿ ಒಂದು ಫ್ಯಾಕ್ಟರಿ ತೆರೆಯಿತು. ಆ ಫ್ಯಾಕ್ಟರಿಯಲ್ಲಿ ರೋಬೋಟುಗಳು ರೋಬೋಟುಗಳ ಬಿಡಿಭಾಗಗಳನ್ನು ತಯಾರಿಸುತ್ತಿದ್ದವು. ಇಂದು ನಾಗಸಾಕಿ ಸಮೀಪದ ಸಸೆಬೊದಲ್ಲಿರುವ The Henn-na Hotelನಲ್ಲಿ ಮಾನವ ಸಿಬ್ಬಂದಿಯೇ ಇಲ್ಲ. ನೂರಾ ಎಂಬತ್ತು ರೋಬೋಟುಗಳೇ ಎಲ್ಲ ಕೆಲಸಗಳನ್ನು ನೆರವೇರಿಸುತ್ತವೆ.

ಜಪಾನಿಗೆ ಬರುವ ವಿದೇಶಿಗರು, ''ಈ ಜಪಾನಿಯರನ್ನು ನೋಡಿದರೆ, ಒಂಥರಾ ರೋಬೋಟುಗಳಂತೆ ಕಾಣುತ್ತಾರೆ. ಅವರ ಮುಖದಲ್ಲಿ ಭಾವನೆಗಳೇ ಇಲ್ಲ. ಅವರು ಯಂತ್ರಗಳಂತೆ ಕಾಣುತ್ತಾರೆ'' ಎಂದು ಪ್ರತಿಕ್ರಿಯಿಸುವುದು ಸಾಮಾನ್ಯ. ಜಪಾನಿಯರು ರೋಬೋಟುಗಳಂತೆ ಕಾಣುವುದಷ್ಟೇ ಇಲ್ಲ, ತಾವು ರೋಬೋಟ್‌ಗಳೆಂದೇ ಅಂದುಕೊಂಡಿದ್ದಾರೆ ಎಂದು ಹೇಳುವುದುಂಟು. ಕಾರಣ, ಅವರ ಕಾರ್ಯಶೈಲಿಯೂ ರೋಬೋಟುಗಳಂತೆ. ತಮಗೆ ವಹಿಸಿದ ಕೆಲಸಗಳನ್ನು ರೋಬೋಟುಗಳಂತೆ ಅಚ್ಚುಕಟ್ಟಾಗಿ ಮಾಡಿ ಮುಗಿಸಿರುತ್ತಾರೆ.

ಅದಕ್ಕೇ ಇರಬೇಕು, ಜಪಾನ್ ರೊಬೊಟಿಕ್ಸ್‌ನಲ್ಲಿ ಜಾಗತಿಕ ನಾಯಕ ಎಂದು ಕರೆಯಿಸಿಕೊಂಡಿದೆ. ನಾವೀನ್ಯತೆಯ ಬಲವಾದ ಇತಿಹಾಸ ಮತ್ತು ಪ್ರತಿ ಉತ್ಪಾದನಾ ಉದ್ಯೋಗಿಗೆ ಹೆಚ್ಚಿನ ಸಾಂದ್ರತೆಯ (high density) ರೋಬೋಟ್‌ಗಳನ್ನು ಹೊಂದಿದೆ. ಅಷ್ಟೇ ಅಲ್ಲ, ವಿಶ್ವದ ನಂಬರ್ ಒನ್ ಕೈಗಾರಿಕಾ ರೋಬೋಟ್ ತಯಾರಕ ಎಂದು ಕರೆಯಿಸಿಕೊಂಡಿದೆ.

ಜಪಾನ್ ಕೈಗಾರಿಕಾ ರೋಬೋಟ್‌ಗಳ ವಿಶ್ವದ ಪ್ರಮುಖ ತಯಾರಕ ದೇಶವಾಗಿದ್ದು, ಜಾಗತಿಕ ಮಾರುಕಟ್ಟೆಯ ಶೇ.45ರಷ್ಟು ಪಾಲನ್ನು ಹೊಂದಿದೆ. ಜಪಾನ್ ನೂರು ರೋಬೋಟ್‌ಗಳನ್ನು ತಯಾರಿಸಿದರೆ, ಆ ಪೈಕಿ 78ನ್ನು ವಿಶ್ವದ ಬೇರೆ ದೇಶಗಳಿಗೆ ರಫ್ತು ಮಾಡುತ್ತದೆ. ಆಶ್ಚರ್ಯವೆನಿಸಬಹುದು, ಜಪಾನ್ ರೋಬೋಟಿಕ್ ಫಾರ್ಮ್ ಅನ್ನು ಸಹ ಅಭಿವೃದ್ಧಿಪಡಿಸಿದೆ. ಅಂದರೆ ಆ ಹೊಲಗಳಲ್ಲಿ ಎಲ್ಲ ಕೆಲಸಗಳನ್ನು ರೋಬೋಟುಗಳೇ ಮಾಡುತ್ತವೆ. ಬೀಜ ಬಿತ್ತುವುದರಿಂದ ಫಸಲು ಕೊಯ್ಯುವ ತನಕ ಎಲ್ಲ ಕೆಲಸಗಳನ್ನು ರೋಬೋಟುಗಳೇ ಮಾಡುತ್ತವೆ. ಕೆಲಸಗಾರರ ಕೊರತೆಯನ್ನು ನೀಗಿಸಲು ಮತ್ತು ಕೃಷಿ ಚಟುವಟಿಕೆ ಕುಂಠಿತವಾಗದಂತೆ ತಡೆಯಲು ಅಲ್ಲಿನ ಸರಕಾರ Robotic Farms ಅಭಿವೃದ್ಧಿಗೆ ಉತ್ತೇಜನ ನೀಡುತ್ತಿದೆ.

ಆಸ್ಪತ್ರೆಗಳಲ್ಲಿ ಆಪರೇಷನ್ ಮಾಡಲು ರೋಬೋಟುಗಳನ್ನು ಬಳಸುವುದು ಸಹಜ. ಆದರೆ ಜಪಾನಿನ ಅನೇಕ ಆಸ್ಪತ್ರೆಗಳಲ್ಲಿ ರೋಬೋಟುಗಳೇ ನರ್ಸು (ದಾದಿಯರು) ಗಳ ಕೆಲಸವನ್ನು ಮಾಡುತ್ತಿವೆ. ನುರಿತ ದಾದಿಯರು ಸಿಗದಿರುವ ಹಿನ್ನೆಲೆಯಲ್ಲಿ ನರ್ಸುಗಳು ಮಾಡುವ ಕೆಲಸ-ಕಾರ್ಯಗಳನ್ನು ರೋಬೋಟುಗಳೇ ನೆರವೇರಿಸುತ್ತಿವೆ. ದೈನಂದಿನ ಜೀವನದಲ್ಲಿ ಎಲ್ಲ ರಂಗಗಳಲ್ಲಿಯೂ ರೋಬೋಟ್‌ಗಳನ್ನು ವ್ಯಾಪಕವಾಗಿ ಬಳಸುತ್ತಿರುವ ದೇಶಗಳಲ್ಲಿ ಜಪಾನ್ ಜಾಗತಿಕವಾಗಿ ಮುಂಚೂಣಿಯಲ್ಲಿದೆ. ಇಂದು ಜಪಾನಿನಲ್ಲಿ ಸುಮಾರು 4,35,000 ರೋಬೋಟುಗಳಿವೆಯೆಂದು ಅಂದಾಜು ಮಾಡಲಾಗಿದೆ. ಯಾವ ದೇಶವೂ ಇಷ್ಟೊಂದು ರೋಬೋಟುಗಳನ್ನು ಹೊಂದಿಲ್ಲ.

ಕಳೆದ ಕೆಲವು ದಶಕಗಳಲ್ಲಿ, ಜಪಾನಿನಲ್ಲಿ ನರ್ಸಿಂಗ್ ಹೋಮ್‌ಗಳಲ್ಲಿ ರೋಬೋಟ್‌ಗಳ ಅಳವಡಿಕೆಯಲ್ಲಿ ಸ್ಥಿರವಾದ ಏರಿಕೆ ಕಂಡು ಬಂದಿದೆ. ಆರಂಭದಲ್ಲಿ ರೋಗಿಗಳನ್ನು ಎತ್ತುವುದು ಅಥವಾ ಔಷಧಿಗಳನ್ನು ವಿತರಿಸುವಂಥ ದಿನನಿತ್ಯದ ಕೆಲಸಗಳಿಗೆ ಸಹಾಯ ಮಾಡಲು ಪರಿಚಯಿಸಲಾದ ಈ ರೋಬೋಟ್‌ಗಳು, ಇತ್ತೀಚಿನ ದಿನಗಳಲ್ಲಿ ರೋಗಿಗಳೊಂದಿಗೆ ಒಡನಾಡುತ್ತಿವೆ ಮತ್ತು ಮನರಂಜನೆಯನ್ನು ಒದಗಿಸುತ್ತಿವೆ. ಪ್ರಮುಖ ಸಂಕೇತಗಳ ಮೇಲ್ವಿಚಾರಣೆ ಮಾಡುವುದರಿಂದ ಹಿಡಿದು, ಆರೋಗ್ಯ ವೃತ್ತಿಪರರೊಂದಿಗೆ ಸಂವಹನವನ್ನು ಸುಗಮಗೊಳಿಸುವವರೆಗೆ ವ್ಯಾಪಕ ಶ್ರೇಣಿಯ ಕಾರ್ಯಗಳನ್ನು ಒಳಗೊಳ್ಳಲು ಆ ರೋಬೋಟುಗಳು ವಿಕಸನಗೊಂಡಿವೆ.

ವಿಶ್ವದ ಅತಿದೊಡ್ಡ ನಗರಗಳಲ್ಲಿ ಒಂದಾಗಿರುವ ಟೋಕಿಯೋ, ಏಕಾಂಗಿಗಳ ಅಥವಾ ಒಂಟಿತನದಿಂದ ಬಳಲುತ್ತಿರುವವರ ನಗರವೂ ಆಗಿದೆ. ಹೀಗಾಗಿ ಅಲ್ಲಿನ ಜನ ರೋಬೋಟುಗಳ ಸಹವಾಸವನ್ನು ಇಷ್ಟಪಡುತ್ತಿದ್ದಾರೆ. ರೋಬೋಟ್‌ಗಳ ಮೂಲಕ ಪ್ರೀತಿಸುವುದು ಅವರಿಗೆ ಖುಷಿಯ ಸಂಗತಿ. ಇತ್ತೀಚೆಗೆ ಜಪಾನಿನ 'ಗ್ರೋವ್ ಎಕ್ಸ್' ಎಂಬ ಸಂಸ್ಥೆ Lovot (Love + Robot) ಎಂಬ ರೋಬೋಟನ್ನು ಅಭಿವೃದ್ಧಿಪಡಿಸಿದೆ. ಅದು 'ಪ್ರೀತಿ' ಮತ್ತು 'ರೋಬೋಟ್' ಪದಗಳ ಸಂಯೋಜನೆಯಾಗಿದ್ದು, ಇದು ಒಬ್ಬಂಟಿಗರಿಗೆ ಸಂಗಾತಿಯಂತೆ ಕೆಲಸ ಮಾಡುತ್ತದೆ.

ಟೋಕಿಯೋದಲ್ಲಿ ಅನೇಕ ಒಬ್ಬಂಟಿಗರು ತಮ್ಮ ವಾಸಸ್ಥಾನಗಳಲ್ಲಿ ಈ ರೊಬೋಟುಗಳ ಸೇವೆಯನ್ನು ಪಡೆಯುತ್ತಿದ್ದಾರೆ. ಈ ರೋಬೋಟುಗಳ ಅಗತ್ಯ ಕಂಡುಬಂದಾಗ ಬಾಡಿಗೆಗೆ ಪಡೆಯಬಹುದಾಗಿದೆ. 'ಗುಲಗುಂಜಿಯಷ್ಟು ಪ್ರೀತಿ ಸಿಕ್ಕರೆ ಬೆಟ್ಟದಷ್ಟು ಬದಲಾವಣೆ ಕಾಣಬಹುದು' ಎಂಬ ಮಾತಿನಿಂದ ಪ್ರೇರಿತವಾಗಿ ಈ ರೋಬೋಟನ್ನು ತಯಾರಿಸಲಾಗಿದ್ದು, ಒಂಟಿತನ ಅನುಭವಿಸುವವರ ಬದುಕಿನಲ್ಲಿ ಈ ರೋಬೋಟುಗಳು ಸಕಾರಾತ್ಮಕ ಪಾತ್ರವನ್ನು ವಹಿಸುತ್ತಿವೆ.

ಹಿರಿಯರ ಆರೈಕೆಗೂ ರೋಬೋಟು

ಜಪಾನಿನಲ್ಲಿ ಹಿರಿಯರ ಆರೈಕೆಗೂ ರೋಬೋಟುಗಳನ್ನು ಬಳಸಲಾಗುತ್ತಿದೆ ಅಂದರೆ ಅಚ್ಚರಿಯಾದೀತು. ಜಪಾನ್ ತಂತ್ರಜ್ಞಾನ ಮುಂಚೂಣಿ ರಾಷ್ಟ್ರವಾಗಿದ್ದು, ದಿನೇ ದಿನೆ ಅಲ್ಲಿನ ಜನಸಂಖ್ಯೆಯಲ್ಲಿ ಹಿರಿಯರ ಪ್ರಮಾಣ ಹೆಚ್ಚುತ್ತಿರುವುದರಿಂದ, ಅವರ ಆರೈಕೆಯ ಸಮಸ್ಯೆಗೆ ತಂತ್ರಜ್ಞಾನ ಆಧರಿತ ಪರಿಹಾರಗಳನ್ನು ಅನ್ವೇಷಿಸುತ್ತಿದೆ.

ಈ ಹಿನ್ನೆಲೆಯಲ್ಲಿ, ಹಿರಿಯರ ಆರೈಕೆ ರೋಬೋಟ್‌ಗಳು (Elder Care Robots) ಮಹತ್ವಪೂರ್ಣ ಪಾತ್ರ ವಹಿಸುತ್ತಿವೆ. ಇವು ವೃದ್ಧರ ದೈನಂದಿನ ಜೀವನ ಸುಲಭಗೊಳಿಸುವಲ್ಲಿ ಮತ್ತು ಆರೈಕೆ ನೀಡುವವರು ಅನುಭವಿಸುವ ಭಾರವನ್ನು ಕಡಿಮೆ ಮಾಡುವಲ್ಲಿ ಸಹಾಯಕವಾಗಿವೆ.

ಅತಿ ವೇಗವಾಗಿ ವೃದ್ಧರ ಜನಸಂಖ್ಯೆ ಹೆಚ್ಚುತ್ತಿರುವ ವಿಶ್ವದ ದೇಶಗಳಲ್ಲಿ ಜಪಾನ್ ಒಂದಾಗಿದೆ. ಅಂದರೆ, 2020ರ ವೇಳೆಗೆ, 65 ವರ್ಷ ಮೇಲ್ಪಟ್ಟವರು ಒಟ್ಟಾರೆ ಜನಸಂಖ್ಯೆಯ ಶೇ.28ರಷ್ಟಿದ್ದರು. ಈ ಪ್ರಮಾಣ 2050ರ ವೇಳೆಗೆ ಶೇ.35 ಆಗುವ ನಿರೀಕ್ಷೆಯಿದೆ. ಜನಸಂಖ್ಯೆಯ ವೃದ್ಧಿ ಮತ್ತು ಜನನ ಪ್ರಮಾಣದ ಕುಸಿತದ ಕಾರಣದಿಂದ, ಹಿರಿಯರ ಆರೈಕೆಗೆ ಅಗತ್ಯವಿರುವ ಆರೋಗ್ಯ ಸೇವಾ ಸಿಬ್ಬಂದಿ ಮತ್ತು ಕುಟುಂಬದ ಸದಸ್ಯರ ಸಂಖ್ಯೆ ಕಡಿಮೆಯಾಗುತ್ತಿದೆ. ಈ ಕಾರಣಗಳಿಂದಾಗಿ, ತಂತ್ರಜ್ಞಾನವನ್ನು ಬಳಸಿಕೊಂಡು ಹೊಸದಾದ ಪರಿಹಾರಗಳನ್ನು ಹುಡುಕುವುದು ಅನಿವಾರ್ಯವಾಗಿದೆ.

ಹಿರಿಯರ ಆರೈಕೆಗಾಗಿ ವಿನ್ಯಾಸಗೊಳಿಸಲಾದ ರೋಬೋಟ್‌ಗಳು ಶಾರೀರಿಕ ಮತ್ತು ಮಾನಸಿಕ ಆರೈಕೆಯಲ್ಲಿ ಸಹಾಯ ಮಾಡುತ್ತವೆ. ಇವು ಹಲವಾರು ಕಾರ್ಯಗಳನ್ನು ನಿರ್ವಹಿಸಬಲ್ಲವು; ಉದಾಹರಣೆಗೆ, ಹಿರಿಯರು ಸುಲಭವಾಗಿ ನಡೆಯಲು ಸಹಾಯ ಮಾಡುವುದು, ಅವಶ್ಯಕ ಔಷಧಗಳನ್ನು ಸರಿಯಾದ ಸಮಯಕ್ಕೆ ಸೇವಿಸಲು ಪ್ರೇರೇಪಿಸುವುದು ಮತ್ತು ನೆನಪಿಸುವುದು, ಒಂಟಿತನವನ್ನು ಕಡಿಮೆ ಮಾಡಲು ಮತ್ತು ಕುಟುಂಬ ಸದಸ್ಯರೊಂದಿಗೆ ಸಂಪರ್ಕ ಸಾಧಿಸಲು ಸಹಾಯ ಮಾಡುವುದು, ಮಲಗಲು, ಎಬ್ಬಿಸಲು, ಸ್ನಾನ ಮಾಡಲು ಸಹಾಯಮಾಡುವುದು ಇತ್ಯಾದಿ.

ಜಪಾನಿನಲ್ಲಿ ಹಲವಾರು ಕಂಪನಿಗಳು ಹಿರಿಯರ ಆರೈಕೆಗಾಗಿ ವಿಶೇಷ ರೋಬೋಟ್‌ಗಳನ್ನು ಅಭಿವೃದ್ಧಿಪಡಿಸಿವೆ. ಉದಾಹರಣೆಗೆ, ಪಾರು (PARO) ಎಂಬ ರೋಬೋಟ್. ಇದು ಮೆತ್ತನೆಯ ಚರ್ಮದ, ಒಂಟಿ ಪ್ರಾಣಿಯ (Seal) ಆಕೃತಿಯಲ್ಲಿರುವ ರೋಬೋಟ್. ಇದು ಪೆಟ್ ಥೆರಪಿಗಾಗಿ ಬಳಕೆಯಾಗುತ್ತದೆ. ಹಿರಿಯರು ಇದನ್ನು ಮುದ್ದಾಡಿದರೆ ಮನಶ್ಶಾಂತಿ ಮತ್ತು ಉಲ್ಲಾಸ ಅನುಭವಿಸಬಹುದು. ಪಾರು ವಯೋವೃದ್ಧರಿಗೆ ಒಂಟಿತನವನ್ನು ನಿವಾರಿಸಲು ಸಹಾಯ ಮಾಡುತ್ತದೆ.

ಅದೇ ರೀತಿ 'ರಿಬೋ' ಎಂಬ ರೋಬೋಟ್. ಇದನ್ನು ಆಸ್ಪತ್ರೆಗಳಲ್ಲಿ ಅಥವಾ ವೃದ್ಧಾಶ್ರಮಗಳಲ್ಲಿ, ಹಿರಿಯರನ್ನು ಎಬ್ಬಿಸಲು ಮತ್ತು ಲಿಫ್ಟ್ ಮಾಡಲು ಬಳಸಬಹುದು. ಇದು 80 ಕಿಲೋ ತೂಕ ಹೊಂದಿದವರನ್ನು ಎತ್ತಬಲ್ಲದು.

ಹಾಲ್ಟ್ಸ್-ಅಲ್ ಎಂಬ ರೋಬೋಟ್, ನಡುಕ ಮತ್ತು ಕೈ-ಕಾಲುಗಳ ಶಕ್ತಿಹೀನತೆಯಿಂದ ಬಳಲುವವರಿಗೆ ನೆರವಾಗುತ್ತದೆ. ಇದು ಬೆನ್ನುಹುರಿಯ ನಿಯಂತ್ರಣ ವ್ಯವಸ್ಥೆಗೆ ಸಂವೇದನಾಶೀಲವಾಗಿದ್ದು, ನಡಿಗೆಯನ್ನು ಸುಲಭಗೊಳಿಸುತ್ತದೆ. ಹಿರಿಯರ ಸ್ವಾಯತ್ತತೆಯನ್ನು ಹೆಚ್ಚಿಸುವ ರೋಬೋಟ್‌ಗಳಿಂದ ಹಿರಿಯರು ತಮ್ಮ ಕೆಲಸಗಳನ್ನು ತಾವೇ ನಿರ್ವಹಿಸಬಹುದು. ಇದು ಮಾನವ ಆರೈಕೆಗಾರರ ಕಾರ್ಯಭಾರವನ್ನು ಹಂಚಿಕೊಳ್ಳುವುದರಿಂದ ಅವರ ಮೇಲಿನ ಶಾರೀರಿಕ ಮತ್ತು ಮಾನಸಿಕ ಒತ್ತಡ ಕಡಿಮೆಯಾಗುತ್ತದೆ. ಸಾಮಾಜಿಕ ಕರಕೌಶಲ ಇರುವ ರೋಬೋಟ್‌ಗಳು ಹಿರಿಯರೊಂದಿಗೆ ಸಂವಹನ ನಡೆಸಿ ಒಂಟಿತನವನ್ನು ದೂರಮಾಡಲು ಸಹಾಯ ಮಾಡುತ್ತವೆ.

ಈ ರೋಬೋಟ್‌ಗಳು ಬಹಳ ದುಬಾರಿಯಾಗಿದ್ದು, ಎಲ್ಲರೂ ಖರೀದಿಸಲು ಸಾಧ್ಯವಿಲ್ಲ. ಆದರೆ ಹೆಚ್ಚು ಜನರಿಗೆ ಈ ತಂತ್ರಜ್ಞಾನವನ್ನು ತಲುಪಿಸಲು, ಕಡಿಮೆ ದರದಲ್ಲಿ ಲಭ್ಯವಾಗುವ ರೋಬೋಟ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಇನ್ನೊಂದು ಸಂಗತಿಯೆಂದರೆ, ಇವುಗಳಿಗೆ ಮಾನವೀಯ ಸ್ಪರ್ಶದ ಕೊರತೆ ಇರುವುದು ನಿಜ. ಆದರೂ, ರೋಬೋಟ್‌ಗಳು ಮನುಷ್ಯರಂತೆ ಆರೈಕೆ ಮಾಡಲು ಸಾಧ್ಯವಿಲ್ಲ, ಏಕೆಂದರೆ, ಇವುಗಳಿಗೆ ಭಾವನೆ, ಸಂವೇದನೆಗಳಿಲ್ಲ. ತಂತ್ರಜ್ಞಾನ ಸದಾ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತದೆಯೇ ಎಂಬ ಪ್ರಶ್ನೆ ಇವುಗಳ ಸಾಚಾತನದಲ್ಲಿ ಅಡಕವಾಗಿದೆ. ದೊಡ್ಡ ಮಟ್ಟದ ಡಾಟಾ ಸಂಗ್ರಹ ಮತ್ತು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮೌಲ್ಯಮಾಪನಗಳು ಇವುಗಳ ಬಳಕೆಯ ಕುರಿತು ಹತ್ತಾರು ಪ್ರಶ್ನೆಗಳನ್ನು ಎತ್ತಬಹುದು.

ಹಿರಿಯರ ಆರೈಕೆ ರೋಬೋಟ್‌ಗಳು ಜಪಾನಿನಲ್ಲಿ ದೊಡ್ಡ ಪರಿವರ್ತನೆಯನ್ನು ತರಲು ಪ್ರಾರಂಭಿಸಿರುವುದು ಆಶಾದಾಯಕ ವಿಚಾರವೇ. ಇವು ನಾಡು, ನುಡಿ, ಭಾವನೆಗಳನ್ನು ತಲುಪಿಸುವ ಮಟ್ಟಕ್ಕೆ ಬೆಳೆಯುತ್ತಿದ್ದು, ಇತರ ರಾಷ್ಟ್ರಗಳಿಗೂ ಮಾದರಿಯಾಗಿವೆ. ಜಪಾನ್ ಸರಕಾರ ಮತ್ತು ತಂತ್ರಜ್ಞಾನ ಸಂಸ್ಥೆಗಳು ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆಗಳನ್ನು ನಡೆಸುತ್ತಿದ್ದು, ಭವಿಷ್ಯದಲ್ಲಿ ತಂತ್ರಜ್ಞಾನ-ಆಧರಿತ ಆರೈಕೆಯು ಇನ್ನಷ್ಟು ಜನಪ್ರಿಯವಾಗಲಿದೆ.

ಪೆಪ್ಪರ್ ರೋಬೋಟ್

ತಂತ್ರಜ್ಞಾನ, ರೋಬೋಟಿಕ್ಸ್ ಮತ್ತು ಕೃತಕ ಬುದ್ಧಿಮತ್ತೆಯಲ್ಲಿ ಜಪಾನ್ ವಿಶ್ವದ ಮುಂಚೂಣಿಯಲ್ಲಿರುವುದು ಸರ್ವವಿದಿತ. ಇಂಥ ತಂತ್ರಜ್ಞಾನ ಪರಿಹಾರಗಳಲ್ಲಿ ಸಾಫ್ಟ್‌ಬ್ಯಾಂಕ್ ರೊಬೋಟಿಕ್ಸ್ (SoftBank Robotics) ಸಂಸ್ಥೆ ಅಭಿವೃದ್ಧಿಪಡಿಸಿದ ಪೆಪ್ಪರ್ (Pepper) ರೋಬೋಟ್ ಒಂದು ಪ್ರಮುಖ ಹೆಜ್ಜೆ. ಪೆಪ್ಪರ್ ವಿಶ್ವದ ಮೊದಲ ಸಾಮಾಜಿಕ ಸಹಾಯಕ (Social Humanoid) ರೋಬೋಟ್ ಆಗಿದ್ದು, ಮನುಷ್ಯರ ಭಾವನೆ



ಗಳನ್ನು ಅರ್ಥೈಸಿ ಸಂವಾದ ನಡೆಸುವಂತೆ ಮತ್ತು ನಾನಾ ಕ್ಷೇತ್ರಗಳಲ್ಲಿ ಸಹಾಯ ಮಾಡುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ.

2014ರಲ್ಲಿ ಸಾಫ್ಟ್‌ಬ್ಯಾಂಕ್ ಮತ್ತು ಫ್ರೆಂಚ್ ರೋಬೋಟಿಕ್ಸ್ ಕಂಪನಿಯ (Aldebaran Robotics)ಸಹಯೋಗದಲ್ಲಿ ಪೆಪ್ಪರ್ ರೋಬೋಟ್ ಅನ್ನು ಅಭಿವೃದ್ಧಿಪಡಿಸಲಾಯಿತು. ಈ ರೋಬೋಟ್ ವಿಶೇಷವಾಗಿ ಮನುಷ್ಯರೊಂದಿಗೆ ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಸಂವಹನ ನಡೆಸಲು ವಿನ್ಯಾಸಗೊಂಡಿದೆ. ಇದರ ತೂಕ 28 ಕೆ.ಜಿ., ಬ್ಯಾಟರಿ ಲೈಫ್ 12 ಗಂಟೆ ಹಾಗೂ ಎತ್ತರ 120 ಸೆಂ.ಮೀ. (4 ಅಡಿ). ಇದು ಸರಾಗವಾಗಿ ಮಾತನಾಡುತ್ತದೆ, ಭಾವನೆಗಳನ್ನು ಗುರುತಿಸುತ್ತದೆ ಮತ್ತು ಪ್ರಶ್ನೆಗಳಿಗೆ ಉತ್ತರಿಸುತ್ತದೆ.

ಪೆಪ್ಪರ್ ಅನ್ನು ಮನುಷ್ಯರ ಸೇವೆಗಾಗಿ ರಚಿಸಲಾಗಿದ್ದು, ಇದನ್ನು ವಿದ್ಯಾಲಯಗಳು, ಆಸ್ಪತ್ರೆಗಳು, ಬ್ಯಾಂಕುಗಳು, ಅಂಗಡಿಗಳು ಮತ್ತು ಕಚೇರಿಗಳು ಮೊದಲಾದೆಡೆಗಳಲ್ಲಿ ಬಳಸಲಾಗುತ್ತಿದೆ.

ಮಾನವಸಾದೃಶ ಸಂವಹನ (Human-like Interaction)ಕ್ಕೆ ನೆರವಾಗುವ ತಂತ್ರಜ್ಞಾನವನ್ನು ಈ ರೋಬೋಟ್ ಹೊಂದಿದೆ. ಪೆಪ್ಪರ್ ರೋಬೋಟ್ ಕೇವಲ ಯಾಂತ್ರಿಕ ಸಾಧನವಲ್ಲ, ಇದು ಮಾನವಸಂವಹನಕ್ಕೆ ಹೊಂದಿಕೊಳ್ಳುವ ತಂತ್ರಜ್ಞಾನವನ್ನು ಹೊಂದಿದೆ. ಇದು ಮನುಷ್ಯರೊಂದಿಗೆ ಮಾತನಾಡಬಲ್ಲದು, ನಗುವಿನೊಂದಿಗೆ ಪ್ರತಿಕ್ರಿಯಿಸಬಲ್ಲದು. ಮುಖಭಾವ ಮತ್ತು ಧ್ವನಿಯ ಅಂಶಗಳ ಮೂಲಕ ದೈಹಿಕ ಮತ್ತು ಭಾವನಾತ್ಮಕ ಭಿನ್ನತೆಗಳನ್ನು ಗುರುತಿಸಬಲ್ಲದು. ಇದು ಜಪಾನೀಸ್, ಇಂಗ್ಲಿಷ್ ಮತ್ತು ಹಲವಾರು ಭಾಷೆಗಳಲ್ಲಿ ಮಾತನಾಡಬಲ್ಲದು.

ಪೆಪ್ಪರ್ ರೋಬೋಟ್ ಉನ್ನತ ಕೃತಕ ಬುದ್ಧಿಮತ್ತೆ (AI) ತಂತ್ರಜ್ಞಾನವನ್ನು ಬಳಸಿಕೊಂಡು ಸ್ವತಃ ಕಲಿಯುವ ಸಾಮರ್ಥ್ಯವನ್ನು ಹೊಂದಿದೆ. 3D ಕೆಮರಾ ಮತ್ತು ಸೆನ್ಸರ್‌ಗಳ ಸಹಾಯದಿಂದ ಸುತ್ತಲಿನ ಪರಿಸರವನ್ನು ಗುರುತಿಸುವ, ಜನರ ಹಾವಭಾವಗಳನ್ನು ನೋಡುವ ಸಾಮರ್ಥ್ಯವನ್ನು ಹೊಂದಿದೆ. ಮಾಹಿತಿ ತಲುಪಿಸಲು ಮತ್ತು ಬಳಕೆದಾರರು ನೇರವಾಗಿ ಸಹಾಯ ಪಡೆಯಲು ಟಚ್ ಸ್ಕ್ರೀನ್ ಪರದೆ ಹೊಂದಿದೆ. ನಡಿಗೆಯನ್ನು ಅರ್ಥೈಸಿ, ತನ್ನ ಕಾರ್ಯಗಳನ್ನು ಹೊಂದಿಸಿಕೊಳ್ಳಲು ಮೋಷನ್ ಸೆನ್ಸರ್‌ಗಳನ್ನು ಹೊಂದಿದೆ.

ಈ ರೋಬೋಟ್ ಅನೇಕ ಕ್ಷೇತ್ರಗಳಲ್ಲಿ ಉಪಯುಕ್ತವಾಗಲಿದೆ. ಆಸ್ಪತ್ರೆ ಮತ್ತು ಆರೋಗ್ಯ ಸೇವೆ ಒದಗಿಸುವುದು, ಔಷಧ ಸೇವನೆಗೆ ರೋಗಿಗಳಿಗೆ ನೆರವಾಗುವುದು, ಆರೋಗ್ಯದ ಬಗ್ಗೆ ಮಕ್ಕಳಿಗೆ ಪ್ರಚಾರ ಮಾಡುವುದು, ಮಾನಸಿಕ ಆರೋಗ್ಯವನ್ನು ಉತ್ತಮಗೊಳಿಸಲು ಸಹಾಯ ಮಾಡುವುದು, ಪಾಠ ಕಲಿಯಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು, ಚೇತರಿಕೆ ಅಗತ್ಯವಿರುವ ಮಕ್ಕಳಿಗೆ ವಿಶೇಷ ಪಾಠ ಕಲಿಸುವುದು, ಗಣಿತ, ವಿಜ್ಞಾನ, ಭಾಷೆ ಮೊದಲಾದ ವಿಷಯಗಳನ್ನು ನಿರ್ವಹಿಸುವುದು, ಅಂಗಡಿಗಳು ಮತ್ತು ಹೋಟೆಲ್‌ಗಳಲ್ಲಿ ಗ್ರಾಹಕರನ್ನು ಸ್ವಾಗತಿಸುವುದು, ವಸ್ತುಗಳ ಪರಿಚಯ ಮಾಡಿಸುವುದು, ಸ್ವಯಂಚಾಲಿತ ಮಾಹಿತಿ ನೀಡುವುದು, ಬ್ಯಾಂಕಿಂಗ್ ಮತ್ತು ಹಣಕಾಸು ಕ್ಷೇತ್ರಗಳಲ್ಲಿ ಗ್ರಾಹಕರಿಗೆ ಸೇವೆಗಳ ಬಗ್ಗೆ ಮಾಹಿತಿ ನೀಡುವುದು, ಸಾಲ ಅಥವಾ ಖಾತೆಗಳ ವಿವರಗಳನ್ನು ವಿವರಿಸುವುದು, ಸಹಾಯ ಕೇಂದ್ರವಾಗಿ ಕಾರ್ಯನಿರ್ವಹಿಸುವುದು... ಈ ನಿಟ್ಟಿನಲ್ಲಿ ಪೆಪ್ಪರ್ ರೋಬೋಟ್ ಕ್ರಾಂತಿಕಾರಕ ಎನಿಸಿಕೊಂಡಿದೆ.

ಕೆಮರಾಗಳಿಂದ ವ್ಯಕ್ತಿಗಳನ್ನು ಗುರುತಿಸಿ, ಅವರ ಭಾವನೆಗಳನ್ನು ಅರ್ಥೈಸಲು, ಬಳಕೆದಾರರ ಚಲನೆಗಳನ್ನು ಅನುಸರಿಸಿ ಪ್ರತಿಕ್ರಿಯೆ ನೀಡಲು, ಬಳಕೆದಾರರು ನೇರವಾಗಿ ಮಾಹಿತಿಯನ್ನು ಪಡೆಯಲು, ಪೆಪ್ಪರ್ ರೋಬೋಟ್ ಸಹಾಯಕ. ಯಾಂತ್ರಿಕ ರೋಬೋಟ್ ಯಾವುದೇ ಮಾನವ ಸಂಬಂಧವನ್ನು ಸಂಪೂರ್ಣವಾಗಿ ಪ್ರತಿನಿಧಿಸಲು ಸಾಧ್ಯವಿಲ್ಲ. ಆರೋಗ್ಯ ಮತ್ತು ಆರೈಕೆ ಕ್ಷೇತ್ರದಲ್ಲಿ ಮಾನವ ಸೇವೆಯ ಅಗತ್ಯವಿದೆ.

ಪೆಪ್ಪರ್‌ನ ಮುಂದಿನ ತಂತ್ರಜ್ಞಾನ ಸುಧಾರಣೆಗೆ ಜಪಾನ್ ಗಂಭೀರವಾಗಿ ಗಮನಹರಿಸುತ್ತಿದೆ. ಭವಿಷ್ಯದಲ್ಲಿ, ಈ ರೋಬೋಟ್ ಅನ್ನು AI ಪರಿಷ್ಕೃತ ಮಾಡಲಾಗುವುದು ಮತ್ತು ಹೆಚ್ಚು ಭಾಷೆಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಅದರಲ್ಲಿ ಮೂಡಿಸಲಾಗುವುದು. ಅಲ್ಲದೇ ಅದಕ್ಕೆ ಹೆಚ್ಚು ಸೂಕ್ಷ್ಮ ಸಂವೇದನೆ ಮತ್ತು ಹೃದಯಸಂಪನ್ನತೆಯನ್ನು ಅಳವಡಿಸಲಾಗುವುದು.

ಪೆಪ್ಪರ್ ರೋಬೋಟ್, ಜಪಾನ್‌ನಲ್ಲಿ ಮಾನವ-ರೋಬೋಟ್ ಸಹಜ ಸಂಪರ್ಕದ ಹೊಸ ಅಸ್ತಿತ್ವವನ್ನು ರೂಪಿಸುತ್ತಿರುವುದಂತೂ ಸತ್ಯ. ಇದು ಆರೋಗ್ಯ, ವ್ಯವಹಾರ, ಶಿಕ್ಷಣ ಮತ್ತು ಸಾಮಾನ್ಯ ಜೀವನದಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ. ಭವಿಷ್ಯದ ತಂತ್ರಜ್ಞಾನಗಳಲ್ಲಿ ಪೆಪ್ಪರ್ ತನ್ನ ಅನುಕೂಲತೆಗಳಿಂದ ಮತ್ತಷ್ಟು ಜನರ ಜೀವನ ಸುಧಾರಿಸುವುದರಲ್ಲಿ ಅನುಮಾನವೇ ಇಲ್ಲ. ಪೆಪ್ಪರ್ ರೋಬೋಟ್ ಕೇವಲ ಒಂದು ತಂತ್ರಜ್ಞಾನ ಸಾಧನವಲ್ಲ, ಅದು ಭವಿಷ್ಯದ ಮಾನವ ಸಂಬಂಧಗಳ ಪ್ರತಿರೂಪವೂ ಹೌದು!

ಭೂಮಿಯ ಸುತ್ತ ಕ್ಲಾರ್ಕ್ ಕಕ್ಷೆ ಇದೆ, ಆ ಹೆಸರು ಏಕಿದೆ?

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಟ್ಟ ಹತ್ತಿದ ಮೇಲೆ ಏಣಿಯನ್ನು ಮರೆಯಬಾರದು ಅಂತೊಂದು ಹಿತನುಡಿ. ಈಗ ಯಾರೋ ಏಣಿ ಮರೆತವರ ಉದಾಹರಣೆ ಸಿಕ್ಕಿತೆಂದು ಹೇಳುತ್ತಿರುವುದಲ್ಲ. ಅಟ್ಟದಲ್ಲೇ ಹುಟ್ಟಿದವರಿಗೆ- ಈ ಹಿಂದೆ ಏನು ಪರಿಸ್ಥಿತಿಯಿತ್ತು, ಇಲ್ಲಿಗೆ ಬರುವುದು ಹೇಗೆ ಸಾಧ್ಯವಾಯ್ತು, ಅದರಲ್ಲಿ ಏಣಿಯ ಪಾತ್ರ ಏನಿತ್ತು ಅಂತೆಲ್ಲ ಗೊತ್ತೇ ಇರುವುದಿಲ್ಲ! ಅಂಥದೊಂದು ಏಣಿಯ ವಿಚಾರ ಈ ವಾರ. ಸಮಷ್ಟಿಯಾಗಿ ಮನುಕುಲವೆಲ್ಲ ನೆನಪಿಸಿಕೊಳ್ಳಬೇಕಾದ್ದು.

ಆಗಸ್ಟ್ 19, 1964. ಅಮೆರಿಕದ ಕೇಪ್ ಕೆನ್ವೆರಾಲ್ ಉಡ್ಡಯನ ಕೇಂದ್ರದಿಂದ ಡೆಲ್ಟಾ-ಡಿ ರ‍್ಯಾಕೆಟ್ ಆಗಸಕ್ಕೆ ಚಿಮ್ಮಿತು. ಸಿಂಕಾಮ್-3 ಎಂಬ ಉಪಗ್ರಹವನ್ನು ಭೂತಲದಿಂದ 35,786 ಕಿ.ಮೀ. ಎತ್ತರದಲ್ಲಿ ಸಮಭಾಜಕ ವೃತ್ತಕ್ಕೆ ಸಮಾಂತರವಾದ ಕಕ್ಷೆಯಲ್ಲಿ ಯಶಸ್ವಿಯಾಗಿ ಸ್ಥಾಪಿಸಿತು. ಆ ಎತ್ತರದಲ್ಲಿ ಉಪಗ್ರಹವು ಭೂಮಿ ತನ್ನ ಅಕ್ಷದಲ್ಲಿ ಸುತ್ತುವ ವೇಗದಷ್ಟೇ ವೇಗದಲ್ಲಿ ಸುತ್ತತೊಡಗಿತು, ಶಾಂತಸಾಗರಕ್ಕೆ ಮೇಲಿನ ಒಂದು ಬಿಂದುವಿನಲ್ಲಿ ನಿಶ್ಚಲವಾಗಿ ಇದೆಯೇನೋ ಎಂಬಂತಾಯ್ತು. ಹಾಗಿರಬೇಕೆಂದೇ ಅದನ್ನು ಕಳುಹಿಸಿದ್ದು. 1964ರ ಅಕ್ಟೋಬರ್‌ನಲ್ಲಿ ಟೋಕಿಯೊದಲ್ಲಿ ನಡೆದ ಒಲಿಂಪಿಕ್ಸ್ ಪಂದ್ಯಗಳ ದೃಶ್ಯಾವಳಿಯನ್ನು ಅಮೆರಿಕದಲ್ಲಿ ಟಿವಿಯಲ್ಲಿ ತೋರಿಸುವುದು ಸಿಂಕಾಮ್-3 ಉಪಗ್ರಹದಿಂದಾಗಿ ಸಾಧ್ಯವಾಯಿತು. ತನ್ಮೂಲಕ ಜಾಗತಿಕ ದೂರಸಂಪರ್ಕದ ಹೊಸ ಅಧ್ಯಾಯವೊಂದು ತೆರೆಯಿತು. ಈಗ ತಂತ್ರಜ್ಞಾನದಲ್ಲಿ ನೂರು ಪಟ್ಟು ಸಾಮರ್ಥ್ಯದ 500ಕ್ಕೂ ಹೆಚ್ಚು ಉಪಗ್ರಹಗಳು ಭೂತಲದಿಂದ ಅಷ್ಟೇ ಎತ್ತರದ ಕಕ್ಷೆಯಲ್ಲಿ ಬೇರೆಬೇರೆ ಬಿಂದುಗಳಲ್ಲಿ ಸ್ಥಾಪಿತವಾಗಿವೆ; ಭೂಮಿಯ ಜತೆಜತೆಗೇ ನಿರಂತರ ಸುತ್ತುತ್ತಿವೆ; ಭೂಮಿಯ ಒಂದೊಂದು ಚದರ ಇಂಚಿಗೂ ಟೆಲಿವಿಷನ್, ರೇಡಿಯೊ, ಟೆಲಿಫೋನ್ ಮತ್ತಿತರ ದೂರಸಂಪರ್ಕ ಸೇವೆಗಳನ್ನು ಸಾಧ್ಯವಾಗಿಸಿವೆ. ಎಲ್ಲಿಯವರೆಗೆಂದರೆ ನಮಗಿದೆಲ್ಲ ಒಂಥರ ಸಸಾರವೇ ಆಗಿಬಿಟ್ಟಿದೆ. ಆದರೆ 1964ರಲ್ಲಿ ಅದೊಂದು ಅದ್ಭುತವೆಂದೇ ಅನಿಸಿದ್ದಿರಬಹುದು. ಸೈನ್ಸ್ ಫಿಕ್ಷನ್ ಕಾದಂಬರಿಗಳಲ್ಲಿ, ಸಿನಿಮಾಗಳಲ್ಲಿ ಮಾತ್ರ ಇರುವಂಥದ್ದು ಸಾಕಾರಗೊಂಡ ಅನುಭವವಾಗಿರಬಹುದು. ಆಶ್ಚರ್ಯವೆಂದರೆ ನಿಜಕ್ಕೂ ಒಬ್ಬ ವಿಜ್ಞಾನ ಲೇಖಕನು ದಶಕಗಳ ಹಿಂದೆ- ಅಂತರಿಕ್ಷಕ್ಕೆ ಉಪಗ್ರಹಗಳನ್ನು ಹಾರಿಸುವುದೆಲ್ಲ ದೂರದ ಕನಸಿನ ಮಾತಾಗಿದ್ದ ಕಾಲದಲ್ಲಿ- ಬರೆದಿದ್ದ ಕಲ್ಪನೆಯೇ ಸಾಕಾರಗೊಂಡಿದ್ದಾಗಿತ್ತು. ವಿಜ್ಞಾನ ಲೇಖಕನೊಬ್ಬ ದೂರಸಂಪರ್ಕ ಉಪಗ್ರಹಗಳ ಪಿತಾಮಹನೆನಿಸಿದ ಅದ್ಭುತರಮ್ಯ ಕಥೆಯಿದು.

ಆ ಜಗತ್ಪ್ರಸಿದ್ಧ ವಿಜ್ಞಾನ ಲೇಖಕ ಸರ್ ಆರ್ಥರ್ ಚಾರ್ಲ್ಸ್ ಕ್ಲಾರ್ಕ್. 80ಕ್ಕೂ ಹೆಚ್ಚು ಪುಸ್ತಕಗಳು, 500ಕ್ಕೂ ಹೆಚ್ಚು ಲೇಖನಗಳು, ಸಣ್ಣಕತೆಗಳು ಅವರ ಲೇಖನಿಯಿಂದ ಮೂಡಿವೆ. Childhood's End, Rendezvous With Rama, 2001: a Space Odyssey ಮುಂತಾದ ಕೃತಿಗಳಂತೂ ಪ್ರಖ್ಯಾತವಷ್ಟೇ ಅಲ್ಲ ಪ್ರಭಾವಶಾಲಿ ಎನಿಸಿದವು. ಇಂಗ್ಲೆಂಡ್‌ನ ಸೊಮರ್‌ಸೆಟ್ ಕೌಂಟಿಯ ಮೈನ್‌ಹೆಡ್ ಎಂಬಲ್ಲಿ ಡಿಸೆಂಬರ್ 16, 1917ರಂದು ಜನಿಸಿದ ಕ್ಲಾರ್ಕ್‌ಗೆ ಬಾಲ್ಯದಿಂದಲೇ ವಿಜ್ಞಾನದಲ್ಲಿ ಆಸಕ್ತಿ. ಪಳೆಯುಳಿಕೆಗಳ ಸಂಗ್ರಹ, ಖಗೋಲಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿದುಕೊಳ್ಳುವುದು, ಅಮೆರಿಕದಿಂದ ಪ್ರಕಟವಾಗುವ ವಿಜ್ಞಾನ ಪತ್ರಿಕೆಗಳನ್ನು ತರಿಸಿ ಓದುವುದು ನೆಚ್ಚಿನ ಹವ್ಯಾಸಗಳು. ಬ್ರಿಟಿಷ್ ಇಂಟರ್‌ಪ್ಲಾನೆಟರಿ ಸೊಸೈಟಿಯ ಸದಸ್ಯತ್ವವೂ ಇತ್ತು. ಆದರೆ ವಿಶ್ವವಿದ್ಯಾಲಯದಲ್ಲಿ ಶಿಕ್ಷಣಕ್ಕೆ ಬೇಕಾದಷ್ಟು ಆರ್ಥಿಕ ಸ್ಥಿತಿ ಮನೆಯಲ್ಲಿರಲಿಲ್ಲ. ಹಾಗಾಗಿ 19 ವರ್ಷ ಪ್ರಾಯದಲ್ಲಿ ಯುಕೆ ಎಜುಕೇಷನ್ ಬೋರ್ಡ್‌ನಲ್ಲಿ ಪಿಂಚಣಿ ಲೆಕ್ಕಪರಿಶೋಧಕನಾಗಿ ಉದ್ಯೋಗಕ್ಕೆ ಸೇರ್ಪಡೆ. ಆಗಲೇ ಎರಡನೇ ಪ್ರಪಂಚಯುದ್ಧ ಆರಂಭ. ಅದರಲ್ಲಿ ಪಾಲ್ಗೊಳ್ಳಲಿಕ್ಕಾಗುವಂಥ ಶಿಕ್ಷಣ ಪಡೆದು 1941ರಲ್ಲಿ ರಾಯಲ್ ಏರ್‌ಫೋರ್ಸ್‌ನಲ್ಲಿ ರೇಡಾರ್ ಟೆಕ್ನಿಷಿಯನ್ ವೃತ್ತಿ. ಯುದ್ಧಸಮಯದಲ್ಲಿ ಗ್ರೌಂಡ್ ಕಂಟ್ರೋಲ್ಡ್ ಎಪ್ರೋಚ್ (ಜಿಸಿಎ) ರೇಡಾರ್ ನಿರ್ಮಾಣದಲ್ಲಿ ಸೇವೆ. ಯುದ್ಧವಿಮಾನಗಳು ಎಂಥ ಹವಾಮಾನದಲ್ಲಾದರೂ ಸುರಕ್ಷಿತವಾಗಿ ಇಳಿಯುವುದಕ್ಕೆ ಜಿಸಿಎ ರೇಡಾರ್ ಬಳಕೆಯಾಗುತ್ತದೆ. 1963ರಲ್ಲಿ ಕ್ಲಾರ್ಕ್ ಬರೆದ 'ಗ್ಲೈಡ್ ಪಾಥ್' ಕಾದಂಬರಿ ಆ ಅನುಭವದಿಂದಲೇ ಮೂಡಿದ್ದಂತೆ.

ಅಕ್ಟೋಬರ್ 1945. ಪ್ರಪಂಚಯುದ್ಧಕ್ಕೆ ತೆರೆಬಿದ್ದು ಒಂದು ತಿಂಗಳಾಗಿತ್ತಷ್ಟೇ. ಕ್ಲಾರ್ಕ್ ಮಹತ್ವಾಕಾಂಕ್ಷೆಯ ಪತ್ರವೊಂದನ್ನು 'ವೈರ್‌ಲೆಸ್ ವರ್ಲ್ಡ್' ಎಂಬ ಬ್ರಿಟಿಷ್ ಮ್ಯಾಗಝಿನ್‌ನಲ್ಲಿ ಪ್ರಕಟಿಸಿದರು. Extra-Terrestrial Relays – Can Rocket Stations Give World-Wide Radio Coverage? ಎಂದು ಪತ್ರದ ಶೀರ್ಷಿಕೆ. ಬಾಹ್ಯಾಕಾಶ ತಾಂತ್ರಿಕತೆಯನ್ನು ಬಳಸಿ ಜಾಗತಿಕ ದೂರಸಂಪರ್ಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಿಕ್ಕೆ ಸವಿವರ ಯೋಜನೆಯೊಂದನ್ನು ಕ್ಲಾರ್ಕ್ ಅದರಲ್ಲಿ ಮಂಡಿಸಿದ್ದರು. ಪತ್ರದ ಒಕ್ಕಣೆ ಹೀಗಿತ್ತು: ''ಭೂಮಿಯ ಮೇಲೆಯೇ ತಂತಿಗಳ ಬೃಹತ್ ಜಾಲವನ್ನು ಸ್ಥಾಪಿಸಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ದೂರವಾಣಿ ಸಂಪರ್ಕ ಸಾಧ್ಯವಿದೆಯಾದರೂ ದೂರ ಹೆಚ್ಚಿದಂತೆಲ್ಲ ದುಬಾರಿಯಾಗುತ್ತದೆ, ಗುಣಮಟ್ಟ ತಗ್ಗುತ್ತದೆ. ಟೆಲಿವಿಷನ್ ಸಿಗ್ನಲ್‌ಗಳದಂತೂ ಇನ್ನೂ ದಾರುಣ ಅವಸ್ಥೆ. ಒಂದು ಟಿವಿ ಟ್ರಾನ್ಸ್‌ಮಿಟರ್‌ನ ಪ್ರಸಾರ ಹೆಚ್ಚೆಂದರೆ 100 ಮೈಲು ವ್ಯಾಪ್ತಿಯನ್ನು ತಲುಪೀತು. ಬ್ರಿಟನ್‌ನಂಥ ದೇಶದೆಲ್ಲೆಡೆ ಪ್ರಸಾರವಾಗಬೇಕಿದ್ದರೆ ಪ್ರತಿ 50 ಮೈಲುಗಳಿಗೊಂದು ಟ್ರಾನ್ಸ್‌ಮಿಟರ್ ಬೇಕು. ಅದಕ್ಕಿಂತ, ಬಾಹ್ಯಾಕಾಶದಲ್ಲಿ ರಿಲೇ ಘಟಕಗಳನ್ನು ಸ್ಥಾಪಿಸಿದರೆ ಬಹಳ ಪ್ರಯೋಜನವಾಗುತ್ತದೆ. ಭೂತಲದಿಂದ ಸುಮಾರು 36,000 ಕಿ.ಮೀ. ಎತ್ತರದ ಕಕ್ಷೆಯಲ್ಲಿ ಅಂಥ ಘಟಕವನ್ನಿಟ್ಟರೆ ಒಂದು ಸುತ್ತು ಬರಲಿಕ್ಕೆ 24 ಗಂಟೆ ಬೇಕಾಗುತ್ತದೆ. ಅಷ್ಟು ಹೊತ್ತಿನಲ್ಲಿ ಭೂಮಿಯೂ ಒಂದಾವರ್ತಿ ಸುತ್ತುವುದರಿಂದ ರಿಲೇ ಘಟಕವು ಪ್ರತಿಕ್ಷಣವೂ ಭೂಮಿಯ ಮೇಲಿನ ನಿರ್ದಿಷ್ಟವಾದೊಂದು ಬಿಂದುವಿನತ್ತಲೇ ಮುಖ ಮಾಡಿರುತ್ತದೆ. ಭೂಮಿಯ ಮೇಲಿಂದ ಆ ಘಟಕಕ್ಕೆ ಸಂಜ್ಞೆಗಳನ್ನು ಕಳುಹಿಸಿದರೆ, ಅದರಲ್ಲಿರುವ ಗ್ರಾಹಕ ಮತ್ತು ಪ್ರೇಷಕಗಳು ಸಂಜ್ಞೆಗಳ ಮರುಪ್ರಸರಣ ಮಾಡಬಲ್ಲವು. ವಾತಾವರಣವನ್ನು ಸಶಕ್ತವಾಗಿ ತೂರಿಕೊಂಡು ಹೋಗಬಲ್ಲ ಕಂಪನಾಂಕ ಅಳವಡಿಸಿದರಾಯ್ತು. ಕಕ್ಷೆಯಲ್ಲಿರುವ ಒಂದು ರಿಲೇ ಘಟಕವು ಸರಿಸುಮಾರು ಅರ್ಧ ಭೂಗೋಲವನ್ನು ವ್ಯಾಪಿಸಬಲ್ಲದು. ಮೂರು ಘಟಕಗಳನ್ನು ಮೂರು ಬಿಂದುಗಳಲ್ಲಿ ಸ್ಥಾಪಿಸಿದರೆ ಇಡೀ ಪ್ರಪಂಚವನ್ನು ವ್ಯಾಪ್ತಿಪ್ರದೇಶಕ್ಕೆ ಒಳಪಡಿಸಬಹುದು!''

ಅಂಥ ರಿಲೇ ಘಟಕಗಳನ್ನು ಕಕ್ಷೆಯಲ್ಲಿ ಸ್ಥಾಪಿಸಿದರೆ ಅವುಗಳ ಶಕ್ತಿಸಾಮರ್ಥ್ಯ ಎಷ್ಟಿರಬೇಕು ಎಂಬ ಲೆಕ್ಕ ಸಹ ಮಾಡಿ, ಭೂಮಿ ಮೇಲೆ 50 ಮೈಲುಗಳಿಗೊಂದರಂತೆ ಟ್ರಾನ್ಸ್‌ಮಿಟರ್‌ಗಳನ್ನು ಕಟ್ಟುವುದಕ್ಕಿಂತ ಕಡಿಮೆ ಖರ್ಚಿನಲ್ಲಿ ಸಾಧಿಸಬಹುದು ಎಂಬ ವಿವರಗಳನ್ನೂ ಕ್ಲಾರ್ಕ್ ಒದಗಿಸಿದ್ದರು. ಅವರ ದೂರದೃಷ್ಟಿ ಎಷ್ಟು ದಶಕಗಳ ಮುಂದಿನ ಚಿತ್ರಣ ಕಲ್ಪಿಸಿತ್ತು ಮತ್ತು ಅದಕ್ಕೆ ತಕ್ಕ ಆಲೋಚನೆ ಮಾಡಿತ್ತೆಂಬುದು ಗಮನಾರ್ಹ. ಏಕೆಂದರೆ ವಾಣಿಜ್ಯಮಟ್ಟದಲ್ಲಿ ಟೆಲಿವಿಷನ್ ಪ್ರಸಾರ ಆಗಿನ್ನೂ ಪ್ರಾಯೋಗಿಕ ರೀತಿಯಲ್ಲಷ್ಟೇ ನಡೆದು ಶೈಶವಾವಸ್ಥೆಯಲ್ಲಿತ್ತು. ಯುದ್ಧದಿಂದಾಗಿ ಪ್ರಗತಿ ಕುಂಠಿತವಾಗಿತ್ತು. ಜರ್ಮನಿ ದೇಶದಿಂದ ವಿ-2 ಎಂಬೊಂದು ಕ್ಷಿಪಣಿಯನ್ನು ಆಗಸಕ್ಕೆ ಚಿಮ್ಮಿಸಲಾಗಿತ್ತು ಎನ್ನುವುದನ್ನು ಬಿಟ್ಟರೆ ಮನುಷ್ಯನಿರ್ಮಿತ ಉಪಕರಣ ಯಾವುದೂ ಬಾಹ್ಯಾಕಾಶವನ್ನು ಪ್ರವೇಶಿಸಿರಲಿಲ್ಲ. ಅಂಥದ್ರಲ್ಲಿ ಭೂಮಿಯಿಂದ ಕರಾರುವಾಕ್ಕಾಗಿ 36,000 ಕಿ.ಮೀ. ದೂರದ ಕಕ್ಷೆಯಲ್ಲಿ ಉಪಗ್ರಹವನ್ನು ಸ್ಥಾಪಿಸುವಂಥ ವಿಚಾರವೆಲ್ಲ ಆಗೋದಲ್ಲ ಹೋಗೋದಲ್ಲ ಎಂದು ಪಕ್ಕಕ್ಕೆ ಸರಿಸುವ ಪರಿಸ್ಥಿತಿ. ಆದರೆ ಕ್ಲಾರ್ಕ್‌ಗೆ ಸ್ಪಷ್ಟ ಕಲ್ಪನೆ ಇತ್ತು. ಆದ್ದರಿಂದಲೇ ಪತ್ರವನ್ನು ಹೀಗೆ ಮುಗಿಸಿದ್ದರು: ''ನಾನಿಲ್ಲಿ ಪ್ರಸ್ತಾವಿಸುತ್ತಿರುವುದು ಮುಂದಿನ ಒಂದೆರಡು ವರ್ಷಗಳ ವಿಚಾರವಲ್ಲ, ಬದಲಿಗೆ 50 ವರ್ಷಗಳಷ್ಟು ಭವಿಷ್ಯತ್ಕಾಲದ್ದು. ಪ್ರಪಂಚಯುದ್ಧದಿಂದ ಆಗಿರುವ ಕಷ್ಟನಷ್ಟ ನಿವಾರಣೆಗೆ ಈ ತಂತ್ರಜ್ಞಾನದಿಂದ ಪ್ರಯೋಜನವಿಲ್ಲವೆಂದು ಬಲ್ಲೆ. ಆದರೆ ಟೆಲಿಫೋನ್, ರೇಡಿಯೊ, ಟೆಲಿವಿಷನ್ ತಂತ್ರಜ್ಞಾನದಲ್ಲಿ ಈಗಿರುವ ಇತಿಮಿತಿಗಳಿಗೆ, ತೊಂದರೆಗಳಿಗೆ ಇದು ಖಂಡಿತ ಪರಿಹಾರ ಒದಗಿಸುತ್ತದೆ ಮತ್ತು ಪ್ರಪಂಚದ ಜನತೆಗೆಲ್ಲ ಉಪಯುಕ್ತವೂ ಆಗುತ್ತದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ''.

ಉಪಗ್ರಹ ಆಧರಿತ ದೂರಸಂಪರ್ಕ ವ್ಯವಸ್ಥೆ ಬಗ್ಗೆ ಕ್ಲಾರ್ಕ್ ಅಷ್ಟೊಂದು ವಿವರವಾದ ಯೋಜನೆಯನ್ನು ಮಂಡಿಸಿದರು. ಅದನ್ನೆಲ್ಲ ಅಭಿವೃದ್ಧಿಪಡಿಸಲು 50 ವರ್ಷ ಬೇಕಾದೀತು ಎಂಬ ಅವರ ಅಂದಾಜು ಮಾತ್ರ ಅಡಿಮೇಲಾಯಿತು. 1957ರ ಅಕ್ಟೋಬರ್ 4ರಂದು, ಅಂದರೆ ವೈರ್‌ಲೆಸ್ ವರ್ಲ್ಡ್ ಮ್ಯಾಗಝಿನ್‌ನಲ್ಲಿ ಕ್ಲಾರ್ಕ್ ಪತ್ರ ಪ್ರಕಟವಾಗಿ 12 ವರ್ಷಗಳ ತರುವಾಯ ಸೋವಿಯತ್ ಒಕ್ಕೂಟವು ಸ್ಪುಟ್ನಿಕ್-1 ಉಪಗ್ರಹವನ್ನು ಅಂತರಿಕ್ಷಕ್ಕೆ ಹಾರಿಸಿತು. ಪ್ರಪಂಚದ ಮೊತ್ತಮೊದಲ ಕೃತಕ ಉಪಗ್ರಹವೆಂಬ ಖ್ಯಾತಿ ಅದರದಾಯಿತು. ಬಾಹ್ಯಾಕಾಶ ತಂತ್ರಜ್ಞಾನದ ಹೊಸ ಶಕೆಯೊಂದು ಆರಂಭವಾಯಿತು. ಮಿಲಿಟರಿ, ವೈಜ್ಞಾನಿಕ ಸಂಶೋಧನೆ, ವಾಣಿಜ್ಯ ಉದ್ದೇಶಗಳಿಗಾಗಿ ಕೃತಕ ಉಪಗ್ರಹಗಳನ್ನು ತಯಾರಿಸುವ ಬಗ್ಗೆ ಬೇರೆ ದೇಶಗಳೂ ಮನಸ್ಸು ಮಾಡಿದವು. ಡಿಸೆಂಬರ್ 18, 1958ರಂದು ಅಮೆರಿಕದ ಭೂಸೇನೆಯು Signal Communications by Orbital Relay Equipment (SCORE) ಎಂಬ ಖಂಡಾಂತರ ಕ್ಷಿಪಣಿಗೆ ರೇಡಿಯೊ ಪ್ರಸಾರಕ ಘಟಕವನ್ನು ಅಂಟಿಸಿ ಉಡಾವಣೆ ಮಾಡಿತು. ಅದೇನೂ ದೂರಸಂಪರ್ಕ ಉಪಗ್ರಹ ಆಗಿರಲಿಲ್ಲ; ಭೂಮಿಯಿಂದ ಕಳಿಸಿದ ಸಿಗ್ನಲ್‌ಗಳನ್ನು ಗ್ರಹಿಸುವುದು, ಮರುಪ್ರಸಾರಿಸುವುದೆಲ್ಲ ಅದಕ್ಕೆ ಸಾಧ್ಯವಿರಲಿಲ್ಲ. ಆಗಿನ ಅಮೆರಿಕಾಧ್ಯಕ್ಷ ಡ್ವೈಟ್ ಐಸನ್ಹವರ್‌ರ ಧ್ವನಿಮುದ್ರಿತ ಶುಭಾಶಯ ಸಂದೇಶವೊಂದನ್ನು ಪ್ರಪಂಚಕ್ಕೆ ಬಿತ್ತರಿಸುವುದನ್ನು ಬಿಟ್ಟರೆ ಬೇರಾವ ಸಂಪರ್ಕಸಾಧ್ಯತೆಗಳೂ ಅದಕ್ಕಿರಲಿಲ್ಲ. ಐದು ವಾರಗಳೊಳಗೆ ಅದರ ಆಯುಷ್ಯ ತೀರಿತು. ಬೆಂಕಿಯುಂಡೆಯಾಗಿ ಅದು ಭೂಮಿಗೆ ಮರಳಿತು. ಆದರೆ ಉಪಗ್ರಹ ನಿರ್ಮಾಣದತ್ತ ಅದೊಂದು ಪ್ರಮುಖ ಹೆಜ್ಜೆಯೇ ಆಗಿತ್ತು. ಭವಿಷ್ಯದಲ್ಲಿ ಇನ್ನಷ್ಟು ಕೌಶಲವಿರುವ ಮತ್ತು ಸಂಕೀರ್ಣವಾದ ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸುವುದಕ್ಕೆ ನಾಂದಿಯಾಯಿತು.

ಆಮೇಲೆ ಎಕೊ-1 ಎಂಬ ಬಲೂನ್ ರೀತಿಯ ರಚನೆಯನ್ನು ಅಭಿವೃದ್ಧಿಪಡಿಸಲಾಯಿತು. 30 ಮೀಟರ್ ವ್ಯಾಸದ, ಅಲ್ಯುಮಿನಿಯಂ ಲೇಪವುಳ್ಳ ಪ್ಲಾಸ್ಟಿಕ್‌ನ ಗೋಲಾಕೃತಿ. ರೇಡಿಯೊ ಅಲೆಗಳನ್ನು ಭೂಮಿಯ ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ಕಳುಹಿಸುವುದಕ್ಕೆ ಪ್ರತಿಫಲನದಂತೆ ಬಳಸುವ ಯೋಜನೆ. ಅಮೆರಿಕದ ಬೆಲ್ ಲ್ಯಾಬೊರೇಟರೀಸ್‌ನ ಎಂಜಿನಿಯರ್‌ಗಳು ಅದನ್ನು ತಯಾರಿಸಿದವರು. ಆಗಸ್ಟ್ 12, 1960ರಂದು ಎಕೊ-1 ಬಲೂನ್ ಉಡ್ಡಯನ. ತಲುಪಿದ ಎತ್ತರ 1,500 ಕಿ.ಮೀ. ಮಾತ್ರ. ಮುಂದಿನ ಒಂದೆರಡು ವರ್ಷಗಳಲ್ಲಿ ಎಕೊ-2 ಉಡ್ಡಯನ. ದೂರಸಂಪರ್ಕ ತಂತ್ರಜ್ಞಾನ, ಆಕಾಶಕಾಯಗಳ ಸರ್ವೇಕ್ಷಣ, ಒಟ್ಟಾರೆಯಾಗಿ ಬಾಹ್ಯಾಕಾಶದ ಅರಿವು ಗಳಿಸಲಿಕ್ಕೆ ಅವು ನೆರವಾದವು. ಆದರೆ ವಾಣಿಜ್ಯ ಉದ್ದೇಶಗಳನ್ನು ಈಡೇರಿಸುವುದಾಗಲಿಲ್ಲ. ಕೊನೆಗೂ ಜುಲೈ 10, 1962ರಂದು ನಾಸಾ ಮತ್ತು ಎಟಿ ಆ್ಯಂಡ್ ಟಿ ಸಂಸ್ಥೆಗಳ ಜಂಟಿ ಪ್ರಯತ್ನದ ಫಲವಾಗಿ ಟೆಲ್‌ಸ್ಟಾರ್-1 ಎಂಬ, ಪ್ರಪಂಚದ ಮೊತ್ತಮೊದಲ ದೂರಸಂಪರ್ಕ ಉಪಗ್ರಹವನ್ನು ಬಾಹ್ಯಾಕಾಶಕ್ಕೆ ಕಳುಹಿಸಲಾಯಿತು. ಎರಡು ವಾರಗಳ ಬಳಿಕ ಜುಲೈ 23ರಂದು ಅದರ ಮೂಲಕ ಮೊತ್ತಮೊದಲ ಬಾರಿಗೆ ಅಟ್ಲಾಂಟಿಕ್ ಸಮುದ್ರದ ಒಂದು ತೀರದಿಂದ ಇನ್ನೊಂದು ತೀರಕ್ಕೆ ಟೆಲಿವಿಷನ್ ಪ್ರಸರಣ ನಡೆಯಿತು. ಆಗಿನ ಅಮೆರಿಕಾಧ್ಯಕ್ಷ ಜಾನ್ ಎಫ್.ಕೆನಡಿಯವರದೊಂದು ಸಂದೇಶ, ಬೇಸ್‌ಬಾಲ್ ಆಟದ ದೃಶ್ಯಾವಳಿ, ಕೇಪ್ ಕೆನ್ವೆರಾಲ್, ವಾಷಿಂಗ್ಟನ್ ಡಿಸಿ, ಕೆನಡಾದ ಕ್ಯೂಬೆಕ್ ಮತ್ತು ಸ್ಟ್ರಾಟ್‌ಫಾರ್ಡ್‌ನಲ್ಲಿ ಚಿತ್ರೀಕರಿಸಿದ ದೃಶ್ಯಗಳು, ಸಿಯಾಟಲ್‌ನಲ್ಲಿ ನಡೆದಿದ್ದ ಸೆಂಚುರಿ-21 ವಸ್ತುಪ್ರದರ್ಶನದ ನೋಟ- ಎಲ್ಲವೂ ಅದರಲ್ಲಿದ್ದವು. ಅವತ್ತೇ ಸಂಜೆ ಅಮೆರಿಕದ ಆಗಿನ ಉಪಾಧ್ಯಕ್ಷ ಲಿಂಡನ್ ಬಿ.ಜಾನ್ಸನ್ ಮತ್ತು ಎ.ಟಿ ಆ್ಯಂಡ್ ಟಿ ಚೇರ್‌ಮನ್ ನಡುವೆ ಟೆಲಿಫೋನ್ ಕರೆಯೂ ನಡೆಯಿತು.



ಆಗಿನ ಕಾಲಕ್ಕೆ ದೂರಸಂಪರ್ಕದಲ್ಲಿ ಅದೊಂದು ಕ್ರಾಂತಿಯೇ. ಆದರೂ 1945ರಲ್ಲಿ ಕ್ಲಾರ್ಕ್ ಮಂಡಿಸಿದ್ದ ಯೋಜನೆಯಂತೆ ಟೆಲ್‌ಸ್ಟಾರ್-1 ಕಾರ್ಯನಿರ್ವಹಿಸಿದ್ದಲ್ಲ. ಏಕೆಂದರೆ ಅದನ್ನು ಭೂತಲದಿಂದ 35,786 ಕಿ.ಮೀ. ದೂರದ ಕಕ್ಷೆಯಲ್ಲಿ ಸ್ಥಾಪಿಸಿದ್ದಲ್ಲ. ಕೇವಲ 6,000 ಕಿ.ಮೀ. ದೂರದಲ್ಲಿ, ಅಂಡಾಕಾರದ ಕಕ್ಷೆಯಲ್ಲಿ ಅದು ಭೂಮಿಯನ್ನು ಸುತ್ತಿದ್ದು. ಅದರ ಮೇಲೆ ನಿಗಾ ಇಡಲಿಕ್ಕೆ, ಅದರಿಂದ ಪ್ರಯೋಜನ ಪಡೆಯಲಿಕ್ಕೆ ಸಂಕೀರ್ಣ ಉಪಕರಣಗಳನ್ನು ಬಳಸಬೇಕಿತ್ತು. ಆಮೇಲೆ ಬಂದಿದ್ದೇ ಸಿಂಕಾಮ್ ಉಪಗ್ರಹಗಳ ಸರಣಿ. ಫೆಬ್ರವರಿ 14, 1964ರಂದು ನಾಸಾದಿಂದ ಸಿಂಕಾಮ್-1 ಉಡಾವಣೆ. ಕರಾರುವಾಕ್ಕಾಗಿ 35,786 ಕಿ.ಮೀ. ದೂರದ ಕಕ್ಷೆಯಲ್ಲಿ ಅದರ ಸ್ಥಾಪನೆ. ಮೊತ್ತಮೊದಲ ಜಿಯೊಸಿಂಕ್ರೊನಸ್ ಉಪಗ್ರಹವೆಂಬ ಅಗ್ಗಳಿಕೆ. ಕಕ್ಷೆಗೆ ಸೇರಿದ ಮೇಲೆ ಅದು ಹೆಚ್ಚೇನೂ ಕೆಲಸ ಮಾಡಲಿಲ್ಲವೆಂಬುದು ಬೇರೆ ಮಾತು. ಜುಲೈ 26, 1964ರಂದು ಸಿಂಕಾಮ್-2ರ ಉಡ್ಡಯನ. ಆ ವರ್ಷದ ಆಗಸ್ಟ್‌ನಲ್ಲೊಂದು ದಿನ ಅಮೆರಿಕಾಧ್ಯಕ್ಷ ಜಾನ್ ಎಫ್.ಕೆನಡಿ ಮತ್ತು ನೈಜೀರಿಯಾದ ಆಗಿನ ಪ್ರಧಾನಿ ಅಬುಬಕರ್ ತಫಾವಾ ನಡುವೆ ದೂರವಾಣಿ ಸಂಭಾಷಣೆ. ಸೆಪ್ಟೆಂಬರ್‌ನಲ್ಲಿ ಟೆಲಿವಿಷನ್ ಪ್ರಸಾರಕ್ಕೂ ಬಳಕೆ. ನ್ಯೂಜೆರ್ಸಿಯ ಫೋರ್ಟ್ ಡಿಕ್ಸ್‌ನಿಂದ ಮೇನ್ ಸಂಸ್ಥಾನದ ಆಂಡೊವರ್ ಎಂಬಲ್ಲಿಗೆ ಟೆಲಿವಿಷನ್ ಸಿಗ್ನಲ್‌ಗಳ ಯಶಸ್ವಿ ರವಾನೆ. ಸಿಂಕಾಮ್-1 ಮತ್ತು ಸಿಂಕಾಮ್-2 'ಜಿಯೊಸಿಂಕ್ರೊನಸ್' ಆಗಿದ್ದವೇ ಹೊರತು 'ಜಿಯೊಸ್ಟೇಷನರಿ' ಅಲ್ಲ, ಏಕೆಂದರೆ ಅವುಗಳ ಕಕ್ಷೆ ಸಮಭಾಜಕ ವೃತ್ತಕ್ಕೆ 33 ಡಿಗ್ರಿ ಕೋನದಲ್ಲಿತ್ತು. ಆಗಸ್ಟ್ 19, 1964ರಂದು ಉಡಾವಣೆಯಾದ ಸಿಂಕಾಮ್-3 ಪ್ರಪ್ರಥಮ ಜಿಯೊಸ್ಟೇಷನರಿ ಉಪಗ್ರಹ. ಕ್ಲಾರ್ಕ್ ಮಂಡಿಸಿದ್ದ ಯೋಜನೆಯ ಪಕ್ಕಾ ಪ್ರತಿರೂಪ. ಏಪ್ರಿಲ್ 6, 1965ರಂದು ಕಮ್ಯುನಿಕೇಷನ್ಸ್ ಸ್ಯಾಟಲೈಟ್ ಕಾರ್ಪೊರೇಷನ್ ಎಂಬ ಖಾಸಗಿ ಕಂಪನಿಯಿಂದ ಅರ್ಲಿ ಬರ್ಡ್ ಎಂಬ ಇನ್ನೊಂದು ಉಪಗ್ರಹದ ಉಡಾವಣೆ. ಅದಕ್ಕೆ ಇಂಟೆಲ್‌ಸ್ಯಾಟ್-1 ಎಂದು ಮರುನಾಮಕರಣ. ಅದು ವಾಣಿಜ್ಯ ಉದ್ದೇಶದ ಮೊದಲ ಉಪಗ್ರಹ. ಒಂದು ಸಲಕ್ಕೆ 240 ದೂರವಾಣಿ ಕರೆಗಳನ್ನು ನಿರ್ವಹಿಸುವ ಸಾಮರ್ಥ್ಯವುಳ್ಳದ್ದು. ಚಂದಾದಾರರು ತಿಂಗಳಿಗೆ ಸಾವಿರಗಟ್ಟಲೆ ಡಾಲರ್ ಸುರಿಯಬೇಕಿತ್ತು. ಅರ್ಧ ಗಂಟೆಯ ಟಿವಿ ಪ್ರಸಾರಕ್ಕೆ 2500 ಡಾಲರ್. ಸೀಮಿತ ಮತ್ತು ದುಬಾರಿ ಆದರೂ ಆಗಿನ ಕಾಲಕ್ಕೆ ದೊಡ್ಡ ಸಾಧನೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಆವಿಷ್ಕಾರಗಳಿಗೆ ಪ್ರೇರಣೆ. ಈಗ ಬಾಹ್ಯಾಕಾಶದಲ್ಲಿ 10,000ಕ್ಕೂ ಹೆಚ್ಚು ಕೃತಕ ಉಪಗ್ರಹಗಳಿವೆ. ಅವುಗಳಲ್ಲಿ ಸುಮಾರು 500 ಉಪಗ್ರಹಗಳು ಭೂತಲದಿಂದ 35,786 ಕಿ.ಮೀ. (ಭೂಕೇಂದ್ರದಿಂದ 42,164 ಕಿ.ಮೀ.) ದೂರದ ಕಕ್ಷೆಯಲ್ಲಿ ಸ್ಥಾಪಿತವಾಗಿವೆ.

ಬಾಹ್ಯಾಕಾಶಕ್ಕೆ ಉಪಕರಣಗಳನ್ನು ಕಳುಹಿಸುವ, ದೂರಸಂಪರ್ಕ ಸಾಧ್ಯವಾಗಿಸುವ ಯೋಚನೆಗಳು ಕ್ಲಾರ್ಕ್‌ಗೇ ಮೊತ್ತಮೊದಲಿಗೆ ಹೊಳೆದದ್ದು ಎಂದೇನಿಲ್ಲ. ಅವರಿಗಿಂತ ಮೊದಲೂ ಆ ದಿಸೆಯಲ್ಲಿ ಚಿಂತನೆ ಮಾಡಿದವರು ಯುರೋಪ್‌ನಲ್ಲೂ ಅಮೆರಿಕದಲ್ಲೂ ಇದ್ದರು. ಆದರೆ ಭೂತಲದಿಂದ ನಿರ್ದಿಷ್ಟ ದೂರದ ಕಕ್ಷೆಯಲ್ಲಿ ಉಪಗ್ರಹ ಸ್ಥಾಪಿಸಿದರೆ ಅದು ನಿರಂತರವಾಗಿ ಭೂಮಿಯ ನಿರ್ದಿಷ್ಟವಾದೊಂದು ಬಿಂದುವಿಗೇ ಮುಖ ಮಾಡಿರುತ್ತದೆ, ಕಕ್ಷೆಯಲ್ಲಿ ನಿಶ್ಚಲವಾಗಿರುವಂತೆ ಭಾಸವಾಗುತ್ತದೆ, ದೂರಸಂಪರ್ಕಕ್ಕೆ ಬಳಸಬಹುದಾಗುತ್ತದೆ ಎಂದು ಮೊದಲು ಹೊಳೆದದ್ದು ಕ್ಲಾರ್ಕ್‌ಗೆ. ಆದ್ದರಿಂದಲೇ ಅಂಥ ಕಕ್ಷೆಗೆ 'ಕ್ಲಾರ್ಕ್ ಕಕ್ಷೆ' ಎಂದು ಹೆಸರು. ಮುಂದೊಂದು ದಿನ ಉಪಗ್ರಹಗಳನ್ನು ಹವಾಮಾನ ಮುನ್ಸೂಚನೆಗೆ ಬಳಸಬಹುದೆಂಬುದನ್ನೂ ಕ್ಲಾರ್ಕ್ ಹೇಳಿದ್ದರು. ಅದಕ್ಕಿಂತಲೂ ಮುಖ್ಯವಾದದ್ದು 1951ರಲ್ಲಿ ಬರೆದ The Exploration of Space ಪುಸ್ತಕ. ಅದನ್ನೋದಿಯೇ ಜರ್ಮನಿಯ ಎಂಜಿನಿಯರ್ ವೆರ್ನ್ಹರ್ ವೊನ್ ಬ್ರೌನ್ ಅಮೆರಿಕಾಧ್ಯಕ್ಷ ಕೆನಡಿಯನ್ನು ಚಂದ್ರನ ಮೇಲೆ ಮಾನವ ಪದಾರ್ಪಣೆಗೆ ಹೇತುವಾದ ಅಪೊಲೊ ಸರಣಿಯನ್ನು ಪ್ರೋತ್ಸಾಹಿಸುವಂತೆ ಮನದಟ್ಟು ಮಾಡಿದ್ದು. 1956ರಲ್ಲಿ ಕ್ಲಾರ್ಕ್ ಇಂಗ್ಲೆಂಡ್‌ನಿಂದ ಶ್ರೀಲಂಕಾಗೆ ವಲಸೆಯಾದರು. 90ರ ವಯಸ್ಸಿನಲ್ಲಿ ಮಾರ್ಚ್ 19, 2008ರಂದು ನಿಧನರಾಗುವವರೆಗೂ ಕೊಲಂಬೊದಲ್ಲಿಯೇ ನೆಲೆಸಿದರು. 1945ರಲ್ಲಿ ತಾನು ಬರೆದ ಪತ್ರದ ಬಳಿಕ ಬಾಹ್ಯಾಕಾಶ ಕ್ಷೇತ್ರದಲ್ಲಿ ಇಷ್ಟೆಲ್ಲ ಸಂಶೋಧನೆ ಸಾಧನೆಗಳು- ಮುಖ್ಯವಾಗಿ ಭಾರತದಲ್ಲಿ ಇಸ್ರೋದಿಂದಲೂ- ನಡೆದಿರುವುದನ್ನು ಬೆರಗುಗಣ್ಣಿಂದ ನೋಡಿದರು. ''ಈಗಿನ ಕಾಲದವರು ಈ ಬಗ್ಗೆ ತಲೆಕೆಡಿಸಿಕೊಂಡಿದ್ದೇ ಇಲ್ಲವೆಂದು ಕಾಣುತ್ತದೆ. ದೂರಸಂಪರ್ಕ ಕ್ರಾಂತಿಗೆ ಕಾರಣವಾದ ನೂರಾರು ಉಪಗ್ರಹಗಳ ನಿರ್ಮಾಣದ ಹಿಂದಿನ ಶ್ರಮ, ಜ್ಞಾನ, ಸಾಹಸ, ಧೈರ್ಯ ಎಷ್ಟಿರಬಹುದೆಂಬ ಅಂದಾಜಾದರೂ ನಿಮಗಿದೆಯೇ? ನೀವು ಮಾಡುವ ದೂರವಾಣಿ ಕರೆಗಳು, ನೀವು ವೀಕ್ಷಿಸಿ ಆನಂದಿಸುವ ಟಿವಿ ಕಾರ್ಯಕ್ರಮಗಳು... ಒಂದಲ್ಲ ಒಂದು ಉಪಗ್ರಹದ ಮೂಲಕವೇ ಬಂದಿರುತ್ತವೆಂದು ಎಂದಾದರೂ ಯೋಚಿಸಿದ್ದೀರಾ?'' ಎಂದು ಒಂದೆರಡು ಸಂದರ್ಭಗಳಲ್ಲಿ ಕ್ಲಾರ್ಕ್ ಹೇಳಿದ್ದೂ ಇದೆ.

ಹೌದಲ್ಲ? ನಾವಾದರೂ ಈ ಬಗ್ಗೆ ಯೋಚಿಸಿದ್ದೇ ಇಲ್ಲವೇನೋ! ಈ ದಿನ ದುಬೈಯಲ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿಗಾಗಿ ಭಾರತ-ನ್ಯೂಜಿಲ್ಯಾಂಡ್ ನಡುವೆ ಹಣಾಹಣಿ. ಸ್ಟೇಡಿಯಂನಲ್ಲೇ ಕುಳಿತು ಅಥವಾ ಅದಕ್ಕಿಂತಲೂ ಉತ್ತಮ ವ್ಯವಸ್ಥೆಯಲ್ಲಿ ವೀಕ್ಷಿಸುತ್ತಿದ್ದೇವೋ ಎಂಬಂತೆ ನಮ್ಮ ಮನೆಗಳ ಟಿವಿ ಪರದೆಯಲ್ಲಿ ಲೈವ್ ನೋಡಿ ಆನಂದಿಸುತ್ತೇವೆ. ಈ ಸೌಕರ್ಯ-ಸೌಲಭ್ಯಕ್ಕೆ ಕಾರಣವಾದ ಏಣಿಯೂ ಸ್ಮರಣೀಯ ಅಂತ ನಮಗೆ ನೆನಪಾದರೆ ಒಳ್ಳೆಯದಲ್ಲವೇ?

ದೇವರು: ಗುಂಡಪ್ಪನವರ ವಿಶಿಷ್ಟ ವಿಚಾರಧಾರೆ



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ದೇವರ ಕುರಿತಾಗಿ ನಾವು, 'ಎಲ್ಲಾ ದೇವರ ದಯೆ, ದೇವರು ದೊಡ್ಡವನು, ಭಗವಂತನೇ ಕಾಪಾಡಬೇಕು, ಎಲ್ಲಾ ದೈವೇಚ್ಛೆ' ಮುಂತಾಗಿ ಮಾತಾಡುವುದಿದೆ. 'ನಾನು ಆತ್ಮಸಾಕ್ಷಿಯನ್ನು ನಂಬಿ ನಡೆಯುವವನು, ನನಗೆ ದೇವರು-ದಿಂಡರ ಮೇಲೆ ನಂಬಿಕೆಯಿಲ್ಲ' ಎನ್ನುವವರನ್ನೂ ನಾವು ನೋಡುತ್ತೇವೆ. ದೇವರ ಅಸ್ತಿತ್ವವನ್ನು ನಂಬುವವರನ್ನು 'ಆಸ್ತಿಕರು' ಎಂತಲೂ, ನಂಬದವರನ್ನು 'ನಾಸ್ತಿಕರು' ಎಂತಲೂ ಕರೆಯುವುದು ಸಾಮಾನ್ಯ ರೂಢಿ.

ಹಾಗೆಯೇ, ದೇವರೆಂದರೆ ಯಾರು, ಎಲ್ಲಿದ್ದಾನೆ, ಅವನ ಸ್ವರೂಪ ಎಂಥದ್ದು? ಅವನಿರುವುದು ನಿಜವೇ? ಇದ್ದರೆ ನಮಗೇಕೆ ಕಾಣುವುದಿಲ್ಲ, ಕರೆದಾಗೇಕೆ ಬರುವುದಿಲ್ಲ? ಜೀವವನ್ನು ಸ್ವಾಭಾವಿಕವಾಗಿ ನಡೆಸಿಕೊಂಡು ಹೋಗುತ್ತಿರುವಾಗ ದೇವರಿಂದ ನಮಗೆ ಆಗಬೇಕಾದ್ದೇನು? ಮುಂತಾದ ಪ್ರಶ್ನೆಗಳು 'ದೇವರನ್ನು ನಂಬುತ್ತೇವೆ' ಎನ್ನುವವರಲ್ಲೂ ಇರುವಂಥವು! ಇನ್ನು, ಪಾಪ-ಪುಣ್ಯಗಳು, ಅದರಿಂದುಂಟಾಗುವ ಫಲ-ಪರಿಣಾಮಗಳ ಕುರಿತೂ ಚರ್ಚೆಗಳಿವೆ. ಹಿಂದೂ ಧರ್ಮದ ಸೈದ್ಧಾಂತಿಕ ನಿಲುವಾದ ಪುನರ್ಜನ್ಮದ ಕುರಿತೂ ನಮಗೆ ನಂಬಿಕೆ-ಅಪನಂಬಿಕೆಗಳಿವೆ. ಸಣ್ಣಮಕ್ಕಳು "ಅಪ್ಪಾ! ದೇವರು ನಿಜಕ್ಕೂ ಇದ್ದಾನಾ?" ಎಂದು ಕೇಳಿದರೆ, ಸಾಮಾನ್ಯವಾಗಿ "ಹೌದು, ಖಂಡಿತ ಇದ್ದಾನೆ" ಎನ್ನುವಲ್ಲಿಗೆ ಹಿರಿಯರ ಉತ್ತರ ನಿಂತುಬಿಡುತ್ತದೆ; ಇದನ್ನು ದಾಟಿ ಬರುವ ಮುಂದಿನ ಪ್ರಶ್ನೆಗಳಿಗೆ ತೀವ್ರತೆಯ ಕೊರತೆಯಿಂದಾಗಿ ನಮ್ಮಲ್ಲಿ ಉತ್ತರವಿರುವುದಿಲ್ಲ. ಹಾಗೆ? ಪ್ರತ್ಯಕ್ಷವಾಗಿ ಕಾಣುವುದು ಮಾತ್ರವೇ ಸತ್ಯ ಎಂದು ನಂಬುವ ನಮ್ಮಂಥ 'ಶಿಶುಬುದ್ಧಿ' ಯವರಿಗೆ, ನಮ್ಮ ಆರು ದರ್ಶನಗಳಲ್ಲಿ ಹೇಳಿದ ಇನ್ನೂ ಐದು ಪ್ರಮಾಣಗಳಿವೆ ಎಂಬ ಪರಿಜ್ಞಾನವೇ ಇರುವುದಿಲ್ಲ. ಈ ಎಲ್ಲ 6 ಪ್ರಮಾಣಗಳಿಂದ ಸಿದ್ಧವಾದರೆ ಮಾತ್ರವೇ ವಿಷಯವು ಸಿದ್ಧಾಂತವಾಗುತ್ತದೆ. ಪ್ರಮಾಣಗಳಿಂದ ಜ್ಞಾನಕ್ಕೆ ಸಾಧನ. ಯಾವುದೇ ಜ್ಞಾನಕ್ಕೆ ಸಂಬಂಧಿಸಿ 3 ವಿಷಯಗಳಿರುತ್ತವೆ. ಅವನ್ನು ಕ್ರಮವಾಗಿ ಪ್ರಮೇಯ, ಪ್ರಮಾತ ಮತ್ತು ಪ್ರಮಾಣ ಎನ್ನಲಾಗುತ್ತದೆ. 'ಪ್ರಮೇಯ'ವು ಜ್ಞಾನದ ವಸ್ತುವಾಗಿದ್ದರೆ, 'ಪ್ರಮಾತ'ವು ಜ್ಞಾನಿಯೂ, 'ಪ್ರಮಾಣ'ವು ಜ್ಞಾನದ ಸಾಧನವೂ ಆಗಿರುತ್ತವೆ. ಸರಿಯಾದ ಮನಸ್ಥಿತಿಯಲ್ಲಿರುವ ಪ್ರಮಾತೃವು, ಪ್ರಮೇಯಕ್ಕೆ ಸಂಬಂಧಿಸಿ ಸರಿಯಾದ ಪ್ರಮಾಣಗಳನ್ನು ಬಳಸಿದಾಗ, ಪ್ರಮಾತನಿಗೆ ಸರಿಯಾದ ಜ್ಞಾನ ದೊರಕುತ್ತದೆ; ಇಲ್ಲದಿದ್ದರೆ ಭ್ರಮೆ ಅಥವಾ ತಪ್ಪುಜ್ಞಾನ ಮಾತ್ರ ಇರುತ್ತದೆ. ಅದ್ವೈತ ವೇದಾಂತ ತತ್ತ್ವಶಾಸ್ತ್ರದ ಪ್ರಕಾರ, ನಾವು ಎದುರಿಸುವ ವಿವಿಧ ವಿಷಯಗಳ ಜ್ಞಾನವನ್ನು ಪಡೆಯಲು ಪ್ರಜ್ಞಾಪೂರ್ವಕವಾಗಿ ಅಥವಾ ಅರಿವಿಲ್ಲದೆ 6 ಪ್ರಮಾಣಗಳನ್ನು ಬಳಸುತ್ತೇವೆ. ಅವು- ಪ್ರತ್ಯಕ್ಷ, ಅನುಮಾನ, ಉಪಮಾನ, ಅರ್ಥಾಪತ್ತಿ, ಅನುಪಲಬ್ಧಿ ಮತ್ತು ಶಬ್ದ.

ಪ್ರತ್ಯಕ್ಷ: ಇದು ನೇರ, ತಕ್ಷಣದ ಅರಿವನ್ನು ಸೂಚಿಸುವಂಥದ್ದು. ಇದು ಬಾಹ್ಯ ಮತ್ತು ಆಂತರಿಕವಾಗಿರಬಹುದು. ಬಾಹ್ಯ ಗ್ರಹಿಕೆ ಎಂದರೆ ಇಂದ್ರಿಯಗಳ ಮೂಲಕ ಆಗುವಂಥ ಅರಿವು; ಆಂತರಿಕ ಗ್ರಹಿಕೆ ಎಂದರೆ ನೋವು, ಆನಂದ ಮುಂತಾದ ಭಾವನೆಗಳ ನೇರ ಮತ್ತು ತಕ್ಷಣದ ಅರಿವು ಮತ್ತು ನಮ್ಮ ಮನದಲ್ಲಿನ ವಿವಿಧ ವಸ್ತುಗಳ ಜ್ಞಾನ ಮತ್ತು ಅಜ್ಞಾನ. ಬಾಹ್ಯಗ್ರಹಿಕೆ ಎಂದರೆ 5 ಇಂದ್ರಿಯಗಳು ಲೌಕಿಕ ವಸ್ತುಗಳೊಂದಿಗೆ ಪರಸ್ಪರ ಕ್ರಿಯೆಯಿಂದ ಉದ್ಭವಿಸುವಂಥದ್ದು. ನೇರಗ್ರಹಿಕೆಯಲ್ಲಿ ಜ್ಞಾನವು ಅತ್ಯಂತ ಸ್ಪಷ್ಟವಾಗಿರುತ್ತದೆ. ಆದರೆ ಅದರ ವ್ಯಾಪ್ತಿಯು ತುಂಬಾ ಸೀಮಿತವಾಗಿರುತ್ತದೆ. ನಾವು ನೇರವಾಗಿ ನೋಡಬಹುದಾದದ್ದು ಈ ವಿಶ್ವದಲ್ಲಿ ಅಸ್ತಿತ್ವದಲ್ಲಿರುವ ವಸ್ತುಗಳ ವಿಶಾಲ ವರ್ಣಪಟಲದ ಅತ್ಯಂತ ಸಣ್ಣಭಾಗ ಮಾತ್ರವಲ್ಲ, ನೇರವಾಗಿ ತಿಳಿದಿರುವ ಹಲವೊಮ್ಮೆ ಸತ್ಯದಿಂದ ದೂರವಿರುತ್ತದೆ. ಅದಕ್ಕಾಗಿಯೇ, 'ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು' ಎನ್ನುವುದು.

ನಮಗೆ ಪ್ರತ್ಯಕ್ಷವಾಗಿ ಗೋಚರಿಸಿದ್ದರೂ, ಉಳಿದ 5 ಪ್ರಮಾಣಗಳ ಆಸರೆ ಪಡೆದು ಅದನ್ನು 'ಸತ್ಯ' ಎಂದು ತೀರ್ಮಾನಿಸಬೇಕಾಗುತ್ತದೆ.

ಅನುಮಾನ: ಒಂದರ ಅರ್ಥ/ಜ್ಞಾನವನ್ನು ಮತ್ತೊಂದು ಜ್ಞಾನದ ಸಹಾಯದಿಂದ ಪಡೆಯುವ ವಿಧಾನವೇ 'ಅನುಮಾನ'. ಆದ್ದರಿಂದ, ಹೀಗೆ ಪಡೆದ ಜ್ಞಾನವು, ನೇರ, ತಕ್ಷಣದ್ದಲ್ಲ ಮತ್ತು ಎರಡು ವಿಷಯಗಳ ನಡುವಿನ ಬದಲಾಗದ ಸಂಬಂಧದ ಪೂರ್ವಜ್ಞಾನದಿಂದ ಇದನ್ನು ಪಡೆಯಲಾಗುತ್ತದೆ. ಉದಾಹರಣೆಗೆ, 'ಬೆಂಕಿಯಿಲ್ಲದೆ ಹೊಗೆ ಬರುವುದಿಲ್ಲ, ಹೊಗೆ ಬೆಂಕಿಯಿಂದ ಹುಟ್ಟುತ್ತದೆ ಮತ್ತು ಹೊಗೆ ಇರುವಲ್ಲಿ ಯಾವಾಗಲೂ ಬೆಂಕಿಯೂ ಇರುತ್ತದೆ'



ಎಂಬ ನೇರಜ್ಞಾನ. ಆದ್ದರಿಂದ, ದೂರದ ಬೆಟ್ಟದಲ್ಲಿನ ಹೊಗೆಯನ್ನು ಮಾತ್ರ ನೋಡಿ, 'ಅಲ್ಲಿ ಬೆಂಕಿಯೂ ಇರಬೇಕು' ಎಂದು ನಾವು ಅನುಮಾನಿಸುತ್ತೇವೆ. ಇದು ತರ್ಕದಿಂದ ನಿರ್ಣೀತವಾಗುವ ಜ್ಞಾನ. ಹೊಗೆಯ ಪ್ರತ್ಯಕ್ಷದ ಆಧಾರದ ಮೇಲೆ ಬೆಂಕಿಯ ಅಸ್ತಿತ್ವವನ್ನು ಅನುಮಾನದ ಆಧಾರದ ಮೇಲೆ ಕಂಡುಕೊಳ್ಳಲಾಗುತ್ತದೆ.

ಉಪಮಾನ: ಹೀಗೆಂದರೆ ಹೋಲಿಕೆ ಮತ್ತು ಸಾದೃಶ್ಯ. ಹೋಲಿಕೆಯ ವಿಷಯವನ್ನು ಔಪಚಾರಿಕವಾಗಿ 'ಉಪಮೇಯ' ಎಂದೂ, ಹೋಲಿಕೆಯ ವಸ್ತುವನ್ನು 'ಉಪಮಾನ' ಎಂದೂ ಕರೆಯಲಾಗುತ್ತದೆ. ನಮಗೆ ತಿಳಿಯದಿರುವ ವಸ್ತು-ವಿಷಯಗಳನ್ನು, ತಿಳಿದಿರುವ ವಸ್ತು-ವಿಷಯಗಳಿಗೆ ಹೋಲಿಸಿ 'ಇದರಂತಿದೆ' ಎಂದು ಹೇಳಿದಾಗ ಸ್ಪಷ್ಟವಾಗಿ ಅರ್ಥವಾಗುತ್ತದೆ.

ಅರ್ಥೋಪತ್ತಿ: ಹೀಗೆಂದರೆ ಒಂದು ಸತ್ಯದ ಆಧಾರ ಕಲ್ಪನೆ ಅಥವಾ ಊಹೆ. ಇದು ಸಾಂದರ್ಭಿಕ ಸೂಚನೆಯಿಂದ ಪಡೆದ ಜ್ಞಾನ. ಉದಾಹರಣೆಗೆ, ದಪ್ಪಗಿರುವ ವ್ಯಕ್ತಿಯೊಬ್ಬ ಊಟ ಮಾಡುವುದಿಲ್ಲ ಎಂದರೆ, ಆತ ಎಲ್ಲರಿಗೂ ಕಾಣುವಂತೆ ಹಗಲಿನಲ್ಲಿ ಊಟ ಮಾಡುವುದಿಲ್ಲ ಎಂದು ಅರ್ಥೈಸಲಾಗುತ್ತದೆ. ಊಟ ಮಾಡದಿದ್ದರೆ ದಢೂತಿಯಾಗಲು ಹೇಗೆ ಸಾಧ್ಯ? ಬೇರೇನೋ ವ್ಯವಸ್ಥೆ ಇರಬೇಕು ಎಂದು ನಾವು ಸುಲಭವಾಗಿ ಊಹಿಸಬಹುದು.

ಅನುಪಲಬ್ಧಿ: ಒಂದು ಜಾಗದಲ್ಲಿ ವಸ್ತುವಿನ ಅಸ್ತಿತ್ವವಿಲ್ಲದಿದ್ದರೆ ಅದು ಇಲ್ಲ ಎಂದು ಮಾತ್ರ ಗ್ರಹಿಸಲಾಗುತ್ತದೆ. ವಸ್ತು ಆ ಜಾಗದಲ್ಲಿ ಇಲ್ಲ ಅಷ್ಟೇ, ವಸ್ತುವೇ ಇಲ್ಲ ಎಂದಲ್ಲ ಎನ್ನುವುದು ತರ್ಕ. ನಾವು ಹಿಮಾಲಯ ಪರ್ವತವನ್ನು ನೋಡಲಿಲ್ಲ ಎನ್ನುವ ಕಾರಣಕ್ಕೆ 'ಅದು ಇಲ್ಲ' ಎನ್ನುವ ತೀರ್ಮಾನಕ್ಕೆ ಬರಬಾರದು. ಅದು ಇದೆ, ನೋಡಿದವರಿದ್ದಾರೆ; ಆದರೆ ನಾವು ನೋಡಲಿಲ್ಲ ಅಷ್ಟೇ.

ಶಬ್ದ: ಶಬ್ದ ಪ್ರಮಾಣವು ಮೌಖಿಕ ಸಾಕ್ಷ್ಯವಾಗಿದ್ದು, ಇದು 'ಆಪ್ತ-ವಾಕ್ಯ' (ವಿಶ್ವಾಸಾರ್ಹ ವ್ಯಕ್ತಿಯ ಹೇಳಿಕೆ) ಮಾನ್ಯ ಜ್ಞಾನವನ್ನು ತಿಳಿಸುತ್ತದೆ. ಮೌಖಿಕ ಹೇಳಿಕೆಯು ದೋಷಗಳಿಂದ ಮುಕ್ತವಾಗಿರುವ ಅಧಿಕೃತ ಮೂಲವನ್ನು ಹೊಂದಿರಬೇಕು. ಜ್ಞಾನವಂತ ಸಮರ್ಥ ಮಾತ್ರ ನಿಖರಜ್ಞಾನವನ್ನು ನೀಡಬಲ್ಲ. ಅಂಥ ಜ್ಞಾನಕ್ಕೆ ಯಾವುದೇ ಪರಿಶೀಲನೆ ಅಗತ್ಯವಿರುವುದಿಲ್ಲ. ಅದರ ವಿಶ್ವಾಸಾರ್ಹತೆಯ ಬಗ್ಗೆ ಸಂದೇಹವಿಲ್ಲದಿದ್ದರೆ, ಜ್ಞಾನವನ್ನು ರವಾನಿಸಲು ಮತ್ತು ಪಡೆಯಲು ಅದು ಸಹಜವಾಗಿಯೇ ಮನುಷ್ಯನ ಅತ್ಯಂತ ಪ್ರಬಲ ಸಾಧನವಾಗುತ್ತದೆ. ಇದೇ ಆಪ್ತವಾಕ್ಯದ ಆಧಾರದಲ್ಲಿ 'ಪಿತ್ರಂಗೀಕರಣ' ಆಗುತ್ತದೆ. ಮಗುವೊಂದು ವ್ಯಕ್ತಿಯೊಬ್ಬರನ್ನು ತನ್ನ ತಂದೆಯಾಗಿ ಅಂಗೀಕರಿಸುವ ಪ್ರಕ್ರಿಯೆಯೇ ಪಿತ್ರಂಗೀಕರಣ. ಹುಟ್ಟಿದ ಮಗುವಿಗೆ ತನ್ನ ತಾಯಿಯ ಜತೆಗಿನ ಬಾಂಧವ್ಯವು, ಹುಟ್ಟುವ ಮೊದಲೇ ಸಹಜವಾಗಿ ಇರುತ್ತದೆ. ಆದರೆ ತಂದೆಯ ಜತೆಗೆ ಹಾಗಲ್ಲ, ಹುಟ್ಟಿದ ನಂತರ ನಂಬಿಕೆಯ ಆಧಾರದಲ್ಲಿ ಬೆಳೆಯುವ ಸಂಬಂಧವದು. ಆ ನಂಬಿಕೆಯೆಂದರೆ, ಅದು ತಾಯಿಯ ಮಾತು, ಆಪ್ತವಾಕ್ಯ ಅಥವಾ ಮಾತೃವಾಕ್ಯದ ಪ್ರಮಾಣ. 'ನೋಡು ಅಪ್ಪ ಬಂದರು' ಅಂತ ಒಬ್ಬ ವ್ಯಕ್ತಿಯನ್ನು ಆಕೆಯು ಮಗುವಿಗೆ ಪದೇಪದೆ ಪರಿಚಯಿಸಿದ್ದರಿಂದ, ಆತನನ್ನು ಆ ಮಗು 'ಅಪ್ಪ' ಎಂದು ನಂಬುತ್ತದೆ. ಅದಿಲ್ಲದಿದ್ದರೆ ಇವನೇ ನನ್ನ ತಂದೆಯೆನ್ನಲು ಯಾವ ಪುರಾವೆಯಿದೆ? ನಂಬುವುದು ಹೇಗೆ? ತನಗೆ ಅತ್ಯಂತ ಆಪ್ತಳಾದ ತಾಯಿ ಸುಳ್ಳು ಹೇಳುವುದಿಲ್ಲ ಎಂಬ ನಂಬಿಕೆಯ ಆಧಾರದಲ್ಲಿ ತಂದೆಯ ಅಂಗೀಕಾರವಾಗುತ್ತದೆ. ಬಹುಪತಿತ್ವವಿದ್ದ ಜಗತ್ತಿನ ಕೆಲ ಸಮಾಜಗಳಲ್ಲಿ ಆಸ್ತಿಗಳ ಹಂಚಿಕೆಯಾಗುವಾಗಲೂ ತನ್ನ ನಾಲ್ಕು ಜನ ಗಂಡಂದಿರಲ್ಲಿ ಇವನು ಈ ಹುಡುಗನ ಅಪ್ಪ ಎಂದು ತಾಯಿಯಾದವಳು ಹೇಳಬೇಕಾಗುತ್ತಿತ್ತಂತೆ, ಹಾಗೆ ಹೇಳಿದ ಮೇಲೆ ಆಸ್ತಿಯ ಉತ್ತರಾಧಿಕಾರ ಸಾಬೀತಾಗುತ್ತಿತ್ತಂತೆ, ತಂದೆಯ ಆಸ್ತಿಗೆ ಹುಡುಗ ವಾರಸುದಾರನಾಗುತ್ತಿದ್ದನಂತೆ. ಅಲ್ಲಿ ಅದೇ ಕಾನೂನು. ಹೀಗೆ ದೇವರ ಅಸ್ತಿತ್ವವನ್ನು ಹೇಳುವಾಗಲೂ, ನಮಗೆ ಪ್ರತ್ಯಕ್ಷವಾಗಿ ಕಾಣದಿದ್ದರೂ, ವೇದಮಾತೆಯ ನುಡಿ ಇರುವುದರಿಂದ ನಾವು ಒಪ್ಪಬೇಕು ಎನ್ನುವ ನ್ಯಾಯ ಇಲ್ಲಿ ಅನ್ವಯವಾಗುತ್ತದೆ.

ಹೀಗೆ, ಧರ್ಮ ಮತ್ತು ದೇವರು, ಪವಾಡ, ನಂಬಿಕೆ ಮುಂತಾದ ಗಹನ ವಿಷಯಗಳ ಕುರಿತಾದ ವಿವಿಧ ತರ್ಕಬದ್ಧ ಪ್ರಶ್ನೆಗಳಿಗೆ ಉತ್ತರಿಸುವ ಸಾರ್ಥಕ ಪ್ರಯತ್ನವನ್ನು ಡಿ.ವಿ. ಗುಂಡಪ್ಪನವರು (ಡಿವಿಜಿ) 'ದೇವರು ಒಂದು ವಿಚಾರಲಹರಿ' ಎನ್ನುವ ಕಿರುಪುಸ್ತಕದಲ್ಲಿ ಮಾಡಿದ್ದಾರೆ. 1972ರಲ್ಲಿ ಪ್ರಕಟಣೆಗೊಂಡು ಮುಂದೆ ಅನೇಕ ಮರುಮುದ್ರಣಗಳನ್ನು ಕಂಡ ಈ ಕೃತಿ ಗಾತ್ರದಲ್ಲಿ ಪುಟ್ಟದಾದರೂ, ಅಪಾರ ಮಾಹಿತಿ ಮತ್ತು ಉಲ್ಲೇಖಗಳನ್ನು ಹೊಂದಿದೆ. ಅರಿಯದ ಮುಗ್ಧರಿಗೂ, ಸತ್ಯಶೋಧನೆಯ ಹಾದಿಯಲ್ಲಿ ಮುನ್ನಡೆಯುತ್ತಿರುವವರಿಗೂ ಅನೇಕ ಒಳನೋಟಗಳನ್ನು ನೀಡುವಂಥದ್ದಾಗಿದೆ. 'ದೇವರು' ಎಂಬ ತಲೆಬರಹದ 2 ಕೃತಿಗಳು ಕನ್ನಡದಲ್ಲಿ ಪ್ರಸಿದ್ಧವಿದ್ದು, ಒಂದು ಡಿವಿಜಿಯವರದ್ದಾದರೆ, ಮತ್ತೊಂದು ಎ.ಎನ್. ಮೂರ್ತಿರಾಯರದ್ದು. ದೇವರ ಕುರಿತು ಮನುಷ್ಯರಲ್ಲಿ ಉದ್ಭವಿಸಬಹುದಾದ ಗಹನವಾದ ಪ್ರಶ್ನೆಗಳಿಗೆ ಸರಳವಾಗಿ ಸಮಾಧಾನ ಹೇಳಲು ಈ ಕೃತಿಯಲ್ಲಿ ಡಿವಿಜಿ ಯತ್ನಿಸಿದ್ದಾರೆ. ಈ ಪ್ರಬಂಧದಲ್ಲಿನ ಭಾವಸ್ಪಷ್ಟತೆ ಓದುಗನ ಮನದಾಳದ ಅನೇಕ ಸಂಶಯಗಳಿಗೆ ಸಮಾಧಾನ ನೀಡುವಂಥದ್ದಾಗಿದೆ. ಡಿವಿಜಿಯವರು ಅನಾರೋಗ್ಯದಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದಾಗ ಈ ವಿಷಯಗಳನ್ನು ಹೇಳಿ, ತಮ್ಮ ಮಗ ಡಾ.ಬಿ.ಜಿ. ಎಲ್.ಸ್ವಾಮಿಯವರಿಂದ, ಎಸ್.ಆರ್.ರಾಮಸ್ವಾಮಿ, ಬಿ. ಎಸ್.ಸುಬ್ಬರಾಯ, ಡಿ.ಆರ್.ವೆಂಕಟರಮಣ ಮುಂತಾದ ಸ್ನೇಹಿತರಿಂದ ಬರೆಸಿದ್ದಂತೆ. 'ಈ ವಿಷಯದ ಪ್ರಸ್ತುತಿ ಹಿಂದೆಂದಿಗಿಂತ ಈಗ ಹೆಚ್ಚಿರುವುದರಿಂದ, ಸಂಕ್ಷಿಪ್ತವಾಗಿಯಾದರೂ ಹೇಳಲೇಬೇಕು ಎನ್ನುವ ಮನಸ್ಸಾಯಿತು, ಹೆಚ್ಚಿನ ಒಳನೋಟಗಳಿಗೆ ಓದುಗರು ನನ್ನ ಭಗವದ್ಗೀತಾ ತಾತ್ಪರ್ಯ ಮುಂತಾದ ಗ್ರಂಥಗಳನ್ನು ಅನುಸರಿಸಬಹುದು' ಎಂದು ಡಿವಿಜಿ ಈ ಕೃತಿಯ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.

ದೇವರ ಇರುವಿಕೆಯ ಕುರಿತು ಮುಗ್ಧರು ಮೊದಮೊದಲು ಕೇಳುವ ಪ್ರಶ್ನೆಗಳಿಗೆ ಉತ್ತರಿಸುವುದಾದರೆ, ದೇವರು ಎನ್ನುವುದೊಂದು ಚೈತನ್ಯ, ಚಲನಶೀಲವಾದ ತೇಜಸ್ಸು. ಇದರ ಮಹಿಮೆಗೆ ಅಥವಾ ಪ್ರಭಾವಕ್ಕೆ ಒಳಪಡದ ಯಾವುದೂ ಈ ಪ್ರಕೃತಿಯಲ್ಲಿಲ್ಲ. ಎಲ್ಲ ಮಾನುಷೀಯ ವ್ಯಾಪಾರಗಳೂ ಈ ತತ್ತ್ವದ ಅಧೀನದಲ್ಲೇ ನಡೆಯುತ್ತವೆ. ಕಾರಣ, ಈ ಗೋಚರ ಪ್ರಪಂಚದ ಹುಟ್ಟು, ಸ್ಥಿತಿ ಮತ್ತು ನಾಶಗಳು ಅವನಿಂದಲೇ ಆಗುತ್ತಿರುವುದು ಎನ್ನುತ್ತಾರೆ ಡಿವಿಜಿ. ಇದಕ್ಕೆ ಪುಷ್ಟಿನೀಡುವಂತೆ ಶ್ವೇತಾಶ್ವತರೋಪನಿಷತ್ತಿನ 'ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾಂತರಾತ್ಮಾ । ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ॥' ಎಂಬ ವಾಕ್ಯವನ್ನು ಡಿವಿಜಿ ವಿವರಿಸುತ್ತಾರೆ. ನಾವು ನಂಬಲಿ ನಂಬದಿರಲಿ, ದೇವರೆಂಬ ಚೈತನ್ಯವಂತೂ ಇದ್ದೇ ಇದೆ ಎಂಬುದು ಅವರ ಸ್ಪಷ್ಟ ಅಭಿಪ್ರಾಯ.

ಮುಂದೆ, ನಾವೇಕೆ ದೇವರನ್ನು ನಂಬಬೇಕು? ಎನ್ನುವವರಿಗೆ, ದೇವರ ಅಸ್ತಿತ್ವವನ್ನು ನಂಬುವುದರಿಂದ ಉಂಟಾಗುವ ಧೈರ್ಯ, ಧರ್ಮ, ಪಾಪ-ಪುಣ್ಯಗಳು ಮತ್ತು ಉತ್ತಮ ಸಮಾಜ, ವಿಶ್ವವ್ಯವಸ್ಥೆಗಳೆಂಬ ಪ್ರಯೋಜನಗಳ ಬಗ್ಗೆ ಮನೋಜ್ಞವಾಗಿ ಬರೆಯುತ್ತಾರೆ. ಪವಾಡಗಳಿಂದಾಗಿ ದೇವರಲ್ಲಿ ನಂಬಿಕೆಗಳು ಹುಟ್ಟುವುದು ಅಥವಾ ಹೆಚ್ಚುವುದು ಆದರೂ, ದೇವರನ್ನು ನಂಬಲು ಪವಾಡಗಳ ಅವಶ್ಯಕತೆಯಿರುವುದಿಲ್ಲ, ಆಸ್ತಿಕತೆ ಎನ್ನುವಂಥದ್ದು ಸ್ವತಂತ್ರವಾದದ್ದು ಎನ್ನುತ್ತಾರೆ ಡಿವಿಜಿ. ಅವರ ಪ್ರಕಾರ ಆಲೋಚನೆ ಮಾಡುವವರಿಗೆ ಜಗತ್ತೇ ಒಂದು ಪವಾಡ; ನಿತ್ಯ ಸರಿಯಾದ ಸಮಯಕ್ಕಾಗುವ ಸೂರ್ಯೋದಯ-ಸೂರ್ಯಾಸ್ತಗಳು, ಜೀವಿಗಳ ಹುಟ್ಟು-ಸಾವುಗಳು, ನಿದ್ರೆ-ಸ್ವಪ್ನಗಳು ಎಲ್ಲವೂ ಪವಾಡಗಳೇ.

ದೇವರಿದ್ದಾನೆ, ಯಾವಾಗಲೂ ಎಲ್ಲೆಲ್ಲಿಯೂ ಎಲ್ಲ ಚರಾಚರ ವಸ್ತುಗಳಲ್ಲೂ ಅಡಗಿದ್ದಾನೆ; ಪುಣ್ಯಕ್ಕೆ ಶುಭವನ್ನೂ ಪಾಪಕ್ಕೆ ದಂಡನೆಯನ್ನೂ ವಿಧಿಸುವ ಕರ್ಮಾಧಿಕಾರಿಯಾಗಿ ದೇವರು ಕೆಲಸ ಮಾಡುತ್ತಾನೆ ಮುಂತಾಗಿ 9 ಸಿದ್ಧಾಂತಗಳನ್ನು ಕೊನೆಯಲ್ಲಿ ಡಿವಿಜಿ ಬರೆಯುತ್ತಾರೆ. ಆವಾವುದೊಳಿತೋ ನಿನಗದು। ಜೀವಹಿತಕ್ಕಾವುದೊಳಿತೋ ಸತ್ಯಂ ನಿತ್ಯಂ॥ ಆ ವಸ್ತುವೇ ಆ ಸತ್ವವೇ ದೇವಂ ಜಗದೀಶನಾತ್ಮ ತತ್ತ್ವಂ ಬ್ರಹ್ಮಂ॥ ಅರಿವೆ ಜಗಜ್ಯೋತಿಯಾತ್ಮ ಕಿರಣಂ ದೈವಂ। ಆವೊಂದನರಿಯೆ ನೈಜದಿ। ನೀ ವಿಶ್ವದೊಳೊಂದುಮೊಂದು ಮೆಲ್ಲದರರಿವೋ॥ ಆ ವಿವಿಧದ ಏಕ ಮೂಲಮೆ ದೇವಂ।

ದೇವರೆಂಬ ಮಹಾ ಒಗಟಿಗೆ ಋಷಿದೃಷ್ಟಿಯ ಗುಂಡಪ್ಪನವರ ಈ ಮೇಲಿನ ಸರಳ ವ್ಯಾಖ್ಯಾನಗಳಿಗೆ ಹೋಲಿಕೆ ಇರಲಿಕ್ಕೆ ಸಾಧ್ಯವಿಲ್ಲ.

ಕೈಕೊಟ್ಟ ಮಿನುಗುತಾರೆ, ಕೈಹಿಡಿದ ಅಭಿನಯ ಶಾರದೆ..!

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ವಿಷ್ಣುವರ್ಧನ್ ಅವರು 'ನಾಗರಹಾವು' ನಂತರ ಪುಟ್ಟಣ್ಣನವರ ಯಾವುದೇ ಚಿತ್ರಗಳಲ್ಲಿ ಕಾಣಿಸಿಕೊಳ್ಳದಿದ್ದುದರ ಕುರಿತಾದ ಫ್ಲ್ಯಾಷ್‌ಬ್ಯಾಕ್ ಅನ್ನು ಕಳೆದ ಸಂಚಿಕೆಯಲ್ಲಿ ಓದಿದಿರಿ. ಈಗ ನಾಗರಹಾವು ಚಿತ್ರೀಕರಣದ ಸಂದರ್ಭಕ್ಕೆ ತೆರಳೋಣ (2024ರ ನವೆಂಬರ್ 17ರ ಅಂಕಣದಲ್ಲಿ ಪ್ರಕಟವಾದ 'ಹುತ್ತದ ಹಾವಿಗೆ ಬೆತ್ತದಿ ಬಡಿದರೆ ಭುಸುಗುಟ್ಟದೇ?' ಶೀರ್ಷಿಕೆಯ ಬರಹದಲ್ಲಿ ಈ ಚಿತ್ರದ ಮತ್ತೊಂದು ರಸಪ್ರಸಂಗವನ್ನು ಈಗಾಗಲೇ ನೀಡಲಾಗಿದೆ. ಇದಕ್ಕೆ ಹೊರತಾದ ಕೆಲ ಪ್ರಸಂಗಗಳು ಮುಂದೆ ಮೂಡಿಬರಲಿವೆ).

ಸಾಹಿತಿ ತ.ರಾ.ಸುಬ್ಬರಾವ್ (ತ.ರಾ.ಸು.) ಅವರ 'ಸರ್ಪ ಮತ್ಸರ', 'ಎರಡು ಹೆಣ್ಣು ಒಂದು ಗಂಡು' ಮತ್ತು 'ನಾಗರಹಾವು' ಎಂಬ ಕಾದಂಬರಿಗಳ ಹೂರಣವನ್ನು ಸೇರಿಸಿ ಈ ಚಿತ್ರದ ಚಿತ್ರಕಥೆಯನ್ನು ರಚಿಸಿದ್ದು ಪುಟ್ಟಣ್ಣನವರೇ. ಚಿತ್ರ ನಿರ್ಮಾಣಕ್ಕೆ ಮುಂದಾದ ಎಂ.ವೀರಾಸ್ವಾಮಿಯವರಿಗೆ (ನಟ ರವಿಚಂದ್ರನ್‌ರ ತಂದೆ) ಪುಟ್ಟಣ್ಣ, "ಚಿತ್ರವನ್ನು ಭರ್ಜರಿಯಾಗಿ ತೆರೆಯ ಮೇಲೆ ತರಬೇಕೆಂಬ ಇರಾದೆ ನನ್ನದು, ಚಿತ್ರೀಕರಣದ ಎಲ್ಲಾ ಜವಾಬ್ದಾರಿಯನ್ನೂ ನಾನೇ ವಹಿಸಿಕೊಳ್ಳುವೆ. ನೀವಿದರಲ್ಲಿ ಮೂಗು ತೂರಿಸದೆ ಹಣವನ್ನಷ್ಟೇ ಒದಗಿಸಿದರೆ ಸಾಕು" ಎಂಬ ಷರತ್ತು ಹಾಕಿದರು. ಪುಟ್ಟಣ್ಣನವರ ಸಾಮರ್ಥ್ಯ ಅರಿತಿದ್ದ ವೀರಾಸ್ವಾಮಿ ಅದಕ್ಕೆ ಒಪ್ಪಿದರು.

ಕಥೆಯಲ್ಲಿ ಬರುವ 'ಆ್ಯಂಗ್ರಿ ಯಂಗ್‌ಮ್ಯಾನ್' ರಾಮಾಚಾರಿ ಪಾತ್ರಕ್ಕೆ ಹೊಸಮುಖದ ತಲಾಶೆಯಲ್ಲಿದ್ದರು ಪುಟ್ಟಣ್ಣ. ಚಿತ್ರಕಥೆಯನ್ನು ರಚಿಸುವಾಗಲೇ ರಾಮಾಚಾರಿ ಅವರನ್ನು ಇನ್ನಿಲ್ಲದಂತೆ ಕಾಡಿದ್ದ. ಹೀಗಾಗಿ, ಎಷ್ಟೇ ಖರ್ಚಾದರೂ ಪರವಾಗಿಲ್ಲ, ಸೂಕ್ತ ಯುವಪ್ರತಿಭೆಯನ್ನೇ ಹೆಕ್ಕಬೇಕು ಎಂಬ ಹೆಬ್ಬಯಕೆಯೊಂದಿಗೆ ಬರೋಬ್ಬರಿ 300 ಮಂದಿಯನ್ನು ಸಂದರ್ಶಿಸಿ, ಅಳೆದು-ಸುರಿದು ಅವಲೋಕಿಸಿದರು ಪುಟ್ಟಣ್ಣ. ಅವರಲ್ಲಿ 24 ಮಂದಿ ಮೊದಲ ಹಂತದಲ್ಲಿ ಆಯ್ಕೆಯಾದರು. ಖ್ಯಾತ ವರ್ಣಚಿತ್ರ ಕಲಾವಿದ ಮಧುಗಿರಿ ರಾಮು ಅವರ ಸಲಹೆಯ ಮೇರೆಗೆ ಆ ಸಂದರ್ಶನದಲ್ಲಿ ತೂರಿಕೊಂಡಿದ್ದ ಸಂಪತ್‌ಕುಮಾರ್ ಎಂಬ ಚಿಗುರುಮೀಸೆಯ ಚೆಲುವನೂ ಅವರಲ್ಲೊಬ್ಬನಾಗಿದ್ದ. ಇಷ್ಟು ಮಂದಿಗೂ ಮೇಕಪ್ ಟೆಸ್ಟ್ ಮಾಡಿ ನಿರ್ದಿಷ್ಟ ಸಂಭಾಷಣೆಯ ಸಾಲನ್ನು ಹೇಳಿಸಿದಾಗ ಅಂತಿಮವಾಗಿ ಆಯ್ಕೆಯಾಗಿದ್ದು ಸಂಪತ್‌ಕುಮಾರನೇ. ಈತನೇ ಮುಂದೆ 'ವಿಷ್ಣುವರ್ಧನ' ಎಂಬುದಾಗಿ ಪುಟ್ಟಣ್ಣರಿಂದ ಮರುನಾಮಕರಣಗೊಂಡಿದ್ದು ಈಗಾಗಲೇ ನಿಮಗೆ ಗೊತ್ತಿದೆ.

ತಮ್ಮ ಕಲ್ಪನೆಯ ರಾಮಾಚಾರಿಯೇನೋ ಸಿಕ್ಕಿಬಿಟ್ಟ, ಆದರೆ ಅಲಮೇಲು ಮತ್ತು ಮಾರ್ಗರೇಟ್ ಪಾತ್ರಗಳಿಗೆ ಯಾರನ್ನು ಹೆಕ್ಕುವುದು ಎಂಬ ಜಿಜ್ಞಾಸೆ ಶುರುವಾಯಿತು ಪುಟ್ಟಣ್ಣನವರಲ್ಲಿ. ಏಕೆಂದರೆ, ಎಸ್ಟಾಬ್ಲಿಷ್ ಆಗಿರುವ ನಾಯಕನ ಎದುರು ನಾಯಕಿಯನ್ನು ಗೊತ್ತುಮಾಡುವುದಕ್ಕೂ, ನವನಾಯಕನ ಎದುರು ಹಾಗೆ ನಿಯೋಜಿಸುವುದಕ್ಕೂ ಸಾಕಷ್ಟು ವ್ಯತ್ಯಾಸವಿತ್ತು. ಅಷ್ಟು ಹೊತ್ತಿಗಾಗಲೇ, 'ಗೆಜ್ಜೆಪೂಜೆ' ಚಿತ್ರದಲ್ಲಿ ತಂಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಆರತಿಯವರನ್ನು ಅಲಮೇಲು ಪಾತ್ರದಲ್ಲೇಕೆ ಬಿಂಬಿಸಬಾರದು ಎಂಬ ಆಲೋಚನೆ ಪುಟ್ಟಣ್ಣರಲ್ಲಿ ಸುಳಿದು, ಅಂತೆಯೇ ಆಯ್ಕೆ ಮಾಡಿಬಿಟ್ಟರು. ಆದರೆ ಮತ್ತೊಂದು ಮಹತ್ವದ ಪಾತ್ರವಾದ ಮಾರ್ಗರೇಟ್ ವಿಷಯದಲ್ಲಿ ಒಂದಿಷ್ಟು ಹಗ್ಗಜಗ್ಗಾಟ ನಡೆಯಿತು. ಅದಕ್ಕೆ ಕಾರಣರಾಗಿದ್ದು ನಟಿ ಕಲ್ಪನಾ!

'ಕಪ್ಪು-ಬಿಳುಪು', 'ಕರುಳಿನ ಕರೆ', 'ಶರಪಂಜರ' ಚಿತ್ರಗಳಲ್ಲಿ ಕಲ್ಪನಾರನ್ನು ನಾಯಕಿಯಾಗಿಸಿ ಯಶಸ್ಸು ಕಂಡಿದ್ದ ಪುಟ್ಟಣ್ಣ, 'ಸಾಕ್ಷಾತ್ಕಾರ' ಚಿತ್ರದಲ್ಲಿ ಹೊರಳುದಾರಿ ತುಳಿದು, ಜಮುನಾರನ್ನು ನಾಯಕಿಯಾಗಿ ಪ್ರತಿಷ್ಠಾಪಿಸಿದ್ದರು. ಅಣ್ಣಾವ್ರ ಉತ್ತಮ ಅಭಿನಯ, ಇಂಪಾದ ಹಾಡುಗಳು, ಹಿಂದಿಯ ಪೃಥ್ವಿರಾಜ್ ಕಪೂರರ ಉಪಸ್ಥಿತಿಯ ಹೊರತಾಗಿಯೂ 'ಸಾಕ್ಷಾತ್ಕಾರ' ವಿಫಲವಾಯಿತು. 'ಕಲ್ಪನಾರನ್ನು ಬಿಟ್ಟಿದ್ದೇ ಇದಕ್ಕೆ ಕಾರಣ' ಎಂಬ ಉದ್ಯಮದವರ ಮಾತು ಕಲ್ಪನಾರ ಕಿವಿಗೂ ಬಿದ್ದಿತ್ತು. ಅಷ್ಟು ಹೊತ್ತಿಗಾಗಲೇ ಪುಟ್ಟಣ್ಣ-ಕಲ್ಪನಾರ ನಡುವೆ ಭಿನ್ನಾಭಿಪ್ರಾಯದ ತೆಳುಪರದೆಯೊಂದು ರೂಪುಗೊಂಡಿತ್ತಾದರೂ, 'ಪಕ್ಕಾ ಪ್ರೊಫೆಷನಲ್' ಆಗಿದ್ದ ಕಲ್ಪನಾ ಬಿಗುಮಾನವನ್ನು ಬದಿಗೊತ್ತಿ, ಮಾರ್ಗರೇಟ್ ಪಾತ್ರದಲ್ಲಿ ಅಭಿನಯಿಸಬೇಕೆಂಬ ತಮ್ಮಾಸೆಯನ್ನು ಪುಟ್ಟಣ್ಣನವರಲ್ಲಿ ಹೇಳಿಕೊಂಡರು. ಅದಕ್ಕೆ ಪುಟ್ಟಣ್ಣ, "ಮಾರ್ಗರೇಟ್ ಪಾತ್ರಕ್ಕೆ ನನ್ನ ಕಲ್ಪನೆಯೇ ಬೇರೆಯಿದೆ, ನೀವು ಹೊಂದುವುದಿಲ್ಲ" ಎಂದು ಹೇಳಿ ನಯವಾಗಿ ನಿರಾಕರಿಸಿದರು. 'ಸಾಕ್ಷಾತ್ಕಾರ'ದ ಸೋಲಿನಿಂದ ಬಳಲಿದ್ದ ಪುಟ್ಟಣ್ಣ ತಮ್ಮ ಮಾತಿಗೆ ನಿರಾಕರಿಸುವುದಿಲ್ಲ ಎಂದು ಭ್ರಮಿಸಿದ್ದ ಕಲ್ಪನಾರ 'ಅಹಂ'ಗೆ ಇದರಿಂದ ಪೆಟ್ಟು ಬಿದ್ದಂತಾಯಿತು. ನಿರಾಕರಣೆಯ ಸುದ್ದಿ ಗೊತ್ತಾದ ಉದ್ಯಮದವರು, "ಶರಪಂಜರ ಚಿತ್ರದ ವೇಳೆ ಕಲ್ಪನಾ ತೋರಿದ ಡೌಲು-ಅಹಂಕಾರದಿಂದ ಬೇಸರಗೊಂಡ ಪುಟ್ಟಣ್ಣ, ನಾಗರಹಾವು ಚಿತ್ರದಿಂದ ಅವರನ್ನು ಹೊರಗಿಟ್ಟರು" ಎಂದೇ ಮಾತಾಡಿಕೊಂಡರು. ಆದರೆ, ನಾಯಕ-ಪ್ರಧಾನ ಚಿತ್ರದಲ್ಲಿ ಹೊಸ ಮುಖವೊಂದನ್ನು ಪ್ರೊಜೆಕ್ಟ್ ಮಾಡುತ್ತಿರುವಾಗ, ಅದಾಗಲೇ ಎಸ್ಟಾಬ್ಲಿಷ್ ಆಗಿದ್ದ ಕಲಾವಿದೆಯನ್ನು ಆತನಿಗೆ ಜೋಡಿಯಾಗಿಸಿದರೆ ಸರಿಹೊಂದುವುದಿಲ್ಲ ಎಂಬುದು ಪುಟ್ಟಣ್ಣನವರ ಗಣಿತವಾಗಿತ್ತು. ಅವರ ನಿರಾಕರಣೆಯನ್ನು ಆರೋಗ್ಯಕರವಾಗಿ, 'ಕ್ರೀಡಾಪಟುವಿನ ಸ್ಫೂರ್ತಿ'ಯಿಂದ ಸ್ವೀಕರಿಸಲು ಕಲ್ಪನಾ ಸಿದ್ಧರಿರಲಿಲ್ಲ. ಅಂತೆಯೇ, ಚಿತ್ರದಲ್ಲಿ ಬರುವ ಒನಕೆ ಓಬವ್ವನ ಉಪಕಥೆ ಹಾಗೂ 'ಕನ್ನಡನಾಡಿನ ವೀರರಮಣಿಯ' ಹಾಡಿನ ದೃಶ್ಯದಲ್ಲಿ ಅಭಿನಯಿಸುವ ಆಯ್ಕೆಯನ್ನು ಪುಟ್ಟಣ್ಣ ಒಡ್ಡಿದಾಗ, "ಚಿತ್ರದ ನಾಯಕಿಯ ಪಾತ್ರಕ್ಕಾಗಿ ಆಸೆಪಟ್ಟಿದ್ದ ನಾನು, ಅದೇ ಚಿತ್ರದ ಇಂಥ ಕಿರುಪಾತ್ರದಲ್ಲಿ ಕಾಣಿಸಿಕೊಂಡರೆ ಅದೆಷ್ಟು ಸರಿ ಪುಟ್ಟಣ್ಣಾಜಿ!" ಎಂದು ಕೊಂಕುನುಡಿದು 'ತಾರತಮ್ಯ' ಮಾಡಿಬಿಟ್ಟರು. ಕಲ್ಪನಾರ ಈ 'ನಿರಾಕರಣ'ವು ಓಬವ್ವನಾಗಿ ಮತ್ತೊಬ್ಬ ಮಹಾನ್ ಕಲಾವಿದೆಯ 'ಅನಾವರಣ'ಕ್ಕೆ ದಾರಿಮಾಡಿಕೊಟ್ಟಿತು. ಅವರೇ ಅಭಿನಯ ಶಾರದೆ ಜಯಂತಿ!

ಇಲ್ಲೂ ಒಂದು ಫ್ಲ್ಯಾಷ್‌ಬ್ಯಾಕ್ ಇದೆ. ಪುಟ್ಟಣ್ಣನವರ ಚಿತ್ರದಲ್ಲಿ ಅಭಿನಯಿಸಬೇಕೆಂದು ತವಕಿಸುತ್ತಿದ್ದ ಅಂದಿನ ಕಲಾವಿದೆಯರಲ್ಲಿ ಜಯಂತಿ ಕೂಡ ಒಬ್ಬರಾಗಿದ್ದರು. 'ಸಾವಿರ ಮೆಟ್ಟಿಲು' ಚಿತ್ರದಲ್ಲಿ ಅವರಿಗೆ ನಾಯಕಿ ಪಾತ್ರ ಸಿಕ್ಕಿತಾದರೂ, ಚಿತ್ರ ಪೂರ್ಣಗೊಳ್ಳದ ಕಾರಣ ಜಯಂತಿ ನಿರಾಶೆಗೊಂಡಿದ್ದರು. ತರುವಾಯದಲ್ಲಿ 'ಕಪ್ಪು-ಬಿಳುಪು' ಮತ್ತು 'ಸಾಕ್ಷಾತ್ಕಾರ' ಚಿತ್ರಗಳಿಗೆ ನಾಯಕಿಯಾಗಿ ಆಯ್ಕೆಯಾಗಿ ನಿರ್ಮಾಪಕರಿಂದ ಮುಂಗಡವನ್ನೂ ಪಡೆದಿದ್ದರು; ಆದರೆ, ಈ ಚಿತ್ರಗಳಿಗೆ ಪುಟ್ಟಣ್ಣ ಅಂತಿಮಗೊಳಿಸಿದ್ದು ತಮ್ಮಾಯ್ಕೆಯ ನಾಯಕಿಯರನ್ನೇ. ಹೀಗೆ ಸರಣಿ ಹಿನ್ನಡೆಯಿಂದ ಕಂಗೆಟ್ಟಿದ್ದ ಜಯಂತಿಯವರನ್ನು ಪುಟ್ಟಣ್ಣ ಭೇಟಿಯಾಗಿ, "ಇದು ಪುಟ್ಟಪಾತ್ರವಾದರೂ ಮಹತ್ವದ್ದು, ಒಪ್ಪಿಕೊಳ್ಳಿ. ನಿಮಗೂ ಹೆಸರು ಬರುತ್ತೆ" ಎಂದು ಪುಸಲಾಯಿಸಿ ಓಬವ್ವನ ಪಾತ್ರವನ್ನು ನೀಡಿದಾಗ, ಎಲ್ಲ ಕಹಿಯನ್ನೂ ಮರೆತು ಆ ಪಾತ್ರದಲ್ಲಿ ವೀರರಸ ಮೆರೆದರು ಜಯಂತಿ. ಆ ಪ್ರಸ್ತುತಿಯನ್ನು ಜನರೂ ಮೆಚ್ಚಿದರು. ಮುಂದಿನದ್ದು ಇತಿಹಾಸ...

'ನಾಗರಹಾವು' ಚಿತ್ರದಲ್ಲಿ ಪುಟ್ಟಣ್ಣ ಇನ್ನಿಲ್ಲದಂತೆ ತೊಡಗಿಸಿಕೊಂಡಿದ್ದರಿಂದ, ಕಲಾವಿದರು-ತಂತ್ರಜ್ಞರಿಂದಾಗುವ ಸಣ್ಣ ಲೋಪವನ್ನೂ ಸಹಿಸುತ್ತಿರಲಿಲ್ಲ. ಹೀಗಾಗಿ ಕೆಲ ಕಲಾವಿದರಿಗೆ ಆಗಾಗ ಕಪಾಳಮೋಕ್ಷ, ಬೈಗುಳದ ಸೇವೆಗಳೂ ನಡೆಯುತ್ತಿದ್ದವು. ಕೆಲ ಕಲಾವಿದರನ್ನು ಬಗ್ಗಿಸಲು ಪುಟ್ಟಣ್ಣನವರಿಂದ ಹುಸಿಕೋಪದ ಪ್ರದರ್ಶನವೂ ಆಗುತ್ತಿತ್ತು. ಅಂಥ

ಒಂದು ಪ್ರಸಂಗ ಇಲ್ಲಿದೆ: ಅಂದು ಮಹತ್ವದ ದೃಶ್ಯವೊಂದನ್ನು ಚಿತ್ರೀಕರಿಸಲು ಪುಟ್ಟಣ್ಣ ಸಂಕಲ್ಪಿಸಿದರು. ಅದೆಷ್ಟು ಮುಖ್ಯವಾಗಿತ್ತೆಂದರೆ ಚಿತ್ರದ ಕಥೆಯ ಜೀವಾಳವಾಗಿತ್ತು, 'ತಿರುವಿನ ಘಟ್ಟ'ವೇ ಆಗಿತ್ತು. ಅದರಲ್ಲಿ ಪಾಲ್ಗೊಂಡ ಕಲಾವಿದರ ಪೈಕಿ ಒಬ್ಬರು ತಪ್ಪು ಮಾಡಿದರೂ, ಒಂದಿಡೀ ಭಾಗವನ್ನೇ ಮತ್ತೊಮ್ಮೆ ಚಿತ್ರೀಕರಿಸಬೇಕಾಗಿ ಬರುತ್ತಿತ್ತು. ಆ ದೃಶ್ಯದಲ್ಲಿ ಗುಪ್ತಗಾಮಿನಿಯಾಗಿದ್ದ ಭಾವವನ್ನು ಕಲಾವಿದರು ಸಮರ್ಥವಾಗಿ ಗ್ರಹಿಸದೆಯೇ ಅಭಿನಯಿಸಿದ್ದರೆ ಅದೊಂದು ಪಕ್ಕಾ 'ಮೇಲೋಡ್ರಾಮಾ' ಆಗಿಬಿಡುವ ಅಪಾಯವೂ ಇತ್ತು. ಒಟ್ಟಾರೆಯಾಗಿ, ಕಲಾವಿದರ-ತಂತ್ರಜ್ಞರ ಹೃತ್ಪೂರ್ವಕ ಸಹಕಾರವಿಲ್ಲದೆ ಅದು ಪರಿಣಾಮಕಾರಿಯಾಗಿ ಒಡಮೂಡಲು ಸಾಧ್ಯವಿರಲಿಲ್ಲ. ಆಗ ಪುಟ್ಟಣ್ಣ ಒಂದು ಉಪಾಯ ಮಾಡಿದರು. ಎಲ್ಲರನ್ನೂ ಒಂದೆಡೆ ಕಲೆಹಾಕಿ, "ನೋಡ್ರಪ್ಪಾ, ಈ ದೃಶ್ಯವು ನನ್ನ ಕಲ್ಪನೆಯಂತೆ, ನನಗೆ ತೃಪ್ತಿಯಾಗುವಂತೆ ಮೂಡಿಬರಬೇಕು. ಅದಕ್ಕೆ ನೀವು ಹೇಗೆ ತಾಲೀಮು ಮಾಡಿಕೊಳ್ತೀರೋ ನಂಗೆ ಗೊತ್ತಿಲ್ಲ. ಈಗ ಬೆಳಗ್ಗೆ ಒಂಬತ್ತೂವರೆ. ಸಂಜೆ 5 ಗಂಟೆಯವರೆಗೂ ನಿಮಗೆ ಕಾಲಾವಕಾಶ" ಎಂದಷ್ಟೇ ಹೇಳಿ ಜಾಗ ಖಾಲಿಮಾಡಿದರು.

ಯಾರಿಗೂ ಅನ್ಯಮಾರ್ಗವಿರಲಿಲ್ಲ, ಸಮಯವನ್ನು ವ್ಯರ್ಥಗೊಳಿಸದಂತೆ ತಾಲೀಮಿಗೆ ಶುರುವಿಟ್ಟುಕೊಂಡರು. ಸಂಜೆ 5 ಗಂಟೆಗೆ ಚಿತ್ರೀಕರಣ ತಾಣಕ್ಕೆ ದಾಂಗುಡಿಯಿಟ್ಟ ಪುಟ್ಟಣ್ಣ, "ಸ್ಟಾರ್ಟ್ ಕ್ಯಾಮರಾ, ಆ್ಯಕ್ಷನ್" ಎಂದರು. ಎಲ್ಲಾ ಕಲಾವಿದರೂ ತೊಡಗಿಸಿಕೊಂಡರು, ಒಂದೆರಡು ಕಡೆ ತಪ್ಪಾಯಿತು. ಹುಸಿಕೋಪ ತೋರಿದ ಪುಟ್ಟಣ್ಣ ವ್ಯಂಗ್ಯವಾಗಿ, "ಅಯ್ಯೋ ಪಾಪ! ನಿಮಗೆ ಆಗಲ್ಲಾಂದ್ರೆ ಹೇಳ್ರೀ... ಚಿತ್ರದಿಂದ ಈ ದೃಶ್ಯವನ್ನೇ ಕಿತ್ತುಹಾಕ್ತೀನಿ" ಎಂದು ಎಲ್ಲರ ಸ್ವಾಭಿಮಾನವನ್ನು ಕೆಣಕಿದರು. "ಇಲ್ಲಾ ಪುಟ್ಟಣ್ಣಾಜಿ, ನಿಮ್ಮ ನಿರೀಕ್ಷೆಯಂತೆಯೇ ಅಭಿನಯಿಸ್ತೀವಿ..." ಎಂಬ ದನಿಯೊಂದು ಕಲಾವಿದರ ಗುಂಪಿನಿಂದ ತೇಲಿಬಂತು. ಹಾಗೆ ಹೇಳಿದ್ದು, ಚಾಮಯ್ಯ ಮೇಷ್ಟ್ರು ಪಾತ್ರಧಾರಿ ಕೆ.ಎಸ್. ಅಶ್ವತ್ಥ್! ಕ್ಯಾಮೆರಾ ಮತ್ತೆ ಚಾಲನೆಯಾಯಿತು, ಕಲಾವಿದರೆಲ್ಲ ಮನದುಂಬಿ ಅಭಿನಯಿಸಿದರು, ಟೇಕ್ ಓಕೆ ಆಯಿತು!

ಇಲ್ಲಿದೆ ನೋಡಿ ಆ ದೃಶ್ಯ:

ಚಿತ್ರದ ಕಥೆಯಂತೆ, ಗುರು- ಹಿರಿಯರ ಆಗ್ರಹಕ್ಕೆ ಕಟ್ಟುಬಿದ್ದು ರಾಮಾಚಾರಿ ತಾನು ಮನಸಾರೆ ಪ್ರೀತಿಸಿದ್ದ ಅಲಮೇಲುವಿನಿಂದ ದೂರವಾಗ ಬೇಕಾಗುತ್ತದೆ, ಅಣ್ಣನಾಗಿ ಮುಂದೆ ನಿಂತು ಅವಳ ಮದುವೆ ಯನ್ನು ನಡೆಸಿಕೊಡಬೇಕು ಎಂಬ ಷರತ್ತಿಗೆ ಒಳಗಾಗಬೇಕಾ ಗುತ್ತದೆ. ಆಗ ಆಕೆಯ ಮನೆಗೆ ಬರುವ ರಾಮಾ ಚಾರಿ, "ಅಲಮೇಲು, ನಿನಗೇಂತ ವಿಷ ತಂದಿದ್ದೀನಿ ತಗೋ" ಅಂತ ಪೊಟ್ಟಣವೊಂದನ್ನು ಮುಂದು ಮಾಡಿದಾಗ ಅಲಮೇಲು ಮುಗಿಬಿದ್ದು ಅದನ್ನು ತೆಗೆದುಕೊಳ್ಳುತ್ತಾಳೆ. ತಮ್ಮ ಪ್ರೀತಿಗೆ ಅಡ್ಡಿಯಾದ ಹಿರಿಯರ ಸಮ್ಮುಖದಲ್ಲೇ ಅದನ್ನು ಸೇವಿಸಿ ಪ್ರಾಣಬಿಟ್ಟುಬಿಡಬೇಕು ಎಂಬುದು ಅವಳ ಇರಾದೆಯಾಗಿರುತ್ತದೆ. ಅವಳು ಹಾಗೆ ಪೊಟ್ಟಣ ತೆಗೆದುಕೊಳ್ಳುವಾಗ ಮನೆಯವರೆಲ್ಲಾ ಧಾವಿಸಿ ಬಂದು ಅದನ್ನು ಕಿತ್ತುಕೊಳ್ಳಲು ಮುಂದಾಗುತ್ತಾರೆ. ಆ ಕೊಸರಾಟದಲ್ಲಿ ಪೊಟ್ಟಣ ಒಡೆದು ಅದರಿಂದ ಅರಿಶಿನ-ಕುಂಕುಮ ಧಾರಾಕಾರವಾಗಿ ಸುರಿಯಲಾರಂಭಿಸುತ್ತದೆ. ಆಗ ಅಲಮೇಲು, "ಅಲ್ವೋ ರಾಮಾಚಾರಿ, ಅರಿಶಿನ-ಕುಂಕುಮ ತಂದುಬಿಟ್ಟು ವಿಷ ಅಂತೀಯಲ್ಲೋ...?" ಎಂದಾಗ ರಾಮಾಚಾರಿ, "ಲೇ ಹುಚ್ಚಿ, ಇವತ್ತಿನಿಂದ ನಾನು ನಿನ್ನ ಅಣ್ಣ... ಅಣ್ಣನಾದವನು ತಂಗಿಗೆ ವಿಷ ತಂದುಕೊಡ್ತಾನೇನೇ? ಅವನು ಯಾವತ್ತಿಗೂ ಕೊಡೋದು ಅರಿಶಿನ-ಕುಂಕುಮ ವನ್ನೇ ಅಲ್ವೇನೇ..?" ಎನ್ನುತ್ತಾನೆ. ಇವಿಷ್ಟೂ ಬೆಳವಣಿಗೆಗೂ ಕಾರಣರಾಗಿದ್ದ ಅಲ್ಲಿದ್ದ ಹಿರಿಯರು ರಾಮಾಚಾರಿಯ ಈ ಮಾತಿಗೆ ಬೆರಗಾಗುತ್ತಾರೆ. ತಮ್ಮ ಪರಮಶಿಷ್ಯನ ಹೃದಯ ವೈಶಾಲ್ಯ ಕಂಡು ಚಾಮಯ್ಯ ಮೇಷ್ಟ್ರ ಕಂಗಳು ಹನಿಗೂಡುತ್ತವೆ. ಆ ಭಾವದಲ್ಲೇ ಅವನನ್ನು ನೋಡುತ್ತ ಸ್ಥಿರವಾಗುತ್ತಾರೆ.

'ನಾಗರಹಾವು' ಚಿತ್ರದ ಒಂದೊಂದು ದೃಶ್ಯವೂ ಹೀಗೆ 'ಹಾಟ್ ಕೇಕ್'ನಂತೆ ಮೂಡಿಬರುವಂತಾಗಲು ಪುಟ್ಟಣ್ಣ ಕಲಾವಿದರನ್ನು, ತಂತ್ರಜ್ಞರನ್ನು ಆಗಾಗ ಹೀಗೆ ಕೆಣಕುತ್ತಿದ್ದರು. ಅದರ ಫಲಶ್ರುತಿಯಾಗಿರುವ ದೃಶ್ಯಗಳಲ್ಲಿ ಇದೂ ಒಂದು

(ಮುಂದುವರಿಯುವುದು)

ಇರುವೆಗೆ ಸಿಗದ ಸಕ್ಕರೆ-ಸೀಮೆಗಿಲ್ಲದ್ದು

ಇಂದಿನ ರಿಮೇಕ್ ಚಿತ್ರಗಳ ಕೆಲವು ನಿರ್ದೇಶಕರು ಪಾಪ, ತಮಗೆ ಬೆಲೆ ಸಿಗುತ್ತಿಲ್ಲ ಅಂತ ಸಾಕಷ್ಟು ಬಾರಿ ಅಳಲು ತೋಡಿಕೊಳ್ಳುತ್ತಾರೆ. ನಾನು 4 ಚಿತ್ರಗಳನ್ನು ಕೊಟ್ಟಿದ್ದರೂ ಜನ ನನ್ನನ್ನು ಗುರುತಿಸುವುದೇ ಇಲ್ಲ, ಒಂದು ಸಿನಿಮಾ ಮಾಡಿದವರಿಗೆ ಬೆಲೆ ಕೊಡುವ ಜನ ನನಗೆ ಯಾಕೆ ಅದೇ ಬೆಲೆ ಕೊಡಲ್ಲ. ಜತೆಗೆ ನನ್ನನ್ನು ರಿಮೇಕ್ ಚಿತ್ರಗಳ ನಿರ್ದೇಶಕ ಎಂದೇ ಹೇಳುತ್ತಾರೆ. ಅದು ಬದಲಾಗಬೇಕು ಎಂದು ಡಿಮ್ಯಾಂಡ್ ಮಾಡುತ್ತಾರೆ. ರಿಮೇಕ್ ನಿರ್ದೇಶಕ ಎಂಬ ಪಟ್ಟದ ಬಗ್ಗೆ ಮಾತನಾಡುವುದಾದರೆ ಅದು ಸಹಜ. ಅವರು ಮಾಡಿರುವ ಎಲ್ಲಾ ಚಿತ್ರಗಳೂ ಬಹುತೇಕ ರಿಮೇಕ್ ಆಗಿರುತ್ತವೆ. ಹಾಗಾಗಿ ಒಬ್ಬ ರಿಮೇಕ್ ನಿರ್ದೇಶಕನಿಗೆ ಸಿಗುವಷ್ಟು ಮರ್ಯಾದೆ ಮಾತ್ರ ಅವರಿಗೆ ಸಿಗುತ್ತಿದೆ. ಅದರಲ್ಲಿ ತಪ್ಪೇನಿಲ್ಲ. ಆದರೆ ಇದರ ಬಗ್ಗೆ ಅವರಿಗೆ ಅಸಮಾಧಾನ. ನನ್ನ ಟ್ಯಾಲೆಂಟ್‌ಗೆ ಬೆಲೆ ಇಲ್ಲ ಅಂತ ಬೇಜಾರು. ಇಂಥವರಿಗೆ ನೆನಪಿದ್ದರೆ ಕೆ.ಮಾದೇಶ್ ಎಂಬ ನಿರ್ದೇಶಕರು ಕನ್ನಡ ಚಿತ್ರರಂಗದಲ್ಲಿ ಅನೇಕ ಹಿಟ್ ಚಿತ್ರಗಳನ್ನು ಕೊಟ್ಟಿದ್ದಾರೆ. ಆದರೆ ಅವೆಲ್ಲವೂ ರಿಮೇಕ್ ಚಿತ್ರಗಳೇ. ಅವೆಲ್ಲವೂ ಸಾಕಷ್ಟು ಹಣ ಮಾಡಿದರೂ, ಅವರು ಎಂದೂ ಗ್ರೇಟ್ ನಿರ್ದೇಶಕ ಎನಿಸಿಕೊಳ್ಳಲಿಲ್ಲ ಮತ್ತು ಇವತ್ತು ಮಾದೇಶ್ ಅವರನ್ನು ಚಿತ್ರರಂಗ ಹೆಚ್ಚು ಕಮ್ಮಿ ಮರೆತೇಬಿಟ್ಟಿದೆ. ಕನ್ನಡ ಚಿತ್ರರಂಗದ ಪ್ರಮುಖ ನಿರ್ದೇಶಕರು ಅಂದಾಕ್ಷಣ ಕೆ.ಮಾದೇಶ್ ಖಂಡಿತಾ ಬಹುತೇಕರಿಗೆ ನೆನಪಾಗುವುದಿಲ್ಲ. ಅಷ್ಟೇ ಯಾಕೆ ಕನ್ನಡದ ಹಿರಿಯ ನಿರ್ದೇಶಕರಾಗಿದ್ದ ಡಿ.ರಾಜೇಂದ್ರಬಾಬು ಅವರು ಎಷ್ಟೋ ಸೂಪರ್‌ಹಿಟ್ ಚಿತ್ರಗಳನ್ನು ಕೊಟ್ಟವರು.



ತುಂಟರಗಾಳಿ
ಹರಿ ಪರಾಕ್
vveditoped@gmail.com

ಸ್ವಂತ ಕಥೆಗಳನ್ನು ಮಾಡಿಯೂ ಸಕ್ಸಸ್ ನೋಡಿದವರು. ಆದರೆ ಅವರು ಹೆಚ್ಚು ರಿಮೇಕ್ ಚಿತ್ರಗಳನ್ನು ಮಾಡುತ್ತಿದ್ದರು ಎನ್ನುವ ಕಾರಣಕ್ಕೆ ಅವರಿಗೆ ಸಲ್ಲಬೇಕಾದ ಬೆಲೆ ಎಂದೂ ಸಿಗಲಿಲ್ಲ. ಸೂಪರ್‌ಹಿಟ್ ಚಿತ್ರಗಳನ್ನು ಕೊಟ್ಟ ಬಾಬು ಅವರಿಗೇ ಸಿಗಬೇಕಾದ ಬೆಲೆ ಸಿಗಲಿಲ್ಲ. ಅವರೇ ಕೆಲವೊಮ್ಮೆ, "ಜನ ನನ್ನನ್ನು ಸಿಂಗ್ ಬಾಬು ಜತೆ ಕನ್‌ಫ್ಯೂಸ್ ಮಾಡಿಕೊಳ್ಳುತ್ತಾರೆ, ನನಗೊಂದು ಐಡೆಂಟಿಟಿನೇ ಇಲ್ಲ" ಎಂದು ಬೇಸರಿಸಿಕೊಂಡಿದ್ದರು. ಇದರ ಮುಂದೆ ಇಂದಿನ ನಿರ್ದೇಶಕರ ಕೊರಗು ಏನೂ ಅಲ್ಲ. ಈ ಹೊಸ ನಿರ್ದೇಶಕರು ಸಾಧಿಸಬೇಕಾಗಿದ್ದು ಇನ್ನೂ ಬಹಳ ಇದೆ. ಅದನ್ನು ತಮ್ಮ ಸ್ವಂತ ಕಥೆಗಳ ಮೂಲಕ ಸಾಧಿಸಿ ಆಮೇಲೆ ಕ್ರೆಡಿಟ್ ಕೊಡ್ತಿಲ್ಲ ಅಂತ ಮಾತಾಡಿದರೆ ಅದಕ್ಕೆ ಬೆಲೆ ಇರುತ್ತೆ.

ಲೂಸ್ ಟಾಕ್

ಸ್ಯಾಂಡಲ್‌ವುಡ್ ಡೈರೆಕ್ಟರ್

- **ಏನ್ ಸರ್, ಹೆಂಗ್ ನಡೀತಿದೆ ನಿಮ್ಮ ಸಿನಿಮಾ ಶೂಟಿಂಗ್?**
- ಅಯ್ಯೋ ಚಿತ್ರೀಕರಣ ಬರದಿಂದ ಸಾಗುತ್ತಿದೆ ಕಣ್ರೀ.
- **ರೀ ಅದು ಬರದಿಂದ ಅಲ್ಲ, ಭರದಿಂದ**
- ರೀ ಸ್ವಾಮಿ, ನಮ್ ಪ್ರೊಡ್ಯೂಸರ್ ಹತ್ರ ದುಡ್ಡಿಲ್ಲ, ಹಣದ ಕೊರತೆ ಇದೆ. ಅದಕ್ಕೇ ಬರದಿಂದ ಸಾಗುತ್ತಿದೆ ಅಂತ ಹೇಳಿದ್ದು.
- **ಓ ಹಂಗೆ, ಆದ್ರೆ ಮೊನ್ನೆ ಶೂಟಿಂಗಿಗೆ ಅಂತ ರಾಜಸ್ಥಾನಕ್ಕೆ ಹೋಗಿದ್ದಾಗ, ನಮ್ ಪ್ರೊಡ್ಯೂಸರ್ ದುಡ್ಡನ್ನ ನೀರಿನ್ ಥರ ಖರ್ಚು ಮಾಡಿದ್ರು, ಅಂತಿದ್ರಿ?**
- ಹೌದು ರೀ, ರಾಜಸ್ಥಾನದಲ್ಲಿ ನೀರಿನ್ ಥರ ಖರ್ಚ್ ಮಾಡಿದ್ರು, ಅಂದ್ರೆ, ತುಂಬಾ ಕಡಿಮೆ ದುಡ್ಡು ಖರ್ಚು ಮಾಡಿದ್ರು ಅಂತ ಅಲ್ವಾ!
- **ಓಹೋ, ಯಾಕೋ ಡೈರೆಕ್ಟರ್ ಸಾಹೇಬ್ರು ಬರೀ ಇನ್‌ಡೈರೆಕ್ಟ್ ಆಗಿ ಮಾತಾಡ್ತಾ ಇದ್ದೀರ?**
- ಏನ್ ಮಾಡೋದು.. ನಮ್ಮ 'ನಿರ್ಮಾ'ಪಕರು 'ಏರಿಯಲ್' ಶಾಟ್ ತೆಗೆಯೋಕೂ ದುಡ್ಡು ಬಿಚ್ತಲ್ಲ.. ಕಲೆ ಒಳ್ಳೆಯದೇ ನಿಜ, ಆದ್ರೆ ಸಿನಿಮಾ ಕಲೆಗೆ ಬೆಲೆ ಕಟ್ಟಲಿಲ್ಲ ಅಂದ್ರೆ ಹೆಂಗೆ?
- **ಆದ್ರೂ 15 ದಿನ ಶೂಟಿಂಗ್ ಯಶಸ್ವಿಯಾಗಿ ಮುಗಿಸಿದ್ದೀರ ಅಲ್ವಾ?**
- ಹೌದೌದು. ಅದೇ ದೊಡ್ಡ ಸಾಧನೆ. ಸಿನಿಮಾಗಳು ಬಿಡುಗಡೆ ಆದಮೇಲೆ ಯಶಸ್ವಿ 10ನೇ ದಿನ, 15 ದಿನ ಅಂತ ಹಾಕ್ಕೊತಾರಲ್ಲ, ಹಂಗೇ ನಾವು ಅಮೋಘ 15 ದಿನಗಳ ಶೂಟಿಂಗ್ ಮುಕ್ತಾಯ ಅಂತ ಪೋಸ್ಟರ್ ಹಾಕಿಸ್ಬೇಕು ಅಂದ್ಕೊಂಡಿದ್ದೀವಿ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಈ ಸುರಪಾನ ಬಂದಿದ್ದೇ ಸುರರಿಂದ, ಅಂದ್ರೆ ದೇವತೆಗಳಿಂದ ಅಲ್ವಾ. ಅವರೇ ನಮಗೆ ಇದನ್ನೆಲ್ಲಾ ಕಲಿಸಿದ್ದು. ಅದಕ್ಕೇ ಹೆಂಡನ ಪರಮಾತ್ಮ ಅಂತಾರೋ ಏನೋ ಗೊತ್ತಿಲ್ಲ. ಸರಿ, ಹಿಂಗೇ ಒಂದ್ಸಲ ದೇವಲೋಕದಿಂದ ನಾರದ ಭೂಮಿಗ್ ಬಂದಿದ್ದ. ಅವ್ನು ಅಲ್ಲಿ ಇಲ್ಲಿ ಬತ್ತಿ ಇಡೋ ಕೆಲ್ಸ ಮಾಡಿ ಸುಸ್ತಾಗಿ ಒಂದ್ ಬಾರಿಗೆ ಹೋಗಿ ಎಣ್ಣೆ ಹೊಡಿಯೋಕ್ ಕೂತ್ಕೊಂಡ. ಅಲ್ಲಿ ಖೇಮು ವೇಯ್ಟರ್ ಕೆಲ್ಸ ಮಾಡ್ತಾ ಇದ್ದ. ನಾರದ ಬಂದ ಕೂಡಲೇ ಖೇಮು ಹೋಗಿ, "ಸರ್, ಏನ್ ಕೊಡ್ಲಿ?" ಅಂದ. ಅದಕ್ಕೆ ನಾರದ "ಒಂದ್ ಕ್ವಾರ್ಟರ್ ರಮ್ ಕೊಡಪ್ಪಾ" ಅಂದ. ಸರಿ ಖೇಮು ಹೋಗಿ ತಂದುಕೊಟ್ಟ. ನಾರದ ಒಂದ್ ಫುಲ್ ಕ್ವಾರ್ಟರ್ ಕುಡಿದ. ಅವನಿಗೆ ಅದು ಏನೂ ಏರಲಿಲ್ಲ. ಸರಿ ಅಂತ ಖೇಮುನ ಕರೆದು ಇನ್ನೊಂದ್ ಕ್ವಾರ್ಟರ್ ತರಿಸಿದ, ಕುಡಿದ. ಅದೂ ಏರಲಿಲ್ಲ. ಇನ್ನೊಂದಾಯ್ತು. ಫುಲ್ ಬಾಟ್ಲ್ ಆಯ್ತು. ನಾರದ ಸುಮ್ನೆ ಆರ್ಡರ್ ಮಾಡ್ತಾನೇ ಇದ್ದ. ಖೇಮು ತಂದ್ ಕೊಡ್ತಾ ಇದ್ದ. ಇವ್ನು ಕುಡಿತಾ ಇದ್ದ. ಸರಿ, ಎರಡ್ ಫುಲ್ ಬಾಟ್ಲ್ ಆಯ್ತು. ವೇಯ್ಟರ್ ಖೇಮು ನೋಡ್ತಾನೇ ಇದ್ದ. ಇವ್ನು ಮತ್ತೆ ಇನ್ನೊಂದ್ ಕ್ವಾರ್ಟರ್ ಆರ್ಡರ್ ಮಾಡೋಕೆ ಖೇಮುನ ಕರೆದ. ಖೇಮುಗೆ ಇವನು ಕುಡಿತಾ ಇರೋ ಪರಿ ನೋಡಿ ಸಿಕ್ಕಾಪಟ್ಟೆ ಆಶ್ಚರ್ಯ ಆಗಿತ್ತು. ಇನ್ನೊಂದ್ ಕ್ವಾರ್ಟರ್ ತಂದು ಕೊಟ್ಟು, "ಸರ್, ನಂಗೆ ಒಂದ್ ಡೌಟು, ನೀವು ಇಷ್ಟೊಂದ್ ಕುಡಿದ್ರೂ ನಿಮಗೆ ಒಂಚೂರೂ ಏರಿಲ್ಲವಲ್ಲ ಹೆಂಗೆ?" ಅಂದ. ಅದಕ್ಕೆ ನಾರದ, "ಇಲ್ಲಾ ಕಣಮ್ಮಾ, ಹೆಂಡ ಕುಡಿದ್ರೆ ಚಿತ್ತಾಗೋದು, ಕಿಕ್ ಹೊಡೆಯೋದು, ಏರೋದು, ಇದೆಲ್ಲ ಏನಿದ್ರೂ ಬರೀ ನಿಮ್ಮಂಥ ಮನುಷ್ಯರಿಗೆ, ನಾನು ನಾರದ, ದೇವಲೋಕದಿಂದ ಬಂದಿದೀನಿ" ಅಂದ. ಆವಾಗ ವೇಯ್ಟರ್ ಖೇಮು ಅಂದ- "ಹಾ, ಬಡ್ಡಿ ಮಗಂಗೆ ಇವಾಗ್ ಏರ್ತು ನೋಡು".

ಲೈನ್ ಮ್ಯಾನ್

- **ಒಂದು ಇ-ಮೇಲ್‌ಗೆ ತಕ್ಕ ಉತ್ತರ ಕೊಡೋದು ಅಂದ್ರೆ ಏನು?**
- YOU MAILED IT, I NAILED IT
- **ತುಂಬಾ ಸುಲಭದ ಕೆಲಸ ಅಂದ್ರೆ ಯಾವ್ದು?**
- MOMO ಬಗ್ಗೆ MEME ಮಾಡೋದು
- **ಪಬ್ಲಿಕ್ ಟಿವಿ ರಂಗನಾಥ್ ಅವರಿಗೂ ನರೇಂದ್ರ ಮೋದಿಗೂ ಇರೋ ವ್ಯತ್ಯಾಸ**
- ಏನಾದ್ರೂ ಒಳ್ಳೇದಾದ್ರೆ ರಂಗನಾಥ್ ಅವರು 'ಆಲ್‌ರೈಟ್ ಮುಂದಕ್ಕೋಗಣ' ಅಂತಾರೆ
- ಕೆಟ್ಟದ್ದಕ್ಕೆಲ್ಲ ಹಿಂದಿನ ಸರಕಾರವೇ ಹೊಣೆ ಅನ್ನೋ ಮೋದಿ, 'ಹಿಂದಕ್ಕೋಗಣ' ಅಂತಾರೆ.
- **ಎಲ್ಲರ ಬಗ್ಗೆನೂ ಸಂದೇಹ ಪಡುವವನು**
- 'ಅನುಮಾನ್' ಭಕ್ತ
- **ಮನೇಲಿ ಟಿವಿ ಇದ್ರೆ ಬಿಪಿಎಲ್ ಕಾರ್ಡು ರದ್ದು**
- ಖೇಮು: ನಮ್ಮನೇಲಿ ಬಿಪಿಎಲ್ ಟಿವಿ ಇಲ್ಲ, ತೊಂದ್ರೆ ಇಲ್ಲ ಬಿಡಿ.
- **ಇರುವೆಗೆ ಸಿಗದ ಸಕ್ಕರೆ**
- 'ಸೀಮೆ'ಗಿಲ್ಲದ ಸಕ್ಕರೆ
- **ವಾಣಿ ಅನ್ನೋ ಹುಡುಗಿ ಸತ್ತ ಮೇಲೆ ಏನಾಗ್ತಾಳೆ**
- ಅಶರೀರ ವಾಣಿ
- **ಆಟೋಗ್ರಾಫ್ ಹಾಕಿಸಿಕೊಳ್ಳುವ ಹುಚ್ಚು ಅತಿರೇಕಕ್ಕೆ ಹೋದರೆ ಬರುವ ಕಾಯಿಲೆ**
- 'ಸೈನ್' ಫ್ಲೂ
- **ಒಂದು ಒಳ್ಳೆಯ ಉದ್ದೇಶಕ್ಕೆ ಸಹಿ ಸಂಗ್ರಹಿಸುವ ಅಭಿಯಾನ ಯಶಸ್ವಿಯಾದರೆ**
- ಇಂಡಿಯಾ ಈಸ್ 'ಸೈನಿಂಗ್'
- **ಆ ಅಭಿಯಾನಕ್ಕೆ ಬ್ರ್ಯಾಂಡ್ ಅಂಬಾಸಿಡರ್**
- 'ಸೈನಾ' ನೆಹ್ವಾಲ್

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 54

ಸಮಾಚಾರ ಸಣ್ಣದಲ್ಲ

ಮಣಿಪುರ ಬಸ್ ಸಂಚಾರ ಆರಂಭ: ಒಂದೆಡೆ ಕಲ್ಲೆಸೆತ

ಇಂಫಾಲ: ಎರಡು ವರ್ಷಗಳಿಂದ ಜನಾಂಗೀಯ ಸಂಘರ್ಷದಲ್ಲಿ ನರಳಿದ್ದ ಈಶಾನ್ಯ ರಾಜ್ಯ ಮಣಿಪಾಲ ಇತ್ತೀಚೆಗಷ್ಟೇ ಸಹಜ ಸ್ಥಿತಿಗೆ ಮರಳಿದೆ. ರಾಜಧಾನಿ ಇಂಫಾಲ ನಗರದಿಂದ ಬೆಟ್ಟ ಪ್ರದೇಶಗಳಿಗೆ ಅಂತರ ಜಿಲ್ಲಾ ಬಸ್ ಸೇವೆ ಪುನರಾರಂಭಗೊಂಡಿದೆ. ಅದರ ಬೆನ್ನಲ್ಲೇ ಶನಿವಾರ ಕಾಂಗ್ಪೋಕ್ಪಿಯಲ್ಲಿ ಮಣಿಪುರ ರಾಜ್ಯ ಸಾರಿಗೆ ಸಂಸ್ಥೆಯ ಬಸ್ ಮೇಲೆ ದಾಳಿ ನಡೆದಿದೆ. ಸೇನಾಪತಿ ಜಿಲ್ಲೆಗೆ ತೆರಳುತ್ತಿದ್ದ ಬಸ್ ಮೇಲೆ ಕಾಗ್ಪೋಕ್ಪಿ ಜಿಲ್ಲೆಯ ಗಮ್ಗಿಪ್ಪೆ ಪ್ರದೇಶದಲ್ಲಿ ಜನರ ಗುಂಪು ಕಲ್ಲು ತೂರಿದೆ. ತಕ್ಷಣವೇ ಸ್ಥಳಕ್ಕೆ ಧಾವಿಸಿದ ಭದ್ರತಾ ಪಡೆ ಸಿಬ್ಬಂದಿ, ಅಶ್ರುವಾಯು ಷೆಲ್ ಸಿಡಿಸಿ, ಲಾಠಿ ಪ್ರಹಾರ ಮಾಡಿ ಗುಂಪನ್ನು ಚದುರಿಸಿದ್ದಾರೆ. ಗುಂಪಿನಲ್ಲಿದ್ದ ಕೆಲವರು ಗಾಯಗೊಂಡಿದ್ದಾರೆ. ಮಾ.8ರಿಂದ ಮಣಿಪುರದ ಎಲ್ಲಾ ಮಾರ್ಗಗಳಲ್ಲಿ ಮುಕ್ತ ಸಂಚಾರ ನಡೆಯಲಿ. ಅದನ್ನು ಖಚಿತಪಡಿಸಿಕೊಳ್ಳಲು ಮತ್ತು ಅಡೆತಡೆಗಳನ್ನು ಸೃಷ್ಟಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಇತ್ತೀಚೆಗೆ ಭದ್ರತಾ ಪಡೆಗಳಿಗೆ ನಿರ್ದೇಶನ ನೀಡಿದ್ದರು. ಸಚಿವರ ನಿರ್ದೇಶನದಂತೆಯೇ ಬಸ್ ಸೇವೆ ಪುನರಾರಂಭ ಮಾಡಲಾಗಿತ್ತು.

ಗಾಲಿಕುರ್ಚಿಗೆ ಎಐ ನಕಾರ ಬಿದ್ದು ಗಾಯಗೊಂಡ ವೃದ್ಧೆ

ದೆಹಲಿ: ರಾಜಧಾನಿ ದೆಹಲಿ ವಿಮಾನ ನಿಲ್ದಾಣದಲ್ಲಿ 82 ವರ್ಷದ ಅಜ್ಜಿಗೆ ಗಾಲಿ ಕುರ್ಚಿ ನೀಡಲು ನಿರಾಕರಿಸಿ ಏರ್ ಇಂಡಿಯ ವಿಮಾನ ಸಿಬ್ಬಂದಿ ಅಮಾನವೀಯವಾಗಿ ವರ್ತಿಸಿದ್ದಾರೆ. ಪರಿಣಾಮ ದೀರ್ಘ ಕಾಲ ನಿಲ್ಲಲಾಗದೇ ಅಜ್ಜಿ ಬಿದ್ದಿದ್ದಾರೆ. ಅವರ ತಲೆ, ಮುಖಕ್ಕೆ ತೀವ್ರ ಸ್ವರೂಪದ ಗಾಯಗಳಾಗಿದ್ದು, 2 ಹೊಲಿಗೆಗಳನ್ನು ಹಾಕಲಾಗಿದೆ ಎಂದು ಮೊಮ್ಮಗಳು ಪಾರುಲ್ ಕನ್ವರ್ ದೂರಿದ್ದಾರೆ. ಗಂಭೀರವಾಗಿ ಗಾಯಗೊಂಡ ಅಜ್ಜಿಯನ್ನು ಆಸ್ಪತ್ರೆಗೆ ದಾಖಲಿಸಿ 2 ದಿನದಿಂದ ಐಸಿಯು ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ತಲೆಗೆ ಜೋರಾಗಿ ಪೆಟ್ಟು ಬಿದ್ದಿರುವುದರಿಂದ ಮೆದುಳಿನಲ್ಲಿ ರಕ್ತಸ್ರಾವ ಭೀತಿ ಎದುರಾಗಿದೆ. ದೇಹದ ಎಡಭಾಗ ಶಕ್ತಿ ಕಳೆದು ಕೊಳ್ಳುತ್ತಿದೆ ಎಂದು ಪಾರುಲ್ ಜಾಲತಾಣದಲ್ಲಿ ಬರೆದಿದ್ದಾರೆ. ಟಿಕೆಟ್ ಖರೀದಿಸಿದಾಗಲೇ ಅಜ್ಜಿಗಾಗಿ ಗಾಲಿ ಕುರ್ಚಿ ಕಾಯ್ದಿರಿಸಿದ್ದೆವು. ಹಾಗಿದ್ದೂ ಎಐ ಸಿಬ್ಬಂದಿ ಗಾಲಿಕುರ್ಚಿ ನಿರಾಕರಿಸಿ ಕಠಿಣವಾಗಿ ನಡೆದುಕೊಂಡರು. ಬೋರ್ಡಿಂಗ್ ಪಾಸ್ ಕೌಂಟರ್ ಬಳಿಯೇ ಅಜ್ಜಿ ಕುಸಿದಿದ್ದಾರೆ. ನಂತರವೂ ಎಐ ಸಿಬ್ಬಂದಿ ನೆರವಾಗಲು ಮುಂದಾಗಿಲ್ಲ ಎಂದು ಮೊಮ್ಮಗಳು ದೂರಿದ್ದಾರೆ. ಸುದ್ದಿ ಚಿತ್ರ ಸಮೇತ ಜಾಲತಾಣದಲ್ಲಿ ವೈರಲ್ ಆಗಿದ್ದು, ನೆಟ್ಟಿಗರು ಏರ್ ಇಂಡಿಯ ಸಿಬ್ಬಂದಿಗೆ ತರಾಟೆ ತೆಗೆದುಕೊಂಡಿದ್ದಾರೆ.

ಏಪ್ರಿಲ್‌ನಲ್ಲಿ ಪ್ರಧಾನಿ ಮೋದಿ ಲಂಕಾ ಭೇಟಿ?

ದೆಹಲಿ: ಮುಂಬರುವ ಏಪ್ರಿಲ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಶ್ರೀಲಂಕಾಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ. ಇದು ಭಾರತ-ಶ್ರೀಲಂಕಾ ಸಂಬಂಧ ಗಳ ಸುಧಾರಣೆಗೆ ಬಲ ನೀಡಲಿದೆ. ಲಂಕಾದಿಂದ ಸೇನಾ ಸಿಬ್ಬಂದಿಗಳನ್ನು ಹಿಂಪಡೆದ ಬಳಿಕ ಭಾರತದ ಪ್ರಧಾನಿಯ ಮೊದಲ ಭೇಟಿ ಇದಾಗಿದೆ. ಲಂಕಾ ಅಧ್ಯಕ್ಷ ಅನುರಾ ದಿಸನಾಯಕ ಕಳೆದ ಡಿಸೆಂಬರ್‌ನಲ್ಲಿ ದೆಹಲಿಗೆ ಭೇಟಿ ನೀಡಿದ್ದರು. ಆ ಬಳಿಕ ಪ್ರಧಾನಿ ಮೋದಿ ಅವರ ಭೇಟಿ ನಿಗದಿಯಾಗಿದೆ. ಮೋದಿ ಅವರು ಪ್ರಧಾನಿಯಾಗಿ 2015, 2017 ಮತ್ತು 2019ರಲ್ಲಿ ಲಂಕಕ್ಕೆ ಭೇಟಿ ನೀಡಿದ್ದರು. ಪ್ರಧಾನಿ ಮೋದಿ ಭೇಟಿ ವೇಳೆ ಭಾರತದ ರಾಮೇಶ್ವರಂ ಮತ್ತು ಲಂಕಾದ ತಲೈಮನ್ನಾರ್ ನಡುವೆ ಹೊಸ ದೋಣಿ ಮಾರ್ಗ ಬಗ್ಗೆ ಚರ್ಚಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ನಾಗಪಟ್ಟಣಂ ಅನ್ನುಟ್ರಿಂಕಾಮಲಿ ಜತೆ ಸಂಪರ್ಕಗೊಳಿಸುವ ಬಹು ಉತ್ಪನ್ನ ಪೆಟ್ರೋಲಿಯಂ ಪೈಪ್‌ಲೈನ್‌ನಲ್ಲಿ ಭಾರತ-ಲಂಕಾ ಮುಂದುವರಿ ಯುವ ಸಾಧ್ಯತೆಯಿದೆ. ಈ ಯೋಜನೆಯಲ್ಲಿ ಭಾರ ತೀಯ ತೈಲ ನಿಗಮ ಪ್ರಮುಖ ಪಾತ್ರ ವಹಿಸಿದೆ.

'ವಾಟ್ಸಾಪ್ ಜಗಳ' ಕೊಲೆಯಲ್ಲಿ ಅಂತ್ಯ

ಇಸ್ಲಾಮಾಬಾದ್: ವಾಟ್ಸಾಪ್ ಗ್ರೂಪ್‌ನಿಂದ ತೆಗೆದು ಹಾಕಿದ ಕಾರಣಕ್ಕೇ ಪಾಕಿಸ್ತಾನದ ಖೈಬರ್ ಫಂಖ್ತುಕ್ವಾದಲ್ಲಿ ವಾಟ್ಸಾಪ್ ಗ್ರೂಪ್ ಅಡ್ಮಿನ್ ಮುಷ್ತಾಕ್ ಅಹಮ್ಮದ್‌ನನ್ನು ಅಶ್ರಫ್ ಎಂಬಾತ ಗುಂಡಿಕ್ಕಿ ಕೊಂದಿದ್ದಾನೆ. ಪೊಲೀಸರು ಅಶ್ರಫ್‌ನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಹತ್ಯೆ ಹಿಂದಿನ ಕಾರಣ ತಿಳಿದು ಅಚ್ಚರಿಗೊಂಡಿದ್ದಾರೆ! ವ್ಯಾಟ್ಸಾಪ್ ಗ್ರೂಪ್‌ನಲ್ಲಿ ಒಂದು ವಿಚಾರಕ್ಕೆ ಶುರುವಾದ ಚರ್ಚೆ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿದೆ. ವಿವಾದ ತೀವ್ರವಾಗುತ್ತಿದ್ದಂತೆ ಆಶ್ರಫ್‌ನನ್ನು ಗ್ರೂಪ್‌ನಿಂದ ಮುಷ್ತಾಕ್ ಕಿತ್ತು ಹಾಕಿದ್ದಾನೆ. ಅಷ್ಟಕ್ಕೇ ಸಿಟ್ಟಿಗೆದ್ದ ಅಶ್ರಫ್, ಹುಡುಕಿಕೊಂಡು ಹೋಗಿ ಮುಷ್ತಾಕ್‌ಗೆ ಗುಂಡು ಹಾರಿಸಿ ಕೊಂದಿದ್ದಾನೆ.

{ **ಅಮಿತ್ ಶಾ** } ಕೇಂದ್ರ ಗೃಹ ಸಚಿವ

ಹಿಂದಿ ಭಾಷೆ ಬೇಡ, ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಬೇಡ ಎಂದು ತಕರಾರು ತೆಗೆಯುತ್ತಿರುವ ತಮಿಳುನಾಡು ಸಿಎಂ ಸ್ಟಾಲಿನ್ ಅವರು, ತಮ್ಮದೇ ರಾಜ್ಯದಲ್ಲಿನ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ತಮಿಳು ಭಾಷೆಯಲ್ಲಿಯೇ ಪಠ್ಯಪುಸ್ತಕ ಸಿದ್ಧಪಡಿಸಿ ತಮಿಳಿನಲ್ಲಿಯೇ ಬೋಧನೆ ಮಾಡುವಂತೆ ವ್ಯವಸ್ಥೆ ಮಾಡಬಲ್ಲರೇ?



ಮೋದಿ ಜಾಲತಾಣಕ್ಕೆ 6 ಸಾಧಕಿಯರ ಸಾರಥ್ಯ

ಅಂತಾರಾಷ್ಟ್ರೀಯ ಮಹಿಳಾ ದಿನ ವಿಶೇಷ: ವಿಜ್ಞಾನಿ, ಚದುರಂಗ ತಾರೆ, ಅಣಬೆ ಬೆಳೆಗಾರ್ತಿ, ಉದ್ಯಮಿಗಳ ಯಶೋಗಾಥೆ

ದೆಹಲಿ: 2025ರ ಮಾ.8 ಅಂತಾರಾಷ್ಟ್ರೀಯ ಮಹಿಳಾ ದಿನ, ಭಾರತದ ಮಹಿಳಾ ಸಾಧಕಿಯರ ಪಾಲಿಗೆ ವಿಶೇಷ ಅನುಭವದ ದಿನ. ಫೆ.23ರಂದು ಪ್ರಸಾರವಾದ 'ಮನ್ ಕಿ ಬಾತ್'ನಲ್ಲಿ ಹೇಳಿದಂತೆಯೇ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಸಾಮಾಜಿಕ ಜಾಲತಾಣದ ಎಲ್ಲಾ ವೇದಿಕೆಗಳನ್ನೂ ದಿನದ ಮಟ್ಟಿಗೆ ಮಹಿಳಾ ಸಾಧಕಿಯರಿಗೆ ಬಿಟ್ಟುಕೊಟ್ಟಿದ್ದಾರೆ. ಆ ಮೂಲಕ ಈ ಸಾಧಕಿಯರ ಯಶೋಗಾಥೆ ವಿಶ್ವದ ಮೂಲೆ ಮೂಲೆ ತಲುಪಲಿದೆ. ಕೋಟ್ಯಂತರ ಮಂದಿಗೆ ಉತ್ತಮ ಸಂದೇಶವನ್ನು ರವಾನಿಸಲಿದೆ.

'ವಿಶೇಷ ದಿನದ ಮೊದಲಿಗೇ ದೇಶದ ನಾರಿಶಕ್ತಿಗೆ ಅಂತಾರಾಷ್ಟ್ರೀಯ ಮಹಿಳಾ ದಿನದ ಶುಭಾಶಯ ಕೋರುವೆ' ಎಂದು ಸಂದೇಶ ಬರೆದಿರುವ ಪ್ರಧಾನಿ, ಅಧಿಕೃತ ಜಾಲತಾಣ 'ಎಕ್ಸ್', ಫೇಸ್‌ಬುಕ್, 'ಇನ್‌ಸ್ಟಾಗ್ರಾಂ' ಖಾತೆಗಳನ್ನು ದಿನದ ಮಟ್ಟಿಗೆ ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ಪರಮಾಣು ವಿಜ್ಞಾನಿ ಎಲಿನಾ ಮಿಶ್ರಾ, ಬಾಹ್ಯಾಕಾಶ ವಿಜ್ಞಾನಿ ಶಿಲ್ಪಿ ಸೋನಿ, ಚದುರಂಗ ಚತುರೆ 'ಜಿಎಂ' ವೈಶಾಲಿ, ಅಣಬೆ ಕೃಷಿಯ ಅನಿತಾ ದೇವಿ, ಉದ್ಯಮಿಗಳಾದ ಅವರಿಗೆ ನೀಡಿದ್ದಾರೆ.

ಪ್ರಧಾನಿ ಮೋದಿ ಸಂದೇಶ: 'ಮಹಿಳಾ ದಿನವಾದ ಇಂದು ನಮ್ಮ ನಾರಿ ಶಕ್ತಿಗೆ ನಮಸ್ಕರಿಸುವೆ. ನಮ್ಮ ಸರಕಾರ ಸದಾ ಮಹಿಳೆಯರ ಸಬಲೀಕರಣಕ್ಕೆ ಶ್ರಮಿಸುತ್ತಿದೆ, ಇದು ನಮ್ಮ ಯೋಜನೆಗಳು ಮತ್ತು ಕಾರ್ಯಕ್ರಮಗಳಲ್ಲಿ ಪ್ರತಿಫಲಿಸುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ 'ಎಕ್ಸ್'ನಲ್ಲಿ ಬರೆದಿದ್ದಾರೆ

ವಿವಿಧ ಯೋಜನೆ-ಕಾರ್ಯಕ್ರಮಗಳ ಮೂಲಕ ಮಹಿಳಾ ಸಬಲೀಕರಣಕ್ಕೆ ಕೇಂದ್ರದ ಎನ್‌ಡಿಎ ಸರಕಾರ ಸದಾ ಬದ್ಧವಾಗಿದೆ. ಆರ್ಥಿಕವಾಗಿ ಸ್ವಾವಲಂಬಿಯಾದ ಮಹಿಳೆ, ಮಹಿಳಾ ಉದ್ಯಮಿಗಳು ಸ್ವತಂತ್ರವಾಗಿ ಆಲೋಚಿಸಬಲ್ಲರು, ತಮ್ಮದೇ ರೀತಿಯಲ್ಲಿ ದೃಢ ನಿರ್ಧಾರ ಕೈಗೊಳ್ಳಬಲ್ಲರು. ಅವರ ಭವಿಷ್ಯವನ್ನು ಅವರೇ ಬರೆದುಕೊಳ್ಳಬಲ್ಲರು. ಇಂಥ ವನಿತೆಯರೇ ನವ ಭಾರತದ ನಿರ್ಮಾಣ ಶಿಲ್ಪಿಗಳು ಎಂದು ಮೋದಿ ಸಂದೇಶದಲ್ಲಿ ಬರೆದಿದ್ದಾರೆ.

ಎಲಿನಾ-ಶಿಲ್ಪಿ: ಇಬ್ಬರೂ ಮಹಿಳಾ ವಿಜ್ಞಾನಿಗಳು ಬಾಹ್ಯಾಕಾಶ ತಂತ್ರಜ್ಞಾನ, ಪರಮಾಣು ತಂತ್ರಜ್ಞಾನ ಮತ್ತು ಮಹಿಳಾ ಸಬಲೀಕರಣದ ಸಂದೇಶವನ್ನು ನೀಡಿದ್ದಾರೆ. ಮಹಿಳಾ ದಿನದಂದು ಪ್ರಧಾನಿಯವರ ಸಾಮಾಜಿಕ ಮಾಧ್ಯಮ ಖಾತೆಗಳನ್ನು ನಿರ್ವಹಿಸಲು ನಮಗೆ ಸಂತಸವಾಗುತ್ತಿದೆ. ಭಾರತದಲ್ಲಿ ಹೆಚ್ಚಿನ ಮಹಿಳೆಯರು ವಿಜ್ಞಾನದ ಕಡೆಗೆ ಬರಬೇಕು ಎಂಬುದು ನಮ್ಮ ಒತ್ತಾಯ ಎಂದು ಎಲಿನಾ ಮಿಶ್ರಾ ಮತ್ತು ಶಿಲ್ಪಿ ಸೋನಿ 'ಪ್ರಧಾನಿ ನರೇಂದ್ರ ಮೋದಿ ಅವರು ಎಕ್ಸ್' ಖಾತೆಯಲ್ಲಿ ಮೊದಲ ಸಂದೇಶ ಬರೆದಿದ್ದಾರೆ.

ಪರಮಾಣು ತಂತ್ರಜ್ಞಾನದಂತಹ ವಲಯವು ಭಾರತದಲ್ಲಿ ಮಹಿಳೆಯರಿಗೆ ಇಷ್ಟೊಂದು ಅವಕಾಶಗಳನ್ನು ನೀಡುತ್ತದೆ ಎಂದು ಊಹಿಸಲೂ ಸಾಧ್ಯವಿಲ್ಲ. ಅದೇ ರೀತಿ, ಬಾಹ್ಯಾಕಾಶ ಜಗತ್ತಿನಲ್ಲಿ ಮಹಿಳೆಯರು ಮತ್ತು ಖಾಸಗಿ ವಲಯದ ಹೆಚ್ಚುತ್ತಿರುವ ಭಾಗವಹಿಸುವಿಕೆಯು ಭಾರತವನ್ನು ನಾವೀನ್ಯತೆ ಮತ್ತು ಬೆಳವಣಿಗೆಗೆ ಅತ್ಯಂತ ಆಕರ್ಷಕ ಸ್ಥಳವನ್ನಾಗಿ ಮಾಡುತ್ತದೆ. ಭಾರತೀಯ ಮಹಿಳೆಯರು ಖಂಡಿತವಾಗಿಯೂ ಪ್ರತಿಭೆಯನ್ನು ಹೊಂದಿದ್ದಾರೆ ಮತ್ತು ಭಾರತವು ಖಂಡಿತವಾಗಿಯೂ ಸರಿಯಾದ ವೇದಿಕೆಯನ್ನು ಹೊಂದಿದೆ ಎಂದು ಬರೆದಿದ್ದಾರೆ.

ಎಲಿನಾ ಮಿಶ್ರಾ

ಒಡಿಶಾ ರಾಜ್ಯದ ಭುವನೇಶ್ವರ ಮೂಲದ ಎಲಿನಾ ಮಿಶ್ರಾ ಪರಮಾಣು ವಿಜ್ಞಾನಿ. ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಿದ್ದ ಕುಟುಂಬದಿಂದ ಬಂದಿರುವ ಎಲಿನಾ, ತಂದೆಯ ಕಾರಣದಿಂದಾಗಿ ಬಾಲ್ಯದಿಂದಲೇ ವಿಜ್ಞಾನದತ್ತ ಆಸಕ್ತಿ ಹೊಂದಿದ್ದವರು. ಅದೇ ಕಾರಣವಾಗಿ ಮುಂಬೈನಲ್ಲಿನ 'ಬಾಬಾ ಆಟೊಮಿಕ್ ರಿಸರ್ಚ್ ಸೆಂಟರ್' (ಬಿಎಆರ್‌ಸಿ-ಬಾರ್ಕ್)ದಲ್ಲಿ ವಿಜ್ಞಾನಿಯಾಗಿದ್ದಾರೆ. 'ಬಾರ್ಕ್' ಅರ್ಥಾತ್ ಬಾಬಾ ಪರಮಾಣು ಸಂಶೋಧನಾ ಕೇಂದ್ರದಲ್ಲಿ ಎಲೆಕ್ಟ್ರೋಮ್ಯಾಗ್ನೆಟಿಸಂ, ಅಕ್ಸಿಲರೇಟರ್ ಫಿಜಿಕ್ಸ್ ಮತ್ತು ಟೆಕ್ನಾಲಜಿ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮ್ಯಾಗ್ನೆಟಿಕ್ ಮತ್ತು ರೇಡಿಯೊ ಫ್ರೀಕ್ವೆನ್ಸಿ(ಆರ್‌ಎಫ್) ಕ್ಯಾರೆಕ್ಟರೈಸೇಷನ್ ಅವರ ಸೇವಾ ಕ್ಷೇತ್ರವಾಗಿದೆ. ನ್ಯೂಕ್ಲಿಯರ್ ತಂತ್ರಜ್ಞಾನವನ್ನು ವೈದ್ಯಕೀಯವಾಗಿ ಹಾಗೂ ಚಿಕಿತ್ಸಕ ಉದ್ದೇಶಕ್ಕೆ ಬಳಸಿಕೊಳ್ಳುವ ವಿಧಾನದ ಬಗೆಗೆ ಎಲಿನಾ ಸಂಶೋಧನಾ ನಿರತರಾಗಿದ್ದಾರೆ.

ಶಿಲ್ಪಿ ಸೋನಿ

ಮಧ್ಯಪ್ರದೇಶ ರಾಜ್ಯದ ಸಾಗರದಲ್ಲಿ ಜನಸಿದ ಶಿಲ್ಪಿ ಸೋನಿ, ಸಾಮಾನ್ಯ ಹಿನ್ನೆಲೆಯ ಕುಟುಂಬದಿಂದ ಬಂದವರು. ಆದರೆ, ಕುಟುಂಬದ ಪ್ರತಿಯೊಬ್ಬರೂ ಶಿಕ್ಷಣ, ಕಲಿಕೆ ವಿಚಾರದಲ್ಲಿ ಅತೀವ ಆಸಕ್ತರು. ಜತೆಗೆ ಶಿಲ್ಪಿ ಅವರಲ್ಲಿನ ತಣಿಯದ ಕುತೂಹಲ, ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ವಿಧಾನ ಅವರನ್ನು ಬಾಹ್ಯಾಕಾಶ ಕ್ಷೇತ್ರದ ವಿಜ್ಞಾನಿಯಾಗುವವರೆಗೂ ಕರೆದೊಯ್ದಿದೆ. ಸದಾ ಕಲಿಕೆಯ ಹಾದಿಯಲ್ಲೇ ಇರುವುದು ಅವರ ಶೈಕ್ಷಣಿಕ ಬೆಳವಣಿಗೆ-ಸಾಧನೆಗೆ ಪ್ರೇರಣೆ ಒದಗಿಸಿದೆ. ಮೊದಲಿಗೆ ರಕ್ಷಣಾ ಸಚಿವಾಲಯ ಅಧೀನದ 'ರಕ್ಷಣಾ ಸಂಶೋಧನೆ-ಅಭಿವೃದ್ಧಿ ಸಂಸ್ಥೆ'(ಡಿಆರ್‌ಡಿಒ)ದಲ್ಲಿ ತರಬೇತಿ, ದುಡಿಮೆ ನಂತರದಲ್ಲಿ ಅವರನ್ನು ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದತ್ತ ಕರೆದೊಯ್ದಿತು. ಸದ್ಯ ಶಿಲ್ಪಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿರುವ 'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ'ದಲ್ಲಿ(ಇಸ್ರೊ) 24 ವರ್ಷಗಳಿಂದ ವಿಜ್ಞಾನಿಯಾಗಿದ್ದಾರೆ. 'ಇಸ್ರೊ'ದ ವಿನ್ಯಾಸ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಒಟ್ಟು ಇಸ್ರೊದ 35 ಕಮ್ಯುನಿಕೇಷನ್ ಅಂಡ್ ನ್ಯಾವಿಗೇಷನ್ ಮಿಷನ್ ಯೋಜನೆಗಳಲ್ಲಿ ಕೆಲಸ ಮಾಡಿದ್ದಾರೆ. ಅತ್ಯಾಧುನಿಕ ರೇಡಿಯೊ ಫ್ರೀಕ್ವೆನ್ಸಿ ಮತ್ತು ಮೈಕ್ರೊವೇವ್ ಸಬ್ ಸಿಸ್ಟಂ ಟೆಕ್ನಾಲಜೀಸ್ ಕ್ಷೇತ್ರದಲ್ಲಿ ವಿನ್ಯಾಸ, ಅಭಿವೃದ್ಧಿ, ಅಳವಡಿಕೆ ಕಾರ್ಯಗಳನ್ನು ನಡೆಸಿದ್ದಾರೆ. ಪ್ರಸ್ತುತ 'ಜಿಎಸ್ ಎಟಿ-22/23 ಕಮ್ಯುನಿಕೇಷನ್ ಉಪಕರಣ ಅಭಿವೃದ್ಧಿ ವಿಭಾಗದಲ್ಲಿ ಸಹಾಯಕ ಯೋಜನಾ ನಿರ್ದೇಶಕಿಯಾಗಿದ್ದಾರೆ.

ವೈಶಾಲಿ ರಮೇಶ್ ಬಾಬು

ಚದುರಂಗದಲ್ಲಿ ಗ್ರಾಂಡ್ ಮಾಸ್ಟರ್ ವೈಶಾಲಿ ರಮೇಶ್ ಬಾಬು. 2023ರಲ್ಲಿ 'ವುಮೆನ್ಸ್ ಗ್ರಾಂಡ್ ಸ್ವಿಸ್ ಟೂರ್ನಮೆಂಟ್ ವಿಜೇತೆ. ಚದುರಂಗ ಚತುರ ರಮೇಶ್ ಬಾಬು ಪ್ರಜ್ಞಾನಂದ ಅವರ ಹಿರಿಯ ಸೋದರಿ. ಮೋದಿ ಅವರ 'ಎಕ್ಸ್' ಖಾತೆಯಲ್ಲಿ ವೈಶಾಲಿ 'ವನಕ್ಕಂ(ನಮಸ್ಕಾರ), ನಾನು ಶ್ರೀ ಪ್ರಧಾನಿ ನರೇಂದ್ರ ಮೋದಿ ಜಿ ಅವರ 'ಎಕ್ಸ್' ಖಾತೆಯನ್ನು ದಿನದ ಮಟ್ಟಿಗೆ ನಿರ್ವಹಣೆ ಮಾಡಲು ಅವಕಾಶ ಸಿಕ್ಕಿರುವುದಕ್ಕೆ ನನಗಿಂದು ಭಾರೀ ಹರ್ಷ ಉಂಟಾಗಿದೆ. ನಾನು ರೋಮಾಂಚನಗೊಂಡಿದ್ದೇನೆ. ನಿಮಗೆಲ್ಲಾ ತಿಳಿದಿರುವಂತೆಯೇ ನಾನು ಚದುರಂಗದಲ್ಲಿ ಭಾರತ ದೇಶವನ್ನು ಹಲವಾರು ಚಾಂಪಿಯನ್‌ಷಿಪ್‌ಗಳಲ್ಲಿ ಪ್ರತಿನಿಧಿಸಿ ಯಶಸ್ವಿಯಾಗಿದ್ದೇನೆ. ಅದರಿಂದ ನನಗೆ ಭಾರೀ ಸಂತಸ, ಜತೆಗೆ ಹೆಮ್ಮೆ ಎನಿಸುತ್ತದೆ. ದೇಶದ ಇತರೆ ಪೋಷಕರೂ ತಮ್ಮ ಮಗ-ಮಗಳನ್ನು ಚದುರಂಗ ಆಟದಲ್ಲಿ ತೊಡಗಿಸಬೇಕು. ಹೆಣ್ಣು ಮಕ್ಕಳಿಗೂ ಅವರ ಸಾಮರ್ಥ್ಯ ತೋರಲು ಅವಕಾಶ ಮಾಡಿಕೊಡಬೇಕು' ಎಂಬ ಸಂದೇಶ ಬರೆದಿದ್ದಾರೆ.

ಅನಿತಾ ದೇವಿ

'ಮಶ್ರೂಂ ಲೇಡಿ ಆಫ್ ಬಿಹಾರ್' ಎಂದೇ ಹೆಸರಾಗಿರುವ ಅನಿತಾ ದೇವಿ, ಬಿಹಾರ ರಾಜ್ಯದ ನಳಂದ ಜಿಲ್ಲೆಯ ಮಾಧೋಪುರ ಗ್ರಾಮದವರು. ತಮ್ಮ ಗ್ರಾಮದಲ್ಲಿಯೇ ಅಣಬೆ ಕೃಷಿ-ಮಾರಾಟದ ಮೂಲಕ ಹೆಸರು, ಹಣ ಮಾಡಿ ಸ್ವಾವಲಂಬಿ ಮಹಿಳೆಗೆ ಮಾದರಿಯಾದವರು. 9 ವರ್ಷಗಳ ಹಿಂದೆಯೇ 'ಮಾಧೋಪುರ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಲಿ.' ಸ್ಥಾಪಿಸಿ ನೂರಾರು ಮಹಿಳೆಯರಿಗೆ ಕೆಲಸ ಕೊಟ್ಟಿದ್ದಾರೆ. ಪ್ರಧಾನಿ ಮೋದಿ ಅವರ 'ಎಕ್ಸ್' ಖಾತೆಯಲ್ಲಿ ಅನಿತಾ ದೇವಿ, 'ಅಣಬೆ ನನ್ನ ಮತ್ತು ಕುಟುಂಬದ ಪಾಲಿಗೆ ಬದುಕು ಕಟ್ಟಿಕೊಟ್ಟ ಆಹಾರ, ನನ್ನ ಪಾಲಿನ ಹೆಗ್ಗುರುತು. ಈಗ ನಮ್ಮ ಕಂಪನಿ ಅಣಬೆ ಜತೆಗೇ ಗೊಬ್ಬರ, ಕೀಟನಾಶಕ, ಬಿತ್ತನೆ ಬೀಜವನ್ನೂ ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡಿ ಹೆಸರಾಗಿದೆ. ನಮ್ಮ ಕಂಪನಿ ಸ್ವಾವಲಂಬಿ ಮಹಿಳೆಯರಿಗೆ ಬದುಕು ರೂಪಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ' ಎಂದು ಸಂದೇಶ ಬರೆದಿದ್ದಾರೆ.

ಡಾ.ಅಂಜಲೀ ಅಗರ್ವಾಲ್

ಉದ್ಯಮಿ, ಸೆಂಟರ್ ಫಾರ್ ಯೂನಿವರ್ಸಲ್ ಅಕ್ಸೆಸಿಬಲಿಟಿ 'ಸಾಮರ್ಥ್ಯಂ' ಸಂಸ್ಥಾಪಕಿ ಡಾ.ಅಂಜಲೀ. 'ಮಾ.8 ದಿನದ ಮಟ್ಟಿಗೆ ಪ್ರಧಾನಿ ಮೋದಿ ಅವರ ಸಾಮಾಜಿಕ ಜಾಲತಾಣ ನಿರ್ವಹಣೆ ಮಾಡುವ ಗೌರವ, ಅವಕಾಶ ಸಿಕ್ಕಿರುವುದಕ್ಕೆ ಬಹಳ ಖುಷಿಯಾಗಿದೆ. ಮಹಿಳೆಯರು ಸ್ವಾವಂಬಿಗಳಾಗಬೇಕು. ಸ್ವಂತ ಉದ್ಯಮಗಳನ್ನು ಆರಂಭಿಸಬೇಕು. ಯಾವುದೇ ಅಡೆತಡೆಗಳು ಎದುರಾದರೂ ಕುಗ್ಗಬಾರದು, ಅಲ್ಲೇ ನಿಲ್ಲಬಾರದು. ಮುನ್ನಡೆಯುತ್ತಾ ಸುಗಮ ಭಾರತವನ್ನು ನಿರ್ಮಿಸಬೇಕು. ಪ್ರತಿ ಮಹಿಳೆಯೂ ತನ್ನಿಷ್ಟದಂತೆ ಬದುಕು ರೂಪಿಸಿಕೊಳ್ಳಬಹುದು, ಆತ್ಮಗೌರವ-ಸ್ವಾತಂತ್ರ್ಯದೊಂದಿಗೆ ಬದುಕಬಹುದು' ಎಂದು ನರೇಂದ್ರ ಮೋದಿ ಅವರ 'ಎಕ್ಸ್' ಖಾತೆಯಲ್ಲಿ ಸಂದೇಶ ಬರೆದಿದ್ದಾರೆ.

ಅಜೈತಾ ಶಾ

ರಾಜಸ್ಥಾನ ಮೂಲದ ಅಜೈತಾ ಶಾ, ಮಹಿಳಾ ಉದ್ಯಮಿ. ಇ-ಟ್ರೇಡ್ ಕಂಪನಿಯಾದ 'ಫ್ರಾಂಟಿಯರ್ ಮಾರ್ಕೆಟ್ಸ್'ನ ಸಂಸ್ಥಾಪಕಿ-ಮುಖ್ಯ ಕಾರ್ಯನಿರ್ವಹಣಾಧಿಕಾರಿ(ಸಿಇಒ). ದೇಶಾದ್ಯಂತದ ಸ್ಮಾರ್ಟ್‌ಫೋನ್ ಹೊಂದಿದ ನಗರ, ಗ್ರಾಮೀಣ ಭಾಗದ 35 ಸಾವಿರ ಉದ್ಯಮಿ ವನಿತೆಯರನ್ನು ಡಿಜಿಟಲ್ ಮಾರ್ಗದಲ್ಲಿ ಪರಸ್ಪರ ಬೆಸೆದು, ಉತ್ಪಾದನೆ, ಮಾರಾಟ, ಸಾಗಣೆ ವಿಚಾರದಲ್ಲಿ ಸ್ವಾವಲಂಬಿಗಳಾಗಲು ಪ್ರೋತ್ಸಾಹಿಸಿದವರು ಅಜೈತಾ ಶಾ. ಆರ್ಥಿಕವಾಗಿ ಸ್ವಾವಲಂಬಿ ಯಾಗಿರುವ ಮಹಿಳೆಯರಿಂದ ಸದೃಢ ದೇಶದ ನಿರ್ಮಾಣ ಸಾಧ್ಯ ಎಂದು ನಂಬಿದವರು. 2030ರ ವೇಳೆಗೆ 1000 ಗ್ರಾಮಗಳ 10 ಲಕ್ಷ ಮಹಿಳೆಯರನ್ನು ತಮ್ಮ ಮಾರುಕಟ್ಟೆ ಜಾಲಕ್ಕೆ ತರಬೇಕೆಂಬ ಗುರಿ ಇಟ್ಟುಕೊಂಡಿದ್ದಾರೆ.



ಕೋವಿಡ್-19 ಕೇಸ್‌ನಲ್ಲಿ ಚೀನಾಗೆ 2400 ಕೋಟಿ ಡಾಲರ್ ದಂಡ

ವಾಷಿಂಗ್ಟನ್: ಕೋವಿಡ್-19ಕ್ಕೆ ಸಂಬಂಧಿಸಿದ ಮೊಕದ್ದಮೆಯಲ್ಲಿ ಚೀನಾದಿಂದ ತಪ್ಪಾಗಿದೆ ಎಂದು ತೀರ್ಪು ನೀಡಿರುವ ಅಮೆರಿಕದ ಕೋರ್ಟ್, ಚೀನಾಗೆ 2400 ಕೋಟಿ ಡಾಲರ್ ದಂಡ ವಿಧಿಸಿದೆ. ಕೋವಿಡ್ -19 ಹರಡುತ್ತಿದ್ದ ಸಂದರ್ಭದಲ್ಲಿ ಚೀನಾ ಆಡಳಿತ ಪಿಪಿಇ ಕಿಟ್ ಸೇರಿದಂತೆ ಜೀವ ರಕ್ಷಕ ಔಷಧ, ಪರಿಕರಗಳನ್ನು ನೀಡದೇ ತನ್ನಲ್ಲೇ ಅಕ್ರಮ ವಾಗಿ ಸಂಗ್ರಹಿಸಿಟ್ಟುಕೊಂಡರು ಅಮೆರಿಕ ಜನರ ಜೀವದ ಜತೆಗೆ ಚೆಲ್ಲಾಟವಾಡಿದೆ ಎಂದು ಮಿಸೌರಿ ಆಡಳಿತ ಚೀನಾ ಸರಕಾರದ ವಿರುದ್ಧ ದಾವೆ ಹೂಡಿತ್ತು. ಈ ದಾವೆಯಲ್ಲಿ ಅಮೆರಿಕಕ್ಕೆ ಜಯವಾಗಿದೆ. ಅಲ್ಲದೇ, ಮಿಸೌರಿ ಆಡಳಿತಕ್ಕೆ 2400 ಕೋಟಿ ಡಾಲರ್(21 ಲಕ್ಷ ಕೋಟಿ ರು.) ಪರಿಹಾರ ಕೊಡುವಂತೆ ಚೀನಾ ಸರಕಾರಕ್ಕೆ ಅಮೆರಿಕ ಕೋರ್ಟ್ ಆದೇಶಿಸಿದೆ. 5 ವರ್ಷ ಬಳಿಕ ಫೆಡರಲ್ ಜಡ್ಜ್ ತೀರ್ಪು ನೀಡಿದ್ದಾರೆ. ಮಿಸೌರಿ ಅಟಾರ್ನಿ ಜನರಲ್ ಆಂಡ್ರ್ಯೂ ಬೈಲಿ, ಜಗತ್ತಿಗೆ ಕೋವಿಡ್-19 ಹಬ್ಬಿಸಿದ್ದಕ್ಕೆ ಚೀನಾ ವಿರುದ್ಧ ಹೋರಾಟದಲ್ಲಿ ಮಿಸೌರಿ ಆಡಳಿತಕ್ಕೆ ಜಯ ಸಿಕ್ಕಿದೆ ಎಂದಿದ್ದಾರೆ. ಕೇಸ್ ವಿಚಾರಣೆ ಹಂತದಲ್ಲಿ ಚೀನಾ ಪರ ಯಾರೊಬ್ಬರೂ ಕೋರ್ಟ್‌ಗೆ ಹಾಜರಾಗಿರಲಿಲ್ಲ.

ಪ್ಯಾಲೆಸ್ತೀನ್ ಒತ್ತೆಯಾಳಾಗಿದ್ದ 10 ಭಾರತ ಕಾರ್ಮಿಕರ ರಕ್ಷಣೆ

ಟೆಲ್‌ಅವಿವ್: ಇಸ್ರೇಲ್‌ಗೆ ಕೆಲಸಕ್ಕಾಗಿ ಭಾರತದಿಂದ ಹೋಗಿರುವ ಸಾವಿರಾರು ಕಾರ್ಮಿಕರಲ್ಲಿ 10 ಮಂದಿ ತಿಂಗಳ ಹಿಂದೆ ನಾಪತ್ತೆಯಾಗಿದ್ದರು. ಅವರನ್ನು ಪ್ಯಾಲೆಸ್ತೀನಿಯರು ಅಪಹರಿಸಿ 'ವೆಸ್ಟ್ ಬ್ಯಾಂಕ್'ನ(ಪಶ್ಚಿಮ ದಂಡೆ) ಅಲ್ ಝುಯೀಮ್ ಹಳ್ಳಿಯಲ್ಲಿ ಒತ್ತೆಯಾಳಾಗಿರಿಸಿಕೊಂಡಿದ್ದರು. ಗುಪ್ತಚರ ಮಾಹಿತಿ ಪಡೆದ ಇಸ್ರೇಲ್ ಸೇನೆಯ ಯೋಧರು ಭಾರತದ 10 ಕಾರ್ಮಿಕರನ್ನು ರಕ್ಷಿಸಿ ಟೆಲ್‌ಅವಿವ್‌ಗೆ ಕರೆತಂದಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಅವರೆಲ್ಲರನ್ನೂ ಇಸ್ರೇಲ್ಗೆ ಮರಳಿ ಕರೆತಂದಿದ್ದಾರೆ.

ಇಸ್ರೇಲ್‌ಗೆ ಬಂದಿದ್ದ ಭಾರತೀಯ ಕಾರ್ಮಿಕರಲ್ಲಿ 10 ಮಂದಿಯನ್ನು ಅಲ್-ಜಯೀಮ್ ಗ್ರಾಮಕ್ಕೆ ಉದ್ಯೋಗದ ಭರವಸೆ ನೀಡಿ ಕರೆದೊಯ್ದಿದ್ದ ಪ್ಯಾಲೆಸ್ತೀನಿಯರು, ಬಳಿಕ ಅವರನ್ನು ಕೂಡಿಹಾಕಿದ್ದರು. ಬಳಿಕ ಭಾರತೀಯರ ಪಾಸ್ ಪೋರ್ಟ್ ಕಸಿದುಕೊಂಡ ಪ್ಯಾಲೆಸ್ತೀನಿಯರು, ಆ ಪಾಸ್‌ಪೋರ್ಟ್‌ಗಳಿಗೆ ತಮ್ಮ ಫೋಟೊ ಅಂಟಿಸಿ ಇಸ್ರೇಲ್ ಪ್ರವೇಶಿಸಲು ಹೊಂಚು ಹಾಕಿದ್ದರು ಎಂದು ಇಸ್ರೇಲ್ ರಕ್ಷಣಾ ಪಡೆ(ಐಡಿಎಫ್) ತಿಳಿಸಿದೆ.

ಐಡಿಎಫ್ ಯೋಧರು, ಗಡಿ ಚೆಕ್ ಪಾಯಿಂಟ್ ನಲ್ಲಿ ಕೆಲವು ಶಂಕಿತರನ್ನು ತಡೆದು ನಿಲ್ಲಿಸಿದಾಗ ಪ್ರಕರಣ ಬಯಲಾಗಿದೆ. ತಕ್ಷಣವೇ ಐಡಿಎಫ್ ಜತೆಗೂಡಿ ಇಸ್ರೇಲ್‌ನ ವಲಸೆ ಪ್ರಾಧಿಕಾರ ಸಿಬ್ಬಂದಿ ಮತ್ತು ನ್ಯಾಯ ಸಚಿವಾಲಯ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ 10 ಕಾರ್ಮಿಕರನ್ನು ರಕ್ಷಿಸಿದೆ. ಇಸ್ರೇನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಈ ಮಾಹಿತಿ ನೀಡಿದೆ.

2024ರಲ್ಲಿ 16 ಸಾವಿರ ಭಾರತೀಯ ಕಾರ್ಮಿಕರು ಇಸ್ರೇಲ್‌ನ ಕಟ್ಟಡ ನಿರ್ಮಾಣ ಕ್ಷೇತ್ರದ ಕೆಲಸಕ್ಕೆಂದು ತೆರಳಿದ್ದಾರೆ.

ಸುಂಕ ದರ ಕಡಿತಕ್ಕೆ ಭಾರತ ಒಪ್ಪಿದೆ: ಟ್ರಂಪ್

ವಾಷಿಂಗ್ಟನ್: ಅಮೆರಿಕದ ಉತ್ಪನ್ನಗಳಿಗೆ ಸುಂಕ ಕಡಿತಕ್ಕೆ ಭಾರತ ಒಪ್ಪಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಶ್ವೇತಭವನದಲ್ಲಿ ಮಾಧ್ಯಮದವರ ಜತೆ ಮಾತನಾಡಿದ ಟ್ರಂಪ್, ಅಮೆರಿಕದ ಉತ್ಪನ್ನಗಳ ವಿರುದ್ಧ ಭಾರತ ವಿಧಿಸುತ್ತಿದ್ದ ಸುಂಕದ ದರ ಅತ್ಯಧಿಕ ಪ್ರಮಾಣದ್ದಾಗಿದೆ. ಭಾರೀ ಪ್ರಮಾಣದ ಸುಂಕದಿಂದಾಗಿ ಭಾರತದ ಮಾರುಕಟ್ಟೆಯಲ್ಲಿ ಅಮೆರಿಕದ ಉತ್ಪನ್ನಗಳನ್ನು ಮಾರಾಟ ಮಾಡುವುದು ಕಷ್ಟವಾಗಿದೆ. ಹಾಗಾಗಿಯೇ ಅಮೆರಿಕ ಕೂಡಾ ಪ್ರತಿಯಾಗಿ ಭಾರತದ ಉತ್ಪನ್ನಗಳಿಗೆ ಅಧಿಕ ಸುಂಕ ದರ ವಿಧಿಸಲು ನಿರ್ಧರಿಸಿದೆ. ಅಮೆರಿಕದ ಈ ಕ್ರಮದಲ್ಲಿ ಯಾವ ತಪ್ಪೂ ಇಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ. ಅಮೆರಿಕದ ಪ್ರತಿ ಸುಂಕ ನೀತಿಗೆ ಹೆದರಿ ಭಾರತ ಸುಂಕಗಳ ದರ ಕಡಿಮೆ ಮಾಡಲು ಸಮ್ಮತಿಸಿದೆ ಎಂದೂ ಹೇಳಿದ್ದಾರೆ. ಚೀನಾ, ಮೆಕ್ಸಿಕೊ, ಕೆನಡಾ ಮತ್ತು ಭಾರತ ವಿರುದ್ಧ ಏ.2ರಿಂದ ಜಾರಿಗೆ ಬರುವಂತೆ ಅಧಿಕ ಸುಂಕವನ್ನು ವಿಧಿಸಲು ಟ್ರಂಪ್ ಸರಕಾರ ನಿರ್ಧರಿಸಿದೆ.

ಮುಂಬರುವ ಕೆಲ ತಿಂಗಳಲ್ಲಿಯೇ ಅಮೆರಿಕದ ಟೆಸ್ಲಾ ಕಾರುಗಳು ಭಾರತದ ಮಾರುಕಟ್ಟೆ ಪ್ರವೇಶಿಸಲಿವೆ. ಆ ಕಂಪನಿಯ ಮಾಲೀಕ, ಸಿಇಒ ಎಲಾನ್ ಮಸ್ಕ್ ಅವರು ಭಾರತದಲ್ಲಿ ಶೂನ್ಯ ಅಥವಾ ಕಡಿಮೆ ಪ್ರಮಾಣದ ಸುಂಕ ದರದ ನಿರೀಕ್ಷೆಯಲ್ಲಿದ್ದಾರೆ.

ದ್ವಿಪಕ್ಷೀಯ ವ್ಯಾಪಾರ ಸಂಬಂಧಕ್ಕೆ ಗೋಯಲ್

ಭಾರತದ ವಾಣಿಜ್ಯ ಸಚಿವ ಪಿಯೂಶ್ ಗೋಯಲ್ ಅವರು 'ದ್ವಿಪಕ್ಷೀಯ ವ್ಯಾಪಾರ ಒಪ್ಪಂದ' ಸಂಬಂಧ ಸಹವರ್ತಿ, ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೋವರ್ಡ್ ಲುಟ್ನಿಕ್ ಜತೆಗೆ ಮಾತನಾಡಲೆಂದೇ ಅಮೆರಿಕ ಪ್ರವಾಸದಲ್ಲಿದ್ದಾರೆ. ಎರಡೂ ದೇಶಗಳ ನಡುವೆ 'ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಭಾರತ- ಅಮೆರಿಕದಲ್ಲಿ ವಿಪುಲ ಅವಕಾಶಗಳಿವೆ. ಇದನ್ನು ಮಾತುಕತೆ ಮೂಲಕ ಸಾಧ್ಯವಾಗಿಸಿಕೊಳ್ಳಬಹುದಾಗಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ವಕ್ತಾರ ರಣಬೀರ್ ಜೈಶ್ವಾಲ್ ಶನಿವಾರ ಹೇಳಿದ್ದಾರೆ.

ಭಾರತ ಪ್ರಸ್ತುತ ಅಮೆರಿದ ದುಬಾರಿ ಹಾಗೂ ಐಶಾರಾಮಿ ವಾಹನಗಳ ಮೇಲೆ ಶೇ.110ರಷ್ಟು ಆಮದು ಸುಂಕ ವಿಧಿಸುತ್ತಿದೆ. ಇದನ್ನು ಮಸ್ಕ್ 'ವಿಶ್ವದಲ್ಲೇ ಅತ್ಯಧಿಕ ಪ್ರಮಾಣದ ಸುಂಕ' ಎಂದು ಖಂಡಿಸಿದ್ದರು. ವಿಶ್ವದ ವಾಹನ ಮಾರುಕಟ್ಟೆಯಲ್ಲಿ 3ನೇ ಸ್ಥಾನದಲ್ಲಿರುವ ಟೆಸ್ಲಾ ಭಾರಿ ಸುಂಕದ ಕಾರಣದಿಂದಾಗಿಯೇ ಭಾರತದ ಮಾರುಕಟ್ಟೆ ಪ್ರವೇಶ ನಿರ್ಧಾರ ಕೈಬಿಟ್ಟಿತ್ತು.

ಸಿರಿಯಾ ಸಂಘರ್ಷ ತೀವ್ರ: 340 ಜೀವ ಬಲಿ

ಸೇನೆ-ಬಂಡುಕೋರರ ಹೋರಾಟಕ್ಕೆ ನೂರಾರು ನಾಗರಿಕರು ಬಲಿ | ವಿಶ್ವಸಂಸ್ಥೆ ವಿಶೇಷ ರಾಯಭಾರಿ ಕಳವಳ

ಡಮಾಸ್ಕಸ್: ಸಿರಿಯಾದಲ್ಲಿ ಸರಕಾರದ ವಿರುದ್ಧ ಬಂಡುಕೋರ ಬಷೀರ್ ಅಲ್ ಅಸ್ಸದ್ ಬೆಂಬಲಿಗರ ಸಶಸ್ತ್ರ ಹೋರಾಟ ದಿನೇ ದಿನೇ ತೀವ್ರಗೊಳ್ಳುತ್ತಿದೆ. ಸೇನಾಪಡೆ ಮತ್ತು ಬಂಡುಕೋರರ ನಡುವಿನ ಸಂಘರ್ಷದ ಪರಿಣಾಮ ನೂರಾರು ನಾಗರಿಕರು ಜೀವ ಕಳೆದುಕೊಳ್ಳುತ್ತಿದ್ದಾರೆ. ಕಳೆದೆರಡು ದಿನಗಳಲ್ಲಿ 340 ಮಂದಿ ಹತರಾಗಿದ್ದಾರೆ ಎಂದು ಮಾಧ್ಯಮಗಳು ಶನಿವಾರ ವರದಿ ಮಾಡಿವೆ.

ಮಧ್ಯಂತರ ಸರಕಾರದ ಅಧ್ಯಕ್ಷ ಫಾರೂಕ್ ಶರಾ ಅವರ ಆಡಳಿತ, ಮಾಜಿ ಅಧ್ಯಕ್ಷ ಬಷರ್ ಅಲ್ ಅಸ್ಸಾದ್ ಕಡೆಯ ಬಂಡುಕೋರರ ಗುಂಪು ನಡೆಸುವ ಶಸ್ತ್ರಾಸ್ತ್ರಗಳ ಸಾಗಣೆ, ಸಂಗ್ರಹಣೆ ಮೇಲೆ ನಿಯಂತ್ರಣ ಸಾಧಿಸಲು ಯತ್ನಿಸುತ್ತಿದ್ದಾರೆ. ಅದರ ಮಧ್ಯೆಯೇ ಕರಾವಳಿ ಭಾಗದಲ್ಲಿ 340ಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದಾರೆ. ಮಡಿದವರಲ್ಲಿ ಸೇನಾಪಡೆಯ 50 ಯೋಧರು, ಬಂಡುಕೋರರ ಕಡೆಯ 150ಕ್ಕೂ ಅಧಿಕ ಹೋರಾಟಗಾರರು ಮತ್ತು ನೂರಾರು ನಾಗರಿಕರು ಸೇರಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. 340 ಮಂದಿ ಸಾವಿನ ಸುದ್ದಿ ತಿಳಿದ ವಿಶ್ವಸಂಸ್ಥೆಯ ವಿಶೇಷ ರಾಯಭಾರಿ ಕಳವಳ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್‌ನಲ್ಲಿ ಎರಡು ಬಣ: ರಾಹುಲ್ ಅಸಮಾಧಾನ

ಅಹಮದಾಬಾದ್: ಕಾಂಗ್ರೆಸ್‌ನ ಗುಜರಾತ್ ರಾಜ್ಯ ಘಟಕದಲ್ಲಿ ಎರಡು ಬಣಗಳಿವೆ. ಒಂದು ಸಾರ್ವಜನಿಕರೊಂದಿಗಿದ್ದರೆ, ಇನ್ನೊಂದು ಸಾರ್ವಜನಿಕರಿಂದ ದೂರ ಇದೆ ಎಂದು ಎಐಸಿಸಿ ಮಾಜಿ ಅಧ್ಯಕ್ಷರೂ ಆದ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದ ಗುಜರಾತ್ ಘಟಕದಿಂದ 20-30 ಸದಸ್ಯರನ್ನು ಹೊರಹಾಕಬೇಕಿದ್ದರೆ ಅದಕ್ಕೆ ಹಿಂಜರಿಕೆ ಇರಬಾರದು. ಆದರೆ, ಗುಜರಾತ್ ಪ್ರದೇಶ ಕಾಂಗ್ರೆಸ್ ನಾಯಕರು ನಿರ್ದೇಶನ ನೀಡುವಲ್ಲಿ ವಿಫಲರಾಗಿದ್ದಾರೆ. ಇದನ್ನು ಒಪ್ಪಿಕೊಳ್ಳಲು, ಮುಕ್ತವಾಗಿ ಹೇಳಲು ನನಗೆ ಯಾವುದೇ ಸಮಸ್ಯೆ ಇಲ್ಲ ಎಂದು ರಾಹುಲ್ ಬೇಸರ ವ್ಯಕ್ತಪಡಿಸಿದರು. ಅಹಮದಾಬಾದ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಿದ್ಧತೆ ನಡೆಸಬೇಕಿರುವ ಹಿನ್ನೆಲೆ ಪಕ್ಷದ ರಾಜ್ಯ ಘಟಕದ ನಾಯಕರು ಮತ್ತು ಕಾರ್ಯಕರ್ತರನ್ನು ಉದ್ದೇಶಿಸಿ ಶನಿವಾರ ಅಹಮದಾಬಾದ್‌ನಲ್ಲಿ ಸಭೆ ನಡೆಸಿದ ರಾಹುಲ್, ಪಕ್ಷದ ಸ್ಥಳೀಯ ನಾಯಕರ ವಿರುದ್ಧವೇ ಅಸಮಾಧಾನ ಹೊರಹಾಕಿದರು. ನಿಮ್ಮಗಳ ಈ ವರ್ತನೆಯಿಂದಾಗಿಯೇ ರಾಜ್ಯದ ಜನರು ಕಾಂಗ್ರೆಸ್ ಪಕ್ಷವನ್ನು ನಂಬಲು ಸಿದ್ಧರಿಲ್ಲ ಎಂದು ಕಿಡಿಕಾರಿದರು. ಸ್ಥಳೀಯ ನಾಯಕರ ಹೃದಯದಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವುದು ಮತ್ತು ಅರ್ಥಮಾಡಿಕೊಳ್ಳುವುದು ನನ್ನ ಗುರಿಯಾಗಿತ್ತು. ಈ ಸಭೆಯಲ್ಲಿ ಪಕ್ಷದ ಸಂಘಟನೆ, ಗುಜರಾತ್ ರಾಜಕೀಯ ಮತ್ತು ಇಲ್ಲಿನ ಸರ್ಕಾರದ ಕಾರ್ಯವೈಖರಿಗೆ ಸಂಬಂಧಿಸಿದ ಹಲವು ವಿಷಯಗಳು ಬೆಳಕಿಗೆ ಬಂದವು ಎಂದರು.



ಗುಜರಾತ್ 'ಲಖ್ಪತಿ ದೀದಿ' ಜತೆಗೆ ಪ್ರಧಾನಿ ಸಂವಾದ

ಗಾಂಧಿನಗರ: 'ನನ್ನ ಜೀವನ ಭಾರತದ ಕೋಟ್ಯಂತರ ತಾಯಂದಿರು-ಸೋದರಿಯರ ಆಶೀರ್ವಾದ ಫಲ. ಹಾಗಾಗಿಯೇ ನಾನು ವಿಶ್ವದಲ್ಲೇ ಅತ್ಯಂತ ಸಿರಿವಂತ. ತಾಯಂದಿರು-ಸೋದರಿಯರ ಆಶೀರ್ವಾದವೇ ನನ್ನ ದೊಡ್ಡ ಶಕ್ತಿ. ಮಹಿಳೆಯರನ್ನು ಗೌರವಿಸುವುದೇ ಅಭಿವೃದ್ಧಿ ಹೊಂದಿದ ಭಾರತಕ್ಕೆ ಮೊದಲ ಹೆಜ್ಜೆ ಎಂದು ಪ್ರಧಾನಿ ನರೇಂದ್ರ ಮೋದಿ ತುಸು ಭಾವುಕರಾಗಿ ಶನಿವಾರ ಮಾತನಾಡಿದ್ದಾರೆ.

'ಅಂತಾರಾಷ್ಟ್ರೀಯ ಮಹಿಳಾ ದಿನ' ಹಿನ್ನೆಲೆ ಗುಜರಾತ್‌ನ ನವಸಾರಿಯಲ್ಲಿ 'ಲಕ್ಪತಿ ದೀದಿ'ಗಳೊಂದಿಗೆ ಸಂವಾದ ನಡೆಸಿದ ಮೋದಿ, ವನಸಿ ಬೋರ್ಸಿ ಗ್ರಾಮದಲ್ಲಿ 25,000ಕ್ಕೂ ಅಧಿಕ ಸ್ವಸಹಾಯ ಗುಂಪು(ಎಸ್‌ಎಚ್‌ಜಿ)ಗಳ 2.50 ಲಕ್ಷಕ್ಕೂ ಹೆಚ್ಚು ಮಹಿಳಾ ಸದಸ್ಯೆಯರಿಗೆ ಕೇಂದ್ರ ಸರಕಾರದ 450 ಕೋಟಿ ರು.ಗಳ ಆರ್ಥಿಕ ನೆರವು ವಿತರಿಸಿದರು. ತವರು ರಾಜ್ಯ ಗುಜರಾತ್‌ಗೆ 2,587 ಕೋಟಿ ರು.ಗಳ ವಿಶೇಷ ಯೋಜನೆಗಳಿಗೆ ಚಾಲನೆ ನೀಡಿದರು. ಗುಜರಾತ್ ಸಫಲ್ ಮತ್ತು ಗುಜರಾತ್ ಮೈತ್ರಿ ಯೋಜನೆಗಳನ್ನು ಇಂದು ಆರಂಭಿಸಲಾಗಿದೆ ಎಂದರು. ಮಹಿಳೆಯರಿಗೆ ಶೌಚಾಲಯ ಕಲ್ಪಿಸುವ ಮೂಲಕ ಅವರಿಗೆ ಗೌರವ ನೀಡಿದ್ದೇವೆ ಎಂದ ಪ್ರಧಾನಿ, ದೇಶದ ಕೋಟ್ಯಂತರ ಮಹಿಳೆಯರು ಜನಧನ್ ಬ್ಯಾಂಕ್ ಖಾತೆ ತೆರೆದು ಸಬಲೀಕರಣಗೊಂಡರು. ಉಜ್ವಲ್ ಯೋಜನೆಯಡಿ ಆರೋಗ್ಯ ಸೌಲಭ್ಯ ನೀಡಲಾಯಿತು. ಹಿಂದೆ 12 ವಾರವಷ್ಟೇ ಹೆರಿಗೆ ರಜೆ ಇತ್ತು. ನಾವು ಅದನ್ನು 26 ವಾರಗಳಿಗೆ ಹೆಚ್ಚಿಸಿದೆವು ಎಂದರು.

ಗುಟ್ಕಾ ಪ್ರಚಾರ: ಬಾಲಿವುಡ್ ಮೂರು ನಟರಿಗೆ ನೋಟಿಸ್

ಜೈಪುರ: ಗುಟ್ಕಾ ಜಾಹೀರಾತು ನೀಡಿದ್ದ ಬಾಲಿವುಡ್ ನಟರಾದ ಶಾರುಖ್ ಖಾನ್, ಅಜಯ್ ದೇವಗನ್ ಮತ್ತು ಟೈಗರ್ ಶ್ರಾಫ್‌ಗೆ ಸಂಕಷ್ಟ ಎದುರಾಗಿದೆ. ಗಂಭೀರ ಕಾನೂನು ಪ್ರಕರಣದಲ್ಲಿ ಜೈಪುರ ಜಿಲ್ಲಾ ಗ್ರಾಹಕ ಆಯೋಗ 3 ನಟರಿಗೂ ನೋಟಿಸ್ ಜಾರಿ ಮಾಡಿದೆ. ಜತೆಗೆ ಗುಟ್ಕಾ ತಯಾರಿಕಾ ಕಂಪನಿ 'ಜೆಬಿ ಇಂಡಸ್ಟ್ರೀಸ್'ಗೂ ಸಮನ್ಸ್ ಕಳುಹಿಸಲಾಗಿದೆ. ನಾಲ್ವರೂ ಮಾ.19ರಂದು ಹಾಜರಾ ಗುವಂತೆ ಆಯೋಗ ಸೂಚಿಸಿದೆ. 'ಗುಟ್ಕಾ ಉತ್ಪನ್ನಗಳು ಮನುಷ್ಯರ ದೇಹಾರೋಗ್ಯಕ್ಕೆ ಹಾನಿಕಾರಕವಾಗಿವೆ. ಹಾಗಿದ್ದೂ ಅದರಲ್ಲಿ 'ಕೇಸರಿ ಇದೆ' ಎಂದು ಗ್ರಾಹಕರನ್ನು ದಾರಿ ತಪ್ಪಿಸುವ ಹೇಳಿಕೆ ನೀಡುವ ಜಾಹೀರಾತು ಪ್ರಕಟಿಸಲಾಗುತ್ತಿದೆ' ಎಂದು ಜೈಪುರ ನಿವಾಸಿ ಯೋಗೇಂದ್ರ ಸಿಂಗ್ ಬಡಿಯಾಲ್ ಎಂಬವರು ಜಿಲ್ಲಾ ಗ್ರಾಹಕ ಆಯೋಗಕ್ಕೆ ದೂರು ನೀಡಿದ್ದಾರೆ.

ಗ್ರಾಹಕರನ್ನು ದಾರಿ ತಪ್ಪಿಸುವ ಜಾಹೀರಾತುಗಳಿಗೆ 'ಗ್ರಾಹಕ ಸಂರಕ್ಷಣಾ ಕಾಯ್ದೆ-2019'ರ ಅನ್ವಯ ದಂಡ ವಿಧಿಸಬಹುದಾಗಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಆರೋಪ ಸಾಬೀತಾದರೆ ಈ ಜಾಹೀರಾತುಗಳನ್ನು ಆಯೋಗ ನಿಷೇಧಿಸಬಹುದು. ಜತೆಗೆ ನಟರಿಗೆ ದಂಡ ವಿಧಿಸಬಹುದು. ಅದೇ ಸಮಯದಲ್ಲಿ, ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ ಅಡಿಯಲ್ಲಿ ಕಾನೂನು ಕ್ರಮ ಕೈಗೊಳ್ಳಲು ಸಹ ಸಾಧ್ಯವಿದೆ.

ಸಮಾಚಾರ ಸಣ್ಣದಲ್ಲ

ಶಬಾನಾಗೆ ಜೀವಮಾನ ಸಾಧನೆ ಪ್ರಶಸ್ತಿ

ಬೆಂಗಳೂರು: 16ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಅದ್ದೂರಿ ತೆರೆ ಬಿದ್ದಿದೆ. ಈ ಚಿತ್ರೋತ್ಸವದಲ್ಲಿ ಪ್ರತಿ ವರ್ಷ ಹಿರಿಯ ಸಿನಿಮಾ ಸಾಧಕರನ್ನು ಗುರುತಿಸಿ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗುತ್ತಿದೆ. ಈ ಬಾರಿ ಖ್ಯಾತ ನಟಿ ಶಬಾನಾ ಅಜ್ಮಿ ಅವರನ್ನು ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಶಬಾನಾ ಆಜ್ಮಿ ಆರು ಬಾರಿ ರಾಷ್ಟ್ರ ಪ್ರಶಸ್ತಿ ಪಡೆದಿದ್ದು, ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಕಲೆ, ಸಾಹಿತ್ಯ, ಸಾಂಸ್ಕೃತಿಕ ರಂಗದಲ್ಲಿ ತೊಡಗಿಸಿಕೊಂಡಿರುವ ಶಬಾನಾ ಆಜ್ಮಿ, ಐದು ದಶಕಕ್ಕೂ ಹೆಚ್ಚು ಕಾಲ ಕಲಾ ಸೇವೆ ಮಾಡಿದ್ದಾರೆ. ಅವರ ಕಲಾ ಸೇವೆಯನ್ನು ಪರಿಗಣಿಸಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿಯು ಈ ಪ್ರಶಸ್ತಿ ನೀಡಿ ಗೌರವಿಸಿದೆ.

ಎಳನೀರು, ತೆಂಗು ಬಲು ದುಬಾರಿ

ಬೆಂಗಳೂರು: ನಗರದಲ್ಲಿ ತೆಂಗಿನಕಾಯಿ ಬೆಲೆ ಗಗನಕ್ಕೇರಿದ್ದು, ಎಳನೀರಿಗೆ ಬೇಡಿಕೆ ಹೆಚ್ಚಾದ ಬೆನ್ನಲ್ಲೇ ಮಾರುಕಟ್ಟೆಗೆ ತೆಂಗಿನಕಾಯಿ ಬರುವುದೇ

ಕಡಿಮೆಯಾಗಿದೆ ಇದರಿಂದಾಗಿ ಬೆಲೆ ಹೆಚ್ಚಳವಾಗಿದೆ ಎಂದು ಹೇಳಲಾಗುತ್ತಿದೆ. ಕಳೆದ ಎರಡು ತಿಂಗಳಿನಿಂದ ನಗರದಲ್ಲಿ ಬಹುತೇಕ ಕಡೆಗಳಲ್ಲಿ ತೆಂಗಿನ ಕಾಯಿಗೆ ಬೆಲೆಯು ವ್ಯಾಪಕವಾಗಿ ಹೆಚ್ಚಾಗುತ್ತಿದ್ದು, ಬೆಲೆಗೆ ತಕ್ಕಂತೆ ಉತ್ತಮ ಗುಣಮಟ್ಟದ ಕಾಯಿಗಳೂ ದೊರಕುತ್ತಿಲ್ಲ ಕಾಯಿ ಸಣ್ಣ, ದೊಡ್ಡ ಕಾಯಿ ಬೆಲೆ ಅಧಿಕವಾದರೂ ಕೂಡಾ ತಿರುಳು ಹೆಚ್ಚಿರುವುದಿಲ್ಲ ಎನ್ನುವ ಮಾತುಗಳು ಕೇಳಿ ಬರುತ್ತಿದೆ. ಕಳೆದ ತಿಂಗಳು ಸಾಮಾನ್ಯ ಗಾತ್ರದ ತೆಂಗಿನಕಾಯಿಗೆ 40 ರು.ಗೆ ಏರಿಕೆಯಾಗಿತ್ತು. ಆದರೆ ಈ ತಿಂಗಳು ಇದೇ ಕಾಯಿಯ ಬೆಲೆ 50 ರು.ಗೆ ಏರಿಕೆಯಾಗಿದೆ. ದೊಡ್ಡ ಗಾತ್ರದ ತೆಂಗಿನಕಾಯಿ ಬೆಲೆಯಂತೂ 70-80 ರು.ಗಳಷ್ಟಿದೆ. ಬೆಲೆ ಏರಿಕೆಯಿಂದಾಗಿ ಜನ ಕೊಳ್ಳುವುದೂ ಕಡಿಮೆಯಾಗಿದೆ. ಮೊದಲೆಲ್ಲಾ ಸಣ್ಣ ಪುಟ್ಟ ಕೈ ಗಾಡಿಗಳಲ್ಲೂ ತೆಂಗಿನಕಾಯಿ ಇತ್ತು. ಆದರೆ ಈಗ ಬೆಲೆ ಹೆಚ್ಚಳವಾದ ಬೆನ್ನಲ್ಲೇ ಕೊಳ್ಳುವವರ ಸಂಖ್ಯೆಯೂ ಕಡಿಮೆಯಾಗಿದೆ. ಹೀಗಾಗಿ ಸಣ್ಣ ಪುಟ್ಟ ಅಂಗಡಿಗಳಲ್ಲಿ ತೆಂಗಿನಕಾಯಿಯೇ ಸಿಗುತ್ತಿಲ್ಲ. ಬೇಸಿಗೆಯಲ್ಲಿ ತೆಂಗಿನ ಕಾಯಿ ಹಾಳಾಗದಂತೆ ಇಡುವುದೂ ದೊಡ್ಡ ತಲೆನೋವು. ಬೆಲೆಯೂ ದುಬಾರಿಯಾಗಿರುವು ದರಿಂದ ಜನ ಕೊಳ್ಳುವುದಿಲ್ಲ ಎಂದು ವ್ಯಾಪಾರಿಯೊಬ್ಬರು ಹೇಳುತ್ತಾರೆ.

ಮಾ.11ರಂದು ಶಿವೋಹಂ ನಾಟಕ

ಬೆಂಗಳೂರು: ಕ್ರಾನಿಕಲ್ಸ್ ಆಫ್ ಇಂಡಿಯಾ ವತಿಯಿಂದ ನಗರದ ರಂಗಶಂಕರದಲ್ಲಿ ಮಾ.11ರ ಸಂಜೆ 7.30ಕ್ಕೆ ಶಿವೋಹಂ ನಾಟಕ ಪ್ರದರ್ಶನವಿರಲಿದೆ ಎಂದು ಪ್ರಕಟಣೆ ತಿಳಿಸಿದೆ. ಗಣೇಶ್ ಮಂದಾರ್ತಿ ನಾಟಕದ ವಿನ್ಯಾಸ, ನಿರ್ದೇಶನ ಹಾಗೂ ಸಂಗೀತ ಮಾಡಿದ್ದು, ಇದೊಂದು ಪೌರಾಣಿಕ ಮತ್ತು ಸಾಮಾಜಿಕ ನಾಟಕವಾಗಿದೆ.

ಎಂಎಸ್‌ಎಮ್‌ಇಗಳಿಗೆ ಬಲ ನೀಡಲು ಒಪ್ಪಂದ

ಬೆಂಗಳೂರು: ಸಣ್ಣ, ಮಧ್ಯಮ ಮತ್ತು ಸೂಕ್ಷ್ಮ ಕೈಗಾರಿಕಾ ಸಂಸ್ಥೆಗಳಿಗೆ ಹಣಕಾಸು ನೆರವಿನ ವಿಚಾರ ವಾಗಿ ಸಿಡ್ಬಿ, ಟಾಟಾ ಕೆಪಿಟಲ್ ಲಿಮಿಟೆಡ್ ಜತೆಗೆ ಎಮ್‌ಎಸ್‌ಎಮ್‌ಇ ಹಣಕಾಸು ಪಾಲುದಾರಿಕೆ ಒಪ್ಪಂದಕ್ಕೆ ಸಹಿ ಹಾಕಿದೆ. ಉಪಕರಣಗಳು, ಮಷೀನ್‌ಗಳ ಖರೀದಿಗೆ ಹಣಕಾಸು ಸೌಲಭ್ಯ , ಕಾರ್ಯನಿರತ ಬಂಡವಾಳ (ವರ್ಕಿಂಗ್ ಕೆಪಿಟಲ್),ಒಡಿ/ಸಿಸಿ , ವ್ಯಾವಹಾರಿಕ ಸಾಲ ಹಾಗೂ ಆಸ್ತಿಗಳ ಮೇಲೆ ಸಾಲ ಹೀಗೆ ವಿವಿಧ ಮಾರ್ಗಗಳ ಮೂಲಕ ಹಣಕಾಸು ಸೌಲಭ್ಯ ನೀಡುವ ಮೂಲಕ ಎಮ್‌ಎಸ್‌ಎಮ್‌ಇ ಅಭಿವೃದ್ಧಿ ಹಾಗೂ ಏಳಿಗೆಗೆ ಈ ಒಪ್ಪಂದ ಕೇಂದ್ರೀಕೃತವಾಗಿದೆ.

{ ಪ್ರಲ್ಹಾದ್ ಜೋಶಿ } ಕೇಂದ್ರ ಸಚಿವ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಿತ್ತೂರು ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗಕ್ಕೆ ಅಂಥದ್ದೇನೂ ಕೊಡುಗೆ ಕೊಟ್ಟಿಲ್ಲ. ಆ ಭಾಗದ ಜನರಿಗೆ ಈ ಸರಕಾರದಿಂದ ಘನಘೋರ ಅನ್ಯಾಯವಾಗಿದೆ.

ದೇಶಕ್ಕೆ ಮಾದರಿ ಬಜೆಟ್ ಮಂಡಿಸಿದ ಸಿಎಂ ಸಿದ್ದರಾಮಯ್ಯ : ಡಿ.ಕೆ.ಶಿವಕುಮಾರ್

ಬಿಜೆಪಿಯವರು ಸುಳ್ಳು ಹೇಳದೆ ಇನ್ನೇನು ಮಾಡಲು ಸಾಧ್ಯ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಿಎಂ ಸಿದ್ದರಾಮಯ್ಯ ಅವರು ದೇಶಕ್ಕೆ ಮಾದರಿ ಬಜೆಟ್ ಮಂಡನೆ ಮಾಡಿದ್ದು, ಬಿಜೆಪಿಯವರು ಇದರ ಬಗ್ಗೆ ಸುಳ್ಳು ಹೇಳದೆ ಇನ್ನೇನು ಮಾಡಲು ಸಾಧ್ಯ? ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಸದಾಶಿವನಗರ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿಯವರು ಈ ಬಜೆಟ್ ಅನ್ನು ಹಲಾಲ್ ಬಜೆಟ್ ಎಂದು ಹೇಳಲಿ. ಪಾಪ ಅವರಾದರೂ ಏನು ಮಾಡುತ್ತಾರೆ. ಈ ರೀತಿ ಹೇಳುವುದು ಬಿಟ್ಟರೆ ಇನ್ನೇನು ಮಾಡಲು ಸಾಧ್ಯ? ಬಜೆಟ್ ಅನ್ನು ಅವರು ಕಣ್ಣಾರೆ ಓದಿದ್ದು, ಕಿವಿಯಾರೆ ಕೇಳಿದ್ದು, ಬಾಯಲ್ಲಿ ಇನ್ನೇನು ಹೇಳಲು ಸಾಧ್ಯ? ಕಣ್ಣು ಕಿವಿಯಲ್ಲಿ ಸುಳ್ಳು ಹೇಳಲು ಆಗುವುದಿಲ್ಲ. ಕೇವಲ ಬಾಯಲ್ಲಿ ಮಾತ್ರ ಸುಳ್ಳು ಹೇಳಲು ಸಾಧ್ಯ ಎಂದು ತಿರುಗೇಟು ನೀಡಿದರು.

ಬ್ರ್ಯಾಂಡ್ ಬೆಂಗಳೂರು ಜಾರಿ: ಬ್ರ್ಯಾಂಡ್ ಬೆಂಗಳೂರಿನ ಮಹತ್ವದ ಯೋಜನೆಗಳಿಗೆ ಅನುದಾನ ನೀಡಲಾಗಿದೆ. ರಾಜಧಾನಿಯಲ್ಲಿರುವ 1.40 ಕೋಟಿ ಜನರಿಗೆ ಅನುಕೂಲವಾಗಲಿದೆ. ಟನಲ್ ರಸ್ತೆ ಆಗಿಯೇ ಆಗುತ್ತೆ. ಮುಂಬರುವ ಎಲ್ಲಾ ಮೆಟ್ರೋ ಮಾರ್ಗಗಳಲ್ಲಿ ಡಬಲ್ ಡೆಕ್ಕರ್ ಮೇಲ್ಸೇತುವೆ ಮಾಡಲಾಗುವುದು ಪಾಲಿಕೆ ಹಾಗೂ ಬಿಎಂಆರ್‌ಸಿಎಲ್ ಇದರ ವೆಚ್ಚವನ್ನು 50:50 ಅನುಪಾತದಲ್ಲಿ ಭರಿಸಲಿವೆ. ಇನ್ನು ರಾಜಕಾಲುವೆ ಅಕ್ಕಪಕ್ಕ 50 ಅಡಿ ಬಫರ್ ವಲಯದಲ್ಲಿ 300 ಕಿ.ಮೀ ಉದ್ದದಷ್ಟು ರಸ್ತೆ ನಿರ್ಮಾಣ ಮಾಡಲಾಗುವುದು. ಈ ಯೋಜನೆಗೆ 3 ಸಾವಿರ ಕೋಟಿ ಮೀಸಲಿಡಲಾಗಿದೆ. ಬಫರ್ ರಸ್ತೆ, ಮೇಲ್ಸೇತುವೆ, ಟನಲ್ ರಸ್ತೆ ಗಳ ಮೂಲಕ ಬೆಂಗಳೂರುನಲ್ಲಿ 700-800 ಕಿ.ಮೀ ಉದ್ದದಷ್ಟು ಹೊಸ ರಸ್ತೆ ನಿರ್ಮಾಣ ಮಾಡುತ್ತಿದ್ದೇವೆ. ಬೆಂಗಳೂರಿನ ಅಭಿವೃದ್ಧಿಗೆ ಇನ್ನೇನು ಅಲೋಚನೆ ಮಾಡಲು ಸಾಧ್ಯ? ಜನರ ಸಮಸ್ಯೆಗೆ ಪರಿಹಾರ ನೀಡಲು ಸರಕಾರ ಸಾಲ ಮಾಡಿಯಾದರೂ ಯೋಜನೆ ಮಾಡುತ್ತೇವೆ. ಇಡೀ ವಿಶ್ವ ಬೆಂಗಳೂರಿನತ್ತ ತಿರುಗಿ ನೋಡುತ್ತಿದ್ದು, ಈ ನಗರಕ್ಕೆ ನಮ್ಮ ಸರಕಾರ ಆದ್ಯತೆ ನೀಡಿದೆ ಎಂದರು.

ಪ್ರಸ್ತಕ ಬಜೆಟ್‌ನಲ್ಲಿ ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಲಾಟರಿ ಹೊಡೆದಿದೆ. ಖರ್ಗೆ ಅವರು ಆರ್ಟಿಕಲ್ 371ಜೆ ಜಾರಿಗೆ ತಂದರು. ಇನ್ನು ಕಾಂಗ್ರೆಸ್ ಸರಕಾರ ಕೊಟ್ಟ ಮಾತಿನಂತೆ ಪ್ರತಿ ವರ್ಷ 5 ಸಾವಿರ ಕೋಟಿ ನೀಡುತ್ತಿದ್ದೇವೆ.

-ಡಿ.ಕೆ.ಶಿವಕುಮಾರ್. ಉಪ ಮುಖ್ಯಮಂತ್ರಿ

ಸಿಂಗ್ ಅವರಿಗೆ ಇನ್ನಷ್ಟು ಮಾನ್ಯತೆ ನೀಡಬೇಕು

ಬಿಜೆಪಿಯವರು ದೀನದಯಾಳ್ ಹೆಸರು ಇಡುವಾಗ ನಾವು ವಿವಿಗೆ ಮನಮೋಹನ್ ಸಿಂಗ್ ಹೆಸರು ಯಾಕೆ ಇಡಬಾರದು?. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುವ ಮೇಲ್ಸೇತುವೆ, ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆ, ನೆಲಮಂಗಲ ಮೇಲ್ಸೇತುವೆ, ನರ್ಮ್ ಯೋಜನೆ, ನರೇಗಾ, ಆಹಾರ ಭದ್ರತಾ ಕಾಯ್ದೆ, ಶಿಕ್ಷಣ ಹಕ್ಕು, ಮಾಹಿತಿ ಹಕ್ಕು, ಆಶಾ ಕಾರ್ಯಕರ್ತ ಯೋಜನೆ ಜಾರಿಗೆ ತಂದವರು ಇವರು. ಬಿಜೆಪಿಯವರು ಇಂತಹ ಯಾವುದಾದರೂ ಒಂದು ಯೋಜನೆ ಮಾಡಿದ್ದಾರಾ? ದೇಶ ಹಾಗೂ ಕರ್ನಾಟಕ ರಾಜ್ಯದ ಕೊಡುಗೆಗೆ ಮನಮೋಹನ್ ಸಿಂಗ್ ಅವರು ಕೊಟ್ಟಿರುವ ಕೊಡುಗೆಗೆ ಇನ್ನಷ್ಟು ಮಾನ್ಯತೆ ನೀಡಬೇಕು ಎಂದರು.

ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರತಿಪಾದನೆ

ದೇಶದ ಪ್ರಗತಿಗೆ ನಾರಿಯರ ಪಾತ್ರ ಬಹಳ ಮುಖ್ಯ

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬಿಜೆಪಿ ಕಾರ್ಯಾಲಯದಲ್ಲಿ ಶನಿವಾರ ವಿವಿಧ ಸಾಧಕರನ್ನು ಸನ್ಮಾನಿಸಲಾಯಿತು. ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮೊದಲಾದವರಿದ್ದರು.

ಬೆಂಗಳೂರು: ದೇಶದ ಸರ್ವತೋಮುಖ ಪ್ರಗತಿಗೆ ದೇಶದ ತಾಯಂದಿರು, ನಾರಿಯರ ಪಾತ್ರ ಪ್ರಮುಖ ಮತ್ತು ಅತ್ಯಗತ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಏರ್ಪಡಿಸಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅಪೇಕ್ಷೆಯಂತೆ ಸಾಧಕರಾದ ತಾಯಿ, ಸಹೋದರಿಯರ ಸನ್ಮಾನ ಮಾಡುತ್ತಿದ್ದೇವೆ. ದೇಶದೆಲ್ಲೆಡೆ ಇದರ ಆಚರಣೆ ಅರ್ಥಪೂರ್ಣವಾಗಿ ನಡೆಯುತ್ತಿದೆ ಎಂದರು.

'ಮನೆಮನೆಯಲ್ಲಿ ದೀಪ ಉರಿಸಿ, ಹೊತ್ತುಹೊತ್ತಿಗೆ ಅನ್ನ ಉಣಿಸಿ.. ಸ್ತ್ರೀ ಅಂದರೆ ಅಷ್ಟೇ ಸಾಕೇ?' ಎಂಬ ಕವಿತೆಯ ಸಾಲುಗಳನ್ನು ಉಲ್ಲೇಖಿಸಿ, ದೇಶದ ಮೊದಲ ಪ್ರಜೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ಆಯ್ಕೆ ಮಾಡಿದ್ದಾರೆ. ಮೋದಿ ಅವರ ಜನಧನ್ ಸೇರಿ ಎಲ್ಲ ಯೋಜನೆಗಳು, ಯಡಿಯೂರಪ್ಪ ಅವರ ಭಾಗ್ಯಲಕ್ಷ್ಮಿ ಯೋಜನೆಗಳನ್ನು ಬಿಜೆಪಿಯು ನೀಡಿದಾಗ ಅವು ಯಾವುದೇ ಜಾತಿಗೆ ಸೀಮಿತ ಆಗಿರಲಿಲ್ಲ. ಕೇಂದ್ರದ ಶೇ.33 ಮೀಸಲಾತಿಯಿಂದ ತಾಯಂದಿರ ಅವಕಾಶಗಳು ಹೆಚ್ಚಲಿವೆ ಎಂದು ವಿಜಯೇಂದ್ರ ನುಡಿದರು.

ಸಮಾರಂಭದಲ್ಲಿ ಆರು ಸಾಧಕಿಯರನ್ನು ಸನ್ಮಾನಿಸಲಾಯಿತು. ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್, ಗೀತಾ ವಿವೇಕಾನಂದ, ಶಾಂತಲಾ ಭಟ್, ಪೂರ್ಣಿಮಾ ಪ್ರಕಾಶ್, ಡಾ.ವಸುಧಾ ಕುಲಕರ್ಣಿ, ಆಶಾರಾವ್, ರೇಖಾ ಗೋವಿಂದ, ವಿಜಯಲಕ್ಷ್ಮಿ ಆನಂದ ಭಾಗವಹಿಸಿದ್ದರು.

ಬನಶಂಕರಿಯ ಫಿಡಲಿಟಸ್ ಸಂಸ್ಥೆಯಲ್ಲಿ ವಿಶ್ವ ಮಹಿಳಾ ದಿನಾಚರಣೆ

ಮಹಿಳೆಯರ ಸಾಧನೆಯ ಶಿಖರ ದೊಡ್ಡದು

ಬೆಂಗಳೂರು: ವಿಶ್ವ ಮಹಿಳಾ ದಿನ ಅಂಗವಾಗಿ ಬನಶಂಕರಿಯ ಫಿಡಲಿಟಸ್ ಸಂಸ್ಥೆಯಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉದ್ಯೋಗಿಗಳು ಕೇಕ್ ಕತ್ತರಿಸುವ ಮೂಲಕ ಮಹಿಳಾ ದಿನ ಆಚರಿಸಿದರು.

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅಚ್ಯುತ್‌ಗೌಡ ಮಾತನಾಡಿ, ಒಬ್ಬ ವ್ಯಕ್ತಿಯ ಜೀವನದಲ್ಲಿ ಮಹಿಳೆಯರ ಪಾತ್ರ ದೊಡ್ಡದಿದೆ. ಆಕೆ ತಾಯಿಯಾಗಿ, ಸೋದರಿಯಾಗಿ, ಪತ್ನಿಯಾಗಿ ಬಾಳಿಗೆ ಬೆಳಕಾಗುತ್ತಾಳೆ. ವೈಯುಕ್ತಿಕವಾಗಿ ಮನೆಯ ಜವಾಬ್ದಾರಿ ಹೊರುವ ಜೊತೆಗೆ ಒಬ್ಬ ಶಿಕ್ಷಕಿಯಾಗಿ, ಇಂಜಿನಿಯರ್ ಮತ್ತು ಪೈಲಟ್ ಆಗಿ ಕೂಡ ತನ್ನ ಕೆಲಸಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಾಳೆ. ಸಮಾಜದ ಕಟ್ಟುಪಾಡುಗಳ ಹೊರತಾಗಿಯೂ ಕೂಡ ಈಗಿನ ಆಧುನಿಕ ದಿನಗಳಲ್ಲಿ ಆಕೆ ಸಾಧನೆಯ ಶಿಖರ ಮುಟ್ಟುತ್ತಿದ್ದಾಳೆ ಎಂದು ಮಹಿಳೆಯರ ಬಗ್ಗೆ ಗುಣಗಾನ ಮಾಡಿದರು.

ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರ ಸಾಧನೆ: ಮಹಿಳಾ ದಿನಾಚರಣೆಯ ಇತಿಹಾಸ ನೋಡುವುದಾದರೆ ಇಂದು ಮಹಿಳೆಯರ ಸಾಧನೆ ಎಲ್ಲ ಕ್ಷೇತ್ರಗಳಲ್ಲಿಯೂ ಇದೆ. ಪ್ರಮುಖವಾಗಿ ತಾಂತ್ರಿಕ, ಸಂಶೋಧನಾ ಹಾಗೂ ಐಟಿ-ಬಿಟಿ ಕ್ಷೇತ್ರಗಳಲ್ಲೂ ಮಹಿಳೆಯರು, ದೇಶಕ್ಕೆ ತಮ್ಮದೇ ಕೊಡುಗೆ ನೀಡಿದ್ದಾರೆ. ಈಗಲೂ ಮಹಿಳೆಯರು ಕೊಡುಗೆಗಳನ್ನು ನೀಡುತ್ತಿದ್ದಾರೆ. ಬುದ್ಧಿಶಕ್ತಿಯಿಂದ ಅದೆಷ್ಟೋ ಸಮಸ್ಯೆಗಳಿಗೆ ಪರಿಹಾರ ತಂದುಕೊಟ್ಟಿದ್ದಾರೆ. ಮಹಿಳೆಯರ ಸಾಧನೆಗೆ ಮನಪೂರ್ವಕ ಗೌರವ ಸೂಚಿಸುವ ದಿನ ಇದಾಗಿದೆ, ಮುಂದಿನ ದಿನಗಳಲ್ಲಿ ಸರಕಾರಗಳು ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ ಕೊಡುವ ಮೂಲಕ ಮಹತ್ತರ ಬೆಳವಣಿಗೆ ದಾರಿದೀಪವಾಗಲಿ ಎಂದು ಆಶಿಸಿದರು.

ಬನಶಂಕರಿಯ ಫಿಡಲಿಟಸ್ ಸಂಸ್ಥೆಯಲ್ಲಿ ವಿಶ್ವ ಮಹಿಳಾ ದಿನಾಚರಣೆ ನಡೆಯಿತು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅಚ್ಯುತ್‌ಗೌಡ ಸೇರಿದಂತೆ ಸಿಬ್ಬಂದಿ ಇದ್ದರು.

ಎನ್‌ಡಬ್ಲ್ಯುಕೆಆರ್‌ಟಿಸಿ ಆದೇಶ ರದ್ದು

ಬೆಂಗಳೂರು: ರಸ್ತೆ ಅಪಘಾತದಲ್ಲಿ ವ್ಯಕ್ತಿ ಮೃತಪಟ್ಟ ಪ್ರಕರಣದಲ್ಲಿ ಚಾಲಕನ ಯಾವುದೇ ತಪ್ಪಿಲ್ಲ ಎಂಬುದಾಗಿ ಮೋಟಾರು ವಾಹನಗಳ ಅಪಘಾತ ಪರಿಹಾರ ನ್ಯಾಯಾಧಿಕರಣದ (ಎಂಎಸಿಟಿ) ಎದುರು ವಾದಿಸಿದ್ದ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮವು ಬಳಿಕ ಘಟನೆಗೆ ಚಾಲಕನೇ ಕಾರಣ ಎಂದು ತಿಳಿಸಿ ಸೇವೆಯಿಂದ ವಜಾಗೊಳಿಸಿದ್ದ ಆದೇಶ ಹೈಕೋರ್ಟ್ ರದ್ದುಪಡಿಸಿದೆ.

ಚಾಲಕನನ್ನು ಸೇವೆಯಿಂದ ವಜಾಗೊಳಿಸಿದ್ದ ಆದೇಶ ರದ್ದುಪಡಿಸಿದ್ದ ಕಾರ್ಮಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಎನ್‌ಡಬ್ಲ್ಯುಕೆಆರ್‌ಟಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಧಾರವಾಡ ಪೀಠ ಈ ಆದೇಶ ನೀಡಿದೆ.

ಎರಡು ವಿಭಿನ್ನ ವಾದ, ಒಪ್ಪದ ಕೋರ್ಟ್: ಅಲ್ಲದೆ, 2013ರಲ್ಲಿ ಸಂಭವಿಸಿದ ರಸ್ತೆ ಅಫಘಾತದಲ್ಲಿ ಬೈಕ್ ಸವಾರ ಮೃತಪಟ್ಟ ಪ್ರಕರಣದಲ್ಲಿ ಬಸ್ ಚಾಲಕನ ಕರ್ತವ್ಯಲೋಪವಾಗಿಲ್ಲ ಎಂಬುದಾಗಿ ಮೋಟಾರು

ವಾಹನಗಳ ಅಪಘಾತ ಪರಿಹಾರ ನ್ಯಾಯಾಧಿಕರಣದ (ಎಂಎಸಿಟಿ) ಮುಂದೆ ಎನ್‌ಡಬ್ಲ್ಯುಕೆಆರ್‌ಟಿಸಿ ಹೇಳಿದೆ. ಆದರೆ, ಕಾರ್ಮಿಕ ನ್ಯಾಯಾಲಯದ ಮುಂದೆ ವ್ಯತಿರಿಕ್ತ ನಿಲುವು ತಳೆದಿದೆ. ಇದು ದುರುದ್ದೇಶಪೂರಿತ ನಿರ್ಧಾರವಾಗಿದೆ ಎಂದು ನ್ಯಾಯಪೀಠ ತಿಳಿಸಿದೆ.

ಒಂದು ಕಡೆ ಅಪಘಾತಕ್ಕೆ ಚಾಲಕನ ಯಾವುದೇ ತಪ್ಪಿಲ್ಲ ಎಂದು ವಾದಿಸುವುದು, ಮತ್ತೊಂದು ಕಡೆ ದುಡುಕಿನ ಮತ್ತು ನಿರ್ಲಕ್ಷ್ಯದ ಚಾಲನೆಗಾಗಿ ಚಾಲಕನ ವಿರುದ್ಧ ದುಷ್ಕೃತ್ಯವಿದೆ ಎಂದು ವಾದಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ ಕ್ರಮಕ್ಕೆ ಮುಂದಾಗಿದೆ. ನಿಗಮವು ನ್ಯಾಯಯುತವಾಗಿ ಕಾರ್ಯ ನಿರ್ವಹಿಸಬೇಕು. ಕಾರ್ಮಿಕ ನ್ಯಾಯಾಲಯದ ಆದೇಶದ ಪ್ರಕಾರ ಚಾಲಕನಿಗೆ ನೀಡಬೇಕಾದ ಮೊತ್ತ ಪಾವತಿಸಬೇಕು ಎಂದು ಪೀಠ ನಿರ್ದೇಶಿಸಿತು.

ಪ್ರಕರಣದ ಹಿನ್ನೆಲೆ

ಚಾಲಕ ಹುಸೇನ ಸಾಬ್ ಎಂಬವರು ಎನ್ ಡಬ್ಲ್ಯುಕೆಆರ್‌ಟಿಸಿಯಲ್ಲಿ ಬಸ್ ಚಾಲಕನಾಗಿ ಸೇವೆ ಸಲ್ಲಿಸುತ್ತಿದ್ದರು. ಈ ಸಂದರ್ಭದಲ್ಲಿ 2013ರಲ್ಲಿ ನಡೆದ ದ್ವಿಚಕ್ರ ವಾಹನ ಹಾಗೂ ಬಸ್ ನಡುವೆ ಅಪಘಾತವಾಗಿತ್ತು. ಪರಿಣಾಮ ದ್ವಿಚಕ್ರ ವಾಹನದ ಚಾಲಕ ಮೃತಪಟ್ಟಿದ್ದರು. ಈ ಸಂಬಂಧ ಎಂಎಸಿಟಿ ಮುಂದೆ ನಡೆದ ವಿಚಾರಣೆ ವೇಳೆ ಎನ್‌ಡಬ್ಲ್ಯುಕೆಆರ್‌ಟಿಸಿ, ಬಸ್ ಚಾಲಕ ತಪ್ಪೆಸಗಿಲ್ಲ. ಆದರೆ, ದ್ವಿಚಕ್ರ ವಾಹನ ಸವಾರನ ದುಡುಕಿನಿಂದಾಗಿ ಘಟನೆ ನಡೆದಿದೆ ಎಂದು ವಾದ ಮಂಡಿಸಿತ್ತು. ವಾದ ಆಲಿಸಿದ್ದ ಎಂಎಂಟಿಸಿ ಮೃತರ ಕುಟುಂಬಕ್ಕೆ ಪರಿಹಾರ ನೀಡಲು ಎನ್ ಡಬ್ಲ್ಯುಕೆಆರ್‌ಸಿಗೆ ಆದೇಶಿಸಿತ್ತು.

ಬಜೆಟ್: ಅಂಗನವಾಡಿ ಕಾರ್ಯಕರ್ತೆಯರ ಆಕ್ರೋಶ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಅವರು ತಮ್ಮ 16ನೇ ಬಜೆಟ್ ಮಂಡಿಸಿದ ಬೆನ್ನಲ್ಲೇ ಸಾರಿಗೆ ನೌಕರರು, ಅಂಗನವಾಡಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದು, ಬೇಡಿಕೆ ಈಡೇರಿಸದಿದ್ದರೆ ಬಂದ್ ಮಾಡುವ ಎಚ್ಚರಿಕೆ ನೀಡಿದ್ದಾರೆ.

ಈ ಬಾರಿಯ ಬಜೆಟ್‌ನಲ್ಲಿ ಸಾರಿಗೆ ನೌಕರರು ಭಾರೀ ನಿರೀಕ್ಷೆಯನ್ನಿಟ್ಟುಕೊಂಡಿದ್ದರು, ಆದರೆ ಅವ್ಯಾವುದೂ ಈಡೇರದ ಹಿನ್ನೆಲೆ ಸಾರಿಗೆ ನೌಕರರು ಮತ್ತೆ ಬಸ್ ಬಂದ್ ಮಾಡುವ ಎಚ್ಚರಿಕೆ ಕೊಟ್ಟಿದ್ದಾರೆ. ಸಾರಿಗೆ ನೌಕರರ ಭರವಸೆಗಳು ಮೂರು ವರ್ಷವಾದರೂ ಕೂಡಾ ಇನ್ನೂ ಈಡೇರಿಲ್ಲ. ಶಕ್ತಿ ಯೋಜನೆಯ ಪರಿಣಾಮದಿಂದಾಗಿ ನೌಕರರ ಕೆಲಸವೂ ಹೆಚ್ಚಾಗುತ್ತಿದೆ. ಹೀಗಾಗಿ ಮಾ.22ರೊಳಗಾಗಿ ಸರಕಾರಿ ನೌಕರರಿಗೆ ನೀಡುತ್ತಿರುವ ವೇತನವನ್ನು ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ನಾಲ್ಕು ನಿಗಮಗಳಿಗೆ ನೀಡಬೇಕು. ಇಲ್ಲವಾದರೆ ಮಾ.25ರಂದು ಕೆಎಸ್‌ಆರ್‌ಟಿಸಿಯ ನಾಲ್ಕು ನಿಗಮದ ಸಂಘಟನೆಗಳ ಒಕ್ಕೂಟ ಸಭೆ ಮಾಡಿ ಬಂದ್ ದಿನಾಂಕ ಘೋಷಿಸಲಾಗುವುದು ಎಂದು ಹೇಳಿದರು. ಸಾರಿಗೆ ನೌಕರರಿಗೆ ಸರಕಾರಿ ನೌಕರರಂತೆ ಸರಿಸಮಾನ ವೇತನ ನೀಡಬೇಕು. 7ನೇ ವೇತನ ಆಯೋಗ ಜಾರಿ ಆಗಬೇಕು. 38 ತಿಂಗಳ ವೇತನ ಹಿಂಬಾಕಿ ನೀಡಬೇಕು. ಕಾರ್ಮಿಕ ಸಂಘಟನೆಗಳ ಚುನಾವಣೆ ಮಾಡಬೇಕು. 2021ರ ವೇಳೆ ಮುಷ್ಕರದಲ್ಲಿ ವಜಾಗೊಂಡ ನೌಕರರ ಸಮಸ್ಯೆ ಬಗೆಹರಿಸಬೇಕು ಎಂದು ಪ್ರಮುಖ ಬೇಡಿಕೆಗಳನ್ನು ನೌಕರರು ಇಟ್ಟಿದ್ದಾರೆ.

ಸರಕಾರದ ವಿರುದ್ಧ ಕಿಡಿ

ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಮತ್ತೆ ಸರಕಾರದ ವಿರುದ್ಧ ಸಿಡಿದೆದ್ದಿದ್ದು, ಈ ಬಾರಿಯ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ 1 ಸಾವಿರ, ಸಹಾಯಕಿಯರಿಗೆ 750 ರು. ಗೌರವಧನ ಹೆಚ್ಚಿಸಲಾಗಿದೆ. ಆದರೆ ಇದು ನಮಗೆ ತೃಪ್ತಿ ತಂದಿಲ್ಲ. ಎರಡರಿಂದ ಮೂರು ಸಾವಿರ ಗೌರವಧನ ಹೆಚ್ಚಳಕ್ಕೆ ಸರಕಾರಕ್ಕೆ ಮನವಿ ಮಾಡಿದ್ದೆವು. ಆದರೆ 1 ಸಾವಿರ, 750 ರು. ಗೌರವಧನವನ್ನಷ್ಟೇ ಹೆಚ್ಚಳ ಮಾಡಿರುವುದು ಭಾರೀ ನಿರಾಸೆ ಮೂಡಿಸಿದೆ. ಈ ವೇತನದಲ್ಲಿ ಜೀವನ ನಿರ್ವಹಣೆ ಕಷ್ಟ ಆಗುತ್ತದೆ. ನಮ್ಮದೇ ದುಡ್ಡಲ್ಲಿ ಮೊಬೈಲ್ ಖರೀದಿಸಿ, ಇಲಾಖೆಯ ಕೆಲಸ ಮಾಡಬೇಕಾಗುತ್ತದೆ. ಸರಕಾರದ ಅಲ್ಪ ಪ್ರಮಾಣದ ಗೌರವಧನ ಹೆಚ್ಚಳ ನಮಗೆ ತೃಪ್ತಿ ತಂದಿಲ್ಲ ಎಂದು ಅಸಮಾಧಾನ ಹೊರ ಹಾಕಿದ್ದು, ಸರಕಾರದ ವಿರುದ್ಧ ಮತ್ತೆ ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ.

ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ನಿಮಿತ್ತ ವಿಶ್ವವಾಣಿ ಪ್ರಧಾನ ಕಚೇರಿಯಲ್ಲಿ ಸಿಬ್ಬಂದಿ ವತಿಯಿಂದ ಕೇಕ್ ಕತ್ತರಿಸುವ ಮೂಲಕ ಸಂಭ್ರಮದಿಂದ ಆಚರಿಸಲಾಯಿತು.

ಎಚ್‌ಸಿಜಿ ಕ್ಯಾನ್ಸರ್ ಕೇಂದ್ರದ ಸಹಯೋಗದಲ್ಲಿ ವಿಶಿಷ್ಟ ಕಾರ್ಯಕ್ರಮ

ಮಹಿಳಾ ಪೊಲೀಸರಿಗೆ ಸರ್ವೈಕಲ್ ಲಸಿಕೆ

ಬೆಂಗಳೂರು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಶನಿವಾರ ನಗರ ಪೊಲೀಸ್ ಮಹಿಳಾ ಸಿಬ್ಬಂದಿಗೆ ಉಚಿತ ಕ್ಯಾನ್ಸರ್ ತಪಾಸಣೆ ನಡೆಸಿ ಸರ್ವೈಕಲ್ ಲಸಿಕೆ ನೀಡಲಾಯಿತು.

ಎಚ್‌ಸಿಜಿ ಕ್ಯಾನ್ಸರ್ ಕೇಂದ್ರ, ಪೊಲೀಸ್ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಮಾತನಾಡಿ, ರಾಜ್ಯದ ಕಾನೂನು ಸುವ್ಯವಸ್ಥೆ ನಿರ್ವಹಣೆಯಲ್ಲಿ ಪೊಲೀಸ್ ಮಹಿಳಾ ಸಿಬ್ಬಂದಿಯ ಕಾರ್ಯ ಅತ್ಯಂತ ಅವಶ್ಯ. ಆದರೆ, ಕರ್ತವ್ಯ ನಿರ್ವಹಣೆಯ ಭರದಲ್ಲಿ ತಮ್ಮ ಆರೋಗ್ಯದ ಬಗ್ಗೆಯೂ ಗಮನ ನೀಡಬೇಕು. ಅಪಾಯಕಾರಿ ಕ್ಯಾನ್ಸರ್ ತಪಾಸಣೆ ಆಗಾಗ್ಗೆ ಮಾಡಿಸುತ್ತಿರಬೇಕು. ಎಚ್‌ಸಿಜಿ ಕ್ಯಾನ್ಸರ್ ಕೇಂದ್ರ, ಪೊಲೀಸ್ ಮಹಿಳಾ ಸಿಬ್ಬಂದಿಗೆ ಉಚಿತ ಸರ್ವೈಕಲ್ ಕ್ಯಾನ್ಸರ್ ಲಸಿಕೆ ನೀಡುತ್ತಿರುವುದು ಶ್ಲಾಘನೀಯ. ಮಹಿಳಾ ಸಿಬ್ಬಂದಿಯು ತಾವು ಆರೋಗ್ಯವಾಗಿದ್ದರೆ ಕಾನೂನು ಸುವ್ಯವಸ್ಥೆಯನ್ನು ಇನ್ನಷ್ಟು ಶಕ್ತವಾಗಿ ಸೇವೆ ಸಲ್ಲಿಸಲು ಸಾಧ್ಯ ಎಂದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಶನಿವಾರ ನಗರ ಪೊಲೀಸ್ ಮಹಿಳಾ ಸಿಬ್ಬಂದಿಗೆ ಉಚಿತ ಕ್ಯಾನ್ಸರ್ ತಪಾಸಣೆ ನಡೆಸಿ ಸರ್ವೈಕಲ್ ಲಸಿಕೆ ನೀಡಲಾಯಿತು.

ಮಹಿಳೆಯರ ಆರೋಗ್ಯ ಮುಖ್ಯ

ಎಚ್‌ಸಿಜಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಂ.ಎಸ್.ಮನೀಶಾ ಕುಮಾರ್ ಮಾತನಾಡಿ, ಪ್ರತಿಯೊಬ್ಬ ಮಹಿಳೆಯರೂ ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ರಾಜ್ಯದ ಕಾನೂನು ಕಾಪಾಡುವ ಮಹಿಳಾ ಸಿಬ್ಬಂದಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅವಕಾಶ ನೀಡಿದೆ. ಮಹಿಳೆ ಆರೋಗ್ಯವಾಗಿದ್ದರೇ ಇಡೀ ಸಮಾಜವೇ ಆರೋಗ್ಯವಾಗಿದ್ದಂತೆ ಎಂದರು.

ಕಾರ್ಯಕ್ರಮದಲ್ಲಿ ನಗರದ 250ಕ್ಕೂ ಹೆಚ್ಚು ಮಹಿಳಾ ಪೊಲೀಸ್ ಸಿಬ್ಬಂದಿಗೆ ಉಚಿತವಾಗಿ ಸರ್ವೈಕಲ್ ಕ್ಯಾನ್ಸರ್ ಲಸಿಕೆ ನೀಡಲಾಯಿತು.

ಸಮಾಜದ ಯಶಸ್ಸಿಗೆ ಮಹಿಳೆಯರೇ ಪ್ರೇರಕ ಶಕ್ತಿ

ಬೆಂಗಳೂರು: ಸಮಾಜ ಹಾಗೂ ಪ್ರತಿಯೊಂದು ಕುಟುಂಬದ ಏಳಿಗೆ-ಯಶಸ್ಸಿಗೆ ಮಹಿಳೆಯರೇ ಪ್ರೇರಕ ಶಕ್ತಿ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಅಭಿಪ್ರಾಯಪಟ್ಟಿದ್ದಾರೆ.

ವಿಶ್ವ ಮಹಿಳಾ ದಿನದ ಅಂಗವಾಗಿ ರಾಜೀವ್ ಗಾಂಧಿ ನಗರದ ಕೆನರಾ ಬ್ಯಾಂಕ್ ಲೇಔಟ್ ಉದ್ಯಾನವನದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಕೆಬಿಜಿ ತಂಡ ಆಯೋಜಿಸಿದ್ದ ಸ್ತ್ರೀ ಸಂಭ್ರಮ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಮಹಿಳೆಯರಿಲ್ಲದ ಸಮಾಜವನ್ನು ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ. ಕುಟುಂಬ ವ್ಯವಸ್ಥೆಯೇ ಗಟ್ಟಿಯಾಗಿರುವ ನಮ್ಮ ಭಾರತೀಯ ಸಮಾಜದಲ್ಲಿ ಮಹಿಳೆಯರ ಕೊಡುಗೆಯನ್ನೂ-ದುಡಿಮೆಯನ್ನೂ ಕನಿಷ್ಟ ಗುರುತಿಸಿ ಗೌರವಿಸುವ ಕೆಲಸವೂ ಆಗುತ್ತಿಲ್ಲ ಎಂದು ಬೇಸರ ಹೊರಹಾಕಿದರು.

ಕಾರ್ಯಕ್ರಮದಲ್ಲಿ ರಂಗೋಲಿ ಮಹಿಳೆಯರಿಗೆ ಫ್ಯಾಷನ್ ಶೋ ಸೇರಿದಂತೆ ನಾನಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ ಗೆದ್ದವರಿಗೆ ಕರ್ನಾಟಕ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯ ರೆಡ್ಡಿ ಅವರು ಬಹುಮಾನ ನೀಡಿ ಸನ್ಮಾನಿಸಿದರು. ಅಲ್ಲದೆ, ಯುವ ಗಾಯಕಿ-ಸಂಗೀತಗಾರ್ತಿ ಸುನಿಧಿ ಗಣೇಶ್ ಸಂಗೀತ ರಸ ಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಮಹಿಳಾ ದಿನಾಚರಣೆ ಅಂಗವಾಗಿ ಕರ್ನಾಟಕ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯ ರೆಡ್ಡಿ ಅವರನ್ನು ಅಭಿನಂದಿಸಲಾಯಿತು. ಸಚಿವ ಕೃಷ್ಣಬೈರೇಗೌಡ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು.

ಮಹಿಳೆಯರ ಶ್ರಮಕ್ಕೆ ಸಾಧನೆಗೆ ನಾವು ಕನಿಷ್ಠ ಗೌರವವನ್ನಾದರೂ ಸಲ್ಲಿಸಬೇಕು. ಮಹಿಳೆಯರನ್ನು ಗೌರವಿಸಿದರೆ ಮನೆ ದೇಶ ಪ್ರಪಂಚಕ್ಕೆ ಒಳ್ಳೆಯದು. ಆದರೆ, ದಿನನಿತ್ಯ ಅವರಿಗೆ ಧನ್ಯವಾದ ಸಲ್ಲಿಸಲಾಗದು. ಹೀಗಾಗಿಯೇ ವರ್ಷದಲ್ಲೊಂದು ದಿನ ಮಹಿಳೆಯರಿಗೆ ಮೀಸಲಾಗಿದ್ದು, ಈ ದಿನದಲ್ಲಾದರೂ ಅವರನ್ನು ಗೌರವಿಸುವ ಕೆಲಸವಾಗಬೇಕು. ಗಾರ್ಮೆಂಟ್ಸ್‌ನಿಂದ ದೇಶದ ಉನ್ನತ ಹುದ್ದೆಯವರೆಗೂ ಮಹಿಳೆಯರು ನಿಭಾಯಿಸಿದ್ದಾರೆ. ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದಾರೆ. ಆದರೂ, ಕೆಲವರ ಮನಸ್ಥಿತಿ ಬದಲಾಗಿಲ್ಲ. ಅಂತವರ ಮನಸ್ಸನ್ನು ಬದಲಿಸುವ ಯತ್ನವೇ ಈ ಕಾರ್ಯಕ್ರಮ.

-ಕೃಷ್ಣ ಬೈರೇಗೌಡ, ಸಚಿವ

ತಿಂಗಳಾಂತ್ಯಕ್ಕೆ ನಿವೇಶನ ಹಂಚಿಕೆ: ಕೆ.ಎಚ್.ಮುನಿಯಪ್ಪ

ಬೆಂಗಳೂರು: ದೇವನಹಳ್ಳಿ ತಾಲೂಕು ವ್ಯಾಪ್ತಿಯಲ್ಲಿ ತಿಂಗಳಾಂತ್ಯದಲ್ಲಿ ಏಕಕಾಲಕ್ಕೆ ನಿವೇಶನ ಹಂಚಿಕೆ ಮಾಡಲು ಸಿದ್ಧತೆ ನಡೆಸಲಾಗಿದೆ ಎಂದು ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವ ಕೆ.ಎಚ್ ಮುನಿಯಪ್ಪ ತಿಳಿಸಿದರು.

ದೇವನಹಳ್ಳಿ ವಿಧಾನ ಸಭಾ ಕ್ಷೇತ್ರದ ಕುಂದಾಣ ಹೋಬಳಿ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿ, ಬಡವರಿಗೆ, ಹಿಂದುಳಿದವರಗೆ ನಿವೇಶನ ಹಾಗೂ ಮನೆ ನೀಡಲು ಈಗಾಗಲೇ ಸಿದ್ಧತೆ ನಡೆಸಲಾಗಿದೆ. ಸಿಎಂ ಸಿದ್ದರಾಮಯ್ಯ ಪ್ರಸ್ತಕ ಸಾಲಿನ ಬಜೆಟ್‌ನಲ್ಲಿ ಜನಪರವಾದ, ರೈತರ ಪರವಾದ, ಬಡವರ ಪರವಾದ, ಎಲ್ಲಾ ವರ್ಗದ ಪರವಾದ, ಎಲ್ಲಾ ಜಿಲ್ಲೆಗಳಿಗೂ ಸಮಾನ ಅವಕಾಶ ನೀಡಿದ್ದಾರೆ. ದೇವನಹಳ್ಳಿಗೆ ಮೆಟ್ರೋ ವಿಸ್ತರಣೆ, ಜಿಲ್ಲಾ ಕ್ರೀಡಾಂಗಣ, ಕೆರೆಗೆ ನೀರು ತುಂಬಿಸುವುದು, ರಸ್ತೆಗಳ ಅಭಿವೃದ್ಧಿಗೆ ಸೇರಿದಂತೆ ಹಲವು ಯೋಜನೆಗಳನ್ನು ನೀಡಿದ್ದಾರೆ. ಸರಕಾರ ಡಿಸಿಸಿ ಬ್ಯಾಂಕ್ ಗಳಲ್ಲಿ ಬಡ್ಡಿ ರಹಿತ ಸಾಲ ನೀಡುವ ಯೋಜನೆ ಜಾರಿಗೆ ತಂದಿದ್ದು ರೈತರು, ಸ್ವಸಹಾಯ, ಸ್ತ್ರೀ ಶಕ್ತಿ ಸಂಘಗಳು ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕುಂದಾಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗರ್ಭಿಣಿಯರಿಗೆ, ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ಸಚಿವ ಕೆ.ಎಚ್.ಮುನಿಯಪ್ಪ ಸನ್ಮಾನಿಸಿ ಗೌರವಿಸಿದರು.

ತಿರುಪತಿ ಶಕ್ತಿಪೀಠದ ರಮ್ಯಾನಂದ ಭಾರತಿ ಸ್ವಾಮಿನಿ

ಕುಟುಂಬದ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ ಅನನ್ಯ

ಬೆಂಗಳೂರು: ಕುಟುಂಬದ ಸರ್ವತೋಮುಖ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಬಹಳ ಮುಖ್ಯವಾಗಿದೆ ಎಂದು ತಿರುಪತಿ ಶ್ರೀಶಕ್ತಿ ಪೀಠಂ ನ ಮಾತಾಜಿ ಶ್ರೀ ರಮ್ಯಾನಂದ ಭಾರತಿ ಸ್ವಾಮಿನಿ ತಿಳಿಸಿದರು.

ಮಹಿಳಾ ದಿನಾಚರಣೆಯ ಅಂಗವಾಗಿ ಕಾಡುಗೋಡಿ ರಸ್ತೆ ವೈಟ್ ಫೀಲ್ಡ್‌ನ ಚೈತನ್ಯ ಭಾರತಿ ಸಭಾಂಗಣದಲ್ಲಿ ಆಯೋಜಿಸಿದ್ದ ಬೃಹತ್ ಲಲಿತ ಸಹಸ್ರನಾಮ ಪಾರಾಯಣ ಹಾಗೂ ಸುವಾಸಿನಿ ಪೂಜಾ ಉಪನ್ಯಾಸ ನೀಡಿ, ಮಹಿಳೆಯರಿಗೆ ನಮ್ಮ ಸಂಸ್ಕೃತಿಯಲ್ಲಿ ವಿಶೇಷ ಸ್ಥಾನಮಾನ ನೀಡಲಾಗಿದೆ. ಶಕ್ತಿಯ ಪ್ರತಿರೂಪ ಮಹಿಳೆ. ಕುಟುಂಬ ಹಾಗೂ ಸಮಾಜವನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸಲು ಈ ಶಕ್ತಿಯ ಅವಶ್ಯಕತೆ ಬಹಳಷ್ಟಿದೆ. ಮಹಿಳೆಯರು ತಮ್ಮ ಸಾಮರ್ಥ್ಯ ಬೆಳೆಸಿಕೊಳ್ಳಲು ಹೆಚ್ಚಿನ ಆದ್ಯತೆ ನೀಡಬೇಕು. ತಮ್ಮ ಕುಟುಂಬವನ್ನು ಅದರ ಜೊತೆಯಲ್ಲೇ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು. ಭಾನುವಾರದಂದು ಚೈತನ್ಯ ಸಮರ್ಪಣ್ ನಲ್ಲಿ ಬೆಳಗ್ಗೆ 9 ರಿಂದ 12 ರ ವರೆಗೆ ಮಾತಾಜಿಗೆ ಪಾದಪೂಜೆ ನಡೆಯಲಿದೆ. ಬಳಿಕ ಅನುಗ್ರಹ ಭಾಷಣ ಮತ್ತು ಅನ್ನಪ್ರಸಾದ ನಡೆಯಲಿದೆ.

ಸಮಾಚಾರ ಸಣ್ಣದಲ್ಲ

ಪ್ಲೇಯರ್ ಆಫ್ ದಿ ಮಂತ್ ಗಿಲ್ ಹೆಸರು ನಾಮನಿರ್ದೇಶನ

ದುಬೈ: ಕಳೆದ ತಿಂಗಳು ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಭಾರತದ ಅಗ್ರ ಕ್ರಮಾಂಕದ ಬ್ಯಾಟರ್ ಶುಭ್‌ಮನ್ ಗಿಲ್ ಅವರನ್ನು ಫೆಬ್ರವರಿ ತಿಂಗಳ ಐಸಿಸಿ ತಿಂಗಳ ಆಟಗಾರ ಪ್ರಶಸ್ತಿಗೆ ಆಸ್ಟ್ರೇಲಿಯಾದ ಸ್ಟೀವ್ ಸ್ಮಿತ್ ಮತ್ತು ನ್ಯೂಜಿಲೆಂಡ್‌ನ ಗ್ಲೆನ್ ಫಿಲಿಪ್ಸ್ ಅವರೊಂದಿಗೆ ನಾಮನಿರ್ದೇಶನ ಮಾಡಲಾಗಿದೆ. ಗಿಲ್ ಫೆಬ್ರವರಿಯಲ್ಲಿ ಆಡಿದ ಐದು ಏಕದಿನ ಪಂದ್ಯಗಳಲ್ಲಿ 94.19 ಸ್ಟ್ರೈಕ್ ರೇಟ್‌ನಲ್ಲಿ 101.5 ಸರಾಸರಿಯೊಂದಿಗೆ 406 ರನ್ ಗಳಿಸಿದ್ದಾರೆ. ನಾಗ್ಪುರದಲ್ಲಿ ನಡೆದ ಪಂದ್ಯದಲ್ಲಿ 87, ಕಟಕ್‌ನ ಪಂದ್ಯದಲ್ಲಿ 60 ಮತ್ತು ಅಹಮ್ಮದಾಬಾದ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ 112 ರನ್ ಬಾರಿಸಿ ಶುಭ್‌ಮನ್ ಗಿಲ್ ಸರಣಿಶ್ರೇಷ್ಠ ಗೌರವಕ್ಕೂ ಪಾತ್ರರಾಗಿದ್ದರು.

ಏಷ್ಯನ್ ಮಹಿಳಾ ಕಬಡ್ಡಿ ಫೈನಲ್‌ಗೆ ಭಾರತ ತಂಡ

ಟೆಹ್ರಾನ್: ನೇಪಾಳವನ್ನು 56–18 ಪಾಯಿಂಟ್‌ಗಳಿಂದ ಸೋಲಿಸಿದ ಭಾರತದ ಮಹಿಳಾ ಕಬಡ್ಡಿ ತಂಡವು ಇಲ್ಲಿ ನಡೆಯುತ್ತಿರುವ ಆರನೇ ಏಷ್ಯನ್ ಮಹಿಳಾ ಕಬಡ್ಡಿ ಚಾಂಪಿಯನ್‌ಶಿಪ್‌ನಲ್ಲಿ ಫೈನಲ್ ತಲುಪಿದೆ. ಸೋನಾಲಿ ವಿಷ್ಣು ಶಿಂಗಟೆ ನಾಯಕತ್ವದ ಭಾರತದ ವನಿತೆಯರ ತಂಡವು ಫೈನಲ್‌ನಲ್ಲಿ ಅತಿಥೇಯ ಇರಾನ್ ತಂಡದ ವಿರುದ್ಧ ಆಡಲಿದೆ. ಬಾಂಗ್ಲಾದೇಶ ತಂಡವನ್ನು 41–18ರಿಂದ ಮಣಿಸಿದ್ದ ಇರಾನ್ ಅನಾಯಾಸವಾಗಿ ಫೈನಲ್ ತಲುಪಿತ್ತು.

ಸಾಂಪ್ರದಾಯಿಕ ಚೆಸ್ ಸಮಸ್ಯೆ ಎದುರಾಗದು

ದೆಹಲಿ: ಫ್ರೀಸ್ಟೈಲ್ ಚೆಸ್ ರೋಚಕತೆಯನ್ನು ಹೊಂದಿದ್ದರೂ, ಕ್ಲಾಸಿಕಲ್ ಆಟವು ಸಮೃದ್ಧ ಪರಂಪರೆ ಹೊಂದಿದ್ದು ಅದಕ್ಕೆ ತನ್ನದೇ ಆದ ಮಹತ್ವವಿದೆ ಎಂದು ವಿಶ್ವ ಚಾಂಪಿಯನ್ ಡಿ. ಗುಕೇಶ್ ಅಭಿಪ್ರಾಯ ಪಟ್ಟಿದ್ದಾರೆ. ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಚೆಸ್‌ನಲ್ಲಿ ಆಗುತ್ತಿರುವ ಪಲ್ಲಟಗಳ ನಡುವೆಯೂ ಎಲ್ಲಾ ಮಾದರಿಗಳಲ್ಲಿ ಆಡಲು ಮುಕ್ತ ಮನಸ್ಸು ಹೊಂದಿರುವುದಾಗಿ ಗುಕೇಶ್ ತಿಳಿಸಿದರು. ಫ್ರೀ ಸ್ಟೈಲ್ ಚೆಸ್ ರೋಚಕವಾಗಿರುತ್ತದೆ, ಅದನ್ನು ಆಡಲು ನನಗೂ ಖುಷಿ ಇದೆ ಎಂದೂ ಹೇಳಿದರು. ಫ್ರೀಸ್ಟೈಲ್ ಚೆಸ್ ದೊಡ್ಡ ಮಟ್ಟದಲ್ಲಿ ಬೆಳೆಯಬಹುದು, ಆದರೆ ಅದು ಸಾಂಪ್ರದಾಯಿಕ ಚೆಸ್‌ನ ಸ್ಥಾನ ಆಕ್ರಮಿಸಬಹುದೆಂದು ನನಗೇನೂ ಅನಿಸುತ್ತಿಲ್ಲ ಎಂದು ಗುಕೇಶ್ ನುಡಿದರು.

ದುಬೈನಲ್ಲಿ ಚಾಂಪಿಯನ್ಸ್ ಟ್ರೋಫಿ | ಪ್ರಶಸ್ತಿಗಾಗಿ ಭಾರತ-ಕಿವೀಸ್ ಮುಖಾಮುಖಿ

ಇಂದು ಫೈನಲ್ ಫೈಟ್

ದುಬೈ: ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯಕ್ಕೆ ಕ್ಷಣಗಣನೆ ಶುರುವಾಗಿದೆ. ಪ್ರಶಸ್ತಿಗಾಗಿ ಇತ್ತಂಡಗಳ ನಡುವಿನ ಸಮರ ಇಂದು ದುಬೈನ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿದೆ. ಪಂದ್ಯದ ವಿಶೇಷತೆ ಏನೆಂದರೆ, ಉಭಯ ತಂಡಗಳು 25 ವರ್ಷಗಳ ಬಳಿಕ ಐಸಿಸಿ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ಎದುರಾಗುತ್ತಿರುವುದಾಗಿದೆ. ಈ ಸಲದ ಟೂರ್ನಿಯಲ್ಲಿ ಯಾವುದೇ ಪಂದ್ಯವನ್ನು ಸೋಲದೆ ಅಜೇಯ ತಂಡವಾಗಿ ಫೈನಲ್ ಪ್ರವೇಶಿಸಿರುವ ರೋಹಿತ್ ಶರ್ಮ ನಾಯಕತ್ವದ ಟೀಮ್ ಇಂಡಿಯಾ ಈ ಸಲ ಕಪ್ ಗೆಲ್ಲುವ ನೆಚ್ಚಿನ ತಂಡವಾಗಿ ಗೋಚರಿಸಿದದರೂ, ಇತಿಹಾಸವನ್ನೊಮ್ಮೆ ಕೆದಕಿದರೆ ಐಸಿಸಿ ಪ್ರಶಸ್ತಿ ಸುತ್ತಿನಲ್ಲಿ ಕಿವೀಸ್ ವಿರುದ್ಧ ಭಾರತ ಇದುವರೆಗೂ ಗೆದ್ದಿಲ್ಲ ಎಂಬುದು ಮತ್ತೊಂದು ಉಲ್ಲೇಖಾರ್ಹ ವಿಷಯ.

ಭಾರತ–ನ್ಯೂಜಿಲೆಂಡ್ ಫೈನಲ್

- ಪಂದ್ಯ ಆರಂಭ: ಅಪರಾಹ್ನ: 2.30
- ಸ್ಟೇಡಿಯಂ: ದುಬೈ ಇಂಟರ್‌ನ್ಯಾಷನಲ್ ಕ್ರೀಡಾಂಗಣ
- ಟಿ.ವಿ ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೋ ಹಾಟ್‌ಸ್ಟಾರ್

ತಂಡದ ಬಹುತೇಕ ಆಟಗಾರರು ಲಯದಲ್ಲಿರುವುದು ಟೀಮ್ ಇಂಡಿಯಾದ ಪರವಾಗಿರುವ ಧನಾತ್ಮಕ ಅಂಶ. ತಂಡದ ನಾಯಕ ರೋಹಿತ್ ಶರ್ಮಾ, ರನ್ ಮೆಶಿನ್ ವಿರಾಟ್ ಕೊಹ್ಲಿ ಹಾಗೂ ಶ್ರೇಯಸ್ ಅಯ್ಯರ್ ಅಗ್ರ ಬ್ಯಾಟಿಂಗ್ ವಿಭಾದಲ್ಲಿ ಬಲ ತುಂಬುವವರು, ಕೆಳ ಕ್ರಮಾಂಕದಲ್ಲಿ ಅಕ್ಷರ್ ಪಟೇಲ್, ಹಾರ್ದಿಕ್ ಪಾಂಡ್ಯ ಉಪಯುಕ್ತ ಇನ್ನಿಂಗ್ಸ್ ಕಟ್ಟಬಲ್ಲವರು.

ಬೌಲಿಂಗ್ ವಿಭಾಗದಲ್ಲಿ ಈ ಹಿಂದಿನ ಪಂದ್ಯಗಳಿಗೆ ಹೋಲಿಸಿದರೆ ಹೆಚ್ಚಿನ ಬದಲಾವಣೆ ಕಂಡುಬರುವ ಸಾಧ್ಯತೆ ಇಲ್ಲ. ನಾಲ್ವರು ಸ್ಪಿನ್ನರ್‌ಗಳ ರಣತಂತ್ರದೊಂದಿಗೆ ಟೀಮ್ ಇಂಡಿಯಾ ಕಣಕ್ಕಿಳಿಯುವ ಸಾಧ್ಯತೆ ಇದೆ. ವರುಣ್ ಚಕ್ರವರ್ತಿ, ರವೀಂದ್ರ ಜಡೇಜ, ಅಕ್ಷರ್ ಪಟೇ ಲ್ ಹಾಗೂ ಕುಲದೀಪ್ ಯಾದವ್ ಎದುರಾಳಿ ತಂಡಕ್ಕೆ ಕಡಿವಾಣ ಹಾಕುವ ನಿರೀಕ್ಷೆಯಲ್ಲಿದ್ದಾರೆ. ಅನುಭವಿ ವೇಗಿ ಮೊಹಮ್ಮದ್ ಶಮಿ ಮತ್ತೊಮ್ಮೆ ಬೌಲಿಂಗ್‌ನಲ್ಲಿ ತಮ್ಮ ಕೈಚಳಕ ತೋರಿಸುವ ನಿರೀಕ್ಷೆಯಲ್ಲಿದ್ದಾರೆ. ನ್ಯೂಜಿಲೆಂಡ್ ತಂಡವೂ ಕೂಡಾ ಸಮತೋಲನದಿಂದ ಕೂಡಿದ್ದು, ಒತ್ತಡವನ್ನು ನಿಭಾಯಿಸುವ ಸಾಮರ್ಥ್ಯವನ್ನು ಹೊಂದಿದೆ. ವಿಲ್ ಯಂಗ್, ರಚಿನ್ ರವೀಂದ್ರ, ಕೇನ್ ವಿಲಿಯಮ್ಸನ್, ಡ್ಯಾರಿಲ್ ಮಿಚೆಲ್, ಕೀಪರ್ ಟಾಮ್ ಲೇಥಮ್ ಹಾಗೂ ಗ್ಲೆನ್ ಫಿಲಿಪ್ಸ್ ಬ್ಯಾಟಿಂಗ್ ವಿಭಾಗದಲ್ಲಿ ತಂಡಕ್ಕೆ ಬಲ ತುಂಬಲಿದ್ದಾರೆ. ನಾಯಕ ಮಿಚೆಲ್ ಸ್ಯಾಂಟನರ್, ಮೈಕಲ್ ಬ್ರೇಸ್‌ವೆಲ್, ಮ್ಯಾಟ್ ಹೆನ್ರಿ, ಕೈಲ್ ಜೇಮಿಸನ್ ಹಾಗೂ ವಿಲಿಯಮ್ ಹಾಗೂ ವಿಲಿಯಮ್ ಓರೂರ್ಕ್ ಬೌಲಿಂಗ್‌ನಲ್ಲಿ ಪರಿಣಾಮಕಾರಿ ಎನಿಸಬಲ್ಲರು. ಒಟ್ಟಿನಲ್ಲಿ ದುಬೈನ ಅಂತಾರಾಷ್ಟ್ರೀಯ ಮೈದಾನದಲ್ಲಿ ಅಭಿಮಾನಿಗಳು ಮತ್ತೊಂದು ರೋಚಕ ಹಣಾಹಣಿಯ ನಿರೀಕ್ಷೆಯಲ್ಲಿದ್ದಾರೆ.

ಚಾಂಪಿಯನ್ಸ್ ಟ್ರೋಫಿ: ಟೀಮ್ ಇಂಡಿಯಾ ಪ್ರದರ್ಶನ

- **1998: ಸೆಮಿಫೈನಲ್ ಪ್ರವೇಶ:** ಚೊಚ್ಚಲ ಆವೃತ್ತಿಯ ಟೂರ್ನಿಯಲ್ಲಿ ಭಾರತ ತಂಡಕ್ಕೆ ಸೆಮಿಫೈನಲ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಸೋಲು
- **2000: ರನ್ನರ್ ಅಪ್ ತಂಡ** ಕೀನ್ಯಾದಲ್ಲಿ ನಡೆದಿದ್ದ ಆವೃತ್ತಿಯಲ್ಲಿ ಗಂಗೂಲಿ ಸಾರಥ್ಯದ ಭಾರತ ತಂಡಕ್ಕೆ ನ್ಯೂಜಿಲೆಂಡ್ ವಿರುದ್ಧ ಫೈನಲ್‌ನಲ್ಲಿ ಸೋಲು
- **2002: ಶ್ರೀಲಂಕಾ ಜತೆ ಜಂಟಿ ವಿಜೇತ ತಂಡ** ಭಾರತ-ಶ್ರೀಲಂಕಾ ನಡುವಿನ ಫೈನಲ್ ಪಂದ್ಯ ಮಳೆಯಿಂದಾಗಿ ರದ್ದಾಗಿದ್ದರಿಂದ ಇತ್ತಂಡಗಳೂ ಜಂಟಿ ವಿಜೇತರೆಂದು ಘೋಷಣೆ
- **2004: ಲೀಗ್ ಹಂತದಲ್ಲೇ ಸೋಲು** ಬದ್ಧ ಎದುರಾಳಿ ಪಾಕಿಸ್ತಾನ ವಿರುದ್ಧವೂ ಸೇರಿದಂತೆ ಸೋಲುಗಳನ್ನು ಕಂಡು ಗ್ರೂಪ್ ಹಂತದಲ್ಲೇ ಭಾರತ ನಿರ್ಗಮನ
- **2006ರಲ್ಲಿಯೂ ಕಳಪೆ ಆಟ** ಕೇವಲ ಇಂಗ್ಲೆಂಡ್ ವಿರುದ್ಧ ಮಾತ್ರ ಜಯಗಳಿಸಿ ಭಾರತವು ಲೀಗ್ ಹಂತದಲ್ಲೇ ಟೂರ್ನಿಯಿಂದ ನಿರ್ಗಮನ
- **2009ರಲ್ಲಿ ಲೀಗ್ ಹಂತದಲ್ಲೇ ನಿರ್ಗಮನ** ದಕ್ಷಿಣ ಆಫ್ರಿಕಾ ಆತಿಥ್ಯದಲ್ಲಿ ನಡೆದ ಟೂರ್ನಿಯಲ್ಲಿ ಭಾರತಕ್ಕೆ ಲೀಗ್ ಹಂತದಲ್ಲಿ ಏಕೈಕ ಪಂದ್ಯದಲ್ಲಷ್ಟೇ ಗೆಲುವು
- **2013ರಲ್ಲಿ ಚಾಂಪಿಯನ್** ಧೋನಿ ಸಾರಥ್ಯದ ಭಾರತ ತಂಡವು ಇಂಗ್ಲೆಂಡನ್ನು ಸೋಲಿಸಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಚಾಂಪಿಯನ್ ಪಟ್ಟ ಪಡೆಯಿತು.
- **2017ರಲ್ಲಿ ರನ್ನರ್ ಅಪ್** ಲೀಗ್ ಹಂತದಲ್ಲಿ ಪಾಕಿಸ್ತಾನಕ್ಕೆ 8 ವಿಕೆಟ್ ಸೋಲುಣಿಸಿದ್ದರೂ ಫೈನಲ್‌ನಲ್ಲಿ ಪಾಕಿಸ್ತಾನಕ್ಕೆ ಶರಣಾದ ಭಾರತ ತಂಡ.

ಪಾಕಿಸ್ತಾನ ಹಣಕ್ಕಾಗಿ ಆಡುತ್ತಿದೆ: ಹಫೀಝ್ ಆರೋಪ

ಲಾಹೋರ್: ಆತಿಥೇಯ ಪಾಕಿಸ್ತಾನ ತಂಡ ತವರು ನೆಲದಲ್ಲಿ ಕಳಪೆ ಪ್ರದರ್ಶನ ತೋರುವ ಮೂಲಕ ಈ ಸಲದ ಚಾಂಪಿಯನ್ಸ್ ಟೂರ್ನಿಯ ಲೀಗ್ ಹಂತದಿಂದಲೇ ಹೊರಬಿ ದ್ದಿದೆ. ಈ ಹಿನ್ನೆಲೆಯಲ್ಲಿ ಪಾಕಿಸ್ತಾನ ತಂಡದ ವಿರುದ್ಧ ಸಾಕಷ್ಟು ಟೀಕೆಗಳು ಕೇಳಿ ಬರುತ್ತಿವೆ. ಇದೀಗ ಇದೀಗ ಪಾಕ್ ಮಾಜಿ ನಾಯಕ ಮೊಹಮ್ಮದ್ ಹಫೀಝ್ ಅವರು ಮಾತನಾಡಿದ್ದು, ಪಾಕಿಸ್ತಾನದ ವಿರುದ್ಧ ಗಂಭೀರ ಆರೋಪವನ್ನು ಮಾಡಿದ್ದಾರೆ. ಹಣ ಗಳಿಸುವ ಅಗತ್ಯವಿದ್ದ ಕಾರಣ ಪಿಸಿಬಿ ಈ ಟೂರ್ನಮೆಂಟ್ ಅನ್ನು ಹೈಬ್ರಿಡ್ ಮಾದರಿಯಲ್ಲಿ ಆಯೋಜಿಸಲು ಒಪ್ಪಿಕೊಂಡಿತು ಎಂದು ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಹೇಳಿದ್ದಾರೆ. 'ಹೈಬ್ರಿಡ್ ಮಾದರಿಯಲ್ಲಿ ಚಾಂಪಿಯನ್ಸ್ ಟ್ರೋಫಿಯನ್ನು ಆಯೋಜಿಸುವ ಮೂಲಕ ಪಾಕಿಸ್ತಾನ ಹಣ ಗಳಿಸಿದೆ. ಆದರೆ ಭಾರತದ ವಿಷಯದಲ್ಲಿ ಹಾಗಲ್ಲ, ಏಕೆಂದರೆ ಭಾರತೀಯ ಮಂಡಳಿಯು ಆರ್ಥಿಕವಾಗಿ ಬಲಿಷ್ಠವಾಗಿದ್ದು, ಟೂರ್ನಿ ಯನ್ನು ಗೆಲ್ಲಲು ಯೋಜಿಸುತ್ತಿದೆ' ಎಂದಿದ್ದಾರೆ ಮೊಹಮ್ಮದ್ ಹಫೀಝ್. 'ಹೈಬ್ರಿಡ್ ಮಾದರಿಯಿಂದ ನಮಗೆ ಹಣ ಬಿಟ್ಟರೆ ಬೇರೇನೂ ಸಿಗಲಿಲ್ಲ, ಹಾಗಾಗಿ ನಾವು ಸ್ವಲ್ಪ ಹಣ ಗಳಿಸಲು ಪ್ರಯತ್ನಿಸಿದೆವು, ಆ ಹಣ ನಮಗೆ ಸಿಕ್ಕಿದೆ. ಆದರೆ ಭಾರತವು ಐಸಿಸಿ ಟ್ರೋಫಿ ಗೆಲ್ಲಲು ಯೋಜಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಮಹಿಳಾ ಪ್ರೀಮಿಯರ್ ಲೀಗ್

ಆರ್‌ಸಿಬಿ ಔಟ್

ಲಖನೌ: ಕಳಪೆ ಬೌಲಿಂಗ್‌ನಿಂದಾಗಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯ ನಾಕೌಟ್ ಹಾದಿಯಿಂದ ಹೊರಬಿತ್ತು.

ಜಾರ್ಜಿಯಾ ವೊಲ್ ಗಳಿಸಿದ ಅಜೇಯ 99 ರನ್‌ಗಳ ಬಲದಿಂದ ಗೆದ್ದ ಯು.ಪಿ ವಾರಿಯರ್ಸ್ ತಂಡವು ಶನಿವಾರ ನಡೆದ ಪಂದ್ಯದಲ್ಲಿ 12 ರನ್‌ಗಳಿಂದ ಜಯಿಸಿತು. ಅದರೊಂದಿಗೆ ಆರ್‌ಸಿಬಿ ತಂಡವನ್ನು ಟೂರ್ನಿಯಿಂದ ಹೊರಗೆ ತಳ್ಳಿತು. ಆರ್‌ಸಿಬಿಗೆ ಇನ್ನೊಂದು ಪಂದ್ಯ ಬಾಕಿ ಇದೆ. ಅದರಲ್ಲಿ ಗೆದ್ದರೂ ನಾಕೌಟ್ ಪ್ರವೇಶ ಸಾಧ್ಯವಾಗದು.

ಈ ಪಂದ್ಯದಲ್ಲಿ ಟಾಸ್ ಗೆದ್ದ ಆರ್‌ಸಿಬಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವಾರಿಯರ್ಸ್ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 225 ರನ್ ಗಳಿಸಿತು. ಜಾರ್ಜಿಯಾ ವೊಲ್ ಅವರಿಗೆ ಡಬ್ಲ್ಯುಪಿಎಲ್‌ನಲ್ಲಿ ಚೊಚ್ಚಲ ಶತಕ ಗಳಿಸುವ ಅವಕಾಶ ಕೇವಲ 1 ರನ್ ಅಂತರದಿಂದ ಕೈತಪ್ಪಿತು. ಈ ಗುರಿ ಬೆನ್ನಟ್ಟಿದ ಆರ್‌ಸಿಬಿ ತಂಡವು 19.3 ಓವರ್‌ಗಳಲ್ಲಿ 213 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಸಂಕ್ಷಿಪ್ತ ಸ್ಕೋರ್

ಯು.ಪಿ.ವಾರಿಯರ್ಸ್: 20 ಓವರ್‌ಗಳಲ್ಲಿ 5ಕ್ಕೆ225
ಆರ್‌ಸಿಬಿ: 19.3 ಓವರ್‌ಗಳಲ್ಲಿ 213
ಫಲಿತಾಂಶ: ಯು.ಪಿ. ವಾರಿಯರ್ಸ್ ತಂಡಕ್ಕೆ 12 ರನ್ ಜಯ
ಪಂದ್ಯ ಆಟಗಾರ್ತಿ: ಜಾರ್ಜಿಯಾ ವೊಲ್

ಐಪಿಎಲ್: ಮೊದಲ 2 ವಾರ ಬುಮ್ರಾ ಅಲಭ್ಯ

ಮುಂಬೈ: ಕೆಲವೇ ದಿನಗಳಲ್ಲಿ ಆರಂಭವಾಗಲಿರುವ 18ನೇ ಆವೃತ್ತಿಯ ಐಪಿಎಲ್–2025ಗೆ ಟೂರ್ನಿಗೆ ಎಲ್ಲಾ ಫ್ರಾಂಚೈಸಿಗಳು ಸಿದ್ಧತೆ ಆರಂಭಿಸಿದ್ದು, ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್‌ಗೆ ಹಿನ್ನಡೆಯಾಗುವಂತಹ ಸುದ್ದಿಯೊಂದು ಹೊರಬಿದ್ದಿದೆ. ತಂಡದ ಪ್ರಧಾನ ವೇಗದ ಬೌಲರ್ ಜಸ್‌ಪ್ರೀತ್ ಬುಮ್ರಾ ಸಂಪೂರ್ಣ ಫಿಟ್‌ನೆಸ್ ಇಲ್ಲದ ಕಾರಣ ಎರಡು ವಾರಗಳ ಕಾಲ ತಂಡಕ್ಕೆ ಲಭ್ಯರಿಲ್ಲ, ಅವರು ಏಪ್ರಿಲ್ ಮೊದಲ ವಾರ ದಲ್ಲಿ ಮುಂಬೈ ತಂಡ ಸೇರಿಕೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ.

'ಬುಮ್ರಾ ಅವರ ವೈದ್ಯಕೀಯ ವರದಿಗಳು ಸರಿಯಾಗಿವೆ ಮತ್ತು ಅವರು ಎನ್‌ಸಿಎಯಲ್ಲಿ ಬೌಲಿಂಗ್ ಅನ್ನು ಪುನರಾರಂಭಿಸಿದ್ದಾರೆ. ಆದಾಗ್ಯೂ, ಐಪಿಎಲ್ ಆರಂಭದಲ್ಲಿ ಅವರು ಬೌಲಿಂಗ್ ಮಾಡುವ ಸಾಧ್ಯತೆ ಕಡಿಮೆ. ಪ್ರಸ್ತುತ ಅವರ ಬೌಲಿಂಗ್ ಸ್ಥಿತಿ ನೋಡುವಾಗ ಎಪ್ರಿಲ್ ಮೊದಲ ವಾರದಲ್ಲಿ ಮುಂಬೈ ಇಂಡಿಯನ್ಸ್ ಸೇರುವ ನಿರೀಕ್ಷೆ ಮಾಡಲಾಗಿದೆ' ಎಂದು ಬಿಸಿಸಿಐ ಮೂಲವೊಂದು ಟೈಮ್ಸ್ ಆಫ್ ಇಂಡಿಯಾಗೆ ತಿಳಿಸಿರಿವುದಾಗಿ ವರದಿಯಾಗಿದೆ.

ಮುಂಬೈ ತಂಡ ಮಾ.23 ರಂದು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಆಡುವ ಮೂಲಕ ತನ್ನ ಅಭಿಯಾನ ಆರಂಭಿಸಲಿದೆ. 5 ಬಾರಿಯ ಐಪಿಎಲ್ ಚಾಂಪಿಯನ್ ಎನಿಸಿಕೊಂಡಿರುವ ಮುಂಬೈ ಕಳೆದ ಬಾರಿಯ ಆವೃತ್ತಿಯಲ್ಲಿ ಹೀನಾಯ ಪ್ರದರ್ಶನ ತೋರಿತ್ತು. ತಂಡವು ಸತತ ಸೋಲು ಕಾಣುವ ಮೂಲಕ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆದು ಮುಖಭಂಗ ಅನುಭವಿಸಿತ್ತು. ಹಾರ್ದಿಕ್ ಪಾಂಡ್ಯ ತಂಡವನ್ನು ಮುನ್ನಡೆಸಿದ್ದರು. ಈ ಬಾರಿ ಬಲಿಷ್ಠ ತಂಡವನ್ನು ರಚಿಸಿದ್ದು 6ನೇ ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಲಿದೆಯಾ ಎಂದು ಕಾದು ನೋಡಬೇಕಿದೆ.

ಮುಂಬೈ ಇಂಡಿಯನ್ಸ್ ತಂಡ: ಜಸ್‌ಪ್ರೀತ್ ಬುಮ್ರಾ, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ರೋಹಿತ್ ಶರ್ಮಾ, ತಿಲಕ್ ವರ್ಮಾ, ಟ್ರೆಂಟ್ ಬೌಲ್ಟ್, ನಮನ್ ಧೀರ್, ರಾಬಿನ್ ಮಿಂಜ್, ಕರ್ಣ್ ಶರ್ಮ, ದೀಪಕ್ ಚಹರ್, ವಿಲ್‌ಜಾಕ್ಸ್, ಮಿಚೆಲ್ ಸ್ಯಾಂಟ್ನರ್, ರ್ಯಾನ್ ರಿಕೆಲ್‌ಟನ್, ಅಶ್ವನಿ ಕುಮಾರ್, ರೀಸ್ ಟಾಪ್ಲೆ, ಕೆಎಲ್ ಶ್ರೀಜಿತ್, ರಾಜ್ ಅಂಗದ್‌ಬಾವ , ಸತ್ಯನಾರಾಯಣ ರಾಜು, ಬೆವನ್‌ಜೇಕಬ್ಸ್, ವಿಘ್ನೇಶ್ ಪುಥರ್, ಅರ್ಜುನ್ ತೆಂಡೂಲ್ಕರ್, ಲಿಜಾಡ್ ವಿಲಿಯಮ್ಸ್.

ಮನದ ಕಡಲು ಮೆಚ್ಚಿದ ರಮ್ಯಾ

ಯೋಗರಾಜ್ ಭಟ್ ನಿರ್ದೇಶಿಸಿರುವ ಮನದ ಕಡಲು ಈ ತಿಂಗಳ ಅಂತ್ಯಕ್ಕೆ ತೆರೆಗೆ ಬರಲಿದೆ. ಮನದ ಕಡಲು ಹಾಡುಗಳ ಮೂಲಕವೇ ಸದ್ದು ಮಾಡುತ್ತಿದೆ. ಸದ್ಯ ಈ ಚಿತ್ರದ ನೀಲಿ ನೀಲಿ ಕಡಲು.. ಎಂಬ ಗಾನ ಬಿಡಗಡೆಯಾಗಿದೆ. ನಟಿ ರಮ್ಯಾ ಹಾಡು ಬಿಡುಗಡೆ ಮಾಡಿ ಶುಭಕೋರಿದರು. ಯೋಗರಾಜ್ ಭಟ್ ಸಾಹಿತ್ಯದ ಈ ಹಾಡಿಗೆ ವಿ.ಹರಿಕೃಷ್ಣ ಸಂಗೀತ ಸಂಯೋಜಿಸಿದ್ದು, ಸೋನು ನಿಗಮ್ ದನಿಯಲ್ಲಿ ಮಧುರವಾಗಿ ಮೂಡಿಬಂದಿದೆ. ಈ ಪ್ರೇಮಗಾನದಲ್ಲಿ ಸುಮುಖ ಕಾಣಿಸಿಕೊಂಡಿದ್ದು, ಸುಂದರ ತಾಣದಲ್ಲಿ ಹಾಡನ್ನು ಸೆರೆಹಿಡಿಯಲಾಗಿದೆ.

ಮೋಹಕ ತಾರೆ ಹೊಸ ಸಿನಿಮಾ

ನಟಿ ರಮ್ಯಾ ನಟನೆಯಿಂದ ದೂರ ಉಳಿದು ಹಲವು ವರ್ಷಗಳೇ ಕಳೆದಿವೆ. ರಮ್ಯಾ ಅವರನ್ನು ತೆರೆಯಲ್ಲಿ ಕಣ್ತುಂಬಿಕೊಳ್ಳಲು ಅಭಿಮಾನಿಗಳು ಕಾತರರಾಗಿದ್ದಾರೆ. ಈ ಹಿಂದೆ ರಮ್ಯಾ ಒಳ್ಳೆಯ ಕಥೆಯ ಸಿನಿಮಾಗಳು ಸಿಕ್ಕಿದರೆ ಖಂಡಿತಾ ನಟಿಸುತ್ತೇನೆ ಎಂದು ಹೇಳಿದ್ದರು. ಅಂತೆಯೇ ಈಗ ರಮ್ಯಾ ಬಯಸಿದ ಕಥೆ ಸಿಕ್ಕಿದೆ. ಹೌದು, ನಿರ್ದೇಶಕ ಯೋಗರಾಜ್ ಭಟ್ ನಿರ್ದೇಶನದಲ್ಲಿ ಮೂಡಿಬರಲಿರುವ ಮುಂದಿನ ಸಿನಿಮಾದಲ್ಲಿ ರಮ್ಯಾ ನಾಯಕಿಯಾಗಿ ನಟಿಸಲಿದ್ದಾರೆ. ಈ ಹಿಂದೆ ರಂಗ ಎಸ್‌ಎಸ್‌ಎಲ್‌ಸಿ ಸಿನಿಮಾದಲ್ಲಿ ಭಟ್ಟರ ನಿರ್ದೇಶನದಲ್ಲಿ ಕಿಚ್ಚ ಸುದೀಪ್, ರಮ್ಯಾ ಒಟ್ಟಿಗೆ ನಟಿಸಿದ್ದರು. ಅದ್ಭುತ ಅಭಿನಯದ ಮೂಲಕ ಎಲ್ಲರ ಮನಗೆದ್ದಿದ್ದರು. ಈಗ ಮತ್ತೊಮ್ಮೆ ರಮ್ಯಾ, ಯೋಗರಾಜ್ ಭಟ್ ಅವರ ಕಾಂಬಿನೇಷನ್ ಒಟ್ಟಾಗಿ ಕೆಲಸ ಮಾಡುವ ಇಚ್ಛೆ ವ್ಯಕ್ತಪಡಿಸಿದ್ದಾರೆ. ರಮ್ಯಾ ಒಡೆತನದ ಆಪಲ್ ಬಾಕ್ಸ್ ಸಹಯೋಗದಲ್ಲಿ ಇ.ಕೆ. ಎಂಟರ್‌ಟೇನರ್ ಬ್ಯಾನರ್‌ನಲ್ಲಿ ಈ ಸಿನಿಮಾ ಸಿದ್ಧವಾಗಲಿದೆ.



ಕತ್ತಲ ಲೋಕದಲ್ಲಿ ಕಪಟಿಯ ಅಟ್ಟಹಾಸ

ಈ ಹಿಂದೆ ಡಾರ್ಕ್ ನೆಟ್ ಕಥೆಯ ಹಲವು ಸಿನಿಮಾಗಳು ತೆರೆಗೆ ಬಂದಿವೆ. ಆದರೆ ಈ ವಾರ ತೆರೆಗೆ ಬಂದ ಕಪಟಿ ಒಂದಷ್ಟು ವಿಶೇಷವಾಗಿದೆ. ಇಲ್ಲಿ ಡಾರ್ಕ್ ನೆಟ್ ಕರಾಳ ಲೋಕದ ಜತೆಗೆ ಭ್ರಮ ಲೋಕದ ಮಾನಸಿಕ ತೊಳಲಾಟವನ್ನು ಕಟ್ಟಿಕೊಡಲಾಗಿದೆ. ಆಕೆ ಪ್ರಿಯಾ, ಕುಟುಂಬದಲ್ಲಾದ ಅವಘಡದಿಂದ ಮಾನಸಿಕ ತೊಳಲಾಟಕ್ಕೆ ಸಿಲುಕಿರುತ್ತಾರೆ. ಇತ್ತ ಅಮೇರಿಕಾದಿಂದ ಬರುವ ಸುಮನ್, ತನ್ನ ಗೆಳೆಯ ಜುಟ್ಟು ಜೊತೆಯಾಗುತ್ತಾನೆ. ಆತನಿಗೆ ಹಣದ ಹುಚ್ಚು, ಅದಕ್ಕಾಗಿ ಅದು ಇದು ಕಳ್ಳತನ ಮಾಡಿ ಹಣ ಹೊಡೆಯುವ ವೃತ್ತಿ ಚೋಟುವನದು. ಇತ್ತ ಸುಮನ್ ಡಾರ್ಕ್ ನೆಟ್ ಬಗ್ಗೆ ತಿಳಿದಿದ್ದು ಅದರಿಂದ ಸುಲಭವಾಗಿ ಹಣ ಮಾಡುವ ದಾರಿಯನ್ನು ಹೇಳಿಕೊಡುತ್ತಾನೆ. ಇದನ್ನು ಪ್ರಿಯಾಳಾ ಮೇಲೆ ಪ್ರಯೋಗ ಮಾಡಲು ಮುಂದಾಗುತ್ತಾರೆ.

ಡಾರ್ಕ್ ನೆಟ್‌ನಲ್ಲಿಯೂ ನಾಲ್ಕು ಹಂತಗಳಲ್ಲಿರುತ್ತವೆ. ಬ್ಯಾಂಕ್ ಅಕೌಂಟ್ ಹ್ಯಾಕ್ ಮಾಡುವುದು, ಸೋಷಿಯಲ್ ಮೀಡಿಯಾ ಹ್ಯಾಕ್ ಮಾಡುವುದು ಮೊದಲೆರಡು ಹಂತಗಳಾದರೆ ಉಳಿದ ಎರಡು ಹಂತಗಳು ಭಯಾನಕವಾಗಿರುತ್ತದೆ. ಅದರಿಂದ ಹೆಚ್ಚಿನ ಹಣ ಸಂಪಾದನೆ ಮಾಡಬಹುದಾಗಿರುತ್ತದೆ. ಹಾಗಾದರೆ ಆ ಹಂತಗಳು ಯಾವುದು, ಅದು ಅಷ್ಟೊಂದು ಭಯನಕವಾಗಿರುತ್ತದೆಯೆ, ಜುಟ್ಟು ಹಣದ ಆಸೆಗೆ ಆ ಹಂತವನ್ನು ಮುಟ್ಟುತ್ತಾನಾ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಡಾರ್ಕ್ ನೆಟ್ ಅಂದಾಕ್ಷಣ ಅದೊಂದು ಭಯಾನಕತೆ ಎಂದು ಅನ್ನಿಸುತ್ತದೆ. ಆದರೆ ಇಲ್ಲಿ ಹೆಚ್ಚಿಗೆ ವಯಲೆನ್ಸ್‌ಗೆ ಅವಕಾಶ ನೀಡದೆ, ನೈಜತೆಯನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ವ್ಯಕ್ತಿಯ ಮಾನಸಿಕ ತೊಳಲಾಟದ ಜತೆಗೆ ಅತಿಯಾಸೆಯಿಂದ ನಾವು ಹೇಗೆ ದಿಕ್ಕು ತಪ್ಪುತ್ತೇವೆ ಎಂಬುದನ್ನು ಮನಕ್ಕೆ ಮುಟ್ಟುವಂತೆ ಕಟ್ಟಿಕೊಡಲಾಗಿದೆ.

ಇಂದಿನ ಆಧುನಿಕ ಜಗತ್ತಿನಲ್ಲಿ ಎಲ್ಲರೂ ತಿಳಿಯಲೇಬೇಕಾದ ಅಂಶಗಳು ಚಿತ್ರದಲ್ಲಿ ಬೆರೆತಿದ್ದು, ಅದನ್ನು ರವಿಕಿರಣ್ ಹಾಗೂ ಚೇತನ್ ನಿರ್ದೇಶಿಸಿ ತೆರೆಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರಿಯಾ ಪಾತ್ರದಲ್ಲಿ ಸುಕೃತಾ ಅದ್ಭುತವಾಗಿ ನಟಿಸಿದ್ದಾರೆ, ಈ ಪಾತ್ರ ಸುಕೃತಾಗೆ ಬಿಗ್ ಬ್ರೇಕ್ ನೀಡಿದರೂ ಅಚ್ಚರಿ ಇಲ್ಲ. ದೇವ್ ದೇವಯ್ಯ ಸಿಂಪಲ್ ಪಾತ್ರದಲ್ಲಿ ಕಂಗೊಳಿಸಿದರೆ, ಸಾತ್ವಿಕ್ ಕೃಷ್ಣ ಖಳನಾಗಿ ಅಬ್ಬರಿಸಿದ್ದಾರೆ. ತೆರೆಯಲ್ಲಿ ಪ್ರೇಕ್ಷಕರನ್ನು ರಂಜಿಸುತ್ತಾರೆ. ಸಿನಿಮಾ ನೋಡಿ ಹೊರಬಂದ ಮೇಲೂ ಸಾತ್ವಿಕ ಪಾತ್ರ ಕಾಡುತ್ತದೆ. ಉಳಿದಂತೆ ಪವನ್, ನಂದಗೋಪಾಲ್ ಹೀಗೆ ಎಲ್ಲರೂ ಮೆಚ್ಚುವ ಅಭಿನಯ ತೋರಿದ್ದಾರೆ. ಸಿನಿಮಾದ ಹಿನ್ನೆಲೆ ಸಂಗೀತಕ್ಕೆ ಇನ್ನೂ ಒಂದಷ್ಟು ಒತ್ತು ನೀಡಿದ್ದರೆ ಚೆನ್ನಾಗಿರುತ್ತಿತ್ತು ಎನ್ನಿಸುತ್ತದೆ. ಒಟ್ಟಾರೆ ಕಪಟಿ ಎಲ್ಲರೂ ನೋಡಲೇಬೇಕಾದ ಸಿನಿಮಾವಾಗಿದೆ.

ಚಿತ್ರ: ಕಪಟಿ
ನಿರ್ದೇಶನ : ಚೇತನ್ ಮತ್ತು ರವಿಕಿರಣ್
ನಿರ್ಮಾಣ: ದಯಾಳ್ ಪದ್ಮನಾಭ್
ತಾರಾಗಣ : ಸುಕೃತಾ ವಾಗ್ಲೆ, ದೇವ್ ದೇವಯ್ಯ, ಸಾತ್ವಿಕ್ ಮುಂತಾದವರು
ರೇಟಿಂಗ್ : ★★★½

ಪ್ರೀತಿಯಲ್ಲಿ ಕಾಡುವ ಸವಾಲು

ಚಿತ್ರ : ಸೂರಿ ಲವ್ಸ್ ಸಂಧ್ಯಾ
ನಿರ್ದೇಶನ : ಯಾದವ್ ರಾಜ್
ನಿರ್ಮಾಣ : ಕೆ.ಟಿ.ಮಂಜುನಾಥ್
ತಾರಾಗಣ : ಅಭಿಮನ್ಯು ಕಾಶಿನಾಥ್, ಅಪೂರ್ವಾ, ಪ್ರತಾಪ್, ಜಯರಾಮ್ ಮುಂತಾದವರು
ರೇಟಿಗ್ : ★★★

ಶ್ರೀಮಂತ ಹುಡುಗಿಯನ್ನು ಬಡ ಹುಡುಗ ಪ್ರೀತಿಸುವುದು ಅದಕ್ಕೆ ಒಂದಷ್ಟು ವಿರೋಧ ವ್ಯಕ್ತವಾಗುವುದು, ಇಂತಹ ಕಥೆಯ ಹಲವು ಸಿನಿಮಾಗಳು ತೆರೆಗೆ ಬಂದಿವೆ. ಸೂರಿ ಲವ್ಸ್ ಸಂಧ್ಯಾ ಅಂತಹದ್ದೇ ಕಥೆಯನ್ನು ಒಳಗೊಂಡಿದ್ದರೂ ನಿರೂಪಣೆ ಹೊಸತಾಗಿದೆ. ಸಿನಿಮಾದ ಶೀರ್ಷಿಕೆ ಕೇಳಿದಾಕ್ಷಣವೇ ಇದು ಲವ್ ಸ್ಟೋರಿಯ ಸಿನಿಮಾ ಎಂಬುದು ಖಚಿತವಾಗುತ್ತದೆ. ಆತ ಸೂರಿ ಬಡವನಾದರೂ ಅದ್ಭುತ ಚಿತ್ರ ಕಲಾವಿದ. ನಾಯಕಿ ಸಂಧ್ಯಾ ದೈವ ಭಕ್ತೆ. ಶಿವನೆ ಆಕೆಯ ಆರಾಧ್ಯ ದೈವ, ಆಕಸ್ಮಿಕವಾಗಿ ಭೇಟಿಯಾಗುವ ಇಬ್ಬರ ನಡುವೆ ಪ್ರೀತಿ ಮೂಡುತ್ತದೆ. ಬಳಿಕ ಅದು ಗಾಢವಾಗುತ್ತದೆ. ಸಂಧ್ಯಾಳ ಅಣ್ಣ ಈ ಇಬ್ಬರ ಪೀತಿಗೆ ಅಡ್ಡ ಬಂದಾಗ, ಇಬ್ಬರು ಬೇರೆ ಊರಿಗೆ ಹೋಗಿ ಮದುವೆಯಾಗುವ ನಿರ್ಧಾರ ಮಾಡುತ್ತಾರೆ. ಅಲ್ಲಿಯೂ ಇವರ ಪ್ರೀತಿಗೆ ತೊಂದರೆಗಳು ಎದುರಾದಾಗ ಸೂರಿ ಅದನ್ನು ಹೇಗೆ ಎದಿಸಿರಿಸುತ್ತಾನೆ, ಬಯಸಿದ ಹುಡುಗಿಯನ್ನೇ ಕೈಹಿಡಿಯುತ್ತಾನಾ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಇಲ್ಲಿ ಲವ್ ಸ್ಟೋರಿಯ ಜತೆಗೆ ಆ್ಯಕ್ಷನ್ ಕೂಡ ಬೆರೆತಿದೆ. ಸದಾ ಸೀದಾ ಪ್ರೇಮಕಥೆಗೆ ಕಮರ್ಷಿಯಲ್ ಅಂಶಗಳನ್ನು ಬೆರೆಸಿ ಅದನ್ನು ತೆರೆಯಲ್ಲಿ ಕಟ್ಟಿಕೊಡುವಲ್ಲಿ ನಿರ್ದೇಶಕ ಯಾದವ್ ರಾಜ್ ಯಶಸ್ವಿಯಾಗಿದ್ದಾರೆ.

ಅಭಿಮನ್ಯು ಕಾಶಿನಾಥ್ ಈ ಹಿಂದಿನ ಸಿನಿಮಾಗಳಿಗಿಂತಲೂ ಇಲ್ಲಿ ಅದ್ಭುತವಾಗಿ ನಟಿಸಿದ್ದಾರೆ, ಪ್ರಾಮಾಣಿಕ ಪ್ರೇಮಿಯ ಜತೆಗೆ ಆ್ಯಕ್ಷನ್ ಹೀರೊ ಆಗಿ ಮಿಂಚಿದ್ದಾರೆ. ಅಪೂರ್ವಾ ತಮ್ಮ ಪಾತ್ರಕ್ಕೆ ಜೀವತುಂಬಿ ನಟಿಸಿದ್ದಾರೆ. ಪ್ರತಾಪ್ ನಾರಾಯಣ್ ಖಳನ ಪಾತ್ರಕ್ಕೆ ತಕ್ಕಂತೆ ಹೊಂದಿಕೊಂಡಿದ್ದಾರೆ. ಪ್ರದೀಪ್, ಜಯರಾಮ್ ಎಲ್ಲರೂ ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಕಥೆಯ ನಿರೂಪಣೆ ಏನೋ ಚೆನ್ನಾಗಿದೆ, ಆದರೆ ಸಿನಿಮಾ ಇನ್ನೊಂದಷ್ಟು ವೇಗ ಪಡೆದುಕೊಂಡಿದ್ದಾರೆ ಚೆನ್ನಾಗಿರುತ್ತಿತ್ತು ಎನ್ನಿಸುತ್ತದೆ.

ಬದುಕಿಗೆ ಸಿಕ್ಕ ದೊಡ್ಡ ತಿರುವು

ಚಿತ್ರ: ಇಂಟರ್ವಲ್
ನಿರ್ದೇಶನ: ಭರತ್ ವರ್ಷ
ನಿರ್ಮಾಣ: ಭರತ ವರ್ಷ ಪಿಕ್ಚರ್ಸ್
ತಾರಾಗಣ: ಶಶಿರಾಜ್, ಪ್ರಜ್ವಲ್ ಕುಮಾರ್ ಗೌಡ, ಸುಕಿ, ಚರಿತ್ರಾ ರಾವ್, ಸಹನಾ ಆರಾಧ್ಯ ಮುಂತಾದವರು
ರೇಟಿಂಗ್ : ★★★

ಬಹುತೇಕರಿಗೆ ಹಳ್ಳಿಯಿಂದ ಪಟ್ಟಣಕ್ಕೆ ಹೋಗಿ ಒಳ್ಳೆಯ ಜೀವನ ಕಟ್ಟಿಕೊಳ್ಳಬೇಕು ಎಂಬ ಆಸೆಯಿರುತ್ತದೆ. ಅಂತೆಯೇ ಎಷ್ಟು ಜನ ಇದರಲ್ಲಿ ಯಶಸ್ವಿಯಾಗುತ್ತಾರೆ ಎಂಬುದು ಅವರ ಶ್ರಮದ ಮೇಲೆ ನಿಂತಿರುತ್ತದೆ. ಇಲ್ಲಿ ಮೂವರು ಹಳ್ಳಿ ಹುಡುಗರು, ಓದು ಮುಗಿಸಿದರೂ ಜವಾಬ್ದಾರಿ ಅರಿಯದೆ ಊರೂರು ಅಲೆದುಕೊಂಡಿರುತ್ತಾರೆ. ಹೀಗಿರುವಾಗಲೇ ಈ ಯುವಕರ ಬಾಳಲ್ಲಿ ತಿರುವುದು ಬರುತ್ತದೆ, ಅದರಿಂದ ಅವರ ಜೀವನವೇ ಬದಲಾಗುತ್ತದೆ. ಅಷ್ಟಕ್ಕೂ ಆ ಬ್ರೇಕ್ ಏನು ಎಂಬುದದೇ ಚಿತ್ರದ ಸಸ್ಪೆನ್ಸ್, ಅದನ್ನು ತೆರೆಯಲ್ಲಿಯೇ ನೋಡಬೇಕು. ಸಿನಿಮಾದಲ್ಲಿ ಇಂಟರ್‌ವೆಲ್ ಇದ್ದ ಹಾಗೆ ಎಲ್ಲರ ಬಾಳಲ್ಲಿಯೂ ಒಂದು ಇಂಟರ್‌ವೆಲ್ ಇರುತ್ತದೆ. ಅದರಿಂದ ಬದುಕೇ ಬದಲಾಗಬಹುದು. ಸಿಕ್ಕ ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂಬುದನ್ನು ಇಲ್ಲಿ ಮನಮುಟ್ಟುವಂತೆ ಹೇಳಿದ್ದಾರೆ ನಿರ್ದೇಶಕ ಭರತ್ ವರ್ಷ. ಸಾಮಾನ್ಯವಾಗಿ ಇದು ಎಲ್ಲರ ಬಾಳಲ್ಲಿಯೂ ನಡೆಯುವುದರಿಂದ ಸಿನಿಮಾದ ಕಥೆ ಬಹು ಬೇಗ ಎಲ್ಲರಿಗೂ ಕನೆಕ್ಟ್ ಆಗುತ್ತದೆ. ಇಲ್ಲಿ ಮನರಂಜನೆಯೇ ಮುಖ್ಯವಾಗಿದ್ದು ಡಬ್ಬಲ್ ಮೀನಿಂಗ್ ಡೈಲಾಗ್‌ಗಳು ನಗುವಿನ ಅಲೆಯಲ್ಲಿ ತೇಲುವಂತೆ ಮಾಡುತ್ತವೆ. ಶಶಿರಾಜ್, ಪ್ರಜ್ವಲ್ ಕುಮಾರ್ ಗೌಡ, ಸುಕಿ ಮೂವರು ಪ್ರಮುಖ ಪಾತ್ರದಲ್ಲಿ ನಟಿಸಿ ಮನಗೆದ್ದಿದ್ದಾರೆ. ಚರಿತ್ರಾ ರಾವ್, ಸಹನಾ ಆರಾಧ್ಯ ನಾಯಕಿಯರಾಗಿ ಬಣ್ಣಹಚ್ಚಿದ್ದು ಮನಗೆಲ್ಲುತ್ತಾರೆ. ಒಟ್ಟಾರೆ ನಮ್ಮ ಜೀವನದಲ್ಲಿಯೂ ಹೇಗೆ ತಿರುವು ಬರಬಹುದು ಎಂಬುದನ್ನು ತಿಳಿಯಲು ಇಂಟರ್‌ವೆಲ್ ಸಿನಿಮಾ ನೋಡಬೇಕು.

ವಿರಾಮ
ಓಡುವ ಲೋಕಕ್ಕೆ ಓದುವ ನಿಲ್ದಾಣ
ವಿಶ್ವವಾಣಿ
09.03.2025
ಭಾನುವಾರ

ಅಂಜನಾದ್ರಿಯ ಸುತ್ತಮುತ್ತಲೂ ಇರುವ ಕಲ್ಲುಗಳು, ಹಂಪೆಯ ಐತಿಹಾಸಿಕ ಸ್ಮಾರಕಗಳು, ಅಲ್ಲಿನ ಒಣ ವಾತಾವರಣದಲ್ಲೂ ಬೆಳೆದ ಕಾಡು ಇವೆಲ್ಲವನ್ನೂ ನೋಡಲು ವಿದೇಶಿ ಪ್ರವಾಸಿಗರು ಧಾವಿಸಿ ಬರುತ್ತಾರೆ; ಆ ಪ್ರದೇಶದ ವಿಶೇಷವನ್ನು, ವೈಶಿಷ್ಟ್ಯವನ್ನು ನೋಡಿ ಅನುಭವಿಸಲು ಅವರು ತೋರುವಷ್ಟು ಉತ್ಸುಕತೆಯನ್ನು ನಮ್ಮ ದೇಶದ ಪ್ರವಾಸಿಗರು ತೋರುವುದಿಲ್ಲ ಎಂಬುದು ಒಂದು ವಾಸ್ತವ. ರೋಮಿನ ಕೊಲ್ಲೋಸಿಯಮ್‌ನ್ನು ನೋಡುವಷ್ಟು ಉತ್ಸುಕತೆಯಿಂದ ಹಂಪೆಯ ಪರಿಸರವನ್ನು ನೋಡುವ ಅಗತ್ಯವಿದೆ! ಇಂದಿಗೂ ತನ್ನ ಮಡಿಲಲ್ಲಿ ಹಲವು ವಿಸ್ಮಯಗಳನ್ನು, ವೈಚಿತ್ರ್ಯಗಳನ್ನು ಮತ್ತು ಮಾಹಿತಿಯನ್ನು ಹುದುಗಿಟ್ಟುಕೊಂಡಿರುವ ಹಂಪೆಯ ಪರಿಸರದಲ್ಲಿ ಓಡಾಡಿದ, ಅಲ್ಲಿನ ಕರಡಿಧಾಮದಲ್ಲಿ ಸುತ್ತಾಡಿದ ಒಂದು ವಿಶಿಷ್ಟ ಅನುಭವ ಕಥನ ಇಲ್ಲಿದೆ.



ಹಂಪೆ ಕೇವಲ ಗತವೈಭವದ ಕಥೆಯಲ್ಲ!

» ಉಮಾ ರಾಜಣ್ಣ

ನಾವು ಇತ್ತೀಚೆಗೆ ಕೈಗೊಂಡ ಪ್ರವಾಸಗಳಲ್ಲಿ ಹಂಪಿಯ ಪ್ರವಾಸವೊಂದು ಅಪೂರ್ವ ಅನುಭವ. ಸುಮಾರು ಇಪ್ಪತ್ತು ವರುಷಗಳ ಹಿಂದೆಯೇ ಹಂಪೆಯನ್ನೊಮ್ಮೆ ನೋಡಿದ್ದರೂ ಆಗಿನ್ನೂ ನಾವೆಲ್ಲರೂ ಕೆಲಸದಲ್ಲಿದ್ದುದರಿಂದ ಅದೊಂದು ಅವಸರದ ಅನುಭವವಾಗಿ ಕಂಡುಬಂದಿತ್ತು. ಆದರೂ ಅಲ್ಲಿಗೆ ಯೂರೋಪಿನಿಂದ ರೋಮಿನ ಕೊಲ್ಲೋಸಿಯಮ್‌ನನ್ನು ನೋಡುವಷ್ಟೇ ಉತ್ಸುಕತೆಯಿಂದ ಧಾವಿಸಿ ಬರುತ್ತಿದ್ದ ಪಾಶ್ಚಾತ್ಯ ಪ್ರಯಾಣಿಕರ ಸಂಖ್ಯೆಯ ಅಗಾಧತೆಯನ್ನು ಕಂಡು ಕರ್ನಾಟಕದಲ್ಲಿಯೇ ಹುಟ್ಟಿ ಬೆಳೆದ ನಾವೇ ಇದನ್ನು ಕೂಲಂಕುಷವಾಗಿ ನೋಡಲಿಕ್ಕಾಗಿಲ್ಲವಲ್ಲಾ ಎಂಬ ಯೋಚನೆಯೂ ಆಗಾಗ ಕಾಡುತ್ತಿತ್ತು. ನೀವೇನೇ ಹೇಳಿ, ನಿವೃತ್ತಿಯ ವಿರಾಮವು ನೀಡುವ ಪ್ರವಾಸಗಳ ಅನುಭವವೇ ಬೇರೆ!

ನಮ್ಮ ರಾಜ್ಯದೊಳಗಣ ಪ್ರವಾಸಗಳಿಗಂತೂ ನಾವು ಇತ್ತೀಚೆಗೆ ನೆಚ್ಚಿಕೊಂಡಿರುವುದೆಂದರೆ ಜಂಗಲ್ ಲಾಡ್ಜಸ್ ಅವರ ಆತಿಥ್ಯ; ಮುಖ್ಯವಾಗಿ ಅವು ಇರುವುದು ಪರಿಸರಸ್ನೇಹಿ ಪ್ರವಾಸ ತಾಣಗಳಾಗಿರುವುದರಿಂದ. ಹಲವೆಡೆಗಳಲ್ಲಿ ವಿಶೇಷವಾಗಿ ಯುವಜನತೆಗೆ ಬೇಕಾಗಿರುವಂತಹ ಸಾಹಸಮಯ ಚಟುವಟಿಕೆಗಳನ್ನು ಒದಗಿಸುವುದರಿಂದ, ತುಸು ದುಬಾರಿಯೆಂದೆನಿಸಿದರೂ ಬಹಳಷ್ಟು ಕಡೆ ಮಧ್ಯಮವರ್ಗದ ಜನತೆಯ ಕೈಗೆಟಕುವಂತೆಯೇ ಅವುಗಳನ್ನು ನಿರ್ಮಿಸಿರುವುದು ಕರ್ನಾಟಕ ಸರ್ಕಾರದ ಹೆಗ್ಗಳಿಕೆಯೆಂದೇ ಹೇಳಬಹುದು. ಬೆಳಗಿನ ಕಾಫಿಯಿಂದ ಹಿಡಿದು ಇಡೀ ದಿನದ ರುಚಿಕರ ಭೋಜನ ವ್ಯವಸ್ಥೆಯನ್ನು ಒಳಗೊಂಡ ಅವು ನೀಡುವ ಮತ್ತೊಂದು ಮುಖ್ಯ ಸೇವೆಯೆಂದರೆ ಅವರ ವಾಹನಗಳಲ್ಲಿಯೇ ನೀಡುವ, ಸುರಕ್ಷಿತ ಸಫಾರಿ ಸೇವೆಗಳು. ಪರಿಸರ ಕಾಳಜಿಯ ಬಗ್ಗೆ, ಆಯಾ ಭಾಗಗಳಲ್ಲಿ ಕಂಡುಬರುವ ಪ್ರಾಣಿಪಕ್ಷಿಗಳ ಬಗ್ಗೆ, ತರಬೇತಿ ಪಡೆದ ಸಿಬ್ಬಂದಿ ವರ್ಗವು ನಮ್ಮನ್ನು ಜೊತೆಗೊಯ್ದು ನೀಡುವ ಮಾಹಿತಿಗಳು ಪ್ರವಾಸವನ್ನು ಪರಿಪೂರ್ಣವೆನ್ನಿಸುವಂತೆ ಮಾಡಿಬಿಡುವವು.

ಜಂಗಲ್ ಲಾಡ್ಜ್ ಆತಿಥ್ಯ

ಹಿಂದೆ ನಾವು ಹೋಗಿದ್ದಾಗ ವಿಜಯನಗರ ಸಾಮ್ರಾಜ್ಯದ ಗತವೈಭವವನ್ನಷ್ಟೇ ನೋಡಿದ್ದೆವು. ಹದಿನಾಲ್ಕನೆಯ ಶತಮಾನದ ಮೊದಲರ್ಧದಿಂದ ಆರಂಭವಾಗಿ, ಹದಿನೇಳನೆಯ ಶತಮಾನದ ಮಧ್ಯದಲ್ಲಿ ಅವಸಾನಗೊಂಡ ಚಕ್ರಾಧಿಪತ್ಯದ ಯಶಸ್ಸಿನ, ವೈಭೋಗದ ಕತೆಗಳನ್ನು ಕೇಳಿ ಬೆರಗಿಗೊಳಗಾಗಿದ್ದೆವು. ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಉತ್ತುಂಗವನ್ನು ಕಂಡು ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಗೋವಾ ಮತ್ತು ತೆಲಂಗಾಣ ಹಾಗೂ ಮಹಾರಾಷ್ಟ್ರದ ಕೆಲವು ಭಾಗಗಳಿಗೂ ವಿಸ್ತರಗೊಂಡದ್ದಲ್ಲದೆ ಸಾಂಸ್ಕೃತಿಕವಾಗಿಯೂ, ಆರ್ಥಿಕವಾಗಿಯೂ ಸಮೃದ್ಧಿಯನ್ನು ಕಂಡ ಆ ಕಾಲದ ಭಗ್ನಾವಶೇಷಗಳನ್ನು ಬೆಕ್ಕಸಬೆರಗಾಗಿ ನೋಡಿದ್ದೆವು. ಆಗಲೂ ವಿಶೇಷವನ್ನು ವಿವರಿಸಿ ಹೇಳಲು ಗೈಡ್‌ಗಳು ಸಿಗುತ್ತಿದ್ದರೂ, ಎಲ್ಲವನ್ನೂ ನೋಡಲು ನಮ್ಮದೇ ವಾಹನದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತಿದ್ದುದು ಒಂದು ದೊಡ್ಡ ಅಡಚಣೆಯಂತೆ ಕಂಡುಬಂದಿತ್ತು. ಈ ಬಾರಿ ಜಂಗಲ್ ಲಾಡ್ಜ್ ನಲ್ಲಿ ಎರಡು ದಿನ ಉಳಿದದ್ದು ಬಹಳಷ್ಟು ಅನುಕೂಲವಾಯಿತು. ಒಂದು ಇಡೀ ದಿನ ಹಂಪಿಯ ವೈಭವವನ್ನು ಅವರ ವ್ಯಾನ್ ನಲ್ಲಿಯೇ ನೋಡಲು ಅವಕಾಶ ಮಾಡಿಕೊಟ್ಟು ಒಬ್ಬ ಒಳ್ಳೆಯ ಗೈಡ್ ಅನ್ನು ಕೂಡ ಒದಗಿಸಿಕೊಟ್ಟದ್ದು ನಮ್ಮ ಪ್ರವಾಸದ ಅನುಭವ ಪರಿಪೂರ್ಣವೆನ್ನಿಸಲು ಸಾಧ್ಯವಾಯಿತು. ಜಂಗಲ್ ಲಾಡ್ಜ್ ಆತಿಥ್ಯ ನಿಜಕ್ಕೂ ಹಿಡಿಸಿತು.

ಹಂಪಿಯಲ್ಲಿ ನಾವು ನೋಡಿರದ ಇನ್ನೊಂದು ವಿಶೇಷ ಭಾಗವಿದೆಯೆಂದು ಅರಿವಿಗೆ ಬಂದದ್ದು ಈ ಬಾರಿಯ ಪ್ರವಾಸದಲ್ಲಿ - ಮರುದಿನದ ಸಫಾರಿಯಲ್ಲಿ; ಹನುಮಂತನ ಜನ್ಮಸ್ಥಳ ಎಂಬ ಪ್ರತೀತಿಯಿರುವ ಆನೆಗುಂದಿಗೆ ಸೂರ್ಯೋದಯವನ್ನು ನೋಡಲೆಂದು ಹೋದಾಗ ಕಂಡುಬಂದದ್ದು. ಹಿಂದಿನ ದಿನವಷ್ಟೇ ಮನುಷ್ಯ ತಾನು ವಿಧವಿಧವಾಗಿ ಕೆತ್ತಿ, ಕಟೆದ ದೇವಾಲಯಗಳನ್ನು, ಭವ್ಯವಾದ ಗೋಪುರಗಳನ್ನು, ಕಲ್ಲಿನ ರಥವನ್ನು, ವಿಧವಿಧವಾದ ನಾದಗಳನ್ನು ಹೊರಡಿಸುವಷ್ಟು ಸೂಕ್ಷ್ಮತೆಯಿಂದ ನಿರ್ಮಿಸಿದ ಕಂಬಗಳನ್ನು, ಸಮಯವನ್ನು ತೋರಿಸುವ ನೆರಳುಗಳನ್ನು, ಮಂತ್ರಮುಗ್ಧರಾಗಿ ನೋಡಿ ಅವನ ಅಂದಿನ ಕೈಚಳಕಕ್ಕೆ, ತಾಂತ್ರಿಕ ಜ್ಞಾನಕ್ಕೆ ನಾವು ಮಾರುಹೋಗಿದ್ದೆವು. ಚಿನ್ನ ಬೆಳ್ಳಿಗಳನ್ನು, ವಜ್ರ ವೈಡೂರ್ಯಗಳನ್ನು ತೆರೆದ ಮಾರುಕಟ್ಟೆಯಲ್ಲಿ ಮಾರುತ್ತಿದ್ದ ಸಾಮ್ರಾಜ್ಯದ ಸಮೃದ್ಧತೆಯ ಕತೆಯನ್ನು ಸಾರಿ ಹೇಳುತ್ತಿದ್ದ ಅಂದಿನ ಮಾರುಕಟ್ಟೆಗಳ ಅವಶೇಷಗಳನ್ನು, ಟರ್ಕಿಯ ಸುಲ್ತಾನರ ಅಕ್ರಮಣವನ್ನು ಸಮರ್ಥವಾಗಿ ಎದುರಿಸಿದ ಕತೆಗಳನ್ನು, ಮುಂದೆ ಪೋರ್ಚುಗೀಸರ ಜೊತೆಯಲ್ಲಿ ನಡೆದ ವ್ಯಾಪಾರ ವಹಿವಾಟುಗಳ ಕತೆಗಳನ್ನು, ಕೇಳಿ ತಿಳಿದಿದ್ದೆವು.

ಪ್ರಕೃತಿ ಪಡೆದಿಟ್ಟ ಕಲಾಕೃತಿಗಳು

ಇಂದು, ಪ್ರಕೃತಿಯೇ ತಾನು ಕೋಡುಗಲ್ಲುಗಳನ್ನು, ಬಂಡೆಗಳನ್ನು, ಒರೆಕೋರೆಯಾಗಿ, ಚಿತ್ರವಿಚಿತ್ರವಾಗಿ, ಗುರುತ್ವಾಕರ್ಷಣೆಯ ಸಿದ್ಧಾಂತಕ್ಕೇ ಸವಾಲೊಡ್ಡುವಂತೆ ಶತಮಾನಗಳು ಉರುಳಿದರೂ ಬೀಳದಂತೆ ನಿಲ್ಲಿಸಿ ಜೋಡಿಸಿದ್ದ ವಿಶಿಷ್ಟ ಪರಿಯನ್ನು ನೋಡಿ ದಿಗ್ಭ್ರಮೆಗೊಳಗಾದೆವು. ರಾಕ್ ಕ್ಲೈಂಬಿಂಗ್ ಇಂದು ಆನೆಗುಂದಿಯಲ್ಲಿ ಒಂದು ಅಂತಾರಾಷ್ಟ್ರೀಯ ಕ್ರೀಡೆಯಾಗಿ ಹೊರಹೊಮ್ಮಲು ಈ ಕಲ್ಲುಗಳ ವಿಚಿತ್ರ ಜೋಡಣೆಯೇ ಕಾರಣ. ಹನುಮಂತನ ಬಾಲ್ಯದ ತುಂಟಾಟಗಳ ಫಲ ಈ ಜೋಡಣೆ ಎನ್ನುವುದು ಪೌರಾಣಿಕವಾಗಿ ಕೆಲವರ ಅಭಿಮತವಾದರೆ ವಾಲಿ ಸುಗ್ರೀವರ ನಡುವಣ ನಿರಂತರ ಕಾಳಗ ಇದಕ್ಕೆ ಕಾರಣ ಎಂದು ಮತ್ತೆ ಕೆಲವರ ಅಭಿಮತ.

ಶತಮಾನಗಳ ಹಿಂದೆ ನಡೆದಿರಬಹುದಾದ ಟೆಕ್ಟೋನಿಕ್ ಭೂಕಂಪವು ಕಾರಣವಿರಬಹುದು ಎನ್ನುವುದು ಭೂವಿಜ್ಞಾನಿಗಳ ಅಭಿಮತ.

ಅವಶೇಷಗಳ ಆಕರವಾದ ಕಮಲಾಪುರವನ್ನು ದಾಟಿ ಪಶ್ಚಿಮಕ್ಕೆ ಹೊರಟರೆ ದರೋಜಿ ಕರಡಿ ಧಾಮವಿರುವುದು. ಮುಂದಮುಂದಕ್ಕೆ ಸಾಗುತ್ತಾ ವಿಪುಲವಾಗಿ ಹರಡಿಕೊಂಡಿದ್ದ ದೊಡ್ಡ ದೊಡ್ಡ ಬಂಡೆಗಳೆಲ್ಲಾ ಕಲ್ಲಿನ ಬೆಟ್ಟಗಳಾಗಿ ಮಾರ್ಪಡತೊಡಗಿದವು. ದಕ್ಷಿಣದಲ್ಲಿ ಕಾಣುತ್ತಿದ್ದ ಸಂಡೂರಿನ ಬೆಟ್ಟಗಳ ಆಸರೆಯಿಂದಾಗಿ ಕಾಡು ಕೂಡಾ ದಟ್ಟವಾಗತೊಡಗಿತು. ಅಂದಿನ ಕಾಲದಲ್ಲಿ ಹಕ್ಕ-ಬುಕ್ಕರನ್ನು ಆಕರ್ಷಿಸಿದ ಗಾಢಪ್ರಕೃತಿಯ ನಿಜಸ್ವರೂಪವು ನಮ್ಮ ಕಣ್ಮುಂದೆ ಪ್ರಕಟಗೊಂಡಿತು.

ದರೋಜಿ ಕರಡಿಧಾಮ

ದರೋಜಿ ಸ್ಲಾತ್ ಬೇರ್ ಸ್ಯಾಂಚುಯರಿ ಯನ್ನು ಏಷಿಯಾ ಖಂಡದಲ್ಲಿನ ಏಕೈಕ ಸ್ಲಾತ್ ಬೇರ್ ಸ್ಯಾಂಚುಯರಿಯನ್ನಾಗಿ 1994ರಲ್ಲಿ ಘೋಷಿಸಲಾಯಿತು. ಹಗಲಿನ ಬಹಳಷ್ಟು ಸಮಯವನ್ನು ನಿದ್ದೆ ಮಾಡುತ್ತಲೇ ಕಳೆಯುವುದರಿಂದ ಆ ಕಪ್ಪು ಕರಡಿಯನ್ನು ಸ್ಲಾತ್ ಬೇರ್ ಅಥವಾ ಸೋಮಾರಿ ಕರಡಿ ಎಂದು ಕರೆಯಲಾಗುತ್ತದೆ. ಈ ಭಾಗದಲ್ಲಿನ ಕಲ್ಲು ಗುಡ್ಡಗಳಲ್ಲಿ ಮೊದಲೆಲ್ಲಾ ಹೇರಳವಾಗಿ ಕಂಡುಬರುತ್ತಿದ್ದ ಅವನ್ನು ಆ ಪ್ರದೇಶದ ಆದಿವಾಸಿ ಜನರು ಪಳಗಿಸಿ ಪ್ರದರ್ಶನ ನೀಡುವ ಪ್ರಾಣಿಗಳಾಗಿ ಹಳ್ಳಿಹಳ್ಳಿಗೂ ಭೇಟಿ ನೀಡುತ್ತಾ ಹಣ ಸಂಪಾದಿಸುತ್ತಿದ್ದುದನ್ನು ನೀವು ಮೊದಲೆಲ್ಲಾ ನೋಡಿರಬಹುದು. ಈ ಕಾರಣಕ್ಕಾಗಿ ಮತ್ತು ಅದರ ದೇಹದ ಅನೇಕ ಭಾಗಗಳ ಔಷಧೀಯ ಗುಣಗಳಿಗಾಗಿ ಅವನ್ನು ಬೇಟೆಯಾಡುತ್ತಿದ್ದುದರಿಂದ ಅವುಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿರುವುದು. ಏಷ್ಯಾದ ಅನೇಕ ಭಾಗಗಳಲ್ಲಿ ಕಂಡುಬರುವ ಈ ಕರಡಿಯು ಈಗ ವಿನಾಶದ ಹಾದಿಯಲ್ಲಿದೆ.

ಕರಡಿಗಾಗಿ ಬೆಲ್ಲದ ಪಾಕ

ಪ್ರಸ್ತುತ ದರೋಜಿ ಕರಡಿಧಾಮವು ಸುಮಾರು 83 ಚದರ ಮೈಲಿಯವರೆಗೂ ಹರಡಿಕೊಂಡಿದೆ. ಕರಡಿಯು ನಿಶಾಚರಿಯಾಗಿರುವುದರಿಂದ ಸಂಜೆಯ ಹೊತ್ತಿಗೆ ಜಂಗಲ್ ಲಾಡ್ಜ್ ನಿಂದ ಸಫಾರಿಯನ್ನು ಒದಗಿಸಲಾಗುತ್ತದೆ. ಕಲ್ಲುಗುಡ್ಡದ ಆ ಪ್ರದೇಶದಲ್ಲಿ, ಕುರುಚಲು ಕಾಡಿನ ನಡುವೆ, ಬಹುದೂರದಲ್ಲಿ ಒಂದು ವಾಚ್ ಟವರನ್ನು ಅವುಗಳ ವೀಕ್ಷಣೆಗೆಂದೇ ನಿರ್ಮಿಸಲಾಗಿದೆ. ಅಲ್ಲಿಂದ ಸುಮಾರು ದೂರದಲ್ಲಿರುವ ಗುಡ್ಡಗಳ ಮೇಲಿರುವ ದೊಡ್ಡ ಬಂಡೆಗಳ ಮೇಲೆ ಅರಣ್ಯ ಇಲಾಖೆಯ ಸಿಬ್ಬಂದಿಯವರು ಒಂದಿಷ್ಟು ಜೇನಿನ ಹದಕ್ಕೆ ಕಾಯಿಸಿದ ಬೆಲ್ಲದ ಪಾಕವನ್ನು ಸಂಜೆಯ ಹೊತ್ತಿಗೆ ಅಲ್ಲಲ್ಲಿ, ಬಂಡೆಗಳ ಮೇಲೆ ಚೆಲ್ಲುತ್ತಾರೆ. ಅದರ ವಾಸನೆ ಹಿಡಿದು ಕರಡಿಗಳು ಒಂದೊಂದಾಗಿ ಬರತೊಡಗುತ್ತವೆ. ನಮ್ಮ ಅದೃಷ್ಟವೆಂದರೆ ನಾವು ಹೋದ ದಿನ ಐದು ಕರಡಿಗಳು ಅಲ್ಲಿಗೆ ಬಂದು ನಮಗೆ ಸುಮಾರು ಇಪ್ಪತ್ತು ನಿಮಿಷಗಳಷ್ಟು ದರ್ಶನ ನೀಡಿದ್ದಲ್ಲದೆ ನಾವು ಹಿಂದಿರುಗಿ ಬರುತ್ತಿದ್ದ ದಾರಿಯಲ್ಲಿ ಬೆಲ್ಲದ ಪಾಕದ ವಾಸನೆ ಹಿಡಿದು ಹೊರಟಿದ್ದ ಎರಡು ಕರಡಿಗಳು ನಡುದಾರಿಯಲ್ಲಿ ಎದುರಾದದ್ದು! ಸಂಜೆಯ ಇಳಿಬಿಸಿಲಲ್ಲಿ ಮಿರಿಮಿರಿ ಮಿಂಚುತ್ತಿದ್ದ ಕಪ್ಪು ಕೂದಲಿನ, ದಷ್ಟ ಪುಷ್ಟವಾಗಿದ್ದ ಅವನ್ನು ಅಷ್ಟು ಹತ್ತಿರದಿಂದ ನೋಡಿದ್ದು ಒಂದು ರೋಚಕ ಅನುಭವ!

ನನ್ನನ್ನು ಕಾಡುತ್ತಿದ್ದ ಒಂದು ಅನುಮಾನವನ್ನು ಸಫಾರಿ ವ್ಯಾನ್ ನಲ್ಲಿ ನಮ್ಮನ್ನು ಕೊಂಡೊಯ್ದಿದ್ದ ಸ್ನೇಹಪರ ಸ್ವಭಾವದ ಡ್ರೈವರ್ ವೆಂಕಟೇಶ್ ಅವರನ್ನು ಕೇಳಿಯೇಬಿಟ್ಟೆ: 'ಹೀಗೆಲ್ಲಾ ಅಸ್ವಾಭಾವಿಕವಾಗಿ ಆಹಾರ ನೀಡುವುದು ಪ್ರಾಣಿಗಳ ಸ್ವಾಭಾವಿಕ ಆಹಾರದ ಬೇಟೆಯ ಗುಣಕ್ಕೆ ಅಡ್ಡಿಯಾಗುವುದಿಲ್ಲವೆ?'

ಅದಕ್ಕೆ ಅವರು ನಗುತ್ತಾ 'ಹಾಗೇನೂ ಇಲ್ಲ ಮೇಡಂ, ನಾವು ಕೊಡುವುದು ಇಷ್ಟೇ ಇಷ್ಟು, ಆನೆ ಹೊಟ್ಟೆಗೆ ಆರು ಕಾಸಿನ ಮಜ್ಜಿಗೆಯೇ? ಎನ್ನುತ್ತಾರಲ್ಲಾ ಹಾಗೆ ಅಷ್ಟೇ! ಪ್ರಕೃತಿ ವೀಕ್ಷಣೆಯ ಆಸಕ್ತಿಯಿಂದ ಬಂದ ನಿಮ್ಮಂತಹ ಪ್ರಯಾಣಿಕರು ನಿರಾಶೆಗೊಂಡು ಹಿಂದಿರುಗದಿರಲಿ ಎಂದು ನಾವು ಕಂಡುಕೊಂಡ ಉಪಾಯವಷ್ಟೇ ಇದು! ಇದರಿಂದ ಅದರ ದಿನಚರಿಯಲ್ಲಿ ಯಾವುದೇ ಬದಲಾವಣೆಯಾಗದು' ಎಂದು ವಿವರಿಸಿದಾಗ ನಿರಾಳವಾಯಿತು. ಮುಂದುವರೆಯುತ್ತಾ ಅವರು ಅದು ಅಷ್ಟು ದೊಡ್ಡ ಗಾತ್ರದ ಪ್ರಾಣಿಯಾದರೂ ಸಸ್ಯಾಹಾರ ಅದರ ಮುಖ್ಯ ಆಹಾರವಾಗಿ ಹಣ್ಣು ಹಂಪಲುಗಳು, ಜೇನು, ಹಲಸು, ಹೆಚ್ಚೆಂದರೆ ದೊಡ್ಡ ಗಾತ್ರದ ಇರುವೆ, ಗೊದ್ದಗಳನ್ನು ಅವಲಂಬಿಸಿದೆ ಎಂದಾಗ ಆಶ್ಚರ್ಯವೆನಿಸಿತು!

ಚಿರತೆ ಪ್ಯಾಂಗೋಲಿನ್ ಇತ್ಯಾದಿ

ಆ ಗುಡ್ಡಗಳಲ್ಲಿ ಚಿರತೆಗಳು ಕೂಡ ಸಾಕಷ್ಟು ಸಂಖ್ಯೆಯಲ್ಲಿದ್ದು ಅದು ಕಣ್ಣುತಪ್ಪಿಸಿ ಓಡಾಡುವ ಪ್ರಾಣಿಯಾದುದರಿಂದ ಅದೃಷ್ಟವಿದ್ದರೆ ಅವೂ ಕೂಡ ನಿಮ್ಮ ಕಣ್ಣಿಗೆ ಕಾಣಬಹುದು! ಮತ್ತೂ ಅದೃಷ್ಟವಿದ್ದಲ್ಲಿ ಕಾಡುಹಂದಿಗಳು, ಕಪ್ಪು ಕತ್ತಿನ ಮೊಲಗಳು, ಮುಳ್ಳುಹಂದಿಗಳು, ನರಿಗಳು, ಮತ್ತು ಪ್ಯಾಂಗೋಲಿನ್ ಕೂಡ ಅಲ್ಲಲ್ಲಿ ಕಾಣಸಿಗುವವು. ಸ್ಯಾಂಚುಯರಿಗೆ ಹೋಗುವ ದಾರಿಯಲ್ಲಿಯೇ ಮನುಷ್ಯನಿರ್ಮಿತ ಆಳವಾದ ಚಾನಲ್ ವ್ಯವಸ್ಥೆಯೊಂದು ಕೂಡಾ ಇದ್ದು ಅಲ್ಲಿ ಬಹಳಷ್ಟು ಪ್ರಬೇಧಗಳ ಪಕ್ಷಿಗಳು ಕಂಡುಬರುವುದರಿಂದ ಆ ಭಾಗವು ಪಕ್ಷಿವೀಕ್ಷಕರ ಮೆಚ್ಚಿನ ತಾಣವೂ ಆಗಿದೆ.

ವಿಶೇಷವಾಗಿ ಅಪರೂಪದ ಪಕ್ಷಿಯಾದ ಗೂಬೆಗಳಲ್ಲಿಯೇ ಅತಿ ದೊಡ್ಡ ಗಾತ್ರದ ಗಿಡುಗ ಗೂಬೆ (ಸ್ಪಾಟ್ ಬಿಲ್ಡ್ ಈಗಲ್ ಔಲ್) ಇಲ್ಲಿ ಅವರನ್ನು ಮತ್ತೆ ಮತ್ತೆ ಬರುವಂತೆ ಮಾಡುತ್ತದೆ ಎಂದು ವೆಂಕಟೇಶ್ ವಿವರಿಸುತ್ತಿದ್ದರೆ ಇಂದಿನ ಯುವಜನಾಂಗದಲ್ಲಿ ಅನೇಕರಲ್ಲಿ

ಪ್ರಕೃತಿಯ ಆಕರ್ಷಣೆಗಳ ಬಗೆಗೆ, ಅದರ ರಕ್ಷಣೆಯ ಬಗೆಗೆ, ವಿಶೇಷವಾದ ಆಸಕ್ತಿ ಮೂಡುತ್ತಿರುವುದನ್ನು ಕಂಡು ಕೊಂಚ ನೆಮ್ಮದಿ ಮೂಡಿತು. ಅಲ್ಲಿ ಹೇರಳವಾಗಿ ಕಂಡುಬಂದ ಫ್ರಾಂಕೋಲಿನ್ ಎಂಬ ನೆಲದಲ್ಲಿಯೇ ಗುಂಪುಗುಂಪಾಗಿ ಓಡಿಯಾಡುವ ಪಕ್ಷಿಯೊಂದರ ಜೀವನಶೈಲಿಯ ಬಗ್ಗೆ ವೆಂಕಟೇಶ್ ಉತ್ಸಾಹದಿಂದ ವಿವರಿಸಿ ಹೇಳುತ್ತಿದ್ದರೆ ಜೊತೆಯಲ್ಲಿದ್ದ ನನ್ನ ಗೆಳತಿ 'ನೀವು ಇದರ ಮಾಂಸದ ರುಚಿ ನೋಡಿದ್ದೀರಾ?' ಎಂದು ತಮ್ಮ ನಿತ್ಯದ ಹಾಸ್ಯಮಯ ಧಾಟಿಯಲ್ಲಿ ರೇಗಿಸಿದಾಗ ಅವರು ನೀಡಿದ ಉತ್ತರ ನನ್ನನ್ನು ಚಕಿತಗೊಳಿಸಿತು; 'ಹೌದು ಮೇಡಂ, ಆದಿವಾಸಿ ಗುಂಪಿಗೆ ಸೇರಿದ ನಾವು ಚಿಕ್ಕವರಿದ್ದಾಗ ತಿನ್ನದ ಮಾಂಸವೇ ಇಲ್ಲವೆನ್ನಬೇಕು! ಇದೀಗ, ನಮ್ಮನ್ನೆಲ್ಲಾ ತರಬೇತಿ ನೀಡಿ ಅರಣ್ಯ ಇಲಾಖೆಯವರು ಕೆಲಸಕ್ಕೆ ನೇಮಿಸಿಕೊಂಡ ಮೇಲೆ ಪರಿಸರಕ್ಕೆ ನಾವು ಮಾಡಿದ ಅನ್ಯಾಯವನ್ನು ನೆನೆದು ತಲೆ ತಗ್ಗಿಸುವಂತಾಗುತ್ತದೆ! ಇದು ಕೂಡಾ ಕುತ್ತಿಗೊಳಗಾದ ಪಕ್ಷಿಯೇ ಎಂದು ನೆನೆದರೆ ಮನಸ್ಸಿಗೆ ಹಿಂಸೆಯಾಗುತ್ತದೆ!' ಎಂದು ಪ್ರಾಮಾಣಿಕವಾಗಿ ಪರಿತಪಿಸಿದಾಗ ಅಲ್ಲಿಯವರನ್ನೇ ನೇಮಿಸಿಕೊಂಡು ಅವರಿಗೆ ಬದುಕು ಕಟ್ಟಿಕೊಳ್ಳುವ ದಾರಿಯನ್ನು ಕಲ್ಪಿಸಿ ಜೊತೆಗೆ ಅವರಲ್ಲಿ ಪರಿಸರ ಕಾಳಜಿಯನ್ನೂ ಬೆಳೆಸುವ ಅರಣ್ಯ ಇಲಾಖೆಯ ಇಂದಿನ ಈ ಯೋಜನೆಯ ಬಗ್ಗೆ ಮೆಚ್ಚುಗೆ ಮೂಡಿತು.

ಅಮೂಲ್ಯ ಕಾಡು

ಸ್ವಲ್ಪ ಮುಂದೆ ಬಂದಾಗ ಪಕ್ಕದ ಹಳ್ಳಿಗಳಲ್ಲಿನ ಯಾರೋ ಉರುವಲಿಗಾಗಿ ಬಾಗಿ, ಒಣಗಿದಂತಿದ್ದ ಒಂದು ಮರದ ಕೊಂಬೆಯನ್ನು ಮುರಿಯುತ್ತಿದ್ದುದನ್ನು ಕಂಡ ವೆಂಕಟೇಶ್ ಅವರನ್ನು ತರಾಟೆಗೆ ತೆಗೆದುಕೊಂಡ ರೀತಿಯಲ್ಲಿ ತಮ್ಮ ಜವಾಬ್ದಾರಿಗಳ ಬಗ್ಗೆ ಅರಣ್ಯ ಇಲಾಖೆಯ ಸಿಬ್ಬಂದಿಗಿರುವ ಬದ್ಧತೆಯನ್ನು ಕಂಡು ಮನಸ್ಸು ನಿರಾಳವೆನಿಸಿತು. ಮುಕ್ತವಾಗಿ ಮೆಚ್ಚುಗೆ ಸೂಸಿದ ನಮ್ಮ ಹಿರಿಯ ಗೆಳೆಯರಿಗೆ ಅವರು ಪ್ರಾಮಾಣಿಕವಾದ ಕಾಳಜಿಯಿಂದಲೇ ವಿವರಣೆ ನೀಡಿದರು: ''ಅಲ್ಲವೇ ಮತ್ತೆ ಸರ್! ಮಲೆನಾಡ ಪ್ರದೇಶದಲ್ಲಿ ಐದು ವರುಷಕ್ಕೆ ಬೆಳೆಯಬಹುದಾದ ಮರವನ್ನು, ಈ ಬಂಜರು ಭೂಮಿಯಲ್ಲಿ ಬೆಳೆಸಲು ನಾವು ಹದಿನೈದು ವರುಷಗಳ ಸತತ ಪರಿಶ್ರಮಪಟ್ಟಿರುತ್ತೇವೆ! ಅದನ್ನು ಹೀಗೆ ಕ್ಷಣಮಾತ್ರದಲ್ಲಿ ಕಡಿದುಬಿಡಬಹುದೇ?' ಎಂದಾಗ ಸುತ್ತ ಮುತ್ತಲಿನ ಸಮೃದ್ಧ ಹಸಿರನ್ನು ಕಂಡ ನಮಗೆ ಅರಣ್ಯ ಇಲಾಖೆಯ ಬಗೆಗೆ ಹೃದಯಪೂರ್ವಕ ಮೆಚ್ಚುಗೆಯೂ ಮೂಡಿತು. ಬಹುಷಃ ಕಳೆದ ನೂರಾ ಐವತ್ತು ವರುಷಗಳಲ್ಲಿ ಮನುಷ್ಯ ಮಾಡಿರುವ ಪ್ರಕೃತಿನಾಶ ಹಲವಾರು ಶತಮಾನಗಳಿಂದ ನಡೆದ ನಾಶಕ್ಕೆ ಸರಿಗಟ್ಟುವಂತಿದೆ ಎನ್ನುವುದು ಪರಿಸರತಜ್ಞರ ಅಭಿಪ್ರಾಯ. ಈಗಲಾದರೂ ಸ್ವಲ್ಪಮಟ್ಟಿಗೆ ಎಚ್ಚೆತ್ತುಕೊಂಡು ಅರಣ್ಯ ಇಲಾಖೆಯು ದಿಟ್ಟ ಹೆಜ್ಜೆಗಳನ್ನಿಡುತ್ತಿದೆ ಎನ್ನುವುದು ತಕ್ಷಣಕ್ಕೆ ಭಾಸವಾದರೂ ಹಿಂದೆಯೇ ನಮ್ಮ ರಾಜಕಾರಣಿಗಳ ಎಣೆಯಿಲ್ಲದ ದುರಾಸೆಯನ್ನು ನೆನೆದು ಮನಸ್ಸು ಮುದುಡಿತು. ಆ ಪ್ರದೇಶದಲ್ಲಿ ಕಂಡುಬರುವ ಮ್ಯಾಂಗನೀಸ್ ಖನಿಜದ ಅಕ್ರಮ ಗಣಿಗಾರಿಕೆ ಮತ್ತು ಆ ಪ್ರದೇಶದ (ಸಂಡೂರಿನ ಸುತ್ತಮುತ್ತಲ) ಗಣಿದಣಿಗಳಲ್ಲಿ ಬಹುಪಾಲು ಮಂದಿ ನಮ್ಮ ರಾಜಕೀಯ ಧುರೀಣರೇ ಅಲ್ಲವೆ ಎನ್ನುವುದು ನೆನಪಾಗಿ ಮತ್ತೆ ನಿರಾಶೆಯ ಕತ್ತಲಾವರಿಸಿಕೊಂಡಿದ್ದು ನಿಜವೂ ಹೌದು. ಒಂದು ಕಡೆ ಜನಸಾಮಾನ್ಯನಲ್ಲಿ ಅಷ್ಟರಮಟ್ಟಿಗೆ ಜಾಗೃತಿ ಮೂಡುತ್ತಿದೆ ಎಂಬ ಸಮಾಧಾನ, ಮತ್ತೊಂದು ಕಡೆ ಪರಿಸರ ಕಾಳಜಿಗೆ ಬೇಕಾಗುವ ನಿಯಮ ನಿಬಂಧನೆಗಳನ್ನು ರೂಪಿಸಬೇಕಾದ, ಕಟ್ಟುನಿಟ್ಟಾಗಿ ಪಾಲಿಸಲ್ಪಡುತ್ತಿವೆ ಎಂದು ಖಚಿತಪಡಿಸಿಕೊಳ್ಳಬೇಕಾದ, ಆಡಳಿತ ವ್ಯವಸ್ಥೆಯೇ ಹೀಗೆ ಕಲುಷಿತವಾದಲ್ಲಿ ಎಂಬ ತಳಮಳ!

ಬೇಲಿಯೇ ಎದ್ದು ಹೊಲ ಮೇಯ್ದರೇ? (ಪ್ರತಿಕ್ರಿಯಿಸಿ : viramapost@gmail.com)

ಸೂಕ್ಷ್ಮ ಸಂವೇದನೆಯ ಕಥೆಗಾರ್ತಿ

» ನಿವೇದಿತಾ ಎಚ್, ಮೈಸೂರು

ಮಾರ್ಚ್ 5 ಕೊಡಗಿನ ಗೌರಮ್ಮ ಅವರ ಹುಟ್ಟಿದ ದಿನ. ಕೇವಲ 27 ವರ್ಷಗಳ ಕಾಲ ಬದುಕಿದ್ದ ಗೌರಮ್ಮನವರು ತಮ್ಮ ಅಲ್ಪ ಕಾಲದಲ್ಲಿಯೇ ಸಾಹಿತ್ಯ ಲೋಕದಲ್ಲಿ ಮೂಡಿಸಿದ ಸಂಚಲನ ಅದ್ಭುತವಾದದ್ದು, ಅನನ್ಯವಾದದ್ದು. ಸ್ವತಂತ್ರಪೂರ್ವ ಕಾಲದಲ್ಲೇ ಅವರು ಸ್ತ್ರೀ ಸ್ವಾತಂತ್ರ್ಯದ ಕುರಿತು, ವಿಧವಾ ವಿವಾಹದ ಕುರಿತು ಬರೆದಿದ್ದರು ಎಂಬುದು ಇಂದು ವಿಸ್ಮಯ ಹುಟ್ಟಿಸುತ್ತದೆ.

ಕನ್ನಡದ ಪ್ರಮುಖ ಲೇಖಕಿ ತ್ರಿವೇಣಿ ಅವರು ಹುಟ್ಟಿದಾಗ, ಕೊಡಗಿನ ಗೌರಮ್ಮನವರಿಗೆ (1912 – 1939) ಸುಮಾರು 16 ವರ್ಷಗಳು; ಗೌರಮ್ಮನವರು ನಿಧನರಾದಾಗ ತ್ರಿವೇಣಿ ಅವರಿಗೆ 11 ವರ್ಷಗಳು. ಕೇವಲ ಒಂದೂವರೆ ದಶಕದ ಸುಮಾರಿನ ಅವಧಿಯಲ್ಲಿ ಕನ್ನಡದ ಇಬ್ಬರು ಪ್ರಮುಖ ಲೇಖಕಿಯರು ಒಟ್ಟಿಗೇ ಜೀವಿಸಿದ್ದರು ಎಂಬುದು ವಿಶೇಷ. ಇವರಿಬ್ಬರೂ ತಮ್ಮ ಪೂರ್ಣ ಕೊಡುಗೆಯನ್ನು ನೀಡುವಂತಾಗಿದ್ದರೆ ಎಂದು ಎಂತಹಾ ಸಾಹಿತ್ಯ ಪ್ರೇಮಿಗೂ ಅನಿಸದೇ ಇರಲಾರದು.

ತ್ರಿವೇಣಿಯವರು ಬಿ ಎಂಶ್ರೀ, ವಾಣಿ ಅವರಂತಹ ದಿಗ್ಗಜರ ಕುಟುಂಬದಲ್ಲಿ ಜನಿಸಿ ಅದೇ ಪರಂಪರೆಯನ್ನು ಮುಂದುವರೆಸಿದರೆ, ಕೊಡಗಿನ ಗೌರಮ್ಮನವರು ಸಾಹಿತ್ಯಕ ಹಿನ್ನೆಲೆಯಿರದ, ಕಾಫಿ ಪ್ಲಾಂಟರ್ ಕುಟುಂಬದಲ್ಲಿ ಹುಟ್ಟಿದವರು. ಕೊನೆಯ ಮಗುವಾಗಿ ಜನಿಸಿದ ಗೌರಮ್ಮನವರದು ಸ್ಫಟಿಕದಂತಹಾ ವ್ಯಕ್ತಿತ್ವ. ಹೆಣ್ಣುಮಕ್ಕಳಿಗೆ ಶಿಕ್ಷಣವೆಂಬುದು ಮರೀಚಿಕೆಯಾಗಿದ್ದ ಆ ಕಾಲದಲ್ಲಿ ಕಾನ್ವೆಂಟಿನಲ್ಲಿಯೇ ಓದುತ್ತೇನೆಂದ ಅವರ ಹಠವನ್ನು ಪ್ರೀತಿಯಿಂದ ಮನ್ನಿಸಿದವರು ಅವರ ತಂದೆ. ದೂರದ ಕಾಶೀಯಾತ್ರೆಗೆ ಹೊರಟಾಗಲೂ ಬೆಂಬಿಡದ 6 ವರ್ಷದ ಪುಟ್ಟ ಬಾಲಕಿಯನ್ನು ಜೊತೆಲ್ಲಿ ಒಯ್ದ ಗೌರಮ್ಮನವರ ತಂದೆ ಎನ್.ಎಸ್. ರಾಮಯ್ಯ ಅವರು ವಕೀಲರು ಮತ್ತು ಪ್ಲಾಂಟರ್ ಆಗಿದ್ದರು.

ಕಾಶೀಯಾತ್ರೆಯ ಸಮಯದಲ್ಲಿಯೇ ಅನಾರೋಗ್ಯದಿಂದ ಬಳಲುತ್ತಿದ್ದ ತಾಯಿಯನ್ನು ಕಳೆದುಕೊಂಡ ಗೌರಮ್ಮನವರು ತಾವೂ ಕಾಶಿಯ ಜನಜಂಗುಳಿಯಲ್ಲಿ ಸಿಲುಕಿ, ಕಣ್ಮರೆಯಾಗುವುದರಲ್ಲಿದ್ದರು. ಹೇಗೋ ಮತ್ತೆ ತಂದೆಯ ಮಡಿಲು ಸೇರಿದ ಗೌರಮ್ಮನವರಿಗೆ ತಾಯಿಯಿಲ್ಲದ ಕೊರಗು ಕಾಡದಂತೆ ನೋಡಿಕೊಂಡವರು ಅವರ ತಂದೆ.

ಕಾನ್ವೆಂಟ್‌ಸೇರಿದ ಗೌರಮ್ಮನವರ ವಿದ್ಯಾಭ್ಯಾಸ ಅಭಾದಿತವಾಗಿ ಸಾಗುತಿತ್ತು; ಬೇಗನೆ ಮದುವೆಯಾಗುವ ಒತ್ತಡ. ಮದುವೆಗೆ ಒಪ್ಪಿಕೊಂಡರೂ,ಮೆಟ್ರಿಕ್‌ಮುಗಿಯುವವರೆಗೂ ಗಂಡನ ಮನೆಗೆ ಹೋಗುವುದಿಲ್ಲವೆಂಬ ಶರತ್ತನ್ನು ಹಾಕಿದ ದಿಟ್ಟೆ ಗೌರಮ್ಮನವರು! ಮೆಟ್ರಿಕ್‌ಮುಗಿಸಿ ಗಂಡನ ಮನೆಗೆ ಕಾಲಿಟ್ಟ ಗೌರಮ್ಮನವರ ಸಾಹಿತ್ಯಾಸಕ್ತಿಗೆ ಕುಂದು ಬರದಂತೆ ನೋಡಿಕೊಂಡವರು ಅವರ ಪತಿ, ಸೋಮವಾರಪೇಟೆ ತಾಲೂಕಿನ ಬಿ.ಟಿ.ಗೋಪಾಲಕೃಷ್ಣ ಅವರು. ಕಾನ್ವೆಂಟಿನಲ್ಲಿ ಓದುತ್ತಲೇ, ಕನ್ನಡದಲ್ಲಿ ಬರೆಯುವ ಅಭ್ಯಾಸವನ್ನು ಇಟ್ಟುಕೊಂಡ ಗೌರಮ್ಮನವರು ಟೆನ್ನಿಸ್ ಮತ್ತು ಈಜುವುದರಲ್ಲಿ ಕೂಡಾ ಪರಿಣತಿ ಹೊಂದಿದ್ದರು.

ಖಾದಿ ತೊಟ್ಟ ಕೊಡಗಿನ ಮಹಿಳೆ!

ಅಂದು ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟಕ್ಕೆ ಪೂರ್ಣ ಬೆಂಬಲವನ್ನು ನೀಡಿದವರು. ಗಾಂಧೀಜಿ ಆರಂಭಿಸಿದ ಕರ ನಿರಾಕರಣೆ ಮತ್ತು ಖಾದಿ ಚಳುವಳಿಗಳು ಅವರ ಮೇಲೆ ಗಾಢಪ್ರಭಾವವನ್ನು ಉಂಟುಮಾಡಿದ್ದವು. ತಮ್ಮ 16ನೇ ವಯಸ್ಸಿನಲ್ಲಿಯೇ ಕೇವಲ ಖಾದಿ ತೊಡುವ ನಿರ್ಧಾರ ತೆಗೆದುಕೊಂಡರು. ಗಾಂಧೀಜಿ ಕೊಡಗಿಗೆ ಬಂದಾಗ, ಹಠ ಹಿಡಿದು ತಮ್ಮ ಮನೆಗೆ ಬರಮಾಡಿಕೊಂಡು, ಅವರಿಗೆ ತಮ್ಮಲ್ಲ ಒಡವೆಗಳನ್ನು ದಾನ ಮಾಡಿದಾಗ ಕೊಡಗಿನ ಗೌರಮ್ಮನವರಿಗೆ ಕೇವಲ 22ರ ವಯಸ್ಸು. ನಂತರ ಕೂಡಾ ಹೆಚ್ಚು ಒಡವೆಗಳನ್ನು ಧರಿಸದೆ ಅಗತ್ಯವಿದ್ದ ಒಡವೆಗಳನ್ನುಮಾತ್ರ ಧರಿಸುತ್ತಿದ್ದರು ಎಂದು ಅವರ ಮಗ ಹೆಮ್ಮೆಯಿಂದ ನೆನೆಯುತ್ತಾರೆ. ತಮ್ಮ 19ನೇ ವಯಸ್ಸಿನಲ್ಲಿಯೇ ತಮ್ಮ ಮೊದಲ ಕಥೆ ಬರೆದ ಗೌರಮ್ಮನವರ ಓದಿನ ಹರಹು ಬಹಳ ವಿಶಾಲವಾಗಿತ್ತು. ಕನ್ನಡ ಮಾತ್ರವಲ್ಲದೆ ಇಂಗ್ಲಿಷ್ ಭಾಷೆಯಲ್ಲಿ ಕೂಡಾ ಪುಸ್ತಕಗಳನ್ನು ಓದುತ್ತಿದ್ದ ಗೌರಮ್ಮನವರು ಬರೆದದ್ದು ಮಾತ್ರ ಕನ್ನಡದಲ್ಲಿ.

ಬೇಂದ್ರೆಯವರ ಮುನ್ನುಡಿ

ಚಿಕ್ಕಂದಿನಿಂದ ಸಾಹಿತ್ಯದಲ್ಲಿ ತೀವ್ರ ಪ್ರೇಮವನ್ನು ಬೆಳೆಸಿಕೊಂಡಿದ್ದ ಗೌರಮ್ಮನವರಿಗೆ ಸಾಹಿತಿದಿಗ್ಗಜರ ಒಡನಾಟ ದೊರೆತಿತ್ತು. ವರಕವಿ ಬೇಂದ್ರೆ ಅವರೇ ಗೌರಮ್ಮನವರ ಮೊದಲ ಕೃತಿಗೆ ಮುನ್ನುಡಿ ಬರೆದು ಹಾರೈಸಿದ್ದರು. ಕೊಡಗಿನಲ್ಲಿ ಡಿವಿಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಗೌರಮ್ಮನವರು ಮನೆ ಸಮಾರಂಭವೆಂಬಂತೆ ಸಂಭ್ರಮದಿಂದ ಓಡಾಡಿದ್ದರು. ಆರ್. ಕಲ್ಯಾಣಮ್ಮನವರಿಂದಲೂ ಪ್ರಭಾವಿತರಾಗಿದ್ದ ಗೌರಮ್ಮ,ಅವರೊಡನೆ ಪತ್ರಗಳ ಮೂಲಕ ಸಂಪರ್ಕ ಇರಿಸಿಕೊಂಡಿದ್ದರು. ಆರ್. ಕಲ್ಯಾಣಮ್ಮನವರಂತೆಯೇ ತಾವೂ ಕೂಡಾ ಪ್ರಖರ

ಸ್ತ್ರೀವಾದವನ್ನು ರೂಢಿಸಿಕೊಂಡಿದ್ದರು.

ಗೌರಮ್ಮನವರಿಗೆ ಪತಿಯ ಮೇಲೆ ಪ್ರೀತಿ ಮಾತ್ರವಲ್ಲ, ಭಕ್ತಿ ಗೌರವಗಳೂ ಇದ್ದವು. ಮಗನನ್ನುಮಾತೃಪ್ರೇಮದಲ್ಲಿ ತೋಯಿಸಿದ್ದ ಗೌರಮ್ಮನವರಿಗೆ ಏಕಮಾತ್ರ ಪುತ್ರ ವಸಂತನ ಮೇಲೆ ತೀರದ ಅಭಿಮಾನ-ಪ್ರೀತಿ. ಮನೆಯ ಆಳುಗಳನ್ನೂ ಪ್ರೀತಿ ಗೌರವದಿಂದ ನಡೆಸಿಕೊಳ್ಳುತ್ತಿದ್ದ ಗೌರಮ್ಮನವರು, ಉದಾತ್ತ ವಿಚಾರಧಾರೆಯುಳ್ಳವರಾಗಿದ್ದರು. ಎಲ್ಲವರ್ಗದವರನ್ನು ಅಂತಃಕರಣದಿಂದ ಸಲಹುತ್ತಿದ್ದರು.

ಈಜುವಾಗ ದುರಂತ

ನೀರಿನಲ್ಲಿ ಮೀನಿನಂತೆ ಈಜುತ್ತಿದ್ದ ಗೌರಮ್ಮನವರ ಪ್ರಾಣ ಹಾಗೆ ಈಜುವಾಗಲೇ ಹೋಗಿದ್ದು ವಿಪರ್ಯಾಸವೆಂದೇ ಹೇಳಬೇಕು. ಅವರು ಯಾವಾಗಲೂ ಮೇಲಿನಿಂದ ಹಾರಿ ಈಜುತ್ತಿದ್ದ ಮಡುವಿನಲ್ಲಿಯೇ ದುರಂತಕ್ಕೀಡಾದದ್ದು ವಿಧಿವಿಲಾಸವಷ್ಟೇ.

ಅಷ್ಟು ಚಿಕ್ಕವಯಸ್ಸಿಗೇ ಗೌರಮ್ಮನವರು ಗಳಿಸಿದ್ದ ಪ್ರೌಢಿಮೆ ಅಚ್ಚರಿಯೆನಿಸುತ್ತದೆ. ತಮ್ಮ 19ನೇ ವಯಸ್ಸಿನಲ್ಲಿಯೇ 'ಪುನರ್ವಿವಾಹ'ಎಂಬ ಮೊದಲ ಕತೆ ರಚಿಸಿದ ಗೌರಮ್ಮನವರು ಅಂದಿನ ಸಮಾಜದ ರೀತಿಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವಲೋಕಿಸಿ, ಮಾನವೀಯವಲ್ಲದ ಪದ್ಧತಿಗಳಾಚರಣೆ ನೋಡಿ ವಿಷಾದ ಪಡುತ್ತಿದ್ದರು. ಆದ್ದರಿಂದಲೇ ಅವರು ಬರೆದಿರುವ 21 ಕತೆಗಳಲ್ಲಿ, ವಿಧವಾವಿವಾಹ, ಬಾಲ್ಯ ವಿವಾಹ ಹಾಗು ವಿಧವಾ ಸಮಸ್ಯೆಗಳ ಬಗ್ಗೆ ಒಳನೋಟವಿದೆ. ಜೊತೆಗೆ, ಮೂಲತಃ ಲವಲವಿಕೆಯ ಸ್ವಭಾವದವರಾಗಿದ್ದ ಗೌರಮ್ಮನವರು ತಮ್ಮ ಕಾನ್ವೆಂಟ್‌ಶಿಕ್ಷಣ ಪಡೆಯುವಾಗಿನ ಅನುಭವಗಳನ್ನು ಹಗುರಾಗಿ ಹಾಸ್ಯದ ತೆಳುಲೇಪನದೊಂದಿಗೆ ನಮಗೆ ಉಣಬಡಿಸುತ್ತಾರೆ. ಪ್ರೇಮ ಕತೆಗಳೂ ಗೌರಮ್ಮನವರ ಕಥಾವೈವಿಧ್ಯದಲ್ಲಿ ಪಾಲು ಪಡೆದಿವೆ.

ವಿಧವಾ ವಿವಾಹ, ಬಾಲ್ಯವಿವಾಹಗಳನ್ನು ಟೀಕಿಸಿ ಗೌರಮ್ಮನವರು ಬರೆದಿದ್ದಾರಾದರೂ, ಅವರು ಜೀವಿಸಿದ್ದ ಕಾಲದ ಕಟ್ಟುಪಾಡುಗಳನ್ನು ಅವರು ತೊರೆದು ಬರೆಯಲು ಸಾಧ್ಯವಾಗದಿರುವುದು ಗೌರಮ್ಮನವರ ತಪ್ಪಲ್ಲ, ಬದಲಾಗಿ ಅವರು ಜೀವಿಸಿದ್ದ ಕಾಲದ ಪದ್ಧತಿ ಎಂಬುದನ್ನು ನಾವು ಅರಿಯಬೇಕಾಗುತ್ತದೆ. ಉದಾಹರಣೆಗೆ, ಅವರು ಬರೆದ ಮೊದಲ ಕತೆ 'ಪುನರ್ವಿವಾಹ'ದಲ್ಲಿ, ನಾಯಕ 35ರ ಹರೆಯದ ವಿದುರ. ಅವನಿಗೆ ಚಿಕ್ಕ ವಯಸ್ಸಿನ ಹುಡುಗಿಯನ್ನು ಮದುವೆಯಾಗುವಾಸೆ. ತಾನೇ ಹಿಂದೆ ಬಿದ್ದು ಮದುವೆ ನಿಶ್ಚಯಿಸುವ ಆತ, ಆಕೆ ಬಾಲವಿಧವೆಯೆಂದು ತಿಳಿದ ತಕ್ಷಣ ಆಕೆಯನ್ನೇ ದೂಷಿಸುತ್ತಾನೆ. ಬಾಲಕಿಯ ಕಣ್ತೆರೆಸುವ ಮಾತುಗಳ ನಂತರ ಆತ ವಿಧವೆಯರ ಉದ್ಧಾರಕ್ಕಾಗಿ ಕೆಲಸ ಮಾಡುತ್ತೇನೆ ಎನ್ನುತ್ತಾನೆಯೇ ಹೊರತು, ವಿಧವೆಯನ್ನು ಮದುವೆಯಾಗಲು ತಾನು ಸಿದ್ಧ ಎನ್ನಲು ಅವನಿಗೆ, ಅವನನ್ನು ಚಿತ್ರಿಸಿದ ಗೌರಮ್ಮನವರು ಬದುಕಿದ್ದ ಕಾಲ, ಅವಕಾಶವನ್ನೀಯುವುದಿಲ್ಲ. ಅದೇ ಸ್ವಲ್ಪ ಹೊಸಕಾಲದವರಾದ ತ್ರಿವೇಣಿ, 'ಹಣ್ಣೆಲೆ ಚಿಗುರಿದಾಗ', ಕಾದಂಬರಿಯ ತನ್ನ ನಾಯಕಿಗೆ ಮದುವೆ ಮಾಡಿಸುತ್ತಾರೆ. ಇಲ್ಲಿ, ಅಕಸ್ಮಾತ್ ಗೌರಮ್ಮನವರೇನಾದರೂ ಬದುಕಿದ್ದರೆ ಅವರ ಪ್ರಗತಿಪರ ವಿಚಾರಗಳ ಪ್ರಖರತೆ ಹೇಗಿರುತ್ತಿತ್ತು ಎಂದು ಬೆರಗಿನಿಂದ ಯೋಚಿಸುವ ಹಾಗಾಗುತ್ತದೆ.

ವಾಣಿಯ ಸಮಸ್ಯೆ

ಅವರ ಮತ್ತೊಂದು ಕತೆ 'ವಾಣಿಯ ಸಮಸ್ಯೆ' ಅವರ ಶ್ರೇಷ್ಠ ಕತೆಯೆಂದೇ ನನ್ನ ಭಾವನೆ. ಸಂಸಾರದ ಜವಾಬ್ದಾರಿ ಹೊರಲು ಇನ್ನೂ ಸಿದ್ಧಳಾಗಿರದ ವಾಣಿಯ ಮುಂದೆ ಇಂದು, ವಾಣಿಯ ಪತಿಗೆ ತನಗೆ ಸೂಕ್ತಳೆನ್ನಿಸಿ ಪ್ರಿಯವಾಗುತ್ತಾಳೆ. ಇಲ್ಲಿ ಗಂಡಿನ ಸಹಜ ಚಂಚಲತೆಯನ್ನು ಯಾವುದೇ ಪೂರ್ವಾಗ್ರಹವಿಲ್ಲದೆ, ದೂಷಣೆ ಮಾಡದೆ ಕುಸುರಿಯಂತೆ ಸೂಕ್ಷ್ಮವಾಗಿ ಚಿತ್ರಿಸಿರುವ ಗೌರಮ್ಮನವರ ಪ್ರೌಢಿಮೆ ಮೆಚ್ಚುಗೆ ಹುಟ್ಟಿಸುತ್ತದೆ. ತಮ್ಮ ಹಲವು ಕತೆಗಳನ್ನು ಪತ್ರವ್ಯವಹಾರಗಳ ರೂಪದಲ್ಲಿ ಬರೆದಿರುವುದು ಗೌರಮ್ಮನವರ ವಿಶಿಷ್ಟ ಶೈಲಿ. ತೆಳುವಾದ ಹಾಸ್ಯ, ನವಿರು ಪ್ರೇಮ, ತುಂಟಾಟ ತರಲೆಗಳನ್ನು ಸಮರ್ಥವಾಗಿ ಗೌರಮ್ಮನವರು ಕತೆಗಳಲ್ಲಿ ಕಾಣಿಸುತ್ತಾರೆ. ಸನ್ಯಾಸಿ ರತ್ನ, ಪಾಪನ ಮದುವೆ, ಮರದ ಗೊಂಬೆ ಕತೆಗಳು ಇದಕ್ಕೆ ಉದಾಹರಣೆ. ಪ್ರೇಮ ವೈಫಲ್ಯ, ವಿರಹ, ದುರಂತದ ಕತೆಗಳನ್ನೂ ಸಶಕ್ತವಾಗಿ ಕಟ್ಟಿಕೊಟ್ಟಿರುವ ಗೌರಮ್ಮನವರ ಮನೋಸಾಮರ್ಥ್ಯ, ಸಹೃದಯತೆ, ಮೃದು ಮನಸುಗಳು ಅವರ ಸಾಹಿತ್ಯಕ ಪ್ರೌಢಿಮೆಗೆ ಮೂಲದ್ರವ್ಯ.

ಕೆಲವೇ ವರ್ಷಗಳು ಜೀವಿಸಿದ್ದ ಗೌರಮ್ಮನವರು ನೋಡಿದ ಬದುಕಿನ ಹರಹು ತೀರಾ ಚಿಕ್ಕದು. ಅದರಲ್ಲೂ ಮನಸ್ಸಿಗೆ ನಾಟುವಂತಹ ವಿಷಯಗಳನ್ನು ಆರಿಸಿಕೊಂಡು ಮನೋಹರವಾಗಿ ಬರೆಯುತ್ತಿದ್ದ ಗೌರಮ್ಮನವರು ಬದಲಾವಣೆಯನ್ನು ಬಯಸಿದವರು, ಬದಲಾವಣೆ ತರಲು ಯತ್ನಿಸಿದವರು. ಮತ್ತೆ ಅದೇ ಪ್ರಶ್ನೆ ಬರುತ್ತದೆ, ಅವರು ಇನ್ನಷ್ಟು ವರ್ಷಗಳ ಕಾಲ ಬದುಕಿ ಇದ್ದಿದ್ದರೆ? ಅದೆಷ್ಟು ಚೆನ್ನಾಗಿ ಮನುಷ್ಯನ ಮನಸಿನ ಮೂಲೆ ಮೂಲೆಗಳಲ್ಲಿನ ಕಸಗಳನ್ನು ಹೆಕ್ಕಿ ಗುಡಿಸುತ್ತಿದ್ದರು ಎಂದು! ಬದಲಾಗಿರುವ ಸ್ತ್ರೀಗೆ ಸ್ವಾತಂತ್ರ್ಯ-ಮನ್ನಣೆ ದೊರೆತಿರುವ ಈ ಕಾಲವನ್ನು ನೋಡಿ ಅದೆಷ್ಟು ಸಂಭ್ರಮಿಸುತ್ತಿದ್ದರೋ ಎನಿಸುತ್ತದೆ.

ಪುಸ್ತಕ ವಿಮಾನ

ಸಾಮಯಿಕ ಮಹತ್ವವಿರುವ ಕೃತಿ

» ಪ್ರೊ. ಜಿ. ಎನ್. ಉಪಾಧ್ಯ

ಈ ಕೃತಿಯಲ್ಲಿ 29 ಸಮೀಕ್ಷಾತ್ಮಕ, ವಿಮರ್ಶಾತ್ಮಕ ಲೇಖನಗಳಿದ್ದು ಇವುಗಳಲ್ಲಿ ಅನೇಕ ಮಹತ್ವದ ಕವಿ ಕೃತಿಗಳ ಭಾವರಹಸ್ಯಗಳನ್ನು ವಿವೇಚಿಸುತ್ತಲೇ ಸಮಗ್ರ ಕನ್ನಡ ಸಾಹಿತ್ಯದ ಬಗೆಗೆ ಆದರ ಭಾವವನ್ನು ಬೆಳೆಸುವ ಕಾಳಜಿ ವ್ಯಕ್ತವಾಗಿದೆ.

ಕಲಾ ಭಾಗ್ವತ್ ವಿರಚಿತ 'ಜಾಲಂದರ' ಆಯ್ದ ಲೇಖನಗಳ ಇತ್ತೀಚಿನ ಸಂಕಲನ. ಕನ್ನಡ ಸಾಹಿತ್ಯ, ಸಂಸ್ಕೃತಿಗಳ ಬಲ್ಮೆ, ಸಾರ್ಥಕತೆ, ಅಲ್ಲಿನ ಸ್ವೋಪಜ್ಞತೆ ಏನೆಂಬುದನ್ನು ಚಿಂತನೆಗೆ, ಮರು ಚಿಂತನೆಗೆ ಗುರಿ ಪಡಿಸುವ ಕಾಳಜಿಯನ್ನು ಇದು ಹೊಂದಿದೆ. ಕನ್ನಡ ಸಾಹಿತ್ಯ ಪರಂಪರೆ ಹಾಗೂ ಅಲ್ಲಿನ ಚಿಂತನೆಗಳಲ್ಲಿರುವ ಶ್ರೇಷ್ಠ ಹಾಗೂ ಉತ್ತಮ ಅಂಶಗಳನ್ನು ವಿವರಿಸುವ ವಿಶ್ಲೇಷಣೆ ನಡೆಸುವ ಪ್ರಯತ್ನವು ಈ ಕೃತಿಯಲ್ಲಿ ಎದ್ದು ಕಾಣುತ್ತದೆ. ಕಲಾ ಭಾಗ್ವತ್ ಅವರು ಸೃಜನಶೀಲ ಪ್ರತಿಭೆಯನ್ನು ಹೊಂದಿರುವ ಸೂಕ್ಷ್ಮ ಸಂವೇದನೆಯ ಲೇಖಕರು.

ಕನ್ನಡದ ಬಗೆಗೆ ಅಪಾರವಾದ ಪ್ರೀತಿ, ಶ್ರದ್ಧೆಯುಳ್ಳ ಕಲಾ ಅವರು ವಿಜ್ಞಾನ, ಕಲೆ, ಸಾಹಿತ್ಯ, ಸಂಗೀತ ಇವುಗಳ ಸಮರಸ ಭಾವಸಂಪನ್ನರು. ಈ ಕೃತಿಯ ಆರಂಭದಲ್ಲೇ ಅವರು ಸಾಹಿತ್ಯ ಎನ್ನುವುದು ವಿಶಾಲವಾದ ಮನೋಗತದಿಂದ, ಕಲಾತ್ಮಕವಾದ ಭಾಷೆಯಲ್ಲಿ ಸ್ವಾನುಭವ, ಜ್ಞಾನ, ವಸ್ತು ವಿಷಯಗಳನ್ನು ಕಟ್ಟಿಕೊಡುವುದು. ಇದು ಮನುಷ್ಯನನ್ನು ಮನುಷ್ಯನನ್ನಾಗಿ ರೂಪಿಸಬಲ್ಲ ಮಾಧ್ಯಮ. ಮನಸ್ಸು ಪಕ್ವವಾಗಲು ಸಾಧಕವಾದ ಸಕಲ ಜ್ಞಾನವನ್ನೂ ಸಾಹಿತ್ಯ ಒಳಗೊಂಡಿರುತ್ತದೆ. ಹುಟ್ಟುವಾಗಲೇ ಸಮಾಜದ ಒಂದು ಅಂಗವಾಗುವ ವ್ಯಕ್ತಿ ತನ್ನ ಜೀವಿತಾವಧಿಯಲ್ಲಿ ಸಮಾಜಕ್ಕೆ ಒಳಿತನ್ನು ಮಾಡುವಂತೇ; ಅದಾಗದಿದ್ದಲ್ಲಿ ಕಡೆಯ ಪಕ್ಷ ಕೆಡುಕನ್ನು ಮಾಡದಿರುವಂತಾದರೂ ಮಾಡುವಲ್ಲಿ ಸಾಹಿತ್ಯವು ಗಮನ ವಹಿಸುತ್ತದೆ. ಇದು ಕಾಲ ದೇಶ ಭಾಷೆಗಳ ಸೀಮೆಯನ್ನು ಮೀರಿ ಬೆಳೆದು ಮನುಕುಲದ ವಿಕಾಸಕ್ಕೆ ಕಾರಣವಾದ ಒಂದು ಅವಿಭಾಜ್ಯ ಅಂಗವಾಗಿದೆ ಎಂಬ ಮಾನವೀಯ ನೆಲೆಯಲ್ಲಿ ಖಚಿತವಾಗಿ ವಿಶದಪಡಿಸಿದ್ದಾರೆ. ಹೀಗಾಗಿ ಇಲ್ಲಿನ ವಿಮರ್ಶೆಯ ಲೇಖನಗಳೆಲ್ಲ ಸಾಹಿತ್ಯದ ಗುಣಾತ್ಮಕ ವೈಶಿಷ್ಟ್ಯವನ್ನು ಎತ್ತಿತೋರುವ ಆಶಯವನ್ನು ಹೊಂದಿವೆ.

ಪಂಪ ಯುಗದ ಚಂಪೂ ಕವಿಗಳ ಇತಿಹಾಸಿಕ ಪ್ರಜ್ಞೆ ಎಂಬ ಲೇಖನ ಅಂದಿನ ಕವಿಗಳ ಸಮಕಾಲೀನ ಪ್ರಜ್ಞೆಯ ಕುರಿತು ಹೊಸ ಒಳನೋಟವನ್ನು ಬೀರುವಲ್ಲಿ ಸಫಲವಾಗಿದೆ. ಕಾವ್ಯವೆನ್ನುವುದು ಬರಿಯ ಕಲ್ಪನೆಯ ಸರಕಲ್ಲ. ಆಯಾ ಕಾಲದ ಸ್ಥಿತಿಗತಿಗಳಿಗೆ ಅನುಗುಣವಾಗಿ ಅನೇಕ ತಂತ್ರಗಳನ್ನು ಬಳಸಿಕೊಂಡು ಜನ ಜೀವನಕ್ಕೆ ಹತ್ತಿರವಾಗುವಂತೆ ಚರಿತ್ರೆಯಾಗಿ ಕಟ್ಟಿಕೊಡುವ ಚಂಪೂ ಕವಿಗಳ ರಚನೆಗಳು ಕಾಲಾತೀತ ಮೌಲ್ಯವನ್ನು ಹೊಂದಿರುವುದು ಸ್ಪಷ್ಟ. ಕಾಲ ಸ್ವರೂಪವನ್ನು, ರಾಜಕೀಯ, ಸಾಮಾಜಿಕ, ಧಾರ್ಮಿಕ ನೆಲೆಗಳಲ್ಲಿ ಬಿಂಬಿಸಿರುವುದು ಚಂಪೂ ಕವಿಗಳ ಇತಿಹಾಸಿಕ ಪ್ರಜ್ಞೆಯಿಂದಲೇ. ಚಂಪೂ ಕೃತಿಗಳಲ್ಲಿ ಚಾರಿತ್ರಿಕ ಸಂದರ್ಭದ ಹಲವು ಮೌಲ್ಯಗಳು ಅಡಗಿದ್ದು ಸಮಾಕಾಲೀನ ಪರಿಸ್ಥಿತಿಗೆ ಅವು ಮುಖಾಮುಖಿಯಾಗಿವೆ. ಹೀಗಾಗಿ ಮಹತ್ವದ ಕೃತಿಗಳಾಗಿ ಇಂದಿಗೂ ಜೀವಂತಿಕೆ ಉಳಿಸಿಕೊಂಡಿವೆ ಎಂಬುದನ್ನು ಒತ್ತಿ ಹೇಳಿದ್ದಾರೆ.



ಜಾಲಂದರ
(ಆಯ್ದ ವಿಮರ್ಶಾ ಲೇಖನಗಳು)
ಲೇ: ಕಲಾ ಭಾಗ್ವತ್
ಸ್ನೇಹಾ ಎಂಟರ್ಪ್ರೈಸಸ್‌ಬೆಂಗಳೂರು.
9845062549
ಬೆಲೆ : ರು. 400/-

ಹರಿಹರನ ಗಿರಿಜಾ ಕಲ್ಯಾಣದ ನಿತ್ಯ ಸತ್ಯ, ಕನ್ನಡದ ತವನಿಧಿ ದಾಸ ಸಾಹಿತ್ಯದ ಅನನ್ಯತೆ, ಮುಂಬೈಯಲ್ಲಿ ಬೆಳಕು ಕಂಡ ಕನ್ನಡದ ಮೊದಲ ಸಾಮಾಜಿಕ ನಾಟಕದ ನಿಲುವು, ಕನ್ನಡದ ಬಣ್ಣ ಬನಿಯನ್ನು ಗಾಢ ಗೊಳಿಸಿದ ವ್ಯಾಸರಾಯ ಬಲ್ಲಾಳರ ಸಾಹಿತ್ಯ ಸಾಧನೆ, ವಿ.ಜಿ ಭಟ್ಟರ ಆಯ್ದ ಕವಿತೆಗಳ ಆಯಾಮ ಹಾಗೂ ಅನನ್ಯತೆ, ಜಯಂತ ಕಾಯ್ಕಿಣಿ ಅವರ ಪ್ರಬಂಧ ಲೋಕ, ಭೈರಪ್ಪನವರ ಮಹತ್ವದ ಕಾದಂಬರಿ ಮಂದ್ರದಲ್ಲಿನ ಸಂಗೀತಪ್ರಭೆ ಮೊದಲಾದ ಲೇಖನಗಳ ಮೂಲಕ ಈ ಕೃತಿ ತನ್ನ ಅವಲೋಕನ ಸಾಮರ್ಥ್ಯ ಮತ್ತು ಒಳನೋಟಗಳಿಂದ ನಮ್ಮ ಗಮನವನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಕನ್ನಡದ ಪ್ರಮುಖ ಉಪಭಾಷೆಗಳಲ್ಲಿ ಒಂದಾದ ಹವ್ಯಕ ಭಾಷೆ , ಸಂಸ್ಕೃತಿಯ ಕುರಿತಾದ ಲೇಖನ ಬಹಳ ಮನೋಹರವಾಗಿದೆ. ಕನ್ನಡದ ಸಮಕಾಲೀನ ಸಾಹಿತ್ಯದ ವಿಶಿಷ್ಟ ಕವಿ ಕೃತಿಗಳನ್ನು ಸಾಹಿತ್ಯ ಮಾರ್ಗಗಳನ್ನು ಕುರಿತ ವಿವೇಚನೆ, ವಿಶ್ಲೇಷಣೆ ಸಾಹಿತ್ಯ ಚರಿತ್ರೆ ದೃಷ್ಟಿಯಿಂದ ಬೆಲೆಯುಳ್ಳದ್ದಾಗಿದೆ. ಗಜಾನನ ಶರ್ಮಾ ಅವರ ಚೆನ್ನಭೈರಾದೇವಿ ಕಾದಂಬರಿಗೆ ಬಂದ ಒಳ್ಳೆಯ ವಿಮರ್ಶೆಗಳಲ್ಲಿ ಕಲಾ ಅವರ ಲೇಖನವೂ ಒಂದು. ಇದೊಂದು ನವಚಾರಿತ್ರಿಕ ವಿವೇಚನೆ ವಿಶ್ಲೇಷಣೆಯೂ ಆಗಿದೆ. ನಾಡಿನ ನಾಮಾಂಕಿತ ವಿಮರ್ಶಕರಾದ ಎಂ ಎಸ್ ಆಶಾದೇವಿ, ಬಿ. ಜನಾರ್ದನ ಭಟ್, ಜಿ. ಎಂ. ಹೆಗಡೆ ಅವರು ವಿಮರ್ಶೆಗೆ ಕೊಟ್ಟ ಕೊಡುಗೆ, ಅವರ ಸುದೀರ್ಘ ಸಂದರ್ಶನ ಲೇಖನಗಳಿಂದ ಈ ಕೃತಿಯ ತೂಕ ಮತ್ತಷ್ಟು ಹೆಚ್ಚಿದೆ. ಕನ್ನಡ ಸಂಶೋಧನೆಗೆ ಮುಂಬೈ ಕೊಡುಗೆ ಒಂದು ಸುದೀರ್ಘ ಪ್ರಬಂಧ. ಕರ್ನಾಟಕ ಸಂಸ್ಕೃತಿಯ ಮುಚ್ಚಿದ ಬಾಗಿಲುಗಳನ್ನು ತೆರೆದ ಮುಂಬೈನ ಸಂಶೋಧಕರ ಸಾಹಸಪ್ರಥೆ, ಸಾಧನೆ ಇಲ್ಲಿ ದಾಖಲಾಗಿದೆ. ಇಲ್ಲಿನ ಬರವಣಿಗೆಯಲ್ಲಿ ಕಂಡುಬರುವ ಶ್ರದ್ಧೆ, ಶ್ರಮ, ಪರಂಪರೆಯ ಅರಿವು, ಗುಣ ಗ್ರಾಹಕತೆ, ಸಂಸ್ಕೃತಿ ಚಿಂತನ, ಅಧ್ಯಯನದಲ್ಲಿರುವ ಪರಿಣತಿ, ಮೊದಲಾದ ಅಂಶಗಳು ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಆದರ್ಶಪ್ರಾಯವಾಗಿವೆ. ಕಲಾ ಅವರ ಕೃತಿಯು ದೊಡ್ಡ ಪರಿಪ್ರೇಕ್ಷ್ಯದಲ್ಲಿ ಅಳವಟ್ಟಿರುವ ಎಲ್ಲ 29 ಲೇಖನಗಳೂ ಸ್ವಯಂಪೂರ್ಣವಾಗಿವೆ. ನಿರೂಪಣೆಯ ಶೈಲಿ ಪೆಡಸಾಗದೆ ಸುಭಗವಾಗಿದೆ. ಸಾರ್ಥಕ ಪ್ರಯತ್ನದ ಈ ಕೃತಿಗಾಗಿ ಕಲಾ ಭಾಗ್ವತ್ ಅವರಿಗೆ ಅಭಿನಂದನೆಗಳು.

ವಿಶ್ವವಾಣಿ ಅಂಕಿತ ಟಾಪ್ ಟೆನ್

1
ಜೈ ಭೀಮ್
(ಡಾ। ಬಿ.ಆರ್.ಅಂಬೇಡ್ಕರ್ ಜೀವನ ಚರಿತ್ರೆ)
ಲೇ: ಡಾ। ಎಂ.ವೆಂಕಟಸ್ವಾಮಿ
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ : ರೂ 350/-



2
ಇಲ್ಲಿಂದ ಮುಂದೆಲ್ಲ ಕಥೆ
(ಹೊಸ ಕಥಾ ಸಂಕಲನ)
ಲೇ: ರಘುನಾಥ ಚ.ಹ.
ಪ್ರ: ಅಂಕಿತ ಪುಸ್ತಕ,
ಬೆಂಗಳೂರು
ಬೆಲೆ : ರೂ 170/-



3
ಆನೆ ಡಾಕ್ಟರ್ ಮತ್ತು
ಇತರ ಕಥೆಗಳು
(ಕಥಾಸಂಕಲನ)
ತಮಿಳು ಮೂಲ: ಜೆಯಮೋಹನ್
ಅನು : ಎಸ್. ನಾರಾಯಣನ್
ಪ್ರ: ಬಹುವಚನ, ಬೆಂಗಳೂರು
ಬೆಲೆ : ರೂ 180/-

4
ಬದುಕು ಮತ್ತು ಭಾರತ
(ವಳಲಂಬೆ ಅವರ ಚಿಂತನೆಗಳು)
ಲೇ: ತೀರ್ಥರಾಮ ವಳಲಂಬೆ
ಪ್ರ:ಯಾನ ಪ್ರಕಾಶನ,
ಮಂಗಳೂರು
ಬೆಲೆ : ರೂ 200/-



5
ತೊರವೆ ರಾಮಾಯಣ
(ಗದ್ಯ ಸಹಿತ)
ಲೇ: ಕುಮಾರ ವಾಲ್ಮೀಕಿ
ಗದ್ಯಾನುವಾದ : ಕೆ.ಎಸ್. ಕೃಷ್ಣಮೂರ್ತಿ
ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಬೆಲೆ : ರೂ 860/- (2 ಸಂಪುಟ ಸೇರಿ)

6
ಪ್ಯಾಲೆಟ್
(ಕಾದಂಬರಿ)
ಲೇ: ಪಿ. ಚಂದ್ರಿಕಾ
ಪ್ರ: ವೀರಲೋಕ,
ಬೆಂಗಳೂರು
ಬೆಲೆ : ರೂ 230/-

7
ಕುಡಿಯೋಣು ಬಾರಾ
(ಗುಂಡಿನ ಕುರಿತ
'ಸಾಂಸ್ಕೃತಿಕ'ಹರಟೆ)
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ,
ಬೆಂಗಳೂರು
ಬೆಲೆ : ರೂ 300/-



8
ಸರ್ವೆ ನಂಬರ್ - 97
(ಕಥೆಗಳು)
ಲೇ: ಅನಿಲ್ ಗುನ್ನಾಪೂರ
ಪ್ರ: ಹೊಂಗಿರಣ ಪ್ರಕಾಶನ,
ಹಿರೇಮಸಳಿ
ಬೆಲೆ : ರೂ 120/-



9
ಆನೆ ನಡೆದದ್ದೇ ಹಾದಿ
(ಮನಸೆಳೆಯುವ ಲೇಖನಗಳು)
ಲೇ: ದೊಡ್ಡಮನೆ ಆನಂದ್
ಪ್ರ: ಅಭಿರುಚಿ ಪ್ರಕಾಶನ,
ಮೈಸೂರು
ಬೆಲೆ : ರೂ 120/-



10
ಹಿಮಾಲಯ ಋಷಿಗಳ ದಿವ್ಯ ಸಂದೇಶಗಳು
(ಆಧ್ಯಾತ್ಮಿಕ ಆತ್ಮಕಥನ)
ಲೇ: ಗುರು ಸಕಲಮಾ
ಪ್ರ: ಗುರು ಸಕಲಮಾ ಪ್ರಕಾಶನ,
ಬೆಂಗಳೂರು
ಬೆಲೆ : ರೂ 399/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

ಕವಿಯ ಕನ್ನಡಿ

ಕನ್ನಡದ ಹಿರಿಯ ಕವಿ ಪುತಿನ ಅವರು ಉತ್ತಮ ಗದ್ಯವನ್ನು ಬರೆದಿದ್ದಾರೆ. ಆದರೆ ಅವರ ಕಾವ್ಯವು ಚರ್ಚೆಗೆ ಒಳಗಾದಷ್ಟು, ಗದ್ಯ ಬರಹಗಳು ಒಳಗಾಗಿಲ್ಲ ಎಂಬ ಅಭಿಪ್ರಾಯವಿದೆ. ಆ ಕೊರತೆಯನ್ನು ನೀಗುವಲ್ಲಿ 'ಕವಿಯ ಕನ್ನಡಿ'ಯ ಬರಹಗಳು ಸಫಲವಾಗಿವೆ ಎನ್ನಬಹುದು.



ಕವಿಯ ಕನ್ನಡಿ
(ಪುತಿನ ಪ್ರಬಂಧಗಳು ಮತ್ತು ಕಾವ್ಯಮೀಮಾಂಸೆಯ ಒಂದು ಓದು)
ಲೇ: ಚಿಂತಾಮಣಿ ಕೊಡೆಕೆರೆ
ಪ್ರ: ಡಾ. ಪುತಿನ ಟ್ರಸ್ಟ್ (ರಿ) ಬೆಂಗಳೂರು
ಬೆಲೆ ರು.100/-

ಕವಿ ಪುತಿನ ಅವರ ಗದ್ಯ ಬರಹಗಳನ್ನು ಓದಿ, ಚರ್ಚೆಗೆ ಒಳಪಡಿಸಿದ ಬರಹಗಳ ಸಂಕಲನವಿದು.

ಈ ಪುಸ್ತಕದಲ್ಲಿ ಒಟ್ಟು 12 ಲೇಖನ ಗಳಿದ್ದು, ಪುತಿನ ಅವರ ಪ್ರಬಂಧ ಮತ್ತು ಕಾವ್ಯಮೀಮಾಂಸೆಯನ್ನು ವಿಮರ್ಶೆಗೆ ಒಳಪಡಿಸುತ್ತವೆ. ಪುತಿನ ಅವರ ಏಕೈಕ ಕಥಾಸಂಕಲನ 'ಧ್ವಜರಕ್ಷಣೆ'ಯ ಕುರಿತು ಸಹ ಒಂದು ಬರಹ ಇಲ್ಲಿದೆ. ಈ ಪುಸ್ತಕದ ಕುರಿತು, ಬೆನ್ನುಡಿಯಲ್ಲಿ ಶ್ರೀ ರಾಮಭಟ್ಟ ಅವರ ಮಾತುಗಳು ಗಮನಾರ್ಹ.

''ಡಾ. ಚಿಂತಾಮಣಿ ಕೊಡ್ಲೆಕೆರೆ ನಿರ್ಮಿಸಿದ 'ಕವಿಯ ಕನ್ನಡಿ'ಯು, ಕನ್ನಡದ ಶ್ರೇಷ್ಠ ಲೇಖಕರಲ್ಲಿ ಒಬ್ಬರಾದ ಪುತಿನ ಅವರ ಗದ್ಯಸಾಹಿತ್ಯ ಪ್ರಕಾರದ ಆಳ-ಅಗಲವನ್ನು ಪ್ರತಿಬಿಂಬಿಸುವ ಕೃತಿ. ಪುತಿನ ರಚಿಸಿದ ಲಲಿತ ಪ್ರಬಂಧಗಳೂ ಕಾವ್ಯಮೀಮಾಂಸೆಯ ಲೇಖನಗಳೂ 'ಪುತಿನ ಶೈಲಿ' ಎಂದೇ ಸ್ಥಾಪಿತವಾದಂಥವು. ಈ ಗದ್ಯ ಲೇಖನಗಳ ಸಮಗ್ರ ಆವೃತ್ತಿಯು ಪುತಿನ ಟ್ರಸ್ಟ್ ಪ್ರಕಟಣೆಯಲ್ಲಿ ಲಭ್ಯವಿದೆ. ಪುತಿನ ಅವರ ಗೀತರೂಪಕ ಮತ್ತು ಕಾವ್ಯಗಳಿಗೆ ಬಂದಿರುವಷ್ಟು ವಿಮರ್ಶಾ ಪ್ರತಿಕ್ರಿಯೆ, ಅವರ ಗದ್ಯ ಪ್ರಕಾರದ ಬರವಣಿಗೆಗೆ ಸಂದಾಯವಾಗಿಲ್ಲ. ಈ ಗದ್ಯ ಸಾಹಿತ್ಯದ ವಿಶ್ಲೇಷಣೆ ಮತ್ತು ವಿಮರ್ಶೆ ಪುಸ್ತಕ ರೂಪದಲ್ಲಿ ಇಡಿಯಾಗಿ ಪ್ರಕಟಗೊಳ್ಳುತ್ತಿರುವುದು ಇದೇ ಮೊದಲು. ಮೂಲವನ್ನೇ ಓದಬಯಸುವ ಸಾಹಿತ್ಯಾಸಕ್ತರಿಗೆ ಚಿಂತಾಮಣಿಯವರ ಕೃತಿ ಚಿಮ್ಮು ಹಲಗೆಯಂತಿದೆ. ಸ್ವಯಂ ಕವಿಯೂ ವಿಮರ್ಶಕರೂ ಆದ ಲೇಖಕರು ಪುತಿನ ಅವರ ಗದ್ಯ ಬರವಣಿಗೆಯ ಆಶಯಗಳನ್ನು ಪ್ರಾತಿನಿಧಿಕವಾಗಿ ಉಲ್ಲೇಖಿಸುತ್ತ ಮುಂದಿನ ಓದಿಗೆ ಅಣಿಗೊಳಿಸುವ ಕೌಶಲವನ್ನು ವಿಮರ್ಶಾತ್ಮಕವಾಗಿಯೂ ತೋರಿದ್ದಾರೆ. ಕಾವ್ಯಮೀಮಾಂಸೆಯ ಪ್ರಮೇಯ ವಿಚಾರಗಳನ್ನು ಸಾಧಾರವಾಗಿ ಚರ್ಚಿಸಿರುವುದೂ ತುಂಬ ಪ್ರಯೋಜನಕಾರಿ. ಕಾವ್ಯಮೀಮಾಂಸೆಗೆ ಸಂಬಂಧಿಸಿದ ಪುತಿನ ನಿಲುವುಗಳಿಗೆ ಎದುರಾದ ವಿಮರ್ಶೆಯ ಅಭಿಪ್ರಾಯಗಳನ್ನು ಸಾಂದರ್ಭಿಕವಾಗಿ ಚಿಂತನೆಗೆ ಒಡ್ಡುತ್ತ ಲೇಖಕರು ಸ್ವಾಭಿಪ್ರಾಯವನ್ನು ವಿನಯದಿಂದ ಸೂಚಿಸಿದ ಬಗೆ ಹಿತಕರ ಸಹೃದಯ ಸಂವಾದವನ್ನು ಆಯಾಚಿತವಾಗಿ ಒದಗಿಸಿದೆ.'' (ಬೆನ್ನುಡಿಯಲ್ಲಿ ಶ್ರೀರಾಮ ಭಟ್ಟ)

ಯುವಪ್ರೇಮಿಗಳ ಕಥನ

» ಶಿವ

ಅನೂಹ್ಯ - ಇದು ಡಾ. ಕೆ.ಬಿ.ಶ್ರೀಧರ್ ಅವರ ನಾಲ್ಕನೆಯ ಕಾದಂಬರಿ. ಇದಕ್ಕೂ ಮುನ್ನ ಅವರು ಪಂಚಮುಖಿ, ಸುಪ್ತ ಹಾಗೂ ಬನಗಿರಿ ಗೇಟೆಡ್ ಕಮ್ಯುನಿಟಿ ಎಂಬ ಕಾದಂಬರಿಗಳನ್ನು ಹೊರತಂದಿದ್ದಾರೆ. ವೃತ್ತಿಯಲ್ಲಿ ಮನೋವೈದ್ಯರಾಗಿರುವ ಇವರು, ತಮ್ಮ ಕೃತಿಗಳಲ್ಲಿ ವೈದ್ಯಕೀಯ ವಿಶ್ಲೇಷಣೆಗೆ ಒತ್ತುಕೊಡುವಂತೆ ಕಂಡುಬಂದರೂ, ಹೊಸ ನೆಲೆಗಳನ್ನು ಹುಡುಕುವ ಸಾಹಸವನ್ನೂ ಮಾಡುತ್ತಿದ್ದಾರೆ. ಅನೂಹ್ಯ ಕಾದಂಬರಿಯ ಕುರಿತಾಗಿ, ಲೇಖಕರು ಹೇಳಿಕೊಂಡ ಮಾತುಗಳು ಗಮನ ಸೆಳೆಯುತ್ತವೆ : ''ಹೊಸ ನೆಲೆಗಳನ್ನು ಹುಡುಕುತ್ತಲೇ ಸಾಗುತ್ತಿರುವ ಮನುಷ್ಯನಿಗೆ, ಎಡತಾಗುತ್ತಲೇ ಇರುವ ಪ್ರಶ್ನೆ 'ನಾನ್ಯಾರು?'. ಇದು ಅಧ್ಯಾತ್ಮದ 'ಅಲೌಕಿಕ ನಾನು' ಅಲ್ಲ. ಬದಲಿಗೆ, ನಮ್ಮ ಅರಿವಿನಲ್ಲೇ ಇರುವ 'ಲೌಕಿಕ ನಾನು'. ಜಟಿಲವಾದ ಪ್ರಶ್ನೆಯಾದ್ದರಿಂದ, ಕಟ್ಟಿಕೊಳ್ಳುವ ಉತ್ತರವೂ ಶಿಥಿಲವಾಗಿರುತ್ತದೆ. ರಾಜ್ಯದ ನಾನಾ ಕಡೆಗಳಿಂದ ಬೆಂಗಳೂರಿನಂತಹ ಮಹಾನಗರಕ್ಕೆ ಬಂದು ಬದುಕು ಕಟ್ಟಿಕೊಳ್ಳುವ ಯುವಕ ಯುವತಿಯರನ್ನು ಕಾಡುವುದೂ ಇದೇ ಪ್ರಶ್ನೆ. ಈ ಕಾದಂಬರಿಯಲ್ಲಿರುವುದು ಅಂತಹ ಯುವಪ್ರೇಮಿಗಳಿಬ್ಬರ ಕಥನ. ಜನಸಮೂಹವನ್ನು ಅಪ್ಪಳಿಸಿದ ಕರೋನಾದ ಹಿನ್ನೆಲೆಯಲ್ಲಿ ನಡೆಯುವ ಪ್ರೇಮ ಕಥನ. ಅವರು ದಂಪತಿಗಳಾದ ನಂತರವೂ ವಿಸ್ತರಿಸುವ ದಾಂಪತ್ಯದ ಕಥನ. ನೈಜ ಬದುಕು, ಪ್ರಾರಂಭ ಹಾಗೂ ಅಂತ್ಯ ಎಂಬ ಒತ್ತಡಗಳಿಂದ ಮುಕ್ತವಾಗಿರುವುದರಿಂದ, ಇಲ್ಲಿನ ಪಾತ್ರಗಳಿಗೂ ಆ ಹೊರೆಯನ್ನು ಹೇರಲಾಗಿಲ್ಲ.''(ಬೆನ್ನುಡಿಯಲ್ಲಿ) ಹೊಸ ಪ್ರಯೋಗದ ರೂಪದಲ್ಲಿ ಹೊರಬಂದಿರುವ ಈ ಕಾದಂಬರಿಯು, ಗಂಭೀರ ವಿಮರ್ಶೆಯನ್ನು ಬೇಡುತ್ತದೆ ಎನ್ನಬಹುದು. ಕಾದಂಬರಿಕಾರರೇ ತಾವು ಸ್ವತಃ ಈ ಕಾದಂಬರಿಯನ್ನು ಪ್ರಕಟಿಸಿರುವುದು ವಿಶೇಷ.

ಅನೂಹ್ಯ
ಲೇ: ಡಾ. ಶ್ರೀಧರ್ ಕೆ.ಬಿ.
ಪ್ರ: ಶ್ರೀಧರ್ ಕೆ.ಬಿ.
9449783510
ಬೆಲೆ ರು.220/-

ಸ್ತ್ರೀ ಧ್ವನಿಯ ಕಥೆಗಳು

» ಎನ್. ನಿಖಿತಾ ಅಡವೀಶಯ್ಯ

ನಮ್ಮ ಬುದ್ಧಿಗೆ ಸಾಣೆ ಹಿಡಿದು ಚಿಂತನೆಗೆ ಹಚ್ಚುವ ಗುಣವನ್ನು 'ಬೇಸೂರ್' ಕೃತಿ ಹೊಂದಿದೆ. ಇದು ವಿದ್ಯಾ ಭರತನಹಳ್ಳಿ ಅವರ ಪ್ರಥಮ ಕಥಾಸಂಕಲನ. ಇಲ್ಲಿನ ಕತೆಗಳು ನಮ್ಮ ಸುತ್ತಮುತ್ತ ನಡೆಯುತ್ತಿರುವ ಪಾತ್ರಗಳಾಗಿ ಗೋಚರಿಸುತ್ತವೆ. ಮಲೆನಾಡಿನ ಆಡು ಮಾತುಗಳು ಭಾಷೆಗೆ ಮೆರುಗು ತಂದಿವೆ. ಕೃತಿಯುದ್ದಕ್ಕೂ ಸಂಗೀತವೇ ಕಂಪು ಸೂಸುತ್ತಾ ಮುದಗೊಳಿಸುತ್ತದೆ.

'ಸೊರ್ಲೆ ಕುಡಿ ಕಟ್ನೆ ಸಾರು...', 'ಮಾಡ್ಗುಳಿಯಲ್ಲಿದ್ದ ಬೆಣ್ಣೆ' ಅಂದರೆ ಮಾಡಿನಲ್ಲಿ ನೇತು ಹಾಕಿರುವ ಮಡಕೆಯಲ್ಲಿರುವ ಬೆಣ್ಣೆ ಎಂದ ರ್ಥ. ಇಂತಹ ಭಾಷಾ ಬಳಕೆ ಪರ್ಯಾಯ ಪದಗಳ ಪ್ರಯೋಗಕ್ಕೆ ದಾರಿ ಎನಿಸಿವೆ. ಗುರು ಗಳ ಕೀರ್ತಿಗಿಂತ ಅಪ್ಪನ ಸಿಟ್ಟೇ ಮೇಲುಗೈ ಯಾಗುವ ಪರಿಯನ್ನು 'ಆಯಿ' ಕತೆಯಲ್ಲಿ ಕಾಣಬಹುದು. 'ಮರದೊಳಗಣ ಬೆಂಕಿ' ಕಥೆ ಯಲ್ಲಿ ಕಾಂಚನಾಳ ಅಸೂಯೆಯ ಸುಡುಜ್ವಾಲೆ ಕಲಾಶ್ರೀ ಬದುಕಿಗೆ ಕಿಚ್ಚು ಹಚ್ಚಿದ್ದು ಜೀವನದು ದ್ದಕ್ಕೂ ಆ ಗಾಯ ಹಸಿಯಾಗಿಯೇ ಉಳಿ ಯುವ ಪರಿ ಮನಕಲಕುತ್ತದೆ. 'ವಿಭಕ್ತ' ಕತೆಯು ಸಿಟಿ ಜನರು ಹೇಗೆ ಪರಿಪಾಟಲಿನಿಂದ ಜೀವಿಸುತ್ತಾರೆ, ಹಳ್ಳಿಗರು ಹೇಗೆ ಸಿಟಿ ಜನರನ್ನು ತಪ್ಪಾಗಿ ಅರ್ಥೈಸುತ್ತಾರೆ ಎಂಬುದನ್ನು ಎಳೆಎಳೆ ಯಾಗಿ ತಿಳಿಸುತ್ತದೆ. ಪ್ಯಾರಾಸೋಮ್ನಿಯಾ ಕಾಯಿಲೆಯ ಬಗೆಗೂ ಕತೆಗಾರ್ತಿ ಬೆಳಕು ಚೆಲ್ಲಿದ್ದಾರೆ.



ಬೇಸೂರ್
ಲೇ : ವಿದ್ಯಾ ಭರತನಹಳ್ಳಿ
ಪ್ರ : ವೀರಲೋಕ, ಬೆಂಗಳೂರು
7022122121
ಬೆಲೆ : 125/-

ಇಂತಹದ್ದೇ ಇನ್ನೊಂದು ಕತೆ 'ಹೇಳೇ ಮೇದಿನಿ'. ಇಂಪೋಟೆಂಟ್ ಎಂದು ಗೊತ್ತಿ ದ್ದರೂ ಸಹ ಸಮಾಜದ ಕಣ್ಣಲ್ಲಿ ದಂಪತಿಗಳಂತೆ ಕಾಣಲು ಮದುವೆಯಾಗುವುದು ಸಾಧುವೇ? ಅಂತಹ ಮದುವೆಗಳು ಎಂದಿಗೂ ಉಳಿಯ ಲಾಗದು. ಕಾನೂನಿನ ಚೌಕಟ್ಟಿನಲ್ಲಿ ಈ ಮದುವೆ ಕ್ರೌರ್ಯವೆನಿಸುತ್ತದೆ. ಮೈಸವರಿದ ಬಣ್ಣ, ನೀನಿಲ್ಲದೆ ಕತೆಗಳು ಹೆಣ್ಣು ಗಂಡಿನ ವಾಂಛೆ, ಪ್ರೇಮದ ತೊಯ್ದಾಟ ವನ್ನು ತೆರೆದಿಡುತ್ತದೆ. ಕಡೆಯಲ್ಲಿ ಪ್ರೇಮವನ್ನೇ ಗೆಲ್ಲಿಸುತ್ತಾರೆ ಕತೆಗಾರ್ತಿ. 'ಮೈಸವರಿದ ಬಣ್ಣ' ಕತೆಯ ನಾಯಕಿ ಮುಕ್ತಾಳ ಮುಕ್ತತೆ ಇಂದಿನ ಕಾಲಮಾನಕ್ಕೆ ಒಗ್ಗುವಂಥದ್ದು. 'ನೀನಿಲ್ಲದೆ...' ಕತೆಯ ಕೊನೆಯ ಸಾಲುಗಳೂ ಸಹ ಓದುಗರ ಮನೋನಗರಿಯ ಹಳೆಯ ನಿಲ್ದಾಣದೆಡೆ ಗೊಮ್ಮೆ ಇಣುಕುವಂತೆ ಮಾಡುತ್ತದೆ.

ಗಂಡಸಿನ ಅಹಂ ಕರಗಿದರೆ ಮಾತ್ರವೇ ಹೆಣ್ಣಿನ ಸ್ವರಕ್ಕೆ ಮೇಳವಾಗುವುದು ಎಂಬುದನ್ನು 'ಬೇಸೂರ್' ಕತೆಯು ಸ್ಪಷ್ಟಪಡಿಸುತ್ತಾ ಹೋಗುತ್ತದೆ. ಬೇರು ಹುಡುಕಿ ಹೊರಟ ವಿಷ್ಣುವಿನ ಬಗೆಗೆ ಅಂತಃಕರಣದ ಯಶೋದೆಯ ನಿರಾಕರಣ ಭಾವ 'ಬಳ್ಳಿಯು ತಾನು ಹಬ್ಬಿದ ಮರವನ್ನು ಮರೆಯ ಬಾರದಿತ್ತು' ಎಂಬ ಅಂಶವು 'ನಿರ್ಗಮನ' ಕತೆಯಲ್ಲಿ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಒಟ್ಟಾರೆ ಹೇಳಬೇಕೆಂದರೆ, 'ಬೇಸೂರ್' ಸ್ತ್ರೀ ದನಿಯನ್ನು ಪ್ರತಿಧ್ವನಿಸುತ್ತವೆ. ಪ್ರತಿಯೊಂದು ಕತೆಯಲ್ಲೂ ಹೆಣ್ಣಿನ ತುಮುಲ, ಹೋರಾಟಗಳನ್ನು ಕಾಣುತ್ತೇವೆ.

ಚಿತ್ರ ಸಂಗೀತ ವಿಶ್ವಕೋಶ

ಚಲನಚಿತ್ರ ಸಂಗೀತ ಕ್ಷೇತ್ರದ ಅಪಾರ ಮಾಹಿತಿ ಮತ್ತು ವಿಶ್ಲೇಷಣೆಯನ್ನು ಹೊಂದಿರುವ ಮಹತ್ವದ ಪುಸ್ತಕವಿದು.

» ದೀಕ್ಷಿತಾ.ಎಚ್.ಬಿ

ಎನ್.ಎಸ್.ಶ್ರೀಧರ ಮೂರ್ತಿಯವರ 'ಕನ್ನಡ ಚಿತ್ರಗೀತೆಗಳ ಚಾರಿತ್ರಿಕ ಅಧ್ಯಯನ' ಕೃತಿಯು ಹನ್ನೆರಡು ವರ್ಷಗಳ ಹಿಂದೆ ಕರ್ನಾಟಕ ಚಲನಚಿತ್ರ ಅಕಾಡೆಮಿಯಿಂದಲೇ ಪ್ರಕಟವಾಗಿತ್ತು. ಈಗ ಇದೇ ಸಂಸ್ಥೆ ಅವರ 'ಕನ್ನಡ ಸಿನಿಮಾ ನಾದವಿನ್ಯಾಸ' ಎನ್ನುವ ಕೃತಿಯನ್ನು ಪ್ರಕಟಿಸಿದೆ. ಇದು ಹಿಂದಿನ ಕೃತಿಯ ವಿಸ್ತೃತ ಆವೃತ್ತಿಯಲ್ಲ. ಹೊಸ ಸಾಧ್ಯತೆಗಳನ್ನು ಒಳಗೊಂಡ ಪ್ರಧಾನವಾಗಿ ಸಂಗೀತವನ್ನು ತಾತ್ವಿಕವಾಗಿ ವಿಶಾಲ ಅರ್ಥದಲ್ಲಿ ಮತ್ತು ಕನ್ನಡ ಚಿತ್ರರಂಗವನ್ನು ಸೈದ್ಧಾಂತಿಕ ನೆಲೆಯಲ್ಲಿ ಹಿಡಿಯುವ ಮಹತ್ವಾಕಾಂಕ್ಷಿ ಪ್ರಯೋಗ. ಇದರಲ್ಲಿ ಏನಿದೆ ಎನ್ನುವುದಕ್ಕಿಂತ ಏನಿಲ್ಲ ಎಂದು ಕೇಳಬೇಕು ಅಂತಹ ವಿಶಾಲ ಸಾಧ್ಯತೆಗಳನ್ನು ಒಳಗೊಂಡ ವಿಶ್ವಕೋಶದ ಮಾದರಿಯ ಕೃತಿ ಇದು.

ಇಲ್ಲಿ ಅಗಾಧತೆ ಮಾತ್ರವಲ್ಲ ಸೂಕ್ಷ್ಮತೆ ಕೂಡ ಇದೆ. ಪ್ರತಿ ಪರಿಕಲ್ಪನೆಯನ್ನು ಅದರ ಅತ್ಯಂತಿಕ ನೆಲೆಗೆ ತೆಗೆದುಕೊಂಡು ಹೋಗಿ ವಿಶ್ಲೇಷಿಸುವ ಲೇಖಕರ ಶೈಲಿ ನಿಜಕ್ಕೂ ಬೆರಗನ್ನು ಹುಟ್ಟಿಸುತ್ತದೆ. ಭಾರತೀಯ ಸಂಗೀತ ಪರಂಪರೆಯನ್ನು ಹಿನ್ನೆಲೆಯಾಗಿಟ್ಟುಕೊಂಡ ಕೃತಿ ಕನ್ನಡ ಚಿತ್ರರಂಗವನ್ನು ಸಂಗೀತ ಪ್ರವೇಶಿಸಿದ ಕ್ರಮವನ್ನು ಚಾರಿತ್ರಿಕವಾಗಿ ವಿಶ್ಲೇಷಿಸುತ್ತದೆ. ಈ ಕೃತಿಯ ಸ್ವರೂಪದಲ್ಲಿ ಮೂರು ಮುಖ್ಯ ನೆಲೆಗಳನ್ನು ನಾವು ಗುರುತಿಸಬಹುದು. ತಾಂತ್ರಿಕ ಬೆಳವಣಿಗೆಗಳು: ಇದು ಸ್ಟುಡಿಯೋ ಪರಿಕಲ್ಪನೆ ಬೆಳೆದ ಕ್ರಮದಿಂದ ಹಿಡಿದು ವಾದ್ಯಗೋಷ್ಠಿಯಲ್ಲಾದ ಮಾರ್ಪಾಟುಗಳು, ಆಧಾರ ವಾದ್ಯದಲ್ಲಾದ ಬೆಳವಣಿಗೆಗಳು ರೆಕಾರ್ಡಿಂಗ್‌ನಲ್ಲಿನ ಪ್ರಗತಿ ಎಲ್ಲವನ್ನೂ ಗುರುತಿಸುತ್ತದೆ. ಇನ್ನೊಂದು ನೆಲೆಯಲ್ಲಿ ಗ್ರಾಮಾಫೋನ್ ಪ್ಲೇಟ್‌ಗಳು ಬರುವುದಕ್ಕಿಂತ ಮೊದಲಿನ ವಿದ್ಯಮಾನದಿಂದ ಹಿಡಿದು, ಗ್ರಾಮಾಫೋನ್ ಪ್ಲೇಟ್‌ಗಳ ಸುವರ್ಣ ಯುಗ, ಕ್ಯಾಸೆಟ್ ಬಂದ ಕ್ರಮ, ಅಲ್ಲಿಂದ ಮುಂದೆ ಸಿಡಿ ತಟ್ಟೆಗಳು, ಪೆನ್ ಡ್ರೈವ್‌ಗಳು ಈಗಿನ ಕ್ಲೌಡ್ ಎಲ್ಲವನ್ನೂ ಹೇಳಲಾಗಿದೆ. ಹೀಗೆ ವಿವರ ಕೊಡುವಾಗ ಕೂಡ ಕೇವಲ ವಿವರಗಳಿಗೆ ಸೀಮಿತವಾಗದೆ ಅದು ಸಂಗೀತದ ಮೇಲೆ ಬೀರಿದ ಪ್ರಭಾವವನ್ನು ಚರ್ಚಿಸಲಾಗಿದೆ. ಮೂರನೇ ನೆಲೆಯ ಚರ್ಚೆ ಪ್ರಧಾನ ಸಂಗೀತ ನಿರ್ದೇಶಕರ ಕುರಿತಾಗಿದೆ. ಅವರ ವ್ಯಕ್ತಿಚಿತ್ರಣಕ್ಕಿಂತ ಅವರು ಸಂಗೀತದ ವ್ಯಾಕರಣ ವನ್ನು ಬೆಳೆಸಿದ ಕ್ರಮಕ್ಕೆ ಮಹತ್ವ ನೀಡಲಾಗಿದೆ. ಈ ಕೃತಿಯ ವಿಶೇಷವೆಂದರೆ ಸೌಂಡ್ ರೆಕಾರ್ಡಿಸ್ಟ್‌ಗಳು, ಮ್ಯೂಸಿಕ್ ಕಂಡೆಕ್ಟರ್‌ಗಳು,ಅರೇಂಜರ್ ಗಳು, ಟ್ರ್ಯಾಕ್ ಸಿಂಗರ್‌ಗಳು ಹೀಗೆ ಹಲವು ರೀತಿಯಲ್ಲಿ ಸಂಗೀತಕ್ಕೆ ಕೊಡುಗೆ ನೀಡಿದವರ ಕುರಿತು ವಿವರಣೆಗಳನ್ನು ನೀಡಲಾಗಿದೆ. ಇವರ ಕುರಿತು ಇದುವರೆಗೂ ಚರಿತ್ರೆಯಲ್ಲಿ ದಾಖಲಾಗದೆ ಇರುವುದರಿಂದ ಇದು ಬಹು ದೊಡ್ಡ ಸಾಂಸ್ಕೃತಿಕ ಕೊಡುಗೆ ಕೂಡ ಆಗಿದೆ.

ಈ ಕೃತಿಯ ಇನ್ನೊಂದು ಮಹತ್ವದ ನೆಲೆ ಇದು ನಡೆಸಿರುವ ತಾತ್ವಿಕ ಚರ್ಚೆಗಳು, ಹೀಗೆ ಚರ್ಚೆ ಮಾಡುವಾಗ ಅದನ್ನು ಕನ್ನಡ ಚಿತ್ರರಂಗಕ್ಕೆ ಸೀಮಿತವಾಗಿಸದೆ ವಿಶಾಲಾರ್ಥದಲ್ಲಿ ಬೆಳೆಸಲಾಗಿದೆ. ಉದಾಹರಣೆಗೆ ಸೌಂಡ್ ಪ್ರೂಫಿಂಗ್ ಪದ್ಧತಿ ಕುರಿತು ಚರ್ಚೆ ಮಾಡುವಾಗ ಶಂಕರ್ -ಜೈಕಿಷನ್ 'ಬರಸತ್' ನಲ್ಲಿ ಮಾಡಿದ ಪ್ರಯೋಗಗಳನ್ನು ಚರ್ಚೆ ಮಾಡಲಾಗಿದೆ. (ಪುಟ 45), ಸಂಗೀತ ನಿರ್ದೇಶಕಿಯರು ಏಕೆ ಹೆಚ್ಚಿನ ಸಂಖ್ಯೆಯಲ್ಲಿ ಬಂದಿಲ್ಲ ಎನ್ನುವ ಅಂಶವನ್ನು ತೆಗೆದು ಕೊಂಡಾಗ ಅದನ್ನು ಭಾರತೀಯ ಭಾಷೆಗಳಿಗೆ ವಿಸ್ತರಿಸಿ ಚರ್ಚಿಸಲಾಗಿದೆ (ಪುಟ 219). ದೆ. ಈ ಕೃತಿಯ ಕೆಲವು ಭಾಗದ ಓದಿಗೆ ಕೊಂಚ ತಾತ್ವಿಕ ಹಿನ್ನೆಲೆ ಬೇಕು, ಹೀಗಿದ್ದರೂ ಸಂಗೀತದ ಪ್ರವೇಶ ಇಲ್ಲದವರೂ ಕೃತಿಯನ್ನು ಸಮರ್ಥವಾಗಿ ಗ್ರಹಿಸಿ ಕೊಳ್ಳಲು ಅವಕಾಶವಿದೆ. ಕೃತಿಯ ನಿರೂಪಣಾ ಶೈಲಿ ಸರಳ, ಆದರೆ ವಿಷಯ ಗಹನವಾಗಿದೆ. ವಸ್ತುವಿನ ಗಹನತೆಯನ್ನು ಸಡಿಲಿಸದೆ ಸರಳವಾಗಿ ಬರೆಯುವ ಶೈಲಿ ಶ್ರೀಧರ ಮೂರ್ತಿಯವರಿಗೆ ಸಿದ್ದಿಸಿದೆ. ಈ ಪುಸ್ತಕವು ಕನ್ನಡ ಸಂಗೀತ ಲೋಕಕ್ಕೆ, ಚಿತ್ರರಂಗಕ್ಕೆ ವಿಶಾಲವಾಗಿ ಸಾಸ್ಕೃತಿಕ ಕ್ಷೇತ್ರಕ್ಕೆ ಬಹು ದೊಡ್ಡ ಕೊಡುಗೆ.



ಕನ್ನಡ ಸಿನಿಮಾ ನಾದ ವಿನ್ಯಾಸ
ಲೇ: ಎನ್.ಎಸ್.ಶ್ರೀಧರ ಮೂರ್ತಿ
9538181140
ಪ್ರ: ಕರ್ನಾಟಕ ಚಲನಚಿತ್ರ ಅಕಾಡಮಿ
ಮೊದಲ ಮುದ್ರಣ: 2025 ಬೆಲೆ ರು.210/-

ಕರಾವಳಿಯಿಂದಾರಂಭಿಸಿ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಗೋವಾ, ಕೇರಳ ಪ್ರಾಂತಗಳ ಗಡಿಯನ್ನಾವರಿಸಿ ಹರಡಿಕೊಂಡ ಕನ್ನಡ ನೆಲದ ವೈವಿಧ್ಯಮಯ ಬಣ್ಣಗಳಷ್ಟೇ, ಕನ್ನಡ ಭಾಷೆಗೂ ಹಲವಾರು ರಂಗಿನ ಉಡುಗೆ ತೊಡುಗೆ. ಆದರೆ ಒಳಗಿರುವುದೊಂದೇ, ಕನ್ನಡ-ಕಸ್ತೂರಿ ಕನ್ನಡ.

ನೀವು ಹಿಂದಾಗಡೆಯಿಂದ ಬರ್ರಿ

» ಡಾ.ಅಶೋಕ್ ಸಾತ್ಪುತೆ

ನನ್ನ ಊರು ಬೆಳಗಾವಿ. ಅಲ್ಲಿಯ ಕನ್ನಡಕ್ಕೆ ಮರಾಠಿ ಭಾಷೆಯ ತೆಳು ಲೇಪವಿದೆ. 'ಶಂಭರ ದೋನಶೇ ಮಂದಿ ಬರಬಹುದು' ಎಂಬ ವಾಕ್ಯದಲ್ಲಿ 'ಶಂಭರ ದೋನಶೇ' ಮರಾಠಿಯ ಸಂಖೆಗಳು; ನೂರಿನ್ನೂರು ಎಂಬ ಅರ್ಥ ನೀಡುವ ಪದಗಳು. ನಾನು ಬೆಂಗಳೂರಿಗೆ ನೌಕರಿಗಾಗಿ ಬಂದ ಹೊಸತು. ಇಲ್ಲಿಯ ಕನ್ನಡ ಮಾತನಾಡಲು ತಡವರಿಸಬೇಕಾಗುತ್ತಿತ್ತು. ಮಾತಿನ ಓಟದಲ್ಲಿ ಒಮ್ಮೊಮ್ಮೆ ಧಾಟಿ ಬದಲಾಗಿ ನಮ್ಮ ಬೆಳಗಾವಿ ಕನ್ನಡದ ಶಬ್ದಗಳು ಧುಮುಕಿ ಆಭಾಸವಾಗುವುದೂ ಉಂಟು.

ಒಂದು ಸಾರಿ ನಮ್ಮ ಮನೆಗೆ ನಮ್ಮೂರಿನ ನೆಂಟರೊಬ್ಬರು ಬಂದಿದ್ದರು. ಊಟಮಾಡಿ ಹರಟೆ ಹೊಡೆಯುತ್ತ ಕುಳಿತಿರುವಾಗ ಪಕ್ಕದ ಮನೆಯ ಗೆಳೆಯರು ತಮ್ಮ ಚಿಕ್ಕ ಮಗುವನ್ನು ಜೊತೆಗೆ ಕರೆದುಕೊಂಡು ಬಂದು ಹರಟೆಗೆ ಸೇರಿಕೊಂಡರು. ಆ ಪುಟ್ಟ ಹುಡುಗಿ ಎಲ್ಲರ ಜೊತೆಯಲ್ಲಿ ಬೆರೆಯುತ್ತ ಓಡಾಡುತ್ತ ಚೂಟಿಯಾಗಿ ಮಾತನಾಡುತ್ತ ಕುಣಿದಾಡುತ್ತಿತ್ತು. ನಮ್ಮ ಬಂಧುಗಳು ಆ ಹುಡುಗಿಯನ್ನು ತೊಡೆಯಮೇಲೆ ಕೂಡ್ರಿಸಿಕೊಂಡು ಅದರ ಜೊತೆಗೆ ಮಾತನಾಡುತ್ತ ಅದರ ತಂದೆಯನ್ನುದ್ದೇಶಿಸಿ 'ಭಾಳ ಬೆರಕಿ ಇದಾಳ್ರಿ ನಿಮ್ಮ ಹುಡುಗಿ' ಎಂದರು. ಹುಡುಗಿಯ ತಂದೆ ಒಂದು ಕ್ಷಣ ಬೆಚ್ಚಿಬಿದ್ದು ಅವರ ಮುಖವನ್ನೇ ನೋಡಹತ್ತಿದರು. ಅವರ ಮುಖದಲ್ಲಿ ಬೇಸರ, ಕೋಪ ಮೂಡುತ್ತಿತ್ತು. ತಕ್ಷಣ ನಾನು 'ಏನಾಯಿತು' ಎಂದು ಕೇಳಿದೆ. ನಮ್ಮ ನೆಂಟರೂ ಕೂಡ ಏನು ತಪ್ಪಾಯಿತು ಎಂದು ಮುಜುಗರಪಡುತ್ತಿರುವಂತೆ ಕಂಡಿತು. ನನ್ನ ಅರ್ಧಾಂಗಿ ಫಕ್ಕನೆ ನಗುವದಕ್ಕಾರಂಭಿಸಿದಾಗ ನನಗೂ ತಕ್ಷಣ ಸನ್ನಿವೇಶದ ಅರಿವಾಗಿ ನನಗೂ ನಗೆ ತಡೆಯಲಾಗಲಿಲ್ಲ. ನಾನು ವಿಷಯವನ್ನು ವಿವರಿಸಿದಾಗ ನಗೆ ಸಾಂಕ್ರಾಮಿಕವಾಯಿತು. ಬೆಳಗಾವಿ ಕಡೆ 'ಬೆರಕಿ' ಅಂದರೆ ಜಾಣೆ, ಚೂಟಿ ಎಂದರ್ಥ. ಬೆರಕಿ ಎಂದರೆ 'ಬೆರಕೆಯಾದದ್ದು' ಎಂದು ನನ್ನ ಸ್ನೇಹಿತರು ಅಪಾರ್ಥ ಮಾಡಿಕೊಂಡಿದ್ದು ಗೊಂದಲಕ್ಕೆ ಕಾರಣವಾಗಿತ್ತು.

ನೀವು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ನಿಪ್ಪಾಣಿ, ಜತ್ತ ತಾಲೂಕುಗಳ ಒಳನಾಡಿನಲ್ಲಿ ಓಡಾಡಿದರೆ, ಅಲ್ಲಿಯ ಜನರಾಡುವ ಕನ್ನಡ ಭಾಷೆ, ಒಂದಿನಿತೂ ಅರ್ಥವಾಗದಿದ್ದರೆ ಆಶ್ಚರ್ಯವಿಲ್ಲ.

'ಯಾನ್, ಮ್ಯೆಂದಾಗ ಬ್ಯೆಂದಿ ಹೌಂದ್? ಯಾನಾ, ಮನೀಕಡೆ ಎಲ್ಲಾ ಠೀಕ್ ಹಾರ ಹೌಂದ್ ಇಲ್? ನಿಮ್ ಪೋರಿ ಗಾಠಾಸಿತ್ತ ಮೊನ್ನಿ ಹರಿವತ್ತ; ಭಲೋ ಹಾಳ.'

ಬೆಂಗಳೂರು, ಮೈಸೂರಿನವರು, ಇದು ಕನ್ನಡವೇ ಅಲ್ಲ ಎಂದು ಸಾಧಿಸಬಹುದು. ಅದು ಕನ್ನಡವೇ. ಇದು ಸಾಮಾನ್ಯವಾಗಿ ಆ ಭಾಗದ ಕನ್ನಡ ಜೈನರು ಆಡುವ ಭಾಷೆ. 'ಏನು,ಮಧ್ಯಾಹ್ನ ಬಂದೆಯಾ? ಏನು, ಮನೆ ಕಡೆ ಎಲ್ಲರೂ ಆರಾಮಾಗಿದ್ದಾರೋ ; ನಿಮ್ಮ ಹುಡುಗಿ ಸಿಕ್ಕಿದ್ದಳು ಮೊನ್ನೆ ಬೆಳಿಗ್ಗೆ; ಚೆನ್ನಾಗಿದ್ದಾಳೆ' ಇದು ಮೇಲಿನ ಕನ್ನಡದ ಗ್ರಾಂಥಿಕ ಅವತಾರ. ಮಿರ್ಜಿ ಅಣ್ಣಾರಾಯರು ಬರೆದ 'ನಿಸರ್ಗ' ಕಾದಂಬರಿ ಓದಿದರೆ ಆ ಕನ್ನಡದ ಮಜಾ ಅನುಭವಿಸಬಹುದು.

ಬೆಂಗಳೂರಿಗೆ ಬಂದ ಹೊಸತು; ಭಾನುವಾರ ಮಧ್ಯಾಹ್ನ. ನಾನು ಊಟ ಮಾಡಿ ವಿಶ್ರಮಿಸುತ್ತಿದೆ. ನನ್ನ ಶ್ರೀಮತಿ ಪುಸ್ತಕ ಹಿಡಿದುಕೊಂಡು ಹೊರಬಾಗಿಲಲ್ಲಿ ಕುಳಿತ್ತಿದ್ದಳು. ಬಾಗಿಲಲ್ಲಿ ಮಾತುಗಳು ಕೇಳಿಸಿದವು:

''ನಮಸ್ಕಾರ, ಯಜಮಾನರು ಇಲ್ವೇನಮ್ಮ?''

'' ಇದ್ದಾರ್ರೀ,ಮಲಗೀದಾರ,ಏನ ಬೇಕಾಗಿತ್ತು?'' ನನ್ನ ಹೆಂಡತಿಯ ಧ್ವನಿ.

''ನಾವು ರಾಮೋತ್ಸವಕ್ಕೆ ಚಂದಾಕೇಳಬೇಕೆಂದು ಬಂದಿದ್ವಿ..''

''ಹಂಗ ಅವರು ಮಲಗ್ಯಾರಲ್ರೀ. ಹೀಂಗ್ ಮಾಡರಿ..ನೀವು ಹಿಂದಾಗಡೆಯಿಂದ ಬರ್ರಿ; ಕೊಡ್ತಾರ''.

'' ಹಾಂ! ಹಿಂದಾಗಡೆ..?''

ಬಂದವರು ಕಕ್ಕಾಬಿಕ್ಕಿಯಾದಂತೆ ತೋರಿತು. ನನ್ನ ಅರ್ಧಾಂಗಿ ''ಹೂಂ..ಹಿಂದಾಗಡೆ ಬರ್ರಿ.ಇದೇ ಈಗ ಉಂಡ ಮಲಗ್ಯಾರ; ಕೊಡ್ತಾರ ಚಂದಾ. ನೀವ ಬರ್ರಿ ಹಿಂದಾಗಡೆ''.

''ಕ್ಷಮಿಸಿ, ನಿಮ್ಮ ಯಜಮಾನರು ಹಿಂದುಗಡೆ ಇದ್ದರೆ, ನಮಗೆ ಹೋಗೋದಕ್ಕೆ ದಾರಿ ಗೊತ್ತಿಲ್ಲ. ಸ್ವಲ್ಪ ನೀವೇ ಕರೆದರೆ..'' ಒಂದು ಕ್ಷಣ ಮೌನ. ನಂತರ ನನ್ನ ಹೆಂಡತಿ ಹೇಳಿದ್ದು ಕಿವಿಗೆ ಬಿತ್ತು 'ನೀವು ಆಮೇಲೆ ಬರ್ರಿ'.

ಅವರನ್ನು ಸಾಗಹಾಕಿ ಅವಳು ಒಳಗೆ ಬಂದಾಗ ನಾನು ಹಣೆ ಹಣೆ ಬಡೆದು ಕೊಳ್ಳುತ್ತಿದ್ದಂತೆ ಇಬ್ಬರ ನಗುವಿಂದ ಮನೆ ತಂಬಿತು.'ಆಮೇಲೆ' ಎನ್ನುವ ಪದ 'ಹಿಂದಾಗಡೆ' ಆಗಿ ಅಷ್ಟು 'ಭಾನಗಡಿ' ಮಾಡಿತ್ತು; ಅಂದರೆ ಕಿತಾಪತಿ ಮಾಡಿತ್ತು.

ಒಂದೆರಡು ವರ್ಷ ಬಳ್ಳಾರಿಯಲ್ಲಿ ಇದ್ದಾಗ ಅಲ್ಲಿಯ ಕನ್ನಡಿಗರ ಬಾಯಲ್ಲಿ 'ಮಾಡಿಕೆಂಬೂದು, ಅಂಟಿಕೆಂಬೂದು, ತಗಂಬೂದು' ಎನ್ನುವ ಶಬ್ದಗಳು ನಮಗೆ ಹೊಸ ತರಹದ್ದಾಗಿ ಕಾಣಿಸಿಕೊಂಡು ತಮಾಷೆಯನ್ನುಂಟು ಮಾಡುತ್ತಿದ್ದವು. ಇನ್ನೊಂದು ಸಾರಿ ನನ್ನ ಅರ್ಧಾಂಗಿಗಾದ ಅನುಭವ. ಬೆಂಗಳೂರಿಗೆ ಬಂದ ಹೊಸತು. ಬೆಳಗಾವಿ ಕನ್ನಡದ ಧಾಟಿ ಅವಳ ಭಾಷೆಯಲ್ಲಿ ಇನ್ನೂ ತಾನೇ ತಾನಾಗಿತ್ತು.

ಹಹ್ಹಾಸ್ಯ!

ಅವಳು ಮನೆಕೆಲಸವನ್ನು ಮುಗಿಸಿ ಹೊರಬಾಗಿಲಲ್ಲಿ ನಿಂತಿರುವಾಗ ಪಕ್ಕದ ಮನೆಯವಳು ''ಆಯ್ತಾ ಕೆಲಸ?''ಎಂದು ಕೇಳಿದಳು.

''ಹೌದ್ರೀ, ಆಗ ಜಳಕಾಮಾಡ, ಕೆಲಸದಾಕಿಗಿ ಭಾಂಡೇ ಹಾಕಿ ಚಣ್ಣಂಗಿ ಕುದ್ಯಾಕ ಹಾಕಿ ಒಳಗಿನ ದಗದಾ ತೀರಿಸಿ ಒಗ್ಯಾನ ಒಗದು ಹೀಂಗ ಅಡ್ಡಾಗಿದ್ನಿ ನೋಡ್ರಿ,ಚಲೋ ಜಂಪ್ ಹತ್ತಿತ್ತ ..ಸುಡ್ಲಿ ಆ ನಾಯೊಂದ ಒಂದ ಸವನ ಒದರಾಕಹತ್ತಿ ಎಚ್ಚರಾತ ನೋಡ್ರಿ..''

ನನ್ನ ಹೆಂಡತಿಯ ಉತ್ತರ.

ಪಕ್ಕದ ಮನೆಯ ಹೆಂಗಸಿಗೆ ಆಘಾತ, ಗಲಬಿಲಿ .ಕಕ್ಕಾಬಿಕ್ಕಿಯಾದ ಅವಳ ತೆರೆದ ಬಾಯಿ ತೆರೆದೇ ಇತ್ತು. ಅವಳು ಒಂದೆರಡು ಕ್ಷಣ ಸ್ತಬ್ಧಳಾಗಿ ಆಮೇಲೆ ಸಾವರಿಸಿಕೊಂಡು 'ಏನ್ ಹೇಳಿದ್ರಿ! ನಾಯಿ ಜಂಪ್ ಮಾಡಿತಾ? ಚಣ್ಣ..ಅಂಗಿ..ಒಂದೂ ಅರ್ಥವಾಗಲಿಲ್ಲ ನೀವು ಹೇಳಿದ್ದು..ದಗದಾ..ಒಗ್ಯಾಣ..ಅಂದರೆ'

ಅರ್ಧಾಂಗಿಗೆ ಹೊಳೆಯಿತು ತಾನು ಮಾತಾಡಿದ ಕನ್ನಡ, ನೆರೆಯವಳಿಗೆ ಕೊಂಚವೂ ಅರ್ಥವಾಗಿಲ್ಲ ಎಂದು. ಆಮೇಲೆ ನಿಧಾನವಾಗಿ ವಿವರಿಸಬೇಕಾಯಿತು. ಇಲ್ಲಿಯ ಸ್ನಾನ ಅಲ್ಲಿಯ ಜಳಕವಾಗಿ, ಪಾತ್ರೆ, ಭಾಂಡೇ ಆಗಿ ಬಟ್ಟೆ ಇಗೆಯುವದು ಒಗ್ಯಾಣವಾಗಿ ಪರಿಣಮಿಸಿದ್ದವು. ಚಲೋ ಅಂದರೆ ಒಳ್ಳೆಯ, ಜಂಪ್ ಅಂದರೆ ತೂಕಡಿಕೆ-ನಿದ್ರಾಸ್ಥಿತಿ, ಎಂದು ತಿಳಿದು ಅವಳೂ ನಗಹತ್ತಿದಳು. ಒದರು ಎಂದರೆ ಬೊಗಳು, ಕೂಗು ಎಂದು ವಿಶದಪಡಿಸ ಬೇಕಾಯಿತು. ಚಣ್ಣಂಗಿ (ಮಸೂರ) ಎಂದರೆ ಒಂದು ವಿಧದ ಧಾನ್ಯ ಎಂದು ಕಷ್ಟಪಟ್ಟು ವಿವರಿಸಿದರೂ ಬೆಂಗಳೂರಿನವಳಿಗೆ ಅರ್ಥವಾಗದೇ ನನ್ನ ಹೆಂಡತಿ ಅಡಿಗೆ ಮನೆಯಿಂದ ಅದನ್ನು ತಂದೇ ತೋರಿಸಬೇಕಾಯಿತು.

ಅಂತೂ ಶಬ್ದಗಳ ಈ ಸರ್ಕಸ್ಸು ಒಳ್ಳೆಯ ಮನರಂಜನೆಗೆ ಕಾರಣವಾದದ್ದು ಸುಳ್ಳಲ್ಲ.

ಕನ್ನಡವೇ ಆದರೂ ಆ ಭಾಷೆಯ ವೈವಿಧ್ಯ ಅಚ್ಚರಿಗೊಳಸುವಷ್ಟು ಅದರ ಲಾಲಿತ್ಯ,ಗಡಸುತನ. ದಿನನಿತ್ಯದ ಬಳಕೆಯ ಶಬ್ದಗಳೂ ಉತ್ತರದಲ್ಲಿ ಒಂದು ವಿಧವಾದರೆ ಅವಕ್ಕೆ ಸಮನಾದ ಶಬ್ದಗಳು ದಕ್ಷಿಣದಲ್ಲಿ ಇನ್ನೊಂದು ವಿಧ. ಆದರೂ ಹೊರಡುವ ಅರ್ಥ ಒಂದೇ ,ವಿವಿಧತೆಯಲ್ಲಿ ಏಕತೆ.

ಬೆಂಗಳೂರು, ಮೈಸೂರು ಕಡೆಯ ಹಸು ಹುಬ್ಬಳ್ಳಿ ಬೆಳಗಾವಿಯ ಕಡೆ ಆಕಳಾಗುತ್ತದೆ. ಜಿಂಕೆ ಚಿಗರೆಯಾಗಿ, ಅಳಿಲು ಇಣಚಿಯಾಗಿ ಪರಿಣಮಿಸುತ್ತವೆ. 'ನಿಮ್ಮ ಖೂನ ಸಿಗವಲ್ತು' ಅಂದರೆ ನೀವು ಗುರುತು ಸಿಗಲಿಲ್ಲ ಎಂದಷ್ಟೇ ಅದರರ್ಥ.

ದಾವಣಗೆರೆಯಿಂದಾಚೆನ ಧಾರವಾಡ, ಬೆಳಗಾವಿ ಕನ್ನಡದಂತೆ ಕರಾವಳಿಯ ಮಂಗಳೂರು ಕನ್ನಡಕ್ಕೂ ಅದರದ್ದೇ ಆದ ಒಂದು ವೀಶಿಷ್ಟ್ಯವಿದೆ. 'ಭಾರಿ ತಲೆ ಬಿಸಿ, ಎಂತ ಮಾಡೂದು ಮಾರಾಯಾ ಈಗ; ಕೆಲ್ಸ ಪಡ್ಚ ಆಯ್ತುಲ್ಲ' ಮುಂತಾದ ಆಡುಭಾಷೆಯನ್ನು ಅವರ ಬಾಯಲ್ಲೇ ಕೇಳಬೇಕು. ಬಾಯಾರಿಕೆ, ಕವಳ, ಆಸರೆ, ಹಾಡಿ ಮುಂತಾದ ಪ್ರಾದೇಶಿಕ ಶಬ್ದಗಳನ್ನು ಅರ್ಥೈಸುವದು ಸ್ವಲ್ಪ ಕಷ್ಟವೇ ಆದೀತೇನೋ. ಕುಂದಾಪುರ ಕನ್ನಡದ್ದೇ ಒಂದು ವೈಶಿಷ್ಟ್ಯ. ಸಮಾ ಆತ್, ಅಕೇರಿ,ಉಂಡ್ಕಂಡ್ ಮಲ್ಕಣಿ, ಕಾಂಬದು ಮುಂತಾಗಿ. ಕೇಳಿಸಿಕೊಳ್ಳಿಕ್ಕೆ ಖುಷಿ. 'ನಿನ್ನ ಅಪ್ಪ ಹೋತ, ಮಗ ನೀ ಆಡು' ಎಂಬ ನುಡಿಗಟ್ಟು ಸಹ ಅಲ್ಲಿದೆ. ಅಂದರೆ, ಅಪ್ಪ ಹೋಗುತ್ತಿದ್ದಾನೆ, ಮಗನೇ ನೀನು ಆಟವಾಡು ಎಂದರ್ಥ!

ಬೆಳಗಾವಿಯ ವೈದ್ಯಮಿತ್ರನು ಮೈಸೂರಿನ ಹತ್ತಿರದ ಹಳ್ಳಿಯಲ್ಲಿ ವೈದ್ಯನಾಗಿ ಹೊಸದಾಗಿ ನೇಮಕಗೊಂಡಿದ್ದ. ಒಬ್ಬ ಗ್ರಾಮಸ್ಥ ತನ್ನ ಹೆಂಡತಿಗೆ ಜ್ವರ ಎಂದು ಹೇಳಿ ಔಷಧಿ ತೆಗೆದುಕೊಂಡು ಹೋಗಿದ್ದ. ಎರಡು ಮೂರು ದಿನ ಬಿಟ್ಟು ಬಂದಾಗ 'ಹೇಗಿದೆ''ಎಂದು ಡಾಕ್ಟರರು ವಿಚಾರಿಸಿದರು,'ಸುಮಾರಾಗ್ಯೆತೆ, ಬುದ್ಧಿ'' ಅಂದ. ''ಏನಪಾ ,ಇನ್ನ ಕಡಿಮ್ಯಾಗಿಲ್ಲೇನು ಜ್ವರ, ಒಂದ ಸಾರೆ ಕರಕೊಂಡರೇ ಬಾ ನಿನ್ನಹೇಣತೀನ್ನ'' ಎಂದ ನನ್ನ ವೈದ್ಯಮಿತ್ರ. ''ಇಲ್ಲ ಸ್ವಾಮೇರ, ಸುಮಾರಾಗ್ಯೆತೆ ಈಗ, ಒಸಿ ಸುಸ್ತೈತೆ ಅಟ್ಟೆಯಾ''ಎಂದ ಆ ಗ್ರಾಮಸ್ಥ. ಕೊನೆಗೂ ಕಷ್ಟಪಟ್ಟು 'ಸುಮಾರು' ಅಂದರೆ ಕಡಿಮೆಯಾಗಿದೆ, ಪರವಾಯಿಲ್ಲ ಎಂದು ತಿಳಿದ ಡಾಕ್ಟ್ರು ತಲೆಮೇ ಲೆ ಕೈ ಹೊತ್ತು ಕೂತುಕೊಂಡ್ರಂತೆ. ಉತ್ತರ ಕರ್ನಾಟಕದಲ್ಲಿ ಸುಮಾರು ಎಂದರೆ ಚೆನ್ನಾಗಿಲ್ಲದಿರುವದು, ಕೆಟ್ಟದ್ದು, ಕೀಳು ದರ್ಜೆಯದು ಎಂಬರ್ಥ.

» ಬಿ ಎನ್ ಭರತ್

ಊರಿಂದೂರಿಗೆ ವರ್ಗಾವಣೆ!

ಹೆಲ್ತ್ ಇನ್ಸ್‌ಪೆಕ್ಟರ್ ಆಗಿದ್ದ ನಮ್ಮ ತಂದೆಯವರಿಗೆ ಎರಡು ಮೂರು ವರ್ಷಗಳಿಗೊಮ್ಮೆ ವರ್ಗವಾಗುತ್ತಾ ಇದ್ದ ಕಾರಣ ನಾವು ಬಾಲ್ಯವನ್ನು ಬೇರೆ ಬೇರೆ ಊರುಗಳಲ್ಲಿ ಕಳೆದಿದ್ದೆವು. ಜಿಲ್ಲಾ ಮುಖ್ಯ ಕೇಂದ್ರವಾದ ಮಡಿಕೇರಿಯಿಂದ ತಂದೆಯವರಿಗೆ ಕುಂದಾಪುರ ತಾಲ್ಲೂಕಿನ ಸಣ್ಣ ಊರಾದ ಕೋಟಕ್ಕೆ ವರ್ಗವಾಯಿತು. ಐದು ದಶಕಗಳಿಗಿಂತ ಹಿಂದೆ ಅಲ್ಲೆಲ್ಲ ಬಾಡಿಗೆ ಮನೆಗಳು ಎಲ್ಲಿರುತ್ತಿದ್ದವು? ಸರಿಯಾದ ಮನೆ ಸಿಗದೆ ಕೊನೆಗೆ ಅಲ್ಲಿ ಹಿರೇ ಮಹಾಲಿಂಗೇಶ್ವರ ದೇವಸ್ಥಾನದ ಸಮೀಪದಲ್ಲಿದ್ದ ಅರ್ಚಕರು, ಅವರ ಮನೆಯಲ್ಲೇ ಎರಡು ಕೋಣೆಗಳನ್ನು ಬಿಟ್ಟು ಕೊಟ್ಟಿದ್ದರು. ಮಲಗುವ, ಅಡುಗೆಯ, ಓದುವ ಎಲ್ಲ ಕೆಲಸಗಳೂ ಅದೇ ಎರಡು ಕೋಣೆಯಲ್ಲಿ. ಮುಂದೆಯೂ ಜೀವನದಲ್ಲಿ ಹೊಂದಾಣಿಕೆ ಎಂಬುದನ್ನು ನಮಗೆ ಬಹುಶ: ಇಂತಹ ಪರಿಸ್ಥಿತಿಗಳೇ ಕಲಿಸಿರಬೇಕು.

ನಾನು ಒಂದನೆಯ ತರಗತಿಯನ್ನು ಕೋಟದಲ್ಲಿ ಓದಿದ್ದು. ಆ ಅರ್ಚಕರಿಗೆ ನಾನೆಂದರೆ ಬಹಳ ಪ್ರೀತಿಯಿತ್ತು. ಅಲ್ಲಿಯ ಜಾತ್ರೆಗೆ ಅವರು ಮನೆ ಮಕ್ಕಳಿಗೆ ಕೊಡುವಂತೆ ನನಗೂ ಜಾತ್ರೆ ಖರ್ಚಿಗೆಂದು ಚಿಲ್ಲರೆ ದುಡ್ಡು ಕೊಡುತ್ತಿದ್ದರು. ಹೆಬ್ಬಾಗಿಲಿನ ಹಿಂದೆ ಇದ್ದ ಅವರ ಆಫೀಸಿನ ಮೇಜಿನ ಮೇಲೆ ನಾಣ್ಯವನ್ನು ಒಂದರ ಮೇಲೊಂದು ಪೇರಿಸಿಡುತ್ತಿದ್ದ ದೃಶ್ಯ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಮೂರು ವರ್ಷಗಳ ಕಾಲ ಅವರ ಮನೆಯ ಒಂದು ಭಾಗದಲ್ಲಿಯೇ ಇದ್ದರೂ ಯಾವುದೇ ರೀತಿಯ ಮನಸ್ತಾಪವೂ ಉಂಟಾಗಿರಲಿಲ್ಲ. ಅವರೆಲ್ಲರೂ ತೋರಿಸುತ್ತಿದ್ದ ಆ ಆತ್ಮೀಯತೆಯ ಕಾರಣವೇ ಮುಂದೆ ಕುಂದಾಪುರ ತಾಲ್ಲೂಕಿನಲ್ಲಿಯೇ ಇದ್ದ ಸಿದ್ದಾಪುರಕ್ಕೆ ವರ್ಗವಾಗಿ ಹೋದ ಬಳಿಕವೂ ನಾನೂ ಅಮ್ಮನೂ ಮುಂದಿನ ಎರಡು ವರ್ಷಗಳೂ ಜಾತ್ರೆಗೆಂದು ಹೋಗಿದ್ದೆವು. ಆಗಲೂ ಆ ಅರ್ಚಕರು ಅಲ್ಲಿಯ ಮಕ್ಕಳಿಗೆ ಕೊಡುವಂತೆ ನನಗೂ ಜಾತ್ರೆ ಖರ್ಚಿಗೆಂದು ದುಡ್ಡು ಕೊಟ್ಟಿದ್ದರು. ಎಷ್ಟು ಒಳ್ಳೆಯ ಮನಸ್ಸು!

ತಂದೆಯವರಿಗೆ ವರ್ಗಾವಣೆಯಾದಾಗ, ಮಕ್ಕಳಿಗೂ ಶಾಲೆಯಿಂದ ಶಾಲೆಗೆ ವರ್ಗಾವಣೆ! ಆಗೆಲ್ಲಾ ಆಗುತ್ತಿದ್ದ ಸ್ವಾರಸ್ಯಗಳಾದರೂ ಏನು?

ಕೋಟದಿಂದ ಸಿದ್ದಾಪುರಕ್ಕೆ ಹೋದ ಬಳಿಕ, ಕೆಲವು ತಿಂಗಳುಗಳ ಬಳಿಕ ಜಾತ್ರೆಗೆ ಬಂದಿದ್ದಾಗ ಕೋಟದಲ್ಲಿ ನನ್ನ ತರಗತಿಯಲ್ಲಿದ್ದ ಒಬ್ಬ ಹುಡುಗ ಅಲ್ಲಿ ಸಿಕ್ಕಿ, 'ಇಷ್ಟು ದಿನ ನೀನು ಯಾಕೆ ಶಾಲೆಗೆ ಬರ್ಲಿಲ್ಲ? ಮಾಸ್ಟ್ರಿಗೆ ಹೇಳ್ತೇನೆ' ಅಂತ ಹೆದರಿಸಿದ್ದ!

ಸಿದ್ದಾಪುರದಲ್ಲಿ ನಾನು ಎರಡನೆಯ ತರಗತಿಗೆ ಸೇರುವಾಗ ಶೈಕ್ಷಣಿಕ ವರ್ಷ ಪ್ರಾರಂಭವಾಗಿ ಆಗಲೇ ಒಂದೆರಡು ತಿಂಗಳುಗಳು ಕಳೆದಿರಬಹುದು. ಹುಡುಗರೆಲ್ಲರೂ ಈಗಾಗಲೇ ಇದ್ದ ಬೆಂಚುಗಳಲ್ಲಿ ಕುಳಿತುಕೊಂಡಿದ್ದ ಕಾರಣ ಸರಿಯಾದ ಜಾಗವಿಲ್ಲದೆ ಕೊನೆಗೆ ನನಗೆ ಕುಳಿತುಕೊಳ್ಳಲೆಂದೇ ಕಿಟಕಿಯ ಬಳಿ ಒಂದು ಪೆಟ್ಟಿಗೆಯನ್ನು ತಂದಿಟ್ಟಿದ್ದರು! ಅದನ್ನು ನೆನಪಿಸಿಕೊಳ್ಳುವಾಗೆಲ್ಲ ನನಗೆ ಬಹಳ ತಮಾಷೆಯಾಗಿ ಕಾಣಿಸುತ್ತಿದೆ. ನಮ್ಮ ತಂದೆಯವರಿಗೆ ಸರಕಾರಿ ಕೆಲಸ ಇದ್ದುದರಿಂದ, ಆ ಸಣ್ಣ ಊರಿನಲ್ಲಿ ನಮಗೆ ವಿಶೇಷ ಸ್ಥಾನಮಾನವಿರುವುದೂ ಗಮನಕ್ಕೆ ಬರುತ್ತಿತ್ತು. ಮನೆಯ ಹಿಂದೆ ಹಾಡಿ ಅಂದರೆ ಸಣ್ಣ ಕಾಡು ಇತ್ತು. ಅದನ್ನು ದಾಟಿ ಹೋದರೆ ಕಬ್ಬಿನ ಗದ್ದೆಗಳಿದ್ದವು. ಕಬ್ಬು ಕಡಿದು ಆಲೆಮನೆಗಳಲ್ಲಿ ಕಬ್ಬಿನ ರಸದಿಂದ ಬೆಲ್ಲ ಮಾಡುವಾಗ ನಮ್ಮನ್ನು ಅವರೆಲ್ಲ ಕರೆಯುತ್ತಿದ್ದರು. ನಾವು ಶಾಲೆ ಮುಗಿದ ಬಳಿಕ ಸಂಜೆಯ ಹೊತ್ತಲ್ಲಿ ಕಬ್ಬಿನ ಹಾಲು ಕುಡಿಯಲು ಎಂದು ಹೋಗುತ್ತಿದ್ದೆವು. ಜತೆಗೆ, ಪಾತ್ರೆಗಳನ್ನು ಕೊಂಡು ಹೋಗಿ ಕಬ್ಬಿನ ಹಾಲನ್ನು ಮನೆಗೂ ತರುತ್ತಿದ್ದೆವು.

ಮುಂದೆ ನಾನು ಆರನೆಯ ಕ್ಲಾಸಿನಲ್ಲಿದ್ದಾಗ ತಂದೆಯವರಿಗೆ ಮಂಗಳೂರಿಗೆ ವರ್ಗವೆಂದು ಪತ್ರ ಬಂತು. ಮಧ್ಯಾಹ್ನದ ಹೊತ್ತಿನಲ್ಲಿ ಊಟಕ್ಕೆ ಹೋಗುತ್ತಿದ್ದಾಗ, ಓರ್ವ ಶಿಕ್ಷಕರಿಗೆ ನಾನು ತಂದೆಗೆ ಮಂಗಳೂರಿಗೆ ವರ್ಗ ಆಗಿದೆ ಅಂದಿದ್ದೆ. ಶಾಲೆಯ ಮುಖ್ಯೋಪಾಧ್ಯಾಯರು ಪಾಠ ಮಾಡುವಾಗ 'ನಮ್ಮ ಜಿಲ್ಲೆಯ ರಾಜಧಾನಿ ಮಂಗಳೂರು ಅನ್ನುತ್ತಾ, ನಮ್ಮ ಭರತ ಅಲ್ಲಿಗೆ ಹೋಗುತ್ತಿದ್ದಾನೆ' ಅಂತ ಹೇಳಿದಾಗ, ನನಗೆ ಗ್ರೇಟ್ ಅನಿಸಿತ್ತು!

ಮಂಗಳೂರಿಗೆ ನಾವು ಬಹುಶ: ಜುಲೈ ಆಗಸ್ಟ್ ನಲ್ಲಿ ಶಿಫ್ಟ್ ಆದದ್ದಿರಬೇಕು. ಅಲ್ಲಿ ಶಾಲೆಯಲ್ಲಿ ಸೀಟು ಸಿಗುತ್ತದೋ ಇಲ್ಲವೋ ಅಂತ ತಂದೆಯವರು ತಾಯಿಯ ಹತ್ತಿರ ಹೇಳುತ್ತಾ ಆತಂಕದಲ್ಲಿದ್ದಾಗ, 'ಬೆಂಚಲ್ಲಿ ಒಂದು ಸೀಟು ಇರದೆ ಏನು? ಸಿದ್ದಾಪುರದಲ್ಲಿ ನನಗೆಂದೇ ಒಂದು ಪೆಟ್ಟಿಗೆಯನ್ನು ಇರಿಸಿರಲಿಲ್ಲವೇ?' ಅಂತ ನನಗೆ ಯೋಚನೆ ಬಂದಿತ್ತು! ಕೊನೆಗೆ ಅಲ್ಲಿ ಶಾಲೆಯೊಂದರಲ್ಲಿ ಸೀಟು ದೊರಕಿತ್ತು.

ಒಮ್ಮೆ ಶಾಲೆಯಲ್ಲಿಯೇ 'ಬಾಂಬೆ ಟು ಗೋವಾ' ಎಂಬ ಸಿನಿಮಾವನ್ನು ಪ್ರದರ್ಶಿಸಿದ್ದರು. 'ಬಮ್ ಬಮ್ ಬಾಂಬೆ ಟು ಗೋವಾ' ಎಂಬ ಹಾಡು ಅಸ್ಪಷ್ಟವಾಗಿ ನೆನಪಿದೆ, ಮತ್ತೇನೂ ನೆನಪಿಲ್ಲ.ಎಷ್ಟೋ ವರ್ಷಗಳಾದ ಮೇಲೆ ಟಿವಿಯಲ್ಲಿ ಪೂರ್ತಿ ಸಿನಿಮಾ ನೋಡಿದಾಗ ಹಳೆಯ ಈ ದಿನಗಳೂ ಮತ್ತೊಮ್ಮೆ ನೆನಪಾದವು. ಮುಂದೆ ಪುತ್ತೂರಿನಲ್ಲಿ ಕಾಲೇಜು ಓದುವಾಗ ಅಮಿತಾಬ್ ಬಚ್ಚನ್ ಸೂಪರ್ ಸ್ಟಾರ್ ಆಗಿದ್ದ. ಆತನು ನನ್ನ ಮೆಚ್ಚಿನ ನಟನೂ ಆಗಿದ್ದ.

ಪುತ್ತೂರಿನ ಕಾಲೇಜಲ್ಲಿ ನಾನು ವಿಜ್ಞಾನ ಪದವಿ ಓದುವಾಗ ಹೊಸ ವರ್ಷದ ದಿನ ಬೋರ್ಡಿನಲ್ಲಿ 'ಹ್ಯಾಪ್ಪಿ ನ್ಯೂ ಇಯರ್' ಎಂದು ಒಂದು ವಿಷಯದ ತರಗತಿ ಪ್ರಾರಂಭವಾಗಬೇಕಾದರೆ ಮೊದಲು ಬರೆದಿದ್ದೆ. ಆ ವಿಷಯದ ಲೆಕ್ಚರರ್‌ರವರು ತರಗತಿಗೆ ಬಂದು ಓದಿ ಅದನ್ನು ಒರೆಸಿ ಪಾಠ ಆರಂಭಿಸಿದರು. ಹಿಂದಿ ತರಗತಿಗೂ ಮೊದಲು ಹಿಂದಿಯಲ್ಲಿ ಬರೆದದ್ದನ್ನು ಅಧ್ಯಾಪಕರು ಓದಿ ಅದರಲ್ಲಿ ಏನೋ ಒಂದು ತಪ್ಪನ್ನು ತೋರಿಸಿ ಬಳಿಕ ಪಾಠ ಪ್ರಾರಂಭಿಸಿದರು. ಮುಂದೆ ಇದ್ದುದ್ದೇ ರಸಾಯನ ಶಾಸ್ತ್ರ. ಅದರ ಮೇಡಂ ಸ್ವಲ್ಪ ಸ್ಟ್ರಿಕ್ಟ್. ಆದರೂ ಬೋರ್ಡ್‌ನಲ್ಲಿ ನಾನು ಬರೆದೆ.

ಮೇಡಂ ಬಂದು 'ಯಾರಿದನ್ನು ಬರೆದದ್ದು?' ಎಂದು ಇಂಗ್ಲೀಷಲ್ಲಿ ಜೋರಲ್ಲಿ ಕೇಳಿದರು. ಕ್ಲಾಸಿನಲ್ಲಿ ನಿಶ್ಶಬ್ದ. ಕೆಲವು ಸೆಕೆಂಡ್‌ಗಳು ಕಳೆದ ಬಳಿಕ ನಾನು ಎದ್ದು ನಿಂತೆ. ನನಗೆ ಶಿಕ್ಷೆ ಗ್ಯಾರಂಟಿ ಎಂದೇ ಎಲ್ಲರೂ ಭಾವಿಸಿರಬಹುದು. ಆದರೆ ಅವರು ನನ್ನ ಕಡೆಗೊಮ್ಮೆ ನೋಡಿ ಡಸ್ಟರ್ ಕೊಟ್ಟು 'ಹೋಗಿ ಒರೆಸ' ಎಂದರು. ಶಿಕ್ಷೆಯೇ ಇಲ್ಲ! ನಾನು ಸತ್ಯ ಹೇಳಿದ ಕಾರಣವೋ ಏನೋ! ಬೋರ್ಡಿನಲ್ಲಿ ಬರೆದದ್ದನ್ನು ಒರೆಸಿ ನನ್ನ ಜಾಗದಲ್ಲಿ ಬಂದು ಕುಳಿತ ಬಳಿಕ ಪಾಠ ಮುಂದುವರಿಯಿತು. ರೆ ನಾನು ಬೇರೆ ಬೇರೆ ಊರುಗಳಲ್ಲಿ ಓದಿದ ಕಾರಣ, ಇಂತಹ ಘಟನೆಗಳು, ಸ್ವಾರಸ್ಯಗಳು ಹಲವು ಪಟ್ಟು ಹೆಚ್ಚಾಗಿವೆಯೋ ಏನೋ?

» ಸುಮಾ ರಮೇಶ್, ಹಾಸನ



ಇದು ಕಾರ್ಡ್ ಕಾಲ. ಅದಿಲ್ಲದವರ ಚಟುವಟಿಕೆ ಕಾನೂನುಬಾಹಿರ. ಕಾರ್ಡ್ ಇದ್ದರಷ್ಟೇ ಇಲ್ಲಿ ಎಲ್ಲವೂ ಹಗುರ, ಸುಂದರ.

ಕಾರ್ಡ್ ಕಾರ್ಡ್ ಎಲ್ನೋಡಿ ಕಾರ್ಡ್!

ಎಂಬತ್ತರ ದಶಕದಲ್ಲಿ ಕಾಲೇಜು ಓದುತ್ತಿದ್ದ ನಮಗೆಲ್ಲಾ ಗೊತ್ತಿದ್ದುದು ಕೆಲವೇ ಕೆಲವು ಕಾರ್ಡ್ ಗಳು. ರೇಶನ್ ಕಾರ್ಡ್, ಕಾಲೇಜ್ ಐಡಿ ಕಾರ್ಡ್, ಗ್ರೀಟಿಂಗ್ ಕಾರ್ಡ್, ಇನ್ವಿಟೇಶನ್ ಕಾರ್ಡ್, ಹೀಗೆ.

ಮೊದಲನೆಯದು ಅಕ್ಕಿ ಗೋಧಿ ಸಕ್ಕರೆ ಎಣ್ಣೆಗಾಗಿ ಕುಟುಂಬದ ಅಷ್ಟೂ ಸದಸ್ಯರ ವಿವರವನ್ನೊಳಗೊಂಡ ಪಡಿತರ ಕಾರ್ಡಾದರೆ ಎರಡನೆಯದು ಕಪ್ಪು ಬಿಳುಪಿನ ಭಾವಚಿತ್ರದೊಂದಿಗೆ ಆಯಾ ಕಾಲೇಜಿನ ವಿದ್ಯಾರ್ಥಿಗಳ ವಿವರವನ್ನು ತೋರುವ ಗುರುತಿಸಿ ಚೀಟಿ. ಅದನ್ನು ಕುತ್ತಿಗೆಗೆ ತಗುಲಾಕಿ ಕೊಂಡು ಕ್ಯಾಟ್ ವಾಕ್ ಮಾಡಲು ಅವಕಾಶವಿರಲಿಲ್ಲ. ಫಿಕ್ಸೆಡ್ ಡೆಪಾಸಿಟ್ ಬಾಂಡ್ ನಂತೆ ಪ್ಲಾಸ್ಟಿಕ್ ಕವರ್ ನಲ್ಲಿ ಬೈಂಡ್ ಆಗಿರುತ್ತಿದ್ದ ಆ ಕಾರ್ಡನ್ನು ಹ್ಯಾಂಡ್ ಬ್ಯಾಗ್‌ನಲ್ಲಿ ಇರಿಸಿಕೊಳ್ಳುತ್ತಿದ್ದೆವು.

ಹೊಸ ವರ್ಷ, ಹುಟ್ಟು ಹಬ್ಬಗಳಲ್ಲಿ ನಮಗೆಲ್ಲಾ ಗ್ರೀಟಿಂಗ್ ಕಾರ್ಡ್ ಹಂಚುವ ಸಂಭ್ರಮ. ಅಂದಿನ ದಿನಮಾನದಲ್ಲಿ ರಾತ್ರಿ ಹನ್ನೆರಡರವರೆಗೂ ಜಗತ್ತು ಕಣ್ತೆರೆದಿರುತ್ತಿರಲಿಲ್ಲ. ಹೊಸ ವರ್ಷ, ಹುಟ್ಟು ಹಬ್ಬಗಳಂದು ಉತ್ತಮ ಸಂದೇಶ ಹೊತ್ತ ಸುಂದರ ಕಾರ್ಡ್‌ಗಳನ್ನು ನೀಡಿ ಶುಭಾಶಯ ಹೇಳುತ್ತಿದ್ದೆವು. ಅವು ಇಂದಿನ ಹಲವು ಕಾರ್ಡ್ ಗಳಂತೆ ಪ್ಲಾಸ್ಟಿಕ್ ಹಾಳೆ(ಪಿವಿಸಿ)ಯ ಗ್ಲಾಸೀ ಕಾರ್ಡ್ ಗಳಾಗಿರದೆ ದಪ್ಪ ಕಾಗದದ ಹಾಳೆಯಂತಿದ್ದವು.

ತೊಂಬತ್ತರ ದಶಕದ ಉತ್ತರಾರ್ಧದಲ್ಲಿ ಕಾರ್ಡ್ ಲೆಸ್ ಫೋನ್‌ಗಳು ಮುನ್ನೆಲೆಗೆ ಬಂದವು. ಗೂಟಕ್ಕೆ ಕಟ್ಟಿದ ಜಾನುವಾರುಗಳು ಆ ಒಂದು ಸೀಮಿತ ಪರಿಧಿಯೊಳಗೇ ಸುತ್ತುವಂತೆ ಲ್ಯಾಂಡ್ ಫೋನ್ ಬಳಸುವವರು ರಿಸೀವರ್ ಗೆ ಅಂಟಿಕೊಂಡ ಸುರುಳಿಯಾಕಾರದ ಕಾರ್ಡ್ ಅಲೌ ಮಾಡುವಷ್ಟು ಸ್ಥಳದಲ್ಲಷ್ಟೇ ಮೂವ್ ಆಗಬೇಕಿತ್ತು. ನಂತರ ಬಂದ ಕಾರ್ಡ್ ಲೆಸ್ ಫೋನಿನಲ್ಲಿ ಹೊಕ್ಕಳು ಬಳ್ಳಿಯ ಬಂಧ ಕಳಚಿ ಹೊರಬಂದ ಕೂಸಿನಂತೆ ಫೋನ್ ಕೇಸ್ ನಿಂದ ಮೌತ್ ಪೀಸ್ ಕಳಚಿಕೊಂಡಿತ್ತು. ಆದರೂ ಆ ಕಾರ್ಡ್ ಲೆಸ್ ಫೋನಿನ ವ್ಯಾಪ್ತಿ ಪ್ರದೇಶ ಬಹಳ ಚಿಕ್ಕದಿತ್ತು. ತಾಯ ಕಣ್ಗಾವಲಲ್ಲಿರುವ ಎಳೆಯ ಕಂದನಂತೆ ಸುಮಾರು ನೂರು ಮೀಟರಿನ ಬೌಂಡರಿಯೊಳಗಷ್ಟೇ ಅಡ್ಡಾಡಲು ಅವಕಾಶವಿತ್ತು. ನಂತರ ಬಂದ ಮೊಬೈಲ್ ಫೋನ್ ಎಲ್ಲಾ ಎಲ್ಲೆಗಳನ್ನು ಮೀರಿ ಎಲ್ಲೆಡೆ ಅಲೆಯುವ ಸ್ವಾತಂತ್ರ್ಯ ನೀಡಿತು.

ಲಹರಿ

ಬೆರಳ ತುದಿಯಲ್ಲೇ ಬೆರಗಿನ ಜಗತ್ತನ್ನು ತೋರಿದ ಸ್ಮಾರ್ಟ್ ಫೋನ್ ಹಲವು ಬಗೆಯ ಜಾಗತಿಕ ಪಲ್ಲಟಗಳಿಗೆ ಕಾರಣವಾಯಿತು. ರಮ್ಮೀ ಕಾರ್ಡ್ ಹಿಡಿದು ಅಲ್ಲಲ್ಲಿ ಗುಂಪಾಗಿ ಕುಳಿತು ಕಾಲಹರಣ ಮಾಡುತ್ತಿದ್ದ ಪಡ್ಡೆಗಳೆಲ್ಲಾ ಹತ್ತು ಹಲವು ಕ್ಷೇತ್ರಗಳಲ್ಲಿ ಇಣುಕಿ ತಮ್ಮದೇ ವಿಜಿಟಿಂಗ್ ಕಾರ್ಡ್ ಹೊಂದುವ ಮಟ್ಟಕ್ಕೆ ಬೆಳೆದರು. ಎಲ್ಲರ ವಾಲೆಟ್‌ಗಳಲ್ಲಿ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ವೋಟರ್ಸ್ ಕಾರ್ಡ್, ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಹೀಗೆ ಎಲ್ಲರೂ ಕಾರ್ಡ್ ಯಾಲಜಿಸ್ಟ್ ಗಳಾದರು.

ಹಿಂದೆ, ಒಂದು ಊರೆಂದರೆ ಆ ಊರಿನ ಅಷ್ಟೂ ಜನರೊಂದಿಗೆ ಪರಸ್ಪರ ಕಾರ್ಡಿಯಲ್ ಸಂಬಂಧ ಇರುತ್ತಿತ್ತು. ಯಾವ ಐಡಿ ಕಾರ್ಡ್ ಇಲ್ಲದೆಯೂ ಎಲ್ಲರ ಬಯೋಡೇಟಾ ಅಲ್ಲಿನ ಪ್ರಜೆಗಳ ಬಾಯಲ್ಲಿ ಹರಿದಾಡುತ್ತಿತ್ತು. ಇಂದು ನೆರೆಹೊರೆಯವರೂ ಅಪರಿಚಿತರು. ಅಡ್ರೆಸ್ ಪ್ರೂಫ್, ಐಡಿ ಕಾರ್ಡ್ ಇಲ್ಲದೆ ಎಲ್ಲೂ ಎಂಟ್ರಿ ಇಲ್ಲ. ಶಾಪಿಂಗ್ ಮಾಲ್, ಮೆಗಾ ಮಾರ್ಟ್, ಆಸ್ಪತ್ರೆ , ಕಚೇರಿ ಎಲ್ಲೇ ಹೋದರೂ ಐಡಿ ಕಾರ್ಡ್ ಹಾವಳಿ. ಬಾಗಿಲು ತೆರೆಯಲು ಕಾರ್ಡ್, ಮುಚ್ಚಲು ಕಾರ್ಡ್. ವ್ಯಾಕ್ಸಿನೇಷನ್‌ಗೂ ಕಾರ್ಡ್, ಟ್ಯಾಕ್ಸ್ ಕಟ್ಟಲೂ ಕಾರ್ಡ್.

ಮುಖ ನೋಡಿ ಪ್ರಾಯ ಗುರುತಿಸುವ ಕಲೆ ಅಂದು ಎಲ್ಲರಿಗೂ ಸಿದ್ಧಿಸಿತ್ತು. ಹಾಗಾಗಿ ಬರ್ತ್ ಸರ್ಟಿಫಿಕೇಟ್ ಕಾನ್ಸೆಪ್ಟ್ ಇನ್ನೂ ಹುಟ್ಟಿರಲಿಲ್ಲ. ಬಿಳಿ ಕೂದಲು, ಬೊಚ್ಚು ಬಾಯಿ ನೋಡಿ ಹಿರಿತನವ ಗುರುತಿಸುತ್ತಿದ್ದ ಕಾಲ ಹೋಗಿ ಈಗ ಸೀನಿಯರ್ ಸಿಟಿಜನ್ ಎಂದು ಹೇಳಲೂ ಒಂದು ಕಾರ್ಡ್ ಬೇಕಾಗಿದೆ. ಅರವತ್ತಕ್ಕೆ ಅರಳು ಮರುಳಾಗದೆ ಎಲ್ಲರೂ ಮರಳಿ ಅರಳುತ್ತಾ ಪ್ರಾಯ ಮುಂದೆ ಸಾಗಿದರೂ ಕೂದಲು, ತ್ವಚೆ, ದೇಹ ಮಾಗದೆ ಸಂತೂರ್ ಮಮ್ಮಿಯರ ಹಾವಳಿ ಹೆಚ್ಚಾಗಿ ಸೀನಿಯರ್ ಸಿಟಿಜನ್ ಕಾರ್ಡ್ ಗಳು ತಲೆಯೆತ್ತಿವೆ. ಬ್ಯಾಂಕ್ ನಲ್ಲಿ , ಸಾರ್ವಜನಿಕ ಸ್ಥಳಗಳಲ್ಲಿ ದೊರೆಯುವ ಹೆಚ್ಚುವರಿ ಸೌಲಭ್ಯಕ್ಕಾಗಿ ವೃದ್ಧರು ಹಿರಿಯ ನಾಗರಿಕರ ಕಾರ್ಡ್ ಹಿಡಿದು ಅಡ್ಡಾಡುವುದನ್ನು ಕಾಣಬಹುದು.

ಯುವಪೀಳಿಗೆಯವರು ಯೂನೋ, ಡಬ್ಲ್ಯು ಡಬ್ಲ್ಯು ಇ, ಪೋಕರ್, ಟಿಸಿಜಿಯಂತಹ ಹತ್ತಾರು ಕಾರ್ಡ್ ಗೇಮ್ಸ್ ಆಡುವತ್ತ ಆಸಕ್ತರಾದರೆ ಹಳೆಯ ತಲೆಮಾರಿನವರಿಗೆ ಈ ಯಾವ ವೈಲ್ಡ್ ಕಾರ್ಡ್ ಗಳೂ ರುಚಿಸದೆ ಅವರು ತಮ್ಮ ಹಳೆಯ ಎವರ್ ಗ್ರೀನ್ ರಮ್ಮಿ ಕಾರ್ಡ್‌ಗೇ ಅಂಟಿಕೊಂಡಿರುವರು. ಹೊರದೇಶ ಸುತ್ತುವ ಮಕ್ಕಳು ತಮ್ಮ ಸ್ಮಾರ್ಟ್ ಕಾರ್ಡ್ ಬಳಸುತ್ತಾ ಅಲ್ಲಲ್ಲಿಯ ಪ್ರದೇಶದ ವೈಶಿಷ್ಟ್ಯ ತೋರುವ ಪೋಸ್ಟ್ ಕಾರ್ಡ್ಸ್ ಕೊಂಡು ಸ್ವದೇಶದಲ್ಲಿರುವ ಪೋಷಕರಿಗೆ ಕಳಿಸುವ ಒಂದು ಟ್ರೆಂಡ್ ಸೃಷ್ಟಿಯಾಗಿದೆ. ಕೇವಲ ಹದಿನೈದು ಪೈಸೆಯ ಹಳದಿ ಕಾರ್ಡನ್ನಷ್ಟೇ ಕಂಡಿದ್ದ ಹಿರಿಯರು ಬಣ್ಣ ಬಣ್ಣದ ವಿದೇಶಿ ಪ್ರವಾಸ ತಾಣಗಳ ಪೋಸ್ಟ್ ಕಾರ್ಡ್ಸ್ ಕಂಡು ಬೆರಗಾಗುವರು.

ಬ್ಲೂಕಾರ್ಡ್ ಗ್ರೀನ್ ಕಾರ್ಡ್!

ಇಂದಿನ ಯುವಜನತೆ ಯೂರೋಪಿನ ಬ್ಲೂ ಕಾರ್ಡ್ ಪಡೆದು ಅಮೆರಿಕಾದ ಗ್ರೀನ್ ಕಾರ್ಡ್‌ಗಾಗಿ ಪರಿತಪಿಸುತ್ತಾ ಅದನ್ನು ಪಡೆಯಲು ಅರ್ಧ ಶತಮಾನದವರೆಗೆ ಇರುವ ವೇಯ್ಟಿಂಗ್ ಲಿಸ್ಟ್ ನೋಡಿ ದಂಗಾಗಿ ಕುಳಿತರೆ, ಕೆಲವು ಅಮೇರಿಕನ್ನರು ಟ್ರಂಪ್ ಕಾರ್ಡ್ ಬಳಸುತ್ತಾ ಸುರಕ್ಷಿತ ವಲಯ ಸೃಷ್ಟಿಸಿಕೊಂಡಿರುವರು. ಭೌತಿಕವಾಗಿ ಬಳಸುವ ಈ ಎಲ್ಲಾ ಕಾರ್ಡ್‌ಗಳ ನಡುವೆಯೇ ಭಾವನಾತ್ಮಕವಾದ ಸಿಂಪತಿ ಕಾರ್ಡ್, ವಿಕ್ಟಿಮ್ ಕಾರ್ಡ್, ಉಮೆನ್ ಕಾರ್ಡ್ ಗಳೂ ಸಂದರ್ಭಾನುಸಾರ ಬಳಕೆಯಾಗುತ್ತವೆ.

ಈ ತುಟ್ಟಿ ಯುಗದಲ್ಲಿ ಸರ್ಕಾರದ ಬಿಟ್ಟಿ ಯೋಜನೆಗಳ ಭಾಗ್ಯ ಪಡೆಯಲು ಕಾರ್ಡ್ ಹಿಡಿದು ಓಡಾಡುವರ ಸಂಖ್ಯೆ ಹೆಚ್ಚಿದೆ. ಬಿಪಿಎಲ್ ಕಾರ್ಡ್, ಎಪಿಎಲ್ ಕಾರ್ಡ್, ಯಶಸ್ವಿನಿ ಕಾರ್ಡ್, ಹೆಲ್ತ್ ಇನ್ಸೂರೆನ್ಸ್ ಕಾರ್ಡ್, ಹೀಗೆ... ಇನ್ನು ಬ್ಯಾಂಕ್ ಗೆ ಹೋದರೆ ಹಣ ಕಟ್ಟಲೂ ಕಾರ್ಡ್, ಪಡೆಯಲೂ ಕಾರ್ಡ್. ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಎಲ್ಲರೂ ಕಾರ್ಡ್ ಉಜ್ಜುವವರೇ! ಇದರೊಂದಿಗೆ ಇನ್ನಿತರ ಪ್ರಯೋಜನಗಳನ್ನು ಪಡೆಯಲು ತರಹೇವಾರಿ ಕಾರ್ಡ್ ಗಳಿವೆ. ಪ್ರಿಪೇಯ್ಡ್ ಕಾರ್ಡ್, ಮಿಲೇನಿಯ ಕಾರ್ಡ್, ಕಮರ್ಶಿಯಲ್ ಕ್ರೆಡಿಟ್ ಕಾರ್ಡ್, ಲೋನ್ ಕಾರ್ಡ್, ಪಿಕ್ಸೆಲ್ ಕಾರ್ಡ್, ಫಾರಿನ್ ಕರೆನ್ಸಿಗಾಗಿ ಫೋರೆಕ್ಸ್ ಕಾರ್ಡ್. ಹೀಗೆ ಎತ್ತ ಹಾಯಿಸಿದರೂ ಚಿತ್ತ ಕಾರ್ಡ್‌ಗಳೇ ನಮ್ಮ ಸುತ್ತ!!

ಒಟ್ಟಾರೆ ಇದು ಕಾರ್ಡ್ ಕಾಲ. ಅದಿಲ್ಲದವರ ಚಟುವಟಿಕೆ ಕಾನೂನುಬಾಹಿರ. ಕಾರ್ಡ್ ಇದ್ದರಷ್ಟೇ ಇಲ್ಲಿ ಎಲ್ಲವೂ ಹಗುರ, ಸುಂದರ.

ಒಲವಿನ ಹಾಡು

ಇರುಳ ಮಸಿ ಕರಕರಗಿ
ಮತ್ತೆ ಆವಿಯೆ ಆಗಿ
ಹೊನ್ನಿನ ಬಟ್ಟಲದು
ಹೊಳೆಯುವಂತೆ।

ಸೋಸಿ ಸೋಸಿದ ಹಾಗೆ
ಮಣ್ಣ ರಾಶಿಯ ನಡುವೆ
ಮಿಸುನಿಯ ಕಣವೊಂದು
ಮಿನುಗುವಂತೆ।

ಮುಗಿಲೋಳಿಗಳ ನಡುವೆ
ತಂಗದಿರ ತಾ ಬಂದು
ಎದೆಗೆ ಹಿಗ್ಗಿನ ಹಾಲು
ಸುರಿಯುವಂತೆ।

ಬತ್ತಿ ಬಿರಿದಿಹ ನೆಲಕೆ
ಸೊದೆ ಸೋನೆ ಸುರಿಸುರಿದು
ಬನ್ನ ಬರೆಗಳನೆಲ್ಲ
ಕಳೆಯುವಂತೆ।

ಕಣ್ಣು ಕಣ್ಣಿನ ನಡುವೆ
ಮೂಡಿಯೊಲವಿನ ಕಿರಣ
ಪ್ರೇಮದ ಪರ್ವವನು
ತೆರೆಯುವಂತೆ।

ದೊರೆ ನಿನ್ನ ನಗುಜೇನು
ಒಡಲ ಕಹಿಯನು ಕಳೆದು
ಭರವಸೆಯ ಬಿತ್ತವದು
ಮೊಳೆಯಲಂತೆ।

» ಡಾ. ಗೋವಿಂದ ಹೆಗಡೆ

ಹೆಜ್ಜಾರ್ಲೆಯ ಹಾರಾಟ

» ಶಶಿಧರಸ್ವಾಮಿ ಆರ್. ಹಿರೇಮಠ

ಕೊಕ್ಕರೆ ಬೆಳ್ಳೂರು ತಲುಪಿದಾಗ ಮುಂಜಾನೆ ಏಳು ಗಂಟೆ. ಹಕ್ಕಿಗಳು ತಮ್ಮ ದೈನಂದಿನ ಚಟುವಟಿಕೆಗಳನ್ನು ಆರಂಭಿಸಿಯಾಗಿತ್ತು. ಹಲವು ಜಲಪಕ್ಷಿಗಳು ಇಲ್ಲಿಗೆ ಬಂದು ಊರಿನ ಮಧ್ಯದಲ್ಲಿರುವ ಹುಣಸೆಮರ, ಬೇವು, ಮಳೆಮರ ಮುಂತಾದ ಮರಗಳಲ್ಲಿ ಗೂಡಿ ಕಟ್ಟಿ ಮರಿ ಮಾಡಿ, ವಾಪಸಾಗುತ್ತವೆ. ಅವುಗಳ ಪೈಕಿ ಹೆಜ್ಜಾರ್ಲೆಯೂ ಒಂದು. ವಿಶಾಲ ರೆಕ್ಕೆಯ ಹೆಜ್ಜಾರ್ಲೆಯ ಹಾರಾಟವನ್ನು ನೋಡುವುದೇ ಒಂದು ಸೊಗಸು.

ಹಾದಿಯಲ್ಲಿ ಹಾಲಿನ ಕ್ಯಾನ್ ಹಿಡಿದುಕೊಂಡು ಸಾಗುತ್ತಿದ್ದ ಅಜ್ಜಿಯನ್ನು ಮಾತನಾಡಿಸಿದೆ. ಆ ಅಜ್ಜಿ 'ಪಕ್ಷಿಗಳು ಈ ಹಿಂದೆ ಅಧಿಕ ಸಂಖ್ಯೆಯಲ್ಲಿ ಇಲ್ಲಿ ಗೂಡು ಕಟ್ಟುತ್ತಿದ್ದವು, ಈಗ ಕಡಿಮೆಯಾಗಿದೆ. ಹಿಂದೆ ನಾವು ಅವರೆಕಾಯಿ, ಹುರಳೆಕಾಯಿ ಬೆಳೆಗಳನ್ನು ಬೆಳೆಯುತ್ತಿದ್ದೆವು, ಪಕ್ಷಿಗಳಿಗೆ ಗೂಡು ಕಟ್ಟಲು ಆ ಕಡ್ಡಿಗಳೂ ಸಹಾಯಕಾರಿಯಾಗಿದ್ದವು. ಈಗ ಭತ್ತ ಮತ್ತು ಇತರ ಬೆಳೆಗಳನ್ನು ಜಾಸ್ತಿಯಾಗಿ ಬೆಳೆದು, ನದಿ ಪ್ರದೇಶದಲ್ಲಿ ಅತೀಯಾದ ಮರಳುಯನ್ನು ಎತ್ತಿ ಸಾಗಾಣಿಕೆಯಿಂದಾಗಿ, ಅವುಗಳಿಗೆ ತೊಂದರೆಯಾಗಿ ರಬೇಕು' ಎಂದಾಗ, ಅಜ್ಜಿಯ ಸೂಕ್ಕುಗಟ್ಟಿದ ನೆರಿಗೆಯ ಮುಖದಲ್ಲಿ ವಿಷಾದದ ಭಾವನೆ ಎದ್ದು ಕಾಣುತ್ತಿತ್ತು. ಹಕ್ಕಿಗಳ ಬಗ್ಗೆ ಅಜ್ಜಿಗಿರುವ ಕನಿಕರ ಕಂಡು ಬೆರಗಾದೆ. ಆ ಊರಿನವರಿಗೆ ಹೆಜ್ಜಾರ್ಲೆ ಮತ್ತು ಇತರ ಜಲಪಕ್ಷಿಗಳೆಂದರೆ ಇಷ್ಟ.

ಅಷ್ಟರಲ್ಲಿ ಹೆಜ್ಜಾರ್ಲೆಗಳು ಅತ್ತಿತ್ತ ಹಾರಾಡುವುದು ಕಂಡಿತು. ದೊಡ್ಡದಾದ ಕೊಕ್ಕು ಅದಕ್ಕೆ ಜೊತುಬಿದ್ದ ಚೀಲ, ವಿಶಾಲವಾದ ರೆಕ್ಕೆ, ಮರದಿಂದ ಮರಕ್ಕೆ ಹೋಗಿ ಕೂಡ್ರುವ ದೃಶ್ಯಗಳು ಆಕರ್ಷಕವಾಗಿ ಕಂಡವು. ತಕ್ಷಣವೇ ಅವುಗಳ ಫೋಟೋಗ್ರಫಿ ಮಾಡಿಕೊಂಡೆ. ಹೆಜ್ಜಾರ್ಲೆ ಹಕ್ಕಿಯನ್ನು ಜೋಳಿಗೆ ಕೊಕ್ಕ, ತೆಪ್ಪದ ಹಕ್ಕಿ ಎಂತೆಲ್ಲ ನಾನಾ ಹೆಸರುಗಳಿಂದ ಕರೆಯುತ್ತಾರೆ. ಸಂಸ್ಕೃತದಲ್ಲಿ ಪುಂಡರೀಕ, ಮಹಪ್ಲವ ಎಂದು ಕರೆಯಲಾಗುತ್ತದೆ. ಇಂಗ್ಲೀಷಿನಲ್ಲಿ ಸ್ಪಾಟ್-ಬಿಲ್ಡ್ ಪಿಲಿಕನ್ ಅಥವಾ ಗ್ರೇ ಪಿಲಿಕನ್ ಎನ್ನುವರು.

ಇವು ಸಣ್ಣ ಗುಂಪು ಅಥವಾ ದೊಡ್ಡ ಸಮೂಹಗಳಲ್ಲಿ ಕಂಡು ಬರುತ್ತವೆ. ಮೀನು ಹಿಡಿಯಲು ನೀರಿನ ಮೇಲೆ ತೇಲುತ್ತಾ ಈಜುತ್ತವೆ. ದಡದಲ್ಲಿ ವಿಶ್ರಮಿಸುತ್ತಾ ಕೊಕ್ಕಿನಿಂದ ದೇಹವನ್ನು ತಿಡಿಕೊಳ್ಳುವುದು ಸರ್ವೇ ಸಾಮಾನ್ಯ. ಅಧಿಕ ಸಂಖ್ಯೆಯಲ್ಲಿ ಮೀನುಗಳನ್ನು ಬೇಟೆಯಾಡಿ ನುಂಗುತ್ತವೆ.

ಹೆಜ್ಜಾರ್ಲೆಗಳು ನೀಲಾಗಸದಲ್ಲಿ ರೆಕ್ಕೆ ಬಿಚ್ಚಿ ಹಾರಾಡುವುದನ್ನು ನೋಡುತ್ತಾ ಕುಳಿತರೆ, ಹೊತ್ತು ಹೋದದ್ದೇ ತಿಳಿಯುವುದಿಲ್ಲ!

ವಿರಾಮ ಪೋಸ್ಟ್ ಆಫೀಸು

ಭಟ್ಟರ ಹಿಂದಿನ ಪತ್ರಿಕೆಗಳಲ್ಲಿಯ ಹೆಜ್ಜೆ ಗುರುತುಗಳನ್ನು ಅವಲೋಕಿಸಿದಾಗ ಅವರು ನಿರಂತರ ಬದಲಾವಣೆಗಳ ಹರಿಕಾರ. 'ವಿಶ್ವವಾಣಿ'ಯೂ ಇದಕ್ಕೆ ಹೊರತಲ್ಲ. ಇದೀಗ ಭಾನುವಾರದ 'ವಿರಾಮ' ಕಣ್ಣಿಗೆ 'ಆರಾಮ', ಮೆದುಳಿಗೆ 'ಮನೋರಮ'! ಪುರವಣಿಯ ಕುರಿತು ನನ್ನ ಕೆಲ ಸಲಹೆಗಳು:

- **ಪತ್ರ ವಿಭಾಗ ಪ್ರತಿ ವಾರ ಇರಲಿ.**
- **ಪುಸ್ತಕ ವಿಮಾನದ ಪಯಣ ರದ್ದಾಗದಿರಲಿ.**
- **ಖ್ಯಾತನಾಮರ ಲೇಖನಗಳ ಮಧ್ಯೆ ಹೊಸ ಲೇಖಕರಿಗೂ ಅವಕಾಶ ದೊರೆಯಲಿ.**

» ಕೆ.ಶ್ರೀನಿವಾಸರಾವ್. ಹರಪನಹಳ್ಳಿ.

ಈ ವಾರದ 'ವಿರಾಮ' ಪುರವಣಿಯಲ್ಲಿ ದ್ವಾದಶ ಜ್ಯೋತಿರ್ಲಿಂಗ ದರ್ಶನದ ಕುರಿತು ಅಗ್ರಲೇಖನ ಬರೆದ ಶಶಾಂಕ ಮುದೂರಿಯವರೇ, ನಮಸ್ಕಾರ. ಇದೇ ವಿಷಯಕ್ಕೆ ನನಗೆ ವಿಶ್ವೇಶ್ವರ ಭಟ್ಟರ 'ವಿಶ್ವವಾಣಿ' ಇಷ್ಟವಾಗೋದು; ಬದಲಾಗುತ್ತಿರೋ ಎಲ್ಲಾ ಬಿಸಿನೆಸ್ ಡೈನಾಮಿಕ್ಸ ನಲ್ಲಿ ನನ್ನಂತಹ ಓದುಗರೂ ಈ ತರಹದ ಲೇಖನಗಳಿಗೆ ಅಭಿಪ್ರಾಯಗಳನ್ನು ವ್ಯಕ್ತಸಡಿಸಲು ಬಯಸುವುದು ಸಹಜ. ಈಗ ನೀವು ತಿಳಿಸಿರೋ ದ್ವಾದಶ ಜ್ಯೋತಿರ್ಲಿಂಗ ದರ್ಶನದ ಪರಿಕಲ್ಪನೆಯು ಒಂದೊಳ್ಳೆ ಸದಾವಕಾಶ, ಜತೆಗೆ ನಮ್ಮ ದೇಶದ ಟೂರಿಸಂ ಉದ್ಯಮಕ್ಕೂ ಉತ್ತೇಜನ ನೀಡಬಲ್ಲದು. ವಿಚಿತ್ರ ಎಂದರೆ ನಮ್ಮ ರಾಜ್ಯದ ಪ್ರವಾಸೋದ್ಯಮ ಸಚಿವರು ಯಾರು ಅನ್ನೋದೆ ಗೊತ್ತಾಗ್ತಾ ಇಲ್ಲ, ಆ ಸ್ಥಾನಕ್ಕೆ ಅವರು ಎಷ್ಟು ಬದ್ಧತೆಯಿಂದ ಕೆಲಸ ಮಾಡ್ತಿದ್ದಾರೆ! ಸ್ಲೀಪರ್ ಬಸ್ ಅಥವಾ ವಾಹನದ ಸಹಾಯದಿಂದ, ದ್ವಾದಶ ಜ್ಯೋತಿರ್ಲಿಂಗ ದರ್ಶನಕ್ಕೆ ಹೊರಟರೆ ಇರುವ ಇನ್ನೊಂದು ತೊಂದ್ರೆ ಅಂದ್ರೆ ಕೇದಾರನಾಥ ದೇವಾಲಯವು ವರ್ಷದ ಆರು ತಿಂಗಳು ಮಾತ್ರ ತೆರೆದಿದ್ದು ಅದರಲ್ಲಿ ಜೂನ್, ಜುಲೈ ಮತ್ತು ಆಗಸ್ಟ ತಿಂಗಳುಗಳಲ್ಲಿ ವಿಪರೀತ ಮಳೆ ಇರುತ್ತದೆ. ಮೇ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾತ್ರ ಸೂಕ್ತ; ಆಗಲೂ ಜನದಟ್ಟಣೆ, ಹವಾಮಾನ ವೈಪರೀತ್ಯದಿಂದ ವಯಸ್ಸಾದವರಿಗೆ ತೊಂದರೆಯಾಗಬಹುದು. ಅಲ್ಲಿ ಯುವಕರೂ ಆರೋಗ್ಯವಂತರೂ ಆ 22 ಕಿ.ಮೀ. ದೂರದ ಬೆಟ್ಟ ಹತ್ತಲು ಹೈರಾಣಾಗಿ ಹೋಗಿರ್ತಾರೆ, ಇನ್ನು ಹೇಸರಗತ್ತೆ ಮೇಲಿನ ಪ್ರಯಾಣವೂ ಅಷ್ಟು ಸುರಕ್ಷಿತ ಮತ್ತು ಸರಾಗವಲ್ಲ. ಅಲ್ಲಿಗೆ ನಾನೂ ಮೂರು ಬಾರಿ ಟ್ರಕ್ಕಿಂಗ್ ಮಾಡಿ ಹತ್ತಿದ್ದೇನೆ ಮತ್ತು ಒಂದು ಸಾರಿ ಹೆಲಿಕಾಪ್ಟರ್ ಹತ್ತೋ ಅವಕಾಶ ಸಿಕ್ಕಿದೆ; ಒಂದು ವೇಳೆ ಒಂದೇ ಪ್ರವಾಸದಲ್ಲಿ 12 ಜ್ಯೋತಿರ್ಲಿಂಗಗಳ ಪ್ರವಾಸಕ್ಕೆ ಅವಕಾಶ ಒದಗಿದರೆ ಅವರ ಜತೆ ಒಬ್ಬ ವೈದ್ಯರು ಅಥವಾ ಆರೋಗ್ಯ ತಜ್ಞರು ಇದ್ದರೆ ಉತ್ತಮ. ಇಲ್ಲಿ ಇನ್ನೊಂದು ವಿಚಾರವೂ ನೆನಪಾಗುತ್ತದೆ. ಕಳೆದ ಏಪ್ರಿಲ್ 2024 ರಿಂದ ಈಗಿನ ಫೆಬ್ರುವರಿ 2025 ರವರೆಗೆ ಸುಮಾರು ಹತ್ತು ದೇಶಗಳನ್ನ ಯಾವುದೇ ಟೂರ್ ಆಪರೇಟರ್‌ಗಳ ನೆರವಿಲ್ಲದೆ ಸುತ್ತಿದ್ದೇನೆ. ಆ ದೇಶಗಳಲ್ಲಿ ಟೂರಿಸಂಗೆ ಕೊಡೋ ಒತ್ತನ್ನು, ಪ್ರಾಮುಖ್ಯತೆಯನ್ನು ನಮ್ಮಲ್ಲಿ ಯಾಕೆ ಕೊಡುತ್ತಾ ಇಲ್ಲ? ಉದಾಹರಣೆಗೆ ನಮ್ಮಲ್ಲಿರೋ ಬೇಲೂರು, ಹಳೇಬೀಡು, ಮೈಸೂರು, ಬಂಡೀಪುರ, ಬದಾಮಿ, ಐಹೊಳೆ, ಹಂಪೆ ಇವನ್ನೆಲ್ಲಾ ಸೇರಿಸಿ ವಿದೇಶಿ ಪ್ರವಾಸಿಗರಿಗೆ ತಿಳುವಳಿಕೆ ಕೊಟ್ಟು ಟ್ರಿಪ್‌ಗಳನ್ನ ಗಾತ್ರಾನುಸಾರವಾಗಿ ಪ್ರವಾಸೋದ್ಯಮ ಇಲಾಖೆ ಯಾಕೆ ಮಾಡತಾ ಇಲ್ಲ? ನಿಮ್ಮ ಅಭಿಪ್ರಾಯದಂತೆ ದ್ವಾದಶ ಜ್ಯೋತಿರ್ಲಿಂಗ ದರ್ಶನ ಪ್ಯಾಕೇಜ್, ಕೈಗೆಟುಕುವ ಬೆಲೆಯಲ್ಲಿ ಎಲ್ಲರಿಗೂ ಸಿಗಲಿ ಎಂದು ಹಾರೈಸುತ್ತೇನೆ.

» ಸತೀಶ್ ದಾವಣಗೆರೆ

ವಿಶ್ವವಾಣಿ ಪುರವಣಿ ಆಕರ್ಷಕವಾಗಿಯೂ, ವೈವಿಧ್ಯಮಯವಾಗಿಯೂ ಮೂಡಿಬರುತ್ತಿದೆ. ಕುಂಭಮೇಳದ ನಲವತ್ತೈದು ದಿನಗಳ ವಿಶ್ವಮಟ್ಟದ ಸಂಭ್ರಮಾಚರಣೆಯ ನಂತರ, ಧಾರ್ಮಿಕ ಪ್ರವಾಸೋದ್ಯಮದಲ್ಲಿ ಮೂಡಬಹುದಾದ ದೊಡ್ಡ ಮೌನಕ್ಕೆ ಅರ್ಥಪೂರ್ಣ ದಾರಿಯೊಂದನ್ನು ಪತ್ರಿಕೆ ಮುಂದಿಟ್ಟಿದೆ. ಅದೇ ಕಳೆದ ವಾರದ ವಿರಾಮದಲ್ಲಿ ಪ್ರಕಟಗೊಂಡ, ಶಶಾಂಕ್ ಮುದೂರಿಯವರ ಮುಖಪುಟ ಲೇಖನದಿಂದ. ಆ ಲೇಖನದಲ್ಲಿ ಸಲಹೆ ನೀಡಿದಂತೆ, 'ದ್ವಾದಶ ಜ್ಯೋತಿರ್ಲಿಂಗ ದರ್ಶನ'ದ ಪರಿಕಲ್ಪನೆಯು ಆಸೇತುಹಿಮಾಲಯ ಪರ್ಯಂತ ಜನರನ್ನು ಏಕಪ್ರಕಾರವಾಗಿ ಸೆಳೆಯಲಿದೆ. ಕುಂಭಮೇಳದಿಂದ ಜಾಹೀರಾಗಿರುವ 'ಭಾರತ ಒಂದು' ಎಂಬ ಭಾವ ಭಾರತೀಯರ ಹೃನ್ಮನಗಳಲ್ಲಿ ಭದ್ರಗೊಳ್ಳಲಿದೆ. 'ವಿರಾಮ'ವು ತನ್ನ ಹೊಸ ರೂಪದಲ್ಲಿ ಕನ್ನಡಿಗರಿಗೆ ಮತ್ತಷ್ಟು ಸ್ವಾದಿಷ್ಟಕರ ಸಾಹಿತ್ಯ ಸಮಾರಾಧನೆ ನಡೆಸಲು ಮುಂದಾಗಿದೆ. ಬರೆಯುವವರಿಗೆ ವಿಪುಲ ಅವಕಾಶಗಳನ್ನು ಕಲ್ಪಿಸುವ ಮೂಲಕ ರಾಜ್ಯದ ಎಲ್ಲರಿಗೂ ಮುಕ್ತ ಅವಕಾಶ ಲಭ್ಯವಾಗಿದೆ. ಇದನ್ನು ಖಂಡಿತಾ ಸ್ವಾಗತಿಸುತ್ತೇನೆ. ನಾನೂ ಬರೆಯಲು ಉಪಕ್ರಮಿಸುತ್ತೇನೆ. ಧನ್ಯವಾದಗಳು.

» ಡಾ. ಕೆ ಜೆ ರುಕ್ಮಿಣಿ, ಮೈಲಾಂಡಹಳ್ಳಿ.

ವಿರಾಮದಲ್ಲಿ ಪ್ರಕಟಗೊಂಡ ಶಶಾಂಕ್ ಮುದೂರಿ ಅವರ ಬರೆಹ ಸಕಾಲಿಕ ಮತ್ತು ಮೌಲಿಕವಾದದ್ದು. ಅವರ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸುವುದಕ್ಕೆ ವರ್ತಮಾನ ಬಹಳ ಯೋಗ್ಯವಾಗಿದೆ! ಪ್ರವಾಸೋಧ್ಯಮ ಇಲಾಖೆ, ಪ್ರವಾಸೋದ್ಯಮ ಸಂಸ್ಥೆ, ಸರ್ಕಾರಗಳು ಈ ನಿಟ್ಟಿನಲ್ಲಿ ಗಮನಹರಿಸಬೇಕು. ಭಾರತದ ಆತ್ಮವೇ ಆಧ್ಯಾತ್ಮ! ಹಾಗಾಗಿ ಇಂತಹ ಪ್ರಕ್ರಿಯೆಗಳ ಮೂಲಕ ಸಮಗ್ರದೇಶದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ಭಾವೈಕ್ಯತೆಯ ಉತ್ಕರ್ಷ ಸಂಭವನೀಯ! ಇಲ್ಲಿ ಮತ್ತೊಂದು ವಿಚಾರದ ಕಡೆಗೂ ಗಮನ ಹರಿಸಬೇಕು: ನಮ್ಮ ದೇಶದ ಕೆಲವು ಕ್ಷೇತ್ರಗಳಿಗೆ ಬರುವವರನ್ನು ಭಕ್ತರು, ಅತಿಥಿಗಳು ಎಂದು ಪರಿಭಾವಿಸದೆ ಗ್ರಾಹಕರು, ಮೂರ್ಖರು, ಮಿಕಗಳು ಎನ್ನುವಂತೆ ವ್ಯವಹರಿಸುವುದು ಕಾಣುತ್ತದೆ (ಕುಂಭಮೇಳದಲ್ಲಿ ಇದು ಕಂಡುಬಂದಿತು!) . ಭಕ್ತರ ದೈಹಿಕ, ಮಾನಸಿಕ, ಶ್ರದ್ಧಾ ಭಕ್ತಿಗಳ ಆಧಾರದಿಂದ ವಿಶೇಷ ದರ್ಶನ, ಸೇವೆಗಳ ವ್ಯವಸ್ಥೆ ಕಲ್ಪಿಸುವ ಬದಲು ಆರ್ಥಿಕ, ಅಧಿಕಾರ, ಪದವಿ ಮುಂತಾದವುಗಳನ್ನು ಪರಿಗಣಿಸುವುದು ಎಷ್ಟರ ಮಟ್ಟಿಗೆ ಸರಿ? ಚಿಂತಿಸಬೇಕು. ದೇವಾಲಯಗಳಲ್ಲಿ ಹಣಕ್ಕಾಗಿ ಯಾಚಿಸುವ, ಹಲ್ಲುಗಿಂಜುವ ಸ್ಥಳೀಯ ನೌಕರರ ಉಚ್ಚಾಟನೆಯಾಗಬೇಕು! ಜನಸೇವೆಯೇ ಜನಾರ್ದನ ಸೇವೆ ಎಂಬ ನಂಬಿಕೆ ಇರುವವರಾಗಬೇಕು! ದುರಾಸೆಯ ಅರ್ಚಕರು, ನೌಕರರ ವರ್ತನೆಯು ಯುವ ಮನಸುಗಳ ಮೇಲೆ ಉಂಟು ಮಾಡುವ ಪರಿಣಾಮವಾಗಿ ಸಾಮಾಜಿಕ ಮೌಲ್ಯಗಳು ಅಧಃಪತನಗೊಳ್ಳುತ್ತಿವೆ!

» ರಾಘವೇಂದ್ರ ರಾಯಲಪಾಡು, ಕೋಲಾರ

ಇದೊಂದು ವಿಷಯದಲ್ಲಿ ನೀವು ಟ್ಯೂಬ್‌ಲೈಟ್ ಇದ್ದಿರಬಹುದಾ?

Ask the Editor

● ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಭುವನ್ ಪಿ., ಮೈಸೂರು

● **ಸಂಪಾದಕರೇ, ನಾನೊಬ್ಬಳನ್ನು ಪ್ರೀತಿಸುತ್ತಿದ್ದೇನೆ. ಅವಳನ್ನು ವಾರಕ್ಕೊಮ್ಮೆ ಕಾರಿನಲ್ಲಿ ಸುತ್ತಾಡಿಸುತ್ತೇನೆ. ನಮ್ಮ ಮುಂದೆ ಬೈಕಿನಲ್ಲಿ ಹುಡುಗ - ಹುಡುಗಿ ಹೋಗುವುದನ್ನು ಕಂಡಾಗ ಆಕೆ, 'ಕಾರಿಗಿಂತ ಬೈಕಿನಲ್ಲಿ ಹೋಗುವುದೇ ಹೆಚ್ಚು ಮಜಾ ಅಲ್ಲವಾ?' ಎಂದು ಕೇಳುತ್ತಾಳೆ. ಅಂದರೆ ನನ್ನ ಹುಡುಗಿಗೆ ಜೀವನದಲ್ಲಿ ಸಂತಸ, ನೆಮ್ಮದಿ ಯಾವುದರಲ್ಲಿದೆ ಎಂಬುದು ಗೊತ್ತಿಲ್ಲವಾ? ಅಥವಾ ಅವಳದು ಚೀಪ್ ಮೆಂಟಾಲಿಟಿ ಇದ್ದಿರಬಹುದಾ? ಗೊಂದಲದಲ್ಲಿದ್ದೇನೆ, ದಯವಿಟ್ಟು ನಿಮ್ಮ ಅನಿಸಿಕೆಯನ್ನು ಹೇಳಿ.**

- ಭವನ್ ಅವರೇ, ನಿಮ್ಮ ಹುಡುಗಿಯ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ. ಬೈಕಿನಲ್ಲಿ ಹೋಗುವಾಗ ಹುಡುಗಿ, ಹಿಂಬದಿಯಿಂದ ಹುಡುಗನನ್ನು ಗಟ್ಟಿಯಾಗಿ ಬಿಗಿದಪ್ಪಿ ಹಿಡಿಯಬಹುದು. ಅದು ಒಂದು ರೀತಿಯಲ್ಲಿ ರೋಮಾಂಚನಕಾರಿ ಕ್ಷಣ. ಈ ಅವಕಾಶ ಕಾರಿನಲ್ಲಿ ಪ್ರಯಾಣಿಸುವಾಗ ಆಕೆಗೆ ಸಿಕ್ಕಿರಲಿಕ್ಕಿಲ್ಲ. ಹೀಗಾಗಿ ಆಕೆ ಹಾಗೆ ಹೇಳಿರಬಹುದು.

ಅಷ್ಟಕ್ಕೇ ಅವಳದು ಚೀಪ್ ಮೆಂಟಾಲಿಟಿ ಎಂಬ ನಿರ್ಧಾರಕ್ಕೆ ಬರಬೇಕಿಲ್ಲ. ಸಾಧ್ಯವಾದರೆ ಚಾಮುಂಡಿ ಬೆಟ್ಟದ ಕಡೆ ಸಾಯಂಕಾಲ ಬೈಕ್ ರೈಡ್ ಹೋಗಿ ಬನ್ನಿ. ಮುಂದೆ ನೀವು ಅವಳ ಜತೆ ಕಾರಿನಲ್ಲಿ ಹೋಗಬಯಸುವುದಿಲ್ಲ. ಈ ವಿಷಯದಲ್ಲಿ ನೀವು ಟ್ಯೂಬ್‌ಲೈಟ್ ಇದ್ದಿರಬಹುದಾ, ನನಗೇಕೋ ಅನುಮಾನ.

ಮಾನಸ, ಬೆಂಗಳೂರು

● **ನನ್ನ ಮಗಳಿಗೆ 14 ವರ್ಷ ವಯಸ್ಸು. 8ನೇ ತರಗತಿಯಲ್ಲಿದ್ದಾಳೆ. ತುಂಬಾ ಅಂತಲ್ಲದಿದ್ದರೂ ಆಗಾಗ ಶೈಕ್ಷಣಿಕ ಪುಸ್ತಕಗಳನ್ನು ಹೊರತುಪಡಿಸಿ ಇತರೆ ಪುಸ್ತಕಗಳನ್ನು ಓದುತ್ತಾಳೆ. ಆದರೆ ಆ ಪೈಕಿ ಬಹಳಷ್ಟು ಹಾರರ್ ಪುಸ್ತಕಗಳೇ ಆಗಿವೆ. ಸುಧಾ ಮೂರ್ತಿ ಅವರ ಪುಸ್ತಕಗಳನ್ನು ಸಹ ಓದಿ ಮುಗಿಸಿದ್ದಾಳೆ. ಅವಳ ಓದನ್ನು ಉತ್ತೇಜಿಸುವ, ಉತ್ತಮ ಅಭಿರುಚಿ ಬೆಳೆಸುವ ಪುಸ್ತಕಗಳು ಹಾಗೂ ಲೇಖಕರ ಬಗ್ಗೆ ದಯವಿಟ್ಟು ತಿಳಿಸಿಕೊಡಿ.**

- ಮಾನಸ ಅವರೇ, ಮಕ್ಕಳು ಪುಸ್ತಕಗಳನ್ನು ಓದುವುದು ಮುಖ್ಯ, ಅವು ಯಾವುದೇ ಪುಸ್ತಕಗಳಾಗಿರಲಿ. ಈಗಲೇ ಆ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ. ಅವರು ಕಾದಂಬರಿಯನ್ನಾದರೂ ಓದಲಿ, ಕಥೆಗಳನ್ನಾದರೂ ಓದಲಿ, ಆಧ್ಯಾತ್ಮಿಕ ಪುಸ್ತಕಗಳನ್ನಾದರೂ ಓದಲಿ, ಹಾರರ್ ಪುಸ್ತಕಗಳಾಗೇ ಆಗಲಿ, ಅವರಿಗೆ ಓದುವ ಹವ್ಯಾಸ ಬೆಳೆಯುವುದು ಬಹಳ ಮುಖ್ಯ. ಓದುತ್ತಾ ಓದುತ್ತಾ ಹೋದಂತೆ ಅವರಿಗೆ ಯಾವ ಪುಸ್ತಕಗಳು ಇಷ್ಟ ಎಂಬುದನ್ನು ಅವರೇ ಕಂಡುಕೊಳ್ಳುತ್ತಾರೆ. ಈ ವಯಸ್ಸಿನಲ್ಲಿ ನಾವು ಅವರಿಗೆ ಇಂಥದೇ ಪುಸ್ತಕವನ್ನು ಓದಬೇಕು ಎಂದು ಹೇಳುವುದು ಸರಿಯಲ್ಲ.

ಸಾಮಾನ್ಯವಾಗಿ ತಂದೆ-ತಾಯಿಗಳು ತಮಗೆ ಇಷ್ಟವಾದ ಪುಸ್ತಕಗಳನ್ನು ತಮ್ಮ ಮಕ್ಕಳು ಓದಬೇಕೆಂದು ಬಯಸುತ್ತಾರೆ. ಆ ಮೂಲಕ ಅವರ ಓದು ಮತ್ತು ವಿಷಯ ಆಯ್ಕೆಯನ್ನು ನಿಯಂತ್ರಿಸುತ್ತಾರೆ. ಅದರ ಬದಲು ಪುಸ್ತಕ ಆಯ್ಕೆಯ ವಿಷಯವನ್ನು ಮಕ್ಕಳಿಗೇ ಬಿಡುವುದು ಒಳ್ಳೆಯದು. ಪುಸ್ತಕಗಳನ್ನು ಓದುತ್ತಾ ಹೋದಂತೆಲ್ಲ ಅವರಿಗೆ ಆಯ್ಕೆ ವಿಷಯದಲ್ಲಿ ಪ್ರಬುದ್ಧತೆ ಬೆಳೆದು, ಅವರು ತಮ್ಮ ಓದಿನ ಜಾಡನ್ನು ಕಂಡುಕೊಳ್ಳುತ್ತಾ ಹೋಗುತ್ತಾರೆ. ಹೀಗಾಗಿ ನಿಮ್ಮ ಮಗಳು ಹಾರರ್ ಪುಸ್ತಕವನ್ನು ಓದಿದರೆ ನೀವು ಗಾಬರಿ ಪಡಬೇಕಾಗಿಲ್ಲ. ಅದು ಕೆಟ್ಟ ಸಾಹಿತ್ಯ ಪ್ರಕಾರವೇನಲ್ಲ.

ಮಕ್ಕಳಿಗೆ ಓದಿನ ರುಚಿಯನ್ನು ಹತ್ತಿಸುವ ಕೆಲಸವನ್ನು ಪಾಲಕರು ಮಾಡಬೇಕೇ ಹೊರತು ಓದಿನಿಂದ ವಿಮುಖರಾಗುವ ಹಾಗೆ ಮಾಡಬಾರದು. ನಿಮ್ಮ ಮಗಳು ತನಗಿಷ್ಟವಾದ ವಿಷಯದ ಪುಸ್ತಕಗಳನ್ನು ಓದುತ್ತಿದ್ದಾಳೆ. ಅದು ಒಳ್ಳೆಯದೇ. ನಿಮ್ಮ ಮಗಳು ಸುಧಾಮೂರ್ತಿ ಅವರ ಪುಸ್ತಕಗಳನ್ನು ಓದುತ್ತಿದ್ದಾಳೆ ಅನ್ನುವುದು ಸಮಾಧಾನದ ಸಂಗತಿಯೇ. ನಾನು ಸಹ ಚಿಕ್ಕ ವಯಸ್ಸಿನಲ್ಲಿ ಪತ್ತೇದಾರಿ ಕಾದಂಬರಿಗಳನ್ನು ಓದುತ್ತಿದ್ದೆ. ಆ ದಿನಗಳಲ್ಲಿ ಆ ಓದು ರೋಮಾಂಚನವನ್ನು ಹುಟ್ಟಿಸುತ್ತಿತ್ತು. ಅದಾದ ನಂತರ ನನ್ನ ಓದು ಬೇರೆ ದಿಕ್ಕುಗಳನ್ನು ಪಡೆಯಿತು. ಈಗ ಪತ್ತೇದಾರಿ ಕಾದಂಬರಿಗಳನ್ನು ಓದಬೇಕು ಎಂದು ಅನಿಸುವುದಿಲ್ಲ. ಹಾಗಂತ ಓದುವುದೇ ಇಲ್ಲ ಅಂತಾನೂ ಅಲ್ಲ.

ಆದರೆ ನನ್ನ ವಿಷಯ ಮತ್ತು ಓದಿನ ಆಸಕ್ತಿ ಬದಲಾಗಿದೆ. ಹಾಗೆಯೇ ನಿಮ್ಮ ಮಗಳಿಗೂ ಓದಿನ ಆಸಕ್ತಿ ಓದುತ್ತಾ ಹೋದಂತೆಲ್ಲ ಬದಲಾಗುತ್ತಾ ಹೋಗುತ್ತದೆ. ಈ ವಯಸ್ಸಿನಲ್ಲಿ ಅವಳಿಗೆ ಯಾವ ಪುಸ್ತಕ ಇಷ್ಟವೋ ಅದನ್ನು ಓದಲಿ, ಬಿಡಿ. ಮನೆಯಲ್ಲಿ ಉತ್ತಮವಾದ ಪುಸ್ತಕಗಳನ್ನು ಇಟ್ಟರೆ ಅವರೇ ಅದನ್ನು ಓದಲು ಆರಂಭಿಸುತ್ತಾರೆ. ಅಂಥ ಪುಸ್ತಕಗಳ ಸಂಗ್ರಹವನ್ನು ನೀವು ಮನೆಯಲ್ಲಿ ಇಟ್ಟುಕೊಳ್ಳುವುದು ಒಳ್ಳೆಯದು. ಆಗ ಸಹಜವಾಗಿ ಅವರು ಆ ಪುಸ್ತಕಗಳನ್ನು ಕೈಗೆತ್ತಿಕೊಂಡು ಓದಲು ಆರಂಭಿಸುತ್ತಾರೆ. ನಾವು ಅವರಿಗೆ ಅಂಥ ಸೌಲಭ್ಯವನ್ನು ಒದಗಿಸಿಕೊಡದಿದ್ದಾಗ ಮಾತ್ರ ಅವರು ತಮ್ಮ ಇಷ್ಟದ ಪುಸ್ತಕಗಳನ್ನು ಎತ್ತಿಕೊಳ್ಳುತ್ತಾರೆ.

ನಾನು ಯಾರಿಗೂ ಇದೇ ಪುಸ್ತಕ ಓದಿ, ಅದೇ ಪುಸ್ತಕ ಓದಿ ಎಂದು ಹೇಳುವುದಿಲ್ಲ. ಯಾಕೆಂದರೆ ಅದು ಪುಸ್ತಕ ಓದುವ ಕ್ರಮ ಅಲ್ಲ. ನಮ್ಮ ಇಷ್ಟದ ಲೇಖಕರು ಮತ್ತು ಅವರ ಪುಸ್ತಕಗಳನ್ನು ನಾವೇ ಕಂಡುಕೊಳ್ಳಬೇಕು. ನಮ್ಮ ಓದು ಎಂಥದ್ದು ಎನ್ನುವುದು ನಮಗೆ ಗೊತ್ತಾಗುವ ತನಕ ನಮಗೆ ಬೇಕಾದ ಲೇಖಕರನ್ನು ಕಂಡುಕೊಳ್ಳುವುದು ಕಷ್ಟವಾಗುತ್ತದೆ. ಮೊದಲು ನಾವು ಮಾಡಬೇಕಾಗಿದ್ದು ಆ ಕೆಲಸವನ್ನು. ಒಬ್ಬ ಒಳ್ಳೆಯ ಲೇಖಕನನ್ನು ಹುಡುಕುವ ಹಂತದಲ್ಲಿ ನಮಗೆ ನೂರಾರು ಲೇಖಕರು ಪರಿಚಯವಾಗುತ್ತಾರೆ. ನೂರಾರು ಪುಸ್ತಕಗಳ ಪುಟಗಳನ್ನು ಮೈದಡವುತ್ತೇವೆ. ನಾನು ನಿಮಗೆ 10 ಉತ್ತಮ ಪುಸ್ತಕಗಳ ಹೆಸರುಗಳನ್ನು ಹೇಳಿದರೆ ನಿಮ್ಮ ಮಗಳು ಆ ಪುಸ್ತಕಗಳನ್ನಷ್ಟೇ ಓದುತ್ತಾಳೆ. ಇದರಿಂದ ಇನ್ನಷ್ಟು ಓದಿನ ಹುಡುಕಾಟದಿಂದ ವಂಚಿತವಾಗುತ್ತಾಳೆ. ಹೀಗಾಗಿ ನಿಮ್ಮ ಮಗಳು ಕೈಗೆ ಸಿಕ್ಕಿದ ಪುಸ್ತಕಗಳನ್ನು ಓದಲಿ. ಅವಳು ತನಗೆ ಬೇಕಾದ ಲೇಖಕರನ್ನು ಕಂಡುಕೊಳ್ಳುವ ತನಕ ಓದುತ್ತಲೇ ಇರಲಿ. ಏನಂತೀರಿ?

ಪ್ರಭು ಶಿರಿಯಣ್ಣನವರ, ಧಾರವಾಡ

● **ಭಟ್ರೇ, ಮೊನ್ನೆ ಧಾರವಾಡ ಕೋರ್ಟಿನಲ್ಲಿ ನೀವು ವಕೀಲರ ಮುಂದೆ ಕ್ಷಮೆ ಯಾಚಿಸಿದಿರಿ ಎಂಬುದು ಗೊತ್ತಾಯಿತು. ನನಗೆ ಗೊತ್ತಿರುವಂತೆ ನೀವು ವಕೀಲರ ಒತ್ತಡಕ್ಕೆ ಮಣಿದು, ನಿಮ್ಮ ತಪ್ಪು ಇಲ್ಲದಿದ್ದರೂ ಆ ಕ್ರಮಕ್ಕೆ ಮುಂದಾಗಿರಬಹುದು ಎಂಬುದು ನನ್ನ ಊಹೆ. ಈ ವಿಷಯದಲ್ಲಿ ನೀವು ಏನು ಹೇಳುತ್ತೀರಿ ಎಂಬುದರ ಬಗ್ಗೆ ನನಗೆ ಕುತೂಹಲವಿದೆ. ದಯವಿಟ್ಟು ತಿಳಿಸಿ.**

- ಶಿರಿಯಣ್ಣನವರ ಅವರೇ, ನನಗೆ ನಿಮ್ಮ ಪ್ರಶ್ನೆಯನ್ನು ಓದುವಾಗ, ಯೋಗಿ ದುರ್ಲಭಜೀ ಅವರ ಮಾತುಗಳು ನೆನಪಾದವು - 'ಕೆಲವು ಸಲ ಕ್ಷಮೆ ಕೇಳಿದ ಮಾತ್ರಕ್ಕೆ ತಪ್ಪಿತಸ್ಥ ಎಂದು ಅರ್ಥವಲ್ಲ. ಅದು ನಮ್ಮ ಅಹಂಕಾರವನ್ನು ಮೀರುವ, ಸಂಬಂಧಕ್ಕೆ ಗೌರವ ಕೊಡುವ ಮತ್ತು ವಿಶ್ವಾಸವನ್ನು ಉಳಿಸಿಕೊಳ್ಳುವ ಒಂದು ಸದಾಚಾರದ ನಡೆ.'

ದಿನ ಕಳೆದಂತೆ, ವಯಸ್ಸಾದಂತೆ ನಾವು ಪ್ರಬುದ್ಧರಾಗಬೇಕು. ಹಳೆ ಬ್ಯಾಗೇಜುಗಳನ್ನು ಕಳಚಿ ಮುನ್ನಡೆಯುತ್ತಿರಬೇಕು. If you keep carrying old bricks, you will keep building the same old house ಎಂಬ ಮಾತನ್ನು ನೀವು ಕೇಳಿರಬಹುದು. ಹೀಗಾಗಿ ಹಳೆ ಇಟ್ಟಿಗೆಗಳನ್ನು ಅಲ್ಲಲ್ಲೇ ಬಿಟ್ಟು ಮುನ್ನಡೆಯುತ್ತಿರಬೇಕು. ವಯಸ್ಸು ಹೆಚ್ಚಿದಂತೆಲ್ಲ ಮನಸ್ಸು ಪಕ್ವವಾಗಬೇಕು. ಯಾವತ್ತೂ ಹಳೆ ಗಾಯಗಳನ್ನು ತುರಿಸುತ್ತಾ ಇರಬಾರದು. ನಾವು ಸರಿಯೋ, ತಪ್ಪೋ ಎಂಬುದನ್ನು ಕಾಲ ನಿರ್ಧರಿಸುತ್ತದೆ.

ನನಗೆ ಇಲ್ಲಿ ಒಬ್ಬರು ತತ್ವಜ್ಞಾನಿ ಹೇಳಿದ ಮಾತು ನೆನಪಾಗುತ್ತದೆ - If it's a good idea, go ahead and do it. It's much easier to apologize than it is otherwise. ನಾನು ಸರಿಯೋ, ತಪ್ಪೋ ಎಂಬುದನ್ನು ಒಂದು ಕ್ಷಣ ಪಕ್ಕಕ್ಕಿಡೋಣ. ನಾವು ಕ್ಷಮೆಯಾಚಿಸುವುದರಿಂದ, ಸಮಸ್ಯೆ ಬಗೆಹರಿಯುತ್ತದೆ ಮತ್ತು ನಾವು ಸಣ್ಣವರಾಗುವುದಿಲ್ಲ ಎಂಬುದು ನಮಗೆ ಖಾತ್ರಿಯಾದರೆ, ಎಲ್ಲ ಬಿಟ್ಟು ಅದನ್ನೇ ಮಾಡುವುದು ಲೇಸು.

Forgiveness does not change the past, but it does enlarge the future. ಯಾವತ್ತೂ ನಾವು rise above the occasion ಎಂಬ ಮಾತಿನಲ್ಲಿ ನನಗೆ ನಂಬಿಕೆ. It is never too late to make things right. An apology is a good way to have the last word. ಮಾಡಲು ಕೈತುಂಬಾ ಇಷ್ಟೊಂದು ಒಳ್ಳೆಯ ಕೆಲಸಗಳನ್ನು ಇಟ್ಟುಕೊಂಡು, ಕ್ಷುಲ್ಲಕ ವಿಷಯಗಳ ಬಗ್ಗೆ ನೊಣೆಯುತ್ತಾ ಇರಬಾರದು. ಏನಂತೀರಿ?

ವಿವೇಕ ರೆಡ್ಡಿ, ಬೆಂಗಳೂರು

● **ಸಂಪಾದಕರೇ, ನನ್ನ ಸ್ನೇಹಿತನ ಜತೆ ಆಗಾಗ ಹೋಟೆಲಿಗೆ ಊಟಕ್ಕೆ ಹೋಗುತ್ತೇನೆ. ಇಲ್ಲಿ ತನಕ ನಾವಿಬ್ಬರೂ ಕನಿಷ್ಠ 20 ಸಲವಾದರೂ ಊಟಕ್ಕೆ ಹೋಗಿರಬಹುದು. ಆದರೆ ನನ್ನ ಸ್ನೇಹಿತ ಒಮ್ಮೆಯೂ ಬಿಲ್ ಕೊಟ್ಟಿಲ್ಲ. ಕಾಟಾಚಾರಕ್ಕೂ ಬಿಲ್ ಕೊಡುತ್ತೇನೆ ಎಂದು ಹೇಳುವುದಿಲ್ಲ. ಇಂಥವನ ಜತೆಗೆ ಇನ್ನು ಮುಂದೆ ಹೋಟೆಲಿಗೆ ಹೋಗಬೇಕಾ ಬೇಡವಾ?**

- ರೆಡ್ಡಿ ಅವರೇ, ನಿಮ್ಮ ಸ್ನೇಹಿತನ ಹಾಗೆ ಕೆಲವರು ಇರುತ್ತಾರೆ. ಅದು ಅವರ ಹುಟ್ಟು ಸ್ವಭಾವ. ಅವರ ಬಳಿ ಹಣ ಇರುವುದಿಲ್ಲ ಎಂದಲ್ಲ. ಆದರೂ ಅವರು ಬಿಲ್ ಪಾವತಿಸುವುದಿಲ್ಲ. ವೇಟರ್ ಬಿಲ್ ತರುವಾಗ ಅವರು ರೆಸ್ಟ್ ರೂಮಿಗೆ ಹೋಗಿತ್ತಾರೆ ಅಥವಾ ಮೊಬೈಲ್‌ನಲ್ಲಿ ಮಾತಾಡುತ್ತಿರುತ್ತಾರೆ. ಇರಲಿ.

ಅದು ದೊಡ್ಡ ವಿಷಯವೇನೂ ಅಲ್ಲ. ಸ್ನೇಹವನ್ನು ಎಂದು ಊಟ ಅಥವಾ ಹಣದಲ್ಲಿ ಅಳೆಯಬಾರದು. ನಿಮ್ಮ ಸ್ನೇಹಿತನ ಜತೆಗೆ ಊಟ ಮಾಡುವಾಗ ಕಳೆದ ಸಮಯ ಹಣಕ್ಕಿಂತಲೂ ಮಿಗಿಲಾದುದು. ನಿಮ್ಮ ಸ್ನೇಹಿತನ ಜತೆ ಊಟ ಮಾಡಿದ ತೃಪ್ತಿ ಸಣ್ಣದೇನಲ್ಲ. ನಿಮ್ಮ ಸ್ನೇಹಿತನನ್ನು ಊಟಕ್ಕೆ ಕರೆದುಕೊಂಡು ಹೋಗಿ ನೀವೇ ಹಣ ಪಾವತಿ ಮಾಡುವುದು ನಿಮಗೆ ಸಿಕ್ಕ ಒಳ್ಳೆಯ ಅವಕಾಶ ಎಂದು ಭಾವಿಸಿ.

ಅಷ್ಟಕ್ಕೂ ನೀವು ಖರ್ಚು ಮಾಡುತ್ತಿರುವುದು ಒಂದೆರಡು ಸಾವಿರ ರುಪಾಯಿ ಅಷ್ಟೇ. ನಿಮ್ಮ ಸ್ನೇಹಿತನಿಗಾಗಿ ಅಷ್ಟೂ ಮಾಡದಿದ್ದರೆ ಹೇಗೆ? ನಿಮಗೆ ಆ ಸ್ನೇಹಿತನ ಅಗತ್ಯ ಇಲ್ಲದಿದ್ದರೆ ನೀವು ಅವನನ್ನು ಊಟಕ್ಕೆ ಕರೆದುಕೊಂಡು ಹೋಗುತ್ತಿರಲಿಲ್ಲ. ಆತನು ನಿಮಗೆ ಆಪ್ತನಾಗಿರಬೇಕು. ಹೀಗಾಗಿ ಆತನ ಸಖ್ಯವನ್ನು ನೀವು ಆಗಾಗ ಬಯಸುತ್ತೀರಿ. ಸ್ನೇಹಿತರಿಗೆ ಹಣ ಖರ್ಚು ಮಾಡಿದರೆ ಅದು ಬೇರೊಂದು ರೂಪದಲ್ಲಿ ನಿಮಗೆ ವಾಪಸ್ ಬಂದೇ ಬರುತ್ತದೆ.

ಅಷ್ಟಕ್ಕೂ ನಿಮ್ಮ ಸ್ನೇಹಿತನಿಗಿಂತ ಹಣ ಮುಖ್ಯ ಅಲ್ಲ. ನೀವು ಎಷ್ಟು ಬೇಕಾದರೂ ಹಣವನ್ನು ಸಂಪಾದಿಸಬಹುದು. ಆದರೆ ಒಳ್ಳೆಯ ಸ್ನೇಹಿತರನ್ನು ಸಂಪಾದಿಸುವುದು ಬಹಳ ಕಷ್ಟ. ಹೀಗಾಗಿ ಸ್ನೇಹಿತನಿಗೆ ಖರ್ಚು ಮಾಡಿದ ಹಣದ ಬಗ್ಗೆ ಜಾಸ್ತಿ ತಲೆ ಕೆಡಿಸಿಕೊಳ್ಳಬೇಡಿ. ಪ್ರತಿ ಸಲ ಹೋಟೆಲಿಗೆ ಹೋದಾಗಲೂ ಸ್ನೇಹಿತನಿಗೆ ಊಟ ಕೊಡಿಸುವ ಅವಕಾಶ ನನಗೇ ಸಿಗಲಿ ಎಂದು ಬೇಡಿಕೊಳ್ಳಿ. ಎಂದೂ ಹಣದ ಮುಖ ನೋಡಬೇಡಿ. ಇಪ್ಪತ್ತು ಸಲವಲ್ಲ, ನಲವತ್ತು ಸಲವಾದರೂ ಸರಿ, ನೀವೇ ಬಿಲ್ ಪಾವತಿಸಿ. ಬೇರೆಯವರ ಮನಸ್ಸಿನಲ್ಲಿ ಮಾತ್ರ ಅಲ್ಲ, ಹೊಟ್ಟೆಯಲ್ಲೂ ವಾಸಿಸಿ. ಸ್ನೇಹಿತನಿಗೆ ಊಟ ಕೊಡಿಸಿ ಯಾರೂ ಪಾಪರ್ ಆಗಿಲ್ಲ.

ರವಿ, (ಇಮೇಲ್ ಮೂಲಕ)

● **ಸಂಪಾದಕರೇ, ನನ್ನ ಪತ್ನಿಯ ಅನೈತಿಕ ಸಂಬಂಧ ನನಗೆ ಗೊತ್ತಾಗಿ, ಅವಳು ಒಂದು ವರ್ಷದ ಹಿಂದೆ ಆತ್ಮಹತ್ಯೆ ಮಾಡಿಕೊಂಡಳು. ನನಗೆ ಐದು ವರ್ಷದ ಮಗ ಮತ್ತು ಮೂರು ವರ್ಷದ ಮಗಳಿದ್ದಾಳೆ. ಒಂದು ಹಂತದಲ್ಲಿ ನನ್ನ ಪತ್ನಿಗೆ ಅನೈತಿಕ ಸಂಬಂಧ ಮುಂದುವರಿಸಲು ಇಷ್ಟವಿರಲಿಲ್ಲ. ನನ್ನ ಪತ್ನಿಯ ಸಾವಿಗೆ ಕಾರಣನಾದವನ ಮೇಲೆ ನಾನು ಪ್ರತೀಕಾರ ತೆಗೆದುಕೊಳ್ಳಬೇಕಾ? ಈ ಆಘಾತದಿಂದ ನಾನು ಹೊರಗೆ ಬರುವುದು ಹೇಗೆ? ದಯವಿಟ್ಟು ತಿಳಿಸಿ.**

-ರವಿ ಅವರೇ, ಇದು ಅತ್ಯಂತ ಖೇದಕರ ವಿಷಯ. ನಿಮ್ಮ ಪತ್ನಿಯೊಂದಿಗೆ ಅನೈತಿಕ ಸಂಬಂಧವನ್ನು ಇರಿಸಿಕೊಂಡು ಅವಳ ಸಾವಿಗೆ ಕಾರಣನಾದವನಿಗೆ ತಕ್ಕ ಶಾಸ್ತಿ ಮಾಡಿ ಎಂದು ಹೇಳಬಹುದಿತ್ತು. ಆದರೆ ಹಾಗೆ ಮಾಡುವುದರಿಂದ ನಿಮ್ಮ ಪತ್ನಿ ವಾಪಸ್ ಬರುವುದಿಲ್ಲ. ಈ ಘಟನೆ ನಿಮ್ಮ ಜೀವನದ ಒಂದು ದುರಂತ ಅಧ್ಯಾಯ. ನಿಮ್ಮ ಪತ್ನಿಯ ದಾರಿ ತಪ್ಪಿಸಿದ ಆಕೆಯ ಪ್ರೇಯಕರನಿಗೆ ಬುದ್ಧಿ ಕಲಿಸುವುದರಿಂದ ನಿಮಗೆ ಯಾವ ಲಾಭವೂ ಇಲ್ಲ. ಅವನ ಮೇಲೆ ಪ್ರತೀಕಾರ ತೆಗೆದುಕೊಳ್ಳುವುದರಿಂದ ನಿಮಗೆ ಏನು ಸಿಕ್ಕೀತು?

ನೀವು ಪ್ರತೀಕಾರ ತೆಗೆದುಕೊಳ್ಳುವ ಭರದಲ್ಲಿ ಏನಾದರೂ ಮಾಡಿದರೆ, ಆತನೇನು ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ನಿಮ್ಮಿಬ್ಬರ ನಡುವಿನ ಸಂಘರ್ಷ ಹೇಗೆ, ಎಲ್ಲಿ ಕೊನೆಯಾಗುತ್ತದೆ ಎಂದು ಹೇಳಲಾಗುವುದಿಲ್ಲ.

ಒಂದು ವೇಳೆ ನೀವು ಅವನ ವಿರುದ್ಧ ಪ್ರತೀಕಾರ ತೆಗೆದುಕೊಂಡರೂ ಸತ್ತು ಹೋದ ನಿಮ್ಮ ಹೆಂಡತಿಯ ಆತ್ಮಕ್ಕೆ ಶಾಂತಿ ಸಿಗುವುದಿಲ್ಲ. ಹೀಗಿರುವಾಗ ನಿಮ್ಮ ಜೀವನದ ಈ ಕರಾಳ ಅಧ್ಯಾಯವನ್ನು ನೀವು ಮರೆಯುವುದೇ ವಾಸಿ.

ಯಾವತ್ತೂ ದ್ವೇಷ ಮತ್ತು ಪ್ರತೀಕಾರ ನಮ್ಮನ್ನೇ ಸುಡುತ್ತದೆ. ಅದರ ಬದಲು ಆ ವ್ಯಕ್ತಿಯನ್ನು ಮರೆತು ಬಿಡುವುದೇ ಲೇಸು. ನಿಮ್ಮ ಮುಂದೆ ಮಗ ಮತ್ತು ಮಗಳಿದ್ದಾಳೆ. ಅವರ ಭವಿಷ್ಯವನ್ನು ಉತ್ತಮಗೊಳಿಸುವುದರಲ್ಲಿ ನಿಮ್ಮ ಜೀವನದ ಬಹುದೊಡ್ಡ ಹೊಣೆಗಾರಿಕೆಯ ನಿಭಾವಣೆ ಮತ್ತು ಸಾರ್ಥಕತೆ ಅಡಗಿದೆ. ನೀವು ನಿಮ್ಮ ಶಕ್ತಿ ಮತ್ತು ಸಮಯವನ್ನು ನಿಮ್ಮ ಮಕ್ಕಳ ಶ್ರೇಯೋಭಿವೃದ್ಧಿಗೆ ವ್ಯಯಿಸುವುದು ಒಳ್ಳೆಯದು. ತಾಯಿ ಇಲ್ಲದ ಆ ಇಬ್ಬರು ಮಕ್ಕಳಿಗೆ ಆಸರೆಯಾಗಿ ಅವರ ಜೀವನವನ್ನು ಉತ್ತಮಪಡಿಸಿದರೆ ಅದಕ್ಕಿಂತ ಉತ್ತಮವಾದ ಪ್ರತೀಕಾರ ಮತ್ತೊಂದಿರಲಾರದು.

ಯಾವುದೇ ಹೋರಾಟದಲ್ಲಿ ನಾವು ಗೆದ್ದು ಸೋಲಬಾರದು. ಒಂದು ವೇಳೆ ನೀವು ಪ್ರತೀಕಾರ ತೆಗೆದುಕೊಳ್ಳದಿದ್ದರೆ, ಅದು ನಿಮ್ಮ ಸೋಲು ಅಥವಾ ಹಿನ್ನಡೆ ಎಂದು ಭಾವಿಸಬೇಕಾಗಿಲ್ಲ. ಕೆಲವು ಸಲ ನಮ್ಮ ಮೌನ ಮತ್ತು ನಿಷ್ಕ್ರಿಯತೆ ದೌರ್ಬಲ್ಯದ ಸಂಕೇತವಲ್ಲ, ಅದು ಸಮಚಿತ್ತದ ನಿರ್ಧಾರ. ಈ ಸಂಗತಿ ನಿಮಗೆ ಮುಂದೊಮ್ಮೆ ಮನವರಿಕೆಯಾಗಬಹುದು. ಕೆಲವು ಸಲ ಪ್ರತೀಕಾರ ತೆಗೆದುಕೊಳ್ಳುವ ಭರದಲ್ಲಿ ನಮಗೇ ಹಾನಿಯಾಗಲೂಬಹುದು.

ಒಂದು ವೇಳೆ ನಿಮ್ಮ ಹೆಂಡತಿ ಬದುಕಿದ್ದಿದ್ದರೆ ಅದು ಬೇರೆ ಮಾತು. ಆಗ ಆ ವ್ಯಕ್ತಿಯನ್ನು ಸುಮ್ಮನೆ ಬಿಡಬಾರದಿತ್ತು. ಕೆಲವು ಸಲ ನಮ್ಮ ನೆಮ್ಮದಿಗಾಗಿ ಅವಡುಗಚ್ಚಿ ಸುಮ್ಮನಿರಬೇಕಾಗುತ್ತದೆ. ಈಗ ನಿಮ್ಮ ಮುಂದೆ ನಿಮ್ಮ ಮಕ್ಕಳನ್ನು ಬೆಳೆಸುವ, ಅವರನ್ನು ಸನ್ಮಾರ್ಗದಲ್ಲಿ ಮುನ್ನಡೆಸುವ ಜವಾಬ್ದಾರಿಯಿದೆ. ಆ ಬಗ್ಗೆ ಗಮನಹರಿಸಿ.